ಮಂಗಳವಾರ, ಜನವರಿ 3, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಂಪ್ರದಾಯಿಕ ದಿರಿಸು

ಹಿಮಾಚಲ ಪ್ರದೇಶದ ಮನಾಲಿಯಲ್ಲಿ ನಡೆದ ಚಳಿಗಾಲದ ಉತ್ಸವದಲ್ಲಿ ಸಾಂಪ್ರದಾಯಿಕ ದಿರಿಸು ತೊಟ್ಟು ಪಾಲ್ಗೊಂಡಿದ್ದ ಕಲಾವಿದ

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜ. 30ಕ್ಕೆ ಶ್ರೀನಗರದಲ್ಲಿ ಭಾರತ್ ಜೋಡೊ ಯಾತ್ರೆ ಮುಕ್ತಾಯ 11
ಯಶಸ್ವಿನಿ ನೋಂದಣಿ 31ರವರೆಗೆ ಅವಕಾಶ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,168 ▲	18,197 ▲	₹56,750 (ಬೆಂಗಳೂರು)	₹70,300 (ಬೆಂಗಳೂರು)	82.75 ▼

ನಾಡು ಕಂಡ ಅಪರೂಪದ ಸಂತ, ತತ್ವಜ್ಞಾನಿ, ಭಕ್ತರ ಪಾಲಿಗೆ ಸಾಕ್ಷಾತ್ ದೇವರು

‘ಕಿಸೆ’ಯಿಲ್ಲದ ವೈರಾಗ್ಯಮೂರ್ತಿ

• ಬಸವರಾಜ್ ಸಂಪಳ್ಳಿ

ವಿಜಯಪುರ: ಬಿಜ್ಜರಗಿ ಎಂಬ ಪುಟ್ಟ ಗ್ರಾಮದ ‘ಸಿದ್ಧು’ ಎಂಬ ಶಾಂತ ಸ್ವಭಾವದ ಬಾಲಕ ‘ಸಿದ್ಧೇಶ್ವರ ಶ್ರೀ’ ಎಂಬ ಮಹಾನ್ ‘ಜ್ಞಾನಯೋಗಿ’ ಯಾಗಿ, ತತ್ವಜ್ಞಾನಿಯಾಗಿ, ಸದಾ ಶ್ವೇತ-ವಸ್ತ್ರಧಾರಿಯಾಗಿ ‘ಕಿಸೆ’ಯಿಲ್ಲದ ವೈರಾಗ್ಯ ಮೂರ್ತಿಯಾಗಿ ಬೆಳೆದು ಬಂದ ದಾರಿ ಅಕ್ಷರಶಃ ವಿಸ್ಮಯ.

ವಿಜಯಪುರ ಜಿಲ್ಲೆ ತಿಕೋಟಾ ತಾಲ್ಲೂಕಿನ ಬಿಜ್ಜರಗಿಯಲ್ಲಿ 1940ರ ಸೆಪ್ಟೆಂಬರ್ 5 ರಂದು ಕೃಷಿಕರಾದ ಓಗೆಪ್ಪ ಗೌಡ ಬಿರಾದಾರ, ಸಂಗವ್ವ ದಂಪತಿಯ ಆರು ಜನ ಮಕ್ಕಳಲ್ಲಿ ಹಿರಿಯ ಪುತ್ರರಾಗಿ ಜನಿಸಿದ ಸಿದಗೊಂಡ ಓಗೆಪ್ಪ ಬಿರಾ-ದಾರ(ಪೂರ್ವಾಶ್ರಮದ ಹೆಸರು) ಬಾಲ್ಯದಿಂದಲೇ ಅಧ್ಯಾತ್ಮದತ್ತ ಅತೀವ ಒಲವು ಬೆಳೆಸಿಕೊಂಡಿದ್ದರು.

ಬಿಜ್ಜರಗಿಯ ಬಾಲ್ಯದ ಸಹಪಾಠಿಗಳ ಪಾಲಿಗೆ ‘ಸಿದ್ಧು’ ಆಗಿದ್ದ ಸಿದ್ಧೇಶ್ವರ ಶ್ರೀಗಳು ಭಕ್ತರ ಪಾಲಿಗೆ ನಡೆದಾಡುವ ದೇವರಾಗಿ ರೂಪುಗೊಂಡ ಪರಿ ಸೋಜಿಗವೇ ಸರಿ.

‘ಬಾಲ್ಯದ ದಿನಗಳಲ್ಲೇ ಆತ ಸಂಭಾವಿತ. ಸೂಕ್ಷ್ಮ ವ್ಯಕ್ತಿತ್ವದವ, ಅಧ್ಯಾತ್ಮದ ಸೆಳೆತ ಆಗಲೇ ಇತ್ತು’ ಎಂದು



1940 - 2023

ನೆನಪಿಸಿಕೊಳ್ಳುತ್ತಾರೆ ಅವರ ಬಾಲ್ಯದ ಸಹಪಾಠಿ ಬಿ.ಎಸ್.ಪಟ್ಟಣ. ‘ಶ್ರೀಗಳಿಗೆ ತಾವು ಹುಟ್ಟಿ, ಬೆಳೆದ ಬಿಜ್ಜರಗಿ ಗ್ರಾಮದಲ್ಲಿ ಸಹಪಾಠಿಗಳೊಂದಿಗೆ ಈಜುವುದು, ಸೈಕಲ್ ಓಡಿಸುವುದು ಎಂದರೆ ಅಚ್ಚುಮೆಚ್ಚಾಗಿತ್ತು. ಊಟ, ಉಪಾಹಾರದಲ್ಲಿ ಖಾರ, ಉಪ್ಪು ಇತಿಮಿತಿ ಇರಬೇಕಿತ್ತು’ ಎಂದು ಹೇಳುತ್ತಾರೆ ಅವರು.

ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ: ಬಿಜ್ಜರಗಿಯ ಸರ್ಕಾರಿ ಗಂಡು ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಏಳನೇ ತರಗತಿಯವರೆಗೆ ಅಭ್ಯಾಸ. ವಿಜಯಪುರದ ಎಸ್. ಎಸ್. ಪ್ರೌಢಶಾಲೆಯಲ್ಲಿ 8ನೇ ತರಗತಿ, ನಂತರ ಚಡಚಣದ ಸಂಗಮೇಶ್ವರ ಪ್ರೌಢಶಾಲೆಯಲ್ಲಿ 10ನೇ ತರಗತಿವರೆಗೆ ಕಲಿಕೆ, ವಿಜಯಪುರದ ವಿಜಯ ಕಾಲೇಜಿನಲ್ಲಿ ಪಿಯುಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ, ಆ ನಂತರದಲ್ಲಿ ನೆರೆಯ ಮಹಾರಾಷ್ಟ್ರದ ಕೊಲ್ಹಾಪುರದ ಶಿವಾಜಿ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

5ನೇ ಪುಟ ನೋಡಿ

ವಿಶೇಷ ಪುಟ 5

ಸಿದ್ಧೇಶ್ವರ ಸ್ವಾಮೀಜಿ ಅಸ್ತಂಗತ

ವಿಜಯಪುರ: ಕನ್ನಡನಾಡು ಕಂಡ ಅಪರೂಪದ ಸಂತ, ಭಕ್ತರ ಪಾಲಿನ ‘ನಡೆದಾಡುವ ದೇವರು’ ಎಂದೇ ಪ್ರಸಿದ್ಧರಾಗಿದ್ದ ಪ್ರವಚನಕಾರ ವಿಜಯಪುರದ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ (82) ಸೋಮವಾರ ಸಂಜೆ 6.05ಕ್ಕೆ ಅಸ್ತಂಗತರಾದರು.

ಒಂದು ವಾರದಿಂದ ಸಾವು–ಬದುಕಿನ ನಡುವೆ ಹೋರಾಟ ನಡೆಸಿದ್ದ ಶ್ರೀಗಳು ಕೊನೆಗೂ ಮರಳಿ ಬಾರದ ಲೋಕಕ್ಕೆ ಪಯಣಿಸಿದರು. ಅವರ ಕೋಟ್ಯಂತರ ಭಕ್ತರು ಶೋಕಸಾಗರದಲ್ಲಿ ಮುಳುಗಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಸಿದ್ಧೇಶ್ವರ ಶ್ರೀಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲು ನಡೆಸಿದ ಮನವೊಲಿಕೆ ಪ್ರಯತ್ನಕ್ಕೆ ಅವರು ಒಪ್ಪದ ಕಾರಣ ಆಶ್ರಮದಲ್ಲೇ ಬಿಎಲ್‌ಡಿಇ ಆಸ್ಪತ್ರೆಯ ತಜ್ಞ ವೈದ್ಯರು ಚಿಕಿತ್ಸೆ ನೀಡಿದ್ದರು.

ಎರಡು ದಿನಗಳಿಂದ ಉಸಿರಾಟಕ್ಕೆ ಆಮ್ಲಜನಕದ ವ್ಯವಸ್ಥೆ ಕಲ್ಪಿಸಲಾಗಿತ್ತು.

5ನೇ ಪುಟ ನೋಡಿ

ಮೀಸಲಾತಿ: ಮತ್ತೆ 32 ವರದಿ

227 ವರದಿಗಳು ವಿಲೇವಾರಿಗೆ ರಾಜ್ಯ ಸರ್ಕಾರದಲ್ಲಿ ಬಾಕಿ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜಾತಿ (ಒಬಿಸಿ) ಪಟ್ಟಿಯಲ್ಲಿ ಇಲ್ಲದ 227 ಸಮುದಾಯಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ಹಿಂದುಳಿದ ವರ್ಗಗಳ ಆಯೋಗಗಳು ಸಲ್ಲಿಸಿದ್ದ ವರದಿಗಳು ಸರ್ಕಾರದ ಮುಂದಿವೆ. ಈ ಮಧ್ಯೆಯೇ, ವಿವಿಧ ಜಾತಿಗಳ ಕುರಿತ ಇನ್ನೂ 32 ಅಧ್ಯಯನ ವರದಿಗಳನ್ನು ಸಲ್ಲಿಸಲು ಆಯೋಗ ನಿರ್ಧರಿಸಿದೆ.

ಹಿಂದುಳಿದ ವರ್ಗಗಳ ಪಟ್ಟಿಯ ‘ಪ್ರವರ್ಗ 3ಬಿ’ಯಿಂದ ‘ಪ್ರವರ್ಗ 2ಎ’ಗೆ ಸೇರಿಸುವಂತೆ ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯ ಹಾಗೂ ‘ಪ್ರವರ್ಗ 3ಎ’ಯಲ್ಲಿರುವ ಒಕ್ಕಲಿಗ ಸಮುದಾಯ ಮೀಸಲಾತಿ ಪ್ರಮಾಣವನ್ನು ಶೇ 4ರಿಂದ ಶೇ 12ಕ್ಕೆ ಹೆಚ್ಚಿಸುವಂತೆ ಆಯೋಗಕ್ಕೆ ಮನವಿ ಸಲ್ಲಿಸಿವೆ. ಈ ಬೆನ್ನಲ್ಲೇ, ಹಿಂದಿನ ವರದಿಗಳ ವಿಷಯವೂ ಈಗ ಮುನ್ನೆಲೆಗೆ ಬಂದಿವೆ.

ಈಗಿನ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ನೇತೃತ್ವದ ಆಯೋಗವು ತಯಾರಿಸಿರುವ 32 ವರದಿಗಳಲ್ಲಿ ತೀರಾ ಹಿಂದುಳಿದ, ಕಡಿಮೆ ಜನಸಂಖ್ಯೆ ಹೊಂದಿರುವ ಕಾಡುಗೊಲ್ಲ/ಹಟ್ಟಿಗೊಲ್ಲ, ಚಪ್ಪರ್ ಬಂದ್, ಕುಡುಬಿ, ಮುಖಾರಿ/ಮುವಾರಿ, ಪೊಮ್ಮಲ, ಮರುತ್ತುವರ್, ಪರಿಯಾಳ, ಮಡಿ ಒಕ್ಕಲಿಗ ಜಾತಿಗಳ ಸ್ಥಿತಿಗತಿ ವರದಿಯೂ ಸೇರಿವೆ. ಈ ಪೈಕಿ, ಪೊಮ್ಮಲ ಎಂದು ಗುರುತಿಸಿಕೊಂ-ಡಿರುವ ಜಾತಿ ಕೇವಲ 300 ಜನಸಂಖ್ಯೆ ಹೊಂದಿದ್ದು, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿದೆ. ಮುಖಾರಿ/ಮುವಾರಿ ಎಂದು ಕರೆಸಿಕೊಳ್ಳುವ ಸಮುದಾಯ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ ಭಾಗದಲ್ಲಿದ್ದು, ಈ ಸಮುದಾಯದವರ ಜನಸಂಖ್ಯೆ ಸುಮಾರು 2,000ದಷ್ಟಿದೆ.

6ನೇ ಪುಟ ನೋಡಿ

ಅನಾಥ ಮಕ್ಕಳಿಗೂ ಮೀಸಲಾತಿ ಶಿಫಾರಸು

ಜಾತಿ ಯಾವುದೆಂದೇ ಗೊತ್ತಿಲ್ಲದ 5,280 ಅನಾಥ ಮಕ್ಕಳು ರಾಜ್ಯದಲ್ಲಿದ್ದಾರೆ. ಈ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವಂತೆ ಶಿಫಾರಸು ಮಾಡಲು ವಿಶೇಷ ವರದಿಯನ್ನು ಆಯೋಗ ಸಿದ್ಧಪಡಿಸಿದೆ.

ಇಂಥ ಮಕ್ಕಳಿಗೆ ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ, ರಾಜಸ್ಥಾನ ರಾಜ್ಯಗಳಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯ ನೀಡಲಾಗುತ್ತಿದೆ. ದತ್ತು ಪಡೆದ ಮಕ್ಕಳಿಗೆ, ಪೋಷಕ ತಂದೆಯ ಜಾತಿಯನ್ನೇ ಪರಿಗಣಿಸಲಾಗುತ್ತದೆ. ಅನಾಥ ಮಕ್ಕಳಿಗೆ ಜಾತಿ ಪರಿಗಣಿಸಲು ಅವಕಾಶವೇ ಇಲ್ಲದಿರುವುದರಿಂದ, ಇತರ ರಾಜ್ಯಗಳಲ್ಲಿ ಇರುವಂತೆ ಕರ್ನಾಟಕದಲ್ಲೂ ಮೀಸಲಾತಿ ಕಲ್ಪಿಸಲು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಯಾರ ಅವಧಿಯಲ್ಲಿ ಎಷ್ಟು ಬಾಕಿ?

ಅಧ್ಯಕ್ಷರು	ವರದಿಗಳು
ಎಸ್.ಸಿದ್ದಗಂಗಯ್ಯ	34
ಸಿ.ಎಸ್.ದ್ವಾರಕಾನಾಥ್	59
ಎನ್.ಶಂಕರಪ್ಪ	14
ಎಚ್.ಕಾಂತರಾಜು	120
ಒಟ್ಟು	227

ವಿವಿಧ ಜಾತಿಗಳಿಗೆ ಸಂಬಂಧಿಸಿದ 32 ಅಧ್ಯಯನ ವರದಿಗಳು ಸಿದ್ಧವಾಗಿವೆ. ಕೆಲ ವರದಿಗಳ ಮುದ್ರಣ ಪೂರ್ಣಗೊಂಡಿದೆ. ಈ ಎಲ್ಲವನ್ನು ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತೇವೆ

ಕೆ.ಜಯಪ್ರಕಾಶ್ ಹೆಗ್ಡೆ, ಅಧ್ಯಕ್ಷರು, ಹಿಂದುಳಿದ ವರ್ಗಗಳ ಆಯೋಗ

ನೋಟು ರದ್ದತಿ ಸಿಂಧುತ್ವ ಎತ್ತಿ ಹಿಡಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ₹500, ₹1,000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಿದ ಕೇಂದ್ರ ಸರ್ಕಾರದ 2016ರ ನವೆಂಬರ್ 8ರ ಅಧಿಸೂಚನೆಯ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಸೋಮವಾರ ಎತ್ತಿ ಹಿಡಿದಿದೆ. ಈ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಯಾವುದೇ ಲೋಪಗಳು ಆಗಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಕೇಂದ್ರ ಸರ್ಕಾರದ ಈ ತೀರ್ಮಾನ ಪ್ರಶ್ನಿಸಿ ವಕೀಲ ವಿವೇಕ್ ನಾರಾಯಣ ಶರ್ಮ ಹಾಗೂ ಇತರರು ಸಲ್ಲಿಸಿದ 50 ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯ-ಮೂರ್ತಿಗಳಾದ ಎಸ್.ಅಬ್ದುಲ್ ನಜೀರ್, ಬಿ.ಆರ್.ಗವಾಯಿ, ಎ.ಎಸ್.ಬೋಪಣ್ಣ, ವಿ.ರಾಮಸುಬ್ರಮಣಿಯನ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ಸಾಂವಿಧಾನಿಕ ಪೀಠ 4:1 ಬಹುಮತದಲ್ಲಿ ಈ ತೀರ್ಪು ನೀಡಿದೆ. ಇದರಲ್ಲಿ ನಾಗರತ್ನ ಅವರನ್ನು ಹೊರತುಪಡಿಸಿ ಉಳಿದ ನಾಲ್ವರು

ನ್ಯಾಯಮೂರ್ತಿಗಳು ನೋಟು ರದ್ದತಿ ತೀರ್ಮಾನವನ್ನು ಎತ್ತಿ ಹಿಡಿದಿದ್ದಾರೆ.

ಕೇಂದ್ರ ಸರ್ಕಾರ ಈ ಪ್ರಸ್ತಾ-ವನೆಯನ್ನು ಮುಂದಿಟ್ಟಿದೆ ಎಂಬ ಒಂದೇ ಕಾರಣಕ್ಕೆ ಅದು ತಪ್ಪು ಎಂದು ಹೇಳಲಾಗದು. ಈ ನಿರ್ಧಾರ ಅಕಾರಣ-ವಾಗಿರಲಿಲ್ಲ ಎಂದಿರುವ ನ್ಯಾಯಪೀಠ, ಹಳೆಯ ನೋಟುಗಳ ವಿನಿಮಯಕ್ಕೆ 52 ದಿನಗಳ ಅವಕಾಶ ನೀಡಿರುವುದು ಸರಿ ಇದೆ ಎಂದಿದೆ.

52 ದಿನಗಳ ಅವಧಿ ನೀಡಿರುವುದು ಅತಾರ್ಕಿಕ, ಕಾನೂನುಬಾಹಿರ ಹಾಗೂ ಅರ್ಜಿದಾರರ ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂಬುದನ್ನು ಒಪ್ಪಲಾಗದು ಎಂದಿರುವ ನ್ಯಾಯಪೀಠ, ಈ ಅವಧಿಯನ್ನು ವಿಸ್ತರಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದೆ.

1978ರ ಕಾಯ್ದೆಯ ಅನುಸಾರ, ಹಿಂದಿನ ನೋಟು ಅಮಾನ್ಯೀಕರಣ ನೀತಿ ಜಾರಿಗೊಳಿಸಿದಾಗ ಅಮಾನ್ಯಗೊಂಡ ನೋಟುಗಳ ವಿನಿಮಯಕ್ಕೆ ಕೇವಲ ಮೂರು ದಿನಗಳ ಅವಧಿ ನೀಡಲಾಗಿತ್ತು ಎಂದು ನ್ಯಾಯಪೀಠ ಹೇಳಿದೆ.

6ನೇ ಪುಟ ನೋಡಿ

ನೋಟು ಚಲಾವಣೆ ಶೇ 83ರಷ್ಟು ಏರಿಕೆ

2016ರ ನೋಟು ರದ್ದತಿಯ ಬಳಿಕ ದೇಶದಲ್ಲಿ ನಗದು ಚಲಾವಣೆಯ ಪ್ರಮಾಣವು ಶೇ 83ರಷ್ಟು ಏರಿಕೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಮಾಹಿತಿಯ ಪ್ರಕಾರ, 2022ರ ಡಿಸೆಂಬರ್ 23ರಂದು ದೇಶದಲ್ಲಿ ಚಲಾವಣೆಯಲ್ಲಿದ್ದ ಕರೆನ್ಸಿ ನೋಟುಗಳ ಮೌಲ್ಯವು ₹32.42 ಲಕ್ಷ ಕೋಟಿಗೆ ಏರಿಕೆಯಾಗಿದೆ. ನೋಟು ರದ್ದತಿಗೆ ಮೊದಲು ದೇಶದಲ್ಲಿ ಚಲಾವಣೆಯ-ಲ್ಲಿದ್ದ ಕರೆನ್ಸಿ ನೋಟುಗಳು ಮೌಲ್ಯವು ₹17.74 ಲಕ್ಷ ಕೋಟಿ ಆಗಿತ್ತು.

ವಿವರ 9

ನಕಲಿ ನೋಟು: ಹಾವಳಿಗೆ ಇಲ್ಲ ಅಂಕುಶ

ನವದೆಹಲಿ (ಪಿಟಿಐ): ನೋಟು ರದ್ದತಿಯ ತೀರ್ಮಾನ ಜಾರಿಗೆ ಬಂದು ಆರು ವರ್ಷಗಳು ಕಳೆದಿದ್ದರೂ, ನಕಲಿ ನೋಟುಗಳ ಹಾವಳಿ ನಿಂತಿಲ್ಲ. ನಕಲಿ ನೋಟುಗಳ ಚಲಾವಣೆ ನಿಯಂತ್ರಿಸುವುದು ಕೂಡ ನೋಟು ರದ್ದತಿ ತೀರ್ಮಾನ ಒಂದು ಉದ್ದೇಶವಾಗಿತ್ತು.

10

ನೋಟು ರದ್ದತಿ ಕಾನೂನುಬಾಹಿರ: ನ್ಯಾ. ನಾಗರತ್ನ

‘ನೋಟು ರದ್ದತಿ ಪ್ರಕರಣದಲ್ಲಿ ಆರ್‌ಬಿಐ ಕಾಯ್ದೆ ಸೆಕ್ಷನ್ 26ರ ಉಪ ಸೆಕ್ಷನ್ 2 ಅಡಿಯಲ್ಲಿ ಅಧಿಕಾರ ಚಲಾಯಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ಇಲ್ಲ’ ಎಂದು ನ್ಯಾಯಮೂರ್ತಿ ಬಿ.ವಿ. ನಾಗರತ್ನ ಹೇಳಿದರು.

ತಮ್ಮ 124 ಪುಟಗಳ ತೀರ್ಪಿನಲ್ಲಿ ಅವರು, ‘ನೋಟು ರದ್ದು ಮಾಡುವ ಕೇಂದ್ರ ಸರ್ಕಾರದ ಉದ್ದೇಶ ಸೂಕ್ತವಾಗಿ-ರಬಹುದು. ಆದರೆ, ಅದನ್ನು ಜಾರಿಗೊಳಿಸಿದ ರೀತಿ ಮತ್ತು ಅದಕ್ಕೆ ಅನುಸರಿಸಿದ ಪ್ರಕ್ರಿಯೆಗಳು ಕಾನೂನುಬದ್ಧ ಆಗಿರಲಿಲ್ಲ ಎಂಬುದು ನನ್ನ ಅಭಿಪ್ರಾಯ. ಅಮಾನ್ಯೀಕರಣಗೊಂಡ ಶೇ 98ರಷ್ಟು ಮೊತ್ತವನ್ನು ವಿನಿಮಯ ಮಾಡಲಾಗಿದೆ’ ಎಂದು ತಿಳಿಸಿದರು.

‘ಈ ಕುರಿತು ಸರ್ಕಾರ ಆರ್‌ಬಿಐಗೆ ಮಾಹಿತಿ ನೀಡಿತ್ತಾದರೂ ಅದರ ಅಭಿಪ್ರಾಯವನ್ನು ಪರಿಗಣಿಸಿಲ್ಲ. ಇಂತಹ ಗಂಭೀರ ನಿರ್ಧಾರದ ವೇಳೆ ಅಭಿಪ್ರಾಯ ತಿಳಿಸಲು ಆರ್‌ಬಿಐಗೆ ಕಾಲಾವಕಾಶ ನೀಡಿಲ್ಲ. ₹500, ₹1,000 ನೋಟುಗಳನ್ನು ರದ್ದುಗೊಳಿಸುವ ಸಂಪೂರ್ಣ ಪ್ರಕ್ರಿಯೆ ಕೇವಲ 24 ಗಂಟೆಗಳಲ್ಲಿ ನಡೆದಿದೆ ಎಂಬುದನ್ನು ಇಲ್ಲಿ ಪರಿಗಣಿಸಬೇಕು. ಕೇಂದ್ರ ಸರ್ಕಾರಕ್ಕೆ ಯಾವುದೇ ಕರೆನ್ಸಿಯನ್ನು ಅಮಾನ್ಯಗೊಳಿಸುವ ಅಧಿಕಾರ ಇದೆಯಾದರೂ ಅದನ್ನು ಶಾಸನಬದ್ಧವಾಗಿ ಮಾಡಬೇಕೇ ಹೊರತು ಗೆಜೆಟ್ ಅಧಿಸೂಚನೆ ಮೂಲಕ ಅಲ್ಲ’ ಎಂದು ಹೇಳಿದರು.

‘ಸಂಸತ್ತಿನ ಕಾಯ್ದೆಯ ಅನುಸಾರ ರಾಷ್ಟ್ರಪತಿಗಳು ಜಾರಿಗೊಳಿಸುವ ಸುಗ್ರೀವಾಜ್ಞೆ ಮೂಲಕ ಮಾತ್ರ ಅದನ್ನು ಜಾರಿಗೊಳಿಸಲು ಸಾಧ್ಯ. ಕೇಂದ್ರ ಸರ್ಕಾರಕ್ಕೆ ಗೆಜೆಟ್ ಅಧಿಸೂಚನೆ ಹೊರಡಿಸಿ ಬ್ಯಾಂಕ್ ಕರೆನ್ಸಿಗಳನ್ನು ರದ್ದು ಮಾಡುವ ಅಧಿಕಾರ ಇಲ್ಲ. ಇದಕ್ಕೂ ಮುನ್ನ ಕೇಂದ್ರ ಸರ್ಕಾರವು ಆರ್‌ಬಿಐ ಅನುಮತಿ ಪಡೆಯಬೇಕು. ಏಕೆಂದರೆ, ದೇಶದಲ್ಲಿ ನೋಟುಗಳ ಹರಿವನ್ನು ನಿಯಂತ್ರಿಸಲು ಮತ್ತು ಆರ್ಥಿಕ ಸ್ಥಿರತೆ ಕಾಪಾಡುವ ಏಕೈಕ ಪ್ರಾಧಿಕಾರವೆಂದರೆ ಆರ್‌ಬಿಐ. ಯಾವುದೇ ನಿರ್ಧಾರದಿಂದ ದೇಶದ ಆರ್ಥಿಕತೆ ಮೇಲೆ ಬೀರುವ ಪರಿಣಾಮದ ಕುರಿತು ಬ್ಯಾಂಕ್‌ಗಳು ಆಡಳಿತ ಮಂಡಳಿಯಲ್ಲಿ ಚರ್ಚೆ ನಡೆಸಿ ಸ್ವತಂತ್ರ ಹಾಗೂ ಮುಕ್ತ ಅಭಿಪ್ರಾಯ ಒದಗಿಸಬೇಕು’ ಎಂದು ಅವರು ಹೇಳಿದರು.

‘ಇದು ದೇಶದಲ್ಲಿ ಭ್ರಷ್ಟಾಚಾರ ಹಾಗೂ ಕಪ್ಪು ಹಣದ ಹರಿವು ನಿಗ್ರಹಿಸಲು ತೆಗೆದುಕೊಂಡ ಕ್ರಮ ಎಂಬುದರಲ್ಲಿ ಯಾವುದೇ ಅನುಮಾನ ಇಲ್ಲ. ಆದರೆ, ಆ ಕ್ರಮ ಜಾರಿಗೊಳಿಸಿದ ರೀತಿ ಮಾತ್ರ ಕಾನೂನುಬಾಹಿರವಾಗಿದೆ’ ಎಂದು ತೀರ್ಪಿನಲ್ಲಿ ತಿಳಿಸಿದರು.

ಉದ್ಯಮಿ ಆತ್ಮಹತ್ಯೆ: ಲಿಂಬಾವಳಿ ವಿರುದ್ಧ ಎಫ್‌ಐಆರ್

ರಾಮನಗರ: ಉದ್ಯಮಿ ಎಸ್. ಪ್ರದೀಪ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಸಕ ಅರವಿಂದ ಲಿಂಬಾವಳಿ ಸೇರಿದಂತೆ ಆರು ಮಂದಿ ವಿರುದ್ಧ ಕಗ್ಗಲೀಪುರ ಠಾಣೆಯಲ್ಲಿ ಭಾನುವಾರ ರಾತ್ರಿ ಎಫ್‌ಐಆರ್ ದಾಖಲಾಗಿದೆ.

ಅರವಿಂದ ಲಿಂಬಾವಳಿ

‘ಆತ್ಮಹತ್ಯೆ ಸಂಬಂಧ ಪ್ರದೀಪ್ ಅವರ ಪತ್ನಿ ವಿ. ನಮಿತಾ ಅವರು ದೂರು ನೀಡಿದ್ದಾರೆ. ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಗೋಪಿ, ಸೋಮಯ್ಯ, ಅರವಿಂದ ಲಿಂಬಾವಳಿ, ರಮೇಶ್ ರೆಡ್ಡಿ, ಜಯರಾಮ ರೆಡ್ಡಿ ಹಾಗೂ ರಾಘವ ಭಟ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

10ನೇ ಪುಟ ನೋಡಿ

‘ಬೂತ್ ವಿಜಯ’ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಮುಂದಿನ ಚುನಾವಣೆಯಲ್ಲಿ ‘ಮಿಷನ್ 150’ ಗುರಿ ಸಾಧಿಸಲು ಬಿಜೆಪಿ ರಾಜ್ಯವ್ಯಾಪಿ ಹಮ್ಮಿಕೊಂಡಿರುವ ‘ಬೂತ್ ವಿಜಯ’ ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಲಾಯಿತು. ಈ ಅಭಿಯಾನವು ಇದೇ 12 ರವರೆಗೆ ನಡೆಯಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಂಗಳೂರಿನ ಶಿವಾಜಿ ನಗರ ವಿಧಾನಸಭಾ ಕ್ಷೇತ್ರದಿಂದ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ಮಂಗಳೂರು ವಿಧಾನಸಭಾ ಕ್ಷೇತ್ರದಿಂದ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಕಾರ್ಯಕರ್ತರ ಮನೆಗಳಲ್ಲಿ ಪಕ್ಷದ ಧ್ವಜಗಳನ್ನು ಹಾರಿಸುವುದಕ್ಕೂ ಚಾಲನೆ ನೀಡಲಾಯಿತು. ಬೊಮ್ಮಾಯಿ ಅವರು ಕೆಲವು ಮನೆಗಳಲ್ಲಿ ಪಕ್ಷದ ಧ್ವಜವನ್ನು ಕಟ್ಟಿದರು.

ಪ್ರತಿಯೊಂದು ಬೂತ್‌ನಲ್ಲಿ ವಿರೋಧ ಪಕ್ಷಗಳಿಗಿಂತ ಅಧಿಕ ಮತಗಳನ್ನು ಗಳಿಸಲು ಕಾರ್ಯಕರ್ತರನ್ನು ಅಣಿಗೊಳಿಸುವುದು ಈ ಅಭಿಯಾನದ ಉದ್ದೇಶ. ರಾಜ್ಯದ 39 ಸಂಘಟನಾತ್ಮಕ ಜಿಲ್ಲೆಗಳ 312 ಮಂಡಲಗಳು, 1,445 ಮಹಾಶಕ್ತಿ ಕೇಂದ್ರಗಳು, 11,642 ಶಕ್ತಿಕೇಂದ್ರ-ಗಳು ಮತ್ತು 58,186 ಬೂತ್‌ಗಳ ಕಾರ್ಯಕರ್ತರು ಅಭಿಯಾನದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವಸಂತನಗರದಲ್ಲಿ ಬಿಜೆಪಿ ‘ಬೂತ್ ವಿಜಯ’ ಅಭಿಯಾನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಿದ್ದರು. ಸಂಸದ ಪಿ.ಸಿ. ಮೋಹನ್ ಇದ್ದರು

10ನೇ ಪುಟ ನೋಡಿ

ಒಳ ಪುಟಗಳು

ಐಇಡಿ ಸ್ಫೋಟ: ಇಬ್ಬರು ಮಕ್ಕಳ ಸಾವು 11

ರಷ್ಯಾದ 200 ಸೈನಿಕರ ಸಾವು 10

ಕಾರಿನಡಿ 12 ಕಿ.ಮೀ ಎಳೆದೊಯ್ದ ಯುವತಿ ಮೃತದೇಹ: ಪೊಲೀಸರ ವಿರುದ್ಧ ಆಕ್ರೋಶ

‘ಅತ್ಯಾಚಾರ ಪ್ರಕರಣ ಮುಚ್ಚಿಹಾಕುವ ಹುನ್ನಾರ’

ನವದೆಹಲಿ(ಪಿಟಿಐ): ಕಾರಿನಡಿ ಸಿಲುಕಿದ್ದ ಯುವತಿಯ ಮೃತದೇಹವನ್ನು ಸುಮಾರು 12 ಕಿ.ಮೀ.ವರೆಗೂ ಎಳೆದೊಯ್ದಿದ್ದ ಅಮಾನವೀಯ ಘಟನೆ ವಿರುದ್ಧ ದೆಹಲಿಯಲ್ಲಿ ಜನಾಕ್ರೋಶ ವ್ಯಕ್ತವಾಗಿದೆ.

ಬಂಧನಕ್ಕೊಳಗಾಗಿರುವ ಐವರು ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಆಗ್ರಹಿಸಿ ಸುಲ್ತಾನ್‌ಪುರಿ ಪೊಲೀಸ್ ಠಾಣೆ ಎದುರು ಸ್ಥಳೀಯರು ಸೋಮವಾರ ಪ್ರತಿಭಟನೆ ನಡೆಸಿದ್ದಾರೆ. ‘ಯುವತಿ ಮೇಲೆ ಅತ್ಯಾಚಾರ ನಡೆಸಲಾಗಿದ್ದು, ಪೊಲೀಸರು ಇದನ್ನು ಮುಚ್ಚಿ ಹಾಕಲು ಯತ್ನಿಸುತ್ತಿದ್ದಾರೆ. ಹೀಗಾಗಿಯೇ ಅಪಘಾತ ಪ್ರಕರಣವೆಂದು ಬಿಂಬಿಸುತ್ತಿದ್ದಾರೆ’ ಎಂದು ಪ್ರತಿಭಟನ-ಕಾರರು ದೂರಿದ್ದಾರೆ.

ಖಂಜಾವಲಾ ಘಟನೆ ನಾಗರಿಕ ಸಮಾಜ ನಾಚಿಕೆ ಪಡುವಂತಹದ್ದು. ಆರೋಪಿಗಳು ಎಷ್ಟೇ ಪ್ರಭಾವಿಗಳಾಗಿರಲಿ. ಅವರನ್ನು ಗಲ್ಲಿಗೇರಿಸಬೇಕು

ಅರವಿಂದ್ ಕೇಜ್ರಿವಾಲ್
ದೆಹಲಿ ಮುಖ್ಯಮಂತ್ರಿ

ಘಟನೆಯು ಅಮಾನವೀಯವಾದುದು. ಇದು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿದೆ. ಪ್ರಕರಣದ ಕುರಿತು ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುವುದು

ವಿ.ಕೆ.ಸಕ್ಸೇನಾ
ದೆಹಲಿ ಲೆಫ್ಟಿನೆಂಟ್ ಗವರ್ನರ್

ಘಟನೆ ಖಂಡಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ನಿವಾಸದ ಎದುರು ಪ್ರತಿಭಟನೆ ನಡೆಸಿ, ಅವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ರಾಜ್ ನಿವಾಸದ ಎದುರು ಜಮಾಯಿಸಿದ್ದ ಸುಮಾರು 200 ಮಂದಿ ಕಾರ್ಯಕರ್ತರು ಸಕ್ಸೇನಾ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ.

‘ಭಾನುವಾರ ಬೆಳಗಿನ ಜಾವ ಖಂಜಾವಲಾ ರಸ್ತೆಯಲ್ಲಿ ಸಾಗುತ್ತಿದ್ದ ಕಾರಿನಡಿ ಯುವತಿಯ ಮೃತದೇಹ ಸಿಲುಕಿರುವುದನ್ನು ನೋಡಿದೆ. ಕೂಡಲೇ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ಬಳಿಕ ಬೈಕ್‌ನಲ್ಲಿ ಕಾರು ಬೆನ್ನಟ್ಟಿದೆ. ಕಾರಿನ ಚಾಲಕ ಕೆಲ ಕಿ.ಮೀ ಸಾಗಿದ ಕೂಡಲೇ ತಿರುವು ಪಡೆಯುತ್ತಿದ್ದ. ಸುಮಾರು ಒಂದೂವರೆ ಗಂಟೆ ಆತ ಹೀಗೇ ಕಾರು ಚಲಾಯಿಸಿದ್ದ’ ಎಂದು ಪ್ರತ್ಯಕ್ಷದರ್ಶಿ ದೀಪಕ್ ಎಂಬುವರು ಹೇಳಿದ್ದಾರೆ.

‘ಆಹಾರ ಪೂರೈಸಿ ಮರಳುತ್ತಿದ್ದಾಗ ಖಂಜಾವಲಾ ರಸ್ತೆಯಲ್ಲಿ ಕಾರೊಂದು ಅತಿ ವೇಗವಾಗಿ ಸಾಗುತ್ತಿದ್ದುದನ್ನು ಕಂಡೆ. ಆ ರಸ್ತೆಯಲ್ಲಿ ಪೊಲೀಸರು ಬ್ಯಾರಿಕೇಡ್ ಹಾಕಿದ್ದರು. ಅದನ್ನು ನೋಡಿದ್ದ ಚಾಲಕ ಏಕಾಏಕಿ ‘ಯೂ ಟರ್ನ್’ ತೆಗೆದುಕೊಂಡಿದ್ದ. ಆಗ ಕಾರಿನಡಿ ಯುವತಿಯ ತಲೆ ಕಾಣಿಸಿತ್ತು’ ಎಂದು ‘ಡೆಲಿವರಿ ಬಾಯ್’ ಆಗಿ ಕೆಲಸ ಮಾಡುತ್ತಿರುವ ವ್ಯಕ್ತಿಯೊಬ್ಬರು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಂಚಾರ ಪೊಲೀಸರಿಂದ 16, ಮೆಟ್ರೊದಿಂದ 4 ಬೂತ್ ಸ್ಥಾಪನೆ ● ಮೀಟರ್ ದರದಂತೆ ಪ್ರಯಾಣಕ್ಕೆ ಅನುಕೂಲ

ಪ್ರೀಪೇಯ್ಡ್ ಆಟೊ ಬೂತ್: ಮತ್ತಷ್ಟು ಸ್ಮಾರ್ಟ್

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಹೆಚ್ಚಿನ ಪ್ರಯಾಣ ದರ ವಸೂಲಿಗೆ ಲಗಾಮು ಹಾಕಲು ನಗರದಲ್ಲಿ ಜಾರಿಗೆ ತರಲಾಗಿರುವ ಪ್ರೀಪೇಯ್ಡ್ ಆಟೊ ಬೂತ್‌ಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುತ್ತಿದ್ದು, ಸಂಚಾರ ಪೊಲೀಸರು ಹಾಗೂ ನಮ್ಮ ಮೆಟ್ರೊ ಆಡಳಿತ ಮಂಡಳಿಯವರು ಜಂಟಿಯಾಗಿ ನಿರ್ವಹಣೆ ಜವಾಬ್ದಾರಿ ಹೊತ್ತುಕೊಂಡಿದ್ದಾರೆ.

'ಆಟೊರಿಕ್ಷಾ ಚಾಲಕರು ಹೆಚ್ಚಿನ ಹಣ ಕೇಳುತ್ತಾರೆ. ಕರೆದ ಸ್ಥಳಗಳಿಗೆ ಬರುವುದಿಲ್ಲ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ' ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿಬರುತ್ತಿದ್ದವು. ಇದಕ್ಕೆ ಪರಿಹಾರ ಎಂಬಂತೆ ಪ್ರೀಪೇಯ್ಡ್ ಆಟೊ ಬೂತ್ ತೆರೆದಿದ್ದ ಸಂಚಾರ ಪೊಲೀಸರು, ನಿಗದಿತ ಸ್ಥಳದಲ್ಲಿ ಆಟೊಗಳನ್ನು ನಿಲ್ಲಿಸಿ ಪ್ರಯಾಣಿಕರಿಗೆ ಸೇವೆ ಸಿಗುವಂತೆ ಮಾಡುತ್ತಿದ್ದರು.

ಕೋವಿಡ್ ಲಾಕ್‌ಡೌನ್ ಹಾಗೂ ನಂತರದ ದಿನಗಳಲ್ಲಿ ಹಲವು ಪ್ರೀಪೇಯ್ಡ್ ಆಟೊ ಬೂತ್‌ಗಳ ನಿರ್ವಹಣೆಯೇ ಸ್ಥಗಿತಗೊಂಡಿತ್ತು. ಚಾಲಕರ ಹೆಚ್ಚಿನ ಪ್ರಯಾಣ ದರ ವಸೂಲಿ ಯಥಾಪ್ರಕಾರ ಸಾಗಿತ್ತು. ಈ ಬಗ್ಗೆ ಸಾರ್ವಜನಿಕರಿಂದ ಮತ್ತಷ್ಟು ದೂರುಗಳು ಕೇಳಿಬಂದಿದ್ದರಿಂದ, ಪ್ರೀಪೇಯ್ಡ್ ಆಟೊ ಬೂತ್‌ಗಳನ್ನು ಬಲಪಡಿಸಲು ಪೊಲೀಸರು ಮುಂದಾಗಿದ್ದಾರೆ.

ಜನರು ಹೆಚ್ಚು ಸುತ್ತಾಡುವ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ, ರೈಲು ನಿಲ್ದಾಣ, ಎಂ.ಜಿ. ರಸ್ತೆ, ಜಯನಗರ, ಮಲ್ಲೇಶ್ವರ ಹಾಗೂ ಇತರೆ ಸ್ಥಳಗಳಲ್ಲಿ ಪ್ರೀಪೇಯ್ಡ್ ಆಟೊ ಬೂತ್‌ಗಳಿದ್ದವು. ಇದೀಗ ಅದೇ ಸ್ಥಳಗಳಲ್ಲಿ ಹೊಸ ವಿನ್ಯಾಸ ಹಾಗೂ ಆಧುನಿಕ ಸೌಲಭ್ಯವುಳ್ಳ ಸುಸಜ್ಜಿತ ಬೂತ್‌ಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಇದಕ್ಕೆ ಜನರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಂಚಾರ ಪೊಲೀಸರಿಂದ 16 ಬೂತ್: ನಗರದ ಆಟೊರಿಕ್ಷಾ ಚಾಲಕರಿಂದ ಸಾರ್ವಜನಿಕರಿಗೆ ಹೆಚ್ಚಿನ ತೊಂದರೆಯಾಗದ ರೀತಿಯಲ್ಲಿ ಹಲವು ಕ್ರಮ ಕೈಗೊಂಡಿರುವ ಪೊಲೀಸರು, ನಗರದ 16 ಕಡೆ ಪ್ರೀಪೇಯ್ಡ್ ಆಟೊ ಬೂತ್‌ಗಳನ್ನು ತೆರೆಯಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

'ಮೆಜೆಸ್ಟಿಕ್ ಬಸ್ ನಿಲ್ದಾಣ, ಜಯನಗರ 4ನೇ ಹಂತದ ಬಿಡಿಎ ಕಾಂಪ್ಲೆಕ್ಸ್, ಮಲ್ಲೇಶ್ವರ ಸಂಪಿಗೆ ರಸ್ತೆಯ ಮಂತ್ರಿ ಮಾಲ್ ಬಳಿ ಇರುವ ಪ್ರೀಪೇಯ್ಡ್ ಆಟೊ ಬೂತ್‌ಗಳನ್ನು ವ್ಯವಸ್ಥಿತ ರೀತಿಯಲ್ಲಿ ಪುನರ್ ಆರಂಭಿಸಲಾಗಿದೆ. ಉಳಿದ ಸ್ಥಳಗಳಲ್ಲಿಯೂ ಸದ್ಯದಲ್ಲೇ ಬೂತ್ ತೆರೆಯಲಾಗುವುದು' ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ 'ಪ್ರಜಾವಾಣಿ'ಗೆ ತಿಳಿಸಿದರು.

ಮೆಟ್ರೊ ನಿಲ್ದಾಣಗಳ ಬಳಿ 4 ಬೂತ್: ನಗರದ ಮೆಟ್ರೊ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಿಲ್ದಾಣಕ್ಕೆ ಹೊಂದಿಕೊಂಡು ಪ್ರೀಪೇಯ್ಡ್ ಆಟೊ ಬೂತ್‌ಗಳನ್ನು ಆರಂಭಿಸಲಾಗುತ್ತಿದೆ.

'ನಾಲ್ಕು ಮೆಟ್ರೊ ನಿಲ್ದಾಣಗಳ ಬಳಿ ಪ್ರಾಯೋಗಿಕವಾಗಿ ಬೂತ್ ತೆರೆಯಲಾಗುವುದೆಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳಿದ್ದಾರೆ. ಸದ್ಯ ಎಂ.ಜಿ. ರಸ್ತೆಯಲ್ಲಿ ಒಂದು ಬೂತ್ ಕಾರ್ಯಾಚರಣೆ ಮಾಡಿದೆ' ಎಂದು ಸಲೀಂ ಮಾಹಿತಿ ನೀಡಿದರು.

ಸಿಬ್ಬಂದಿ ನೇಮಕ, ನಿಗದಿತ ದರ ಜಾರಿ: 'ಮಳೆ, ಗಾಳಿ, ಬಿಸಿಲಿಗೆ ತಡೆಯುವ ರೀತಿಯಲ್ಲಿ ಕೊಠಡಿ ಮಾದರಿಯಲ್ಲಿ ಬೂತ್‌ಗಳನ್ನು ರೂಪಿಸಲಾಗಿದೆ. ನಿತ್ಯವೂ ಮಧ್ಯಾಹ್ನದಿಂದ ರಾತ್ರಿ 9 ಗಂಟೆಯವರೆಗೆ ಬೂತ್‌ಗಳಲ್ಲಿ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ. ಸಾರಿಗೆ ಇಲಾಖೆ ನಿಗದಿಪಡಿಸಿರುವ ದರದನ್ವಯ ಪ್ರಯಾಣಿಕರಿಗೆ ಆಟೊ ಸೇವೆ ಸಿಗುವಂತೆ ನೋಡಿಕೊಳ್ಳಲಿದ್ದಾರೆ' ಎಂದು ಸಲೀಂ ಹೇಳಿದರು.

'ಪ್ರಯಾಣದ ಸ್ಥಳ, ಅಂತರ ಹಾಗೂ ದರದ ವಿವರವುಳ್ಳ ರಶೀದಿ ಪ್ರಯಾಣಿಕರಿಗೆ ಸಿಗಲಿದೆ. ಇದರಿಂದಾಗಿ ನಿಗದಿತ ದರವನ್ನಷ್ಟೇ ಪ್ರಯಾಣಿಕರು ಪಾವತಿಸಬೇಕು. ಯಾರಾದರೂ ಹೆಚ್ಚಿನ ದರ ಕೇಳಿದರೆ, ರಶೀದಿಯನ್ನೇ ಪುರಾವೆಯನ್ನಾಗಿ ಇಟ್ಟಕೊಂಡು ದೂರು ನೀಡಬಹುದು' ಎಂದರು.

ಆಟೊ ಚಾಲಕರ ನಿರಾಸಕ್ತಿ

ಸಂಚಾರ ಪೊಲೀಸರು ತೆರೆದಿರುವ ಪ್ರೀಪೇಯ್ಡ್ ಆಟೊ ಬೂತ್‌ಗಳ ಮೂಲಕ ಪ್ರಯಾಣಿಕರಿಗೆ ಸೇವೆ ನೀಡಲು ಚಾಲಕರು ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ, ಬೂತ್‌ಗಳ ಎದುರು ನಿತ್ಯವೂ ಆಟೊಗಳ ಸಂಖ್ಯೆ ಕ್ಷೀಣಿಸುತ್ತಿದೆ. ಸಾರಿಗೆ ಇಲಾಖೆ ನಿಗದಿಪಡಿಸಿರುವ ಪ್ರಯಾಣ ದರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವ ಚಾಲಕರು, 'ತೈಲ ಹಾಗೂ ಗ್ಯಾಸ್ ಬೆಲೆ ಹೆಚ್ಚಾಗಿದೆ. ನಿಗದಿತ ದರದಲ್ಲಿ ಸೇವೆ ನೀಡಿದರೆ, ಜೀವನ ನಡೆಸುವುದು ಕಷ್ಟ. ಹೀಗಾಗಿ, ಘಟಕಕ್ಕೆ ಹೋಗುವುದಿಲ್ಲ' ಎನ್ನುತ್ತಿದ್ದಾರೆ.

'ಸ್ಥಾಪನೆಗಿಂತ ಜಾರಿಗೆ ಒತ್ತು ನೀಡಿ'

'ಪ್ರೀಪೇಯ್ಡ್ ಆಟೊ ಬೂತ್ ತೆರೆದಿರುವುದಾಗಿ ಹೇಳಿ ಪ್ರಚಾರ ಪಡೆಯುವುದು ಸುಲಭ. ಅದರ ಬದಲು, ಘಟಕದ ಮೂಲಕ ಪ್ರಯಾಣಿಕರಿಗೆ ಉತ್ತಮ ಸೇವೆ ಕೊಡಿಸಲು ಸಂಚಾರ ಪೊಲೀಸರು ಹೆಚ್ಚಿನ ಒತ್ತು ನೀಡಬೇಕು' ಎಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ.

ಜಯನಗರ ನಿವಾಸಿ ರಾಜಶೇಖರ್, 'ಬಸ್ ನಿಲ್ದಾಣ, ತಂಗುದಾಣ, ರೈಲು ನಿಲ್ದಾಣ, ಮೆಟ್ರೊ ನಿಲ್ದಾಣ, ಸಾರ್ವಜನಿಕ ಸ್ಥಳಗಳಲ್ಲಿ ಸುತ್ತಾಡುವ ಚಾಲಕರು ಹೆಚ್ಚಿನ ಪ್ರಯಾಣ ದರ ವಸೂಲಿ ಮುಂದುವರಿಸಿದ್ದಾರೆ' ಎಂದು ದೂರಿದರು.

ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣ ಬಳಿ ಆರಂಭವಾಗಿರುವ ಪ್ರೀಪೇಯ್ಡ್ ಆಟೊ ಬೂತ್ – ಪ್ರಜಾವಾಣಿ ಚಿತ್ರ

ಆಟೊದವರ ಕಿರುಕುಳ: ದೂರು ನೀಡಿ

ಆಟೊ ಚಾಲಕರ ವಿರುದ್ಧದ ದೂರುಗಳನ್ನು ಸ್ವೀಕರಿಸಿ, ಕಾನೂನು ಕ್ರಮ ಜರುಗಿಸಲು ಸಂಚಾರ ಪೊಲೀಸರು ಸಹಾಯವಾಣಿ ತೆರೆದಿದ್ದಾರೆ. 080-22868444, 080-22868550 ನಂಬರ್‌ಗಳಿಗೆ ಕರೆ ಮಾಡಬಹುದು ಅಥವಾ ಸಂಬಂಧಪಟ್ಟ ಠಾಣೆಗೆ ದೂರು ನೀಡಬಹುದು.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ,
ಬೆಂಗಳೂರು–560059. ದೂರವಾಣಿ: 080–28484515/40/43/44/49
ಸಂಖ್ಯೆ: ಡಿಪಿಎಸ್ 26 ಸಿಎಸ್‌ಟಿ (ಜಿ) 2022–23 (ಕಾಲ್–4) ದಿನಾಂಕ: 02.01.2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರಿನಲ್ಲಿನ (ಬಿ.ಬಿ.ಎಂ.ಪಿ. ವ್ಯಾಪ್ತಿ) ಅರ್ಹ ಮುದ್ರಣ ಹಾಗೂ ಬೈಂಡಿಂಗ್ ಸಂಸ್ಥೆಗಳಿಂದ ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು, ಇಲ್ಲಿಗೆ ಅವಶ್ಯಕವಿರುವ ಏಕ ವರ್ಣ ಮತ್ತು ನಾಲ್ಕು ವರ್ಣ ಮುದ್ರಣ ಹಾಗೂ ಬೈಂಡಿಂಗ್ ಕೆಲಸಗಳನ್ನು ಒಂದು ವರ್ಷದ ಅವಧಿಯವರೆಗೆ ದರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕೆ.ಟಿ.ಪಿ.ಪಿ ನಿಯಮಗಳಡಿ ಎರಡು ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.35.00 ಲಕ್ಷ**ಗಳಾಗಿದ್ದು ಇದರ ಒಟ್ಟು ಇ.ಎಂ.ಡಿ. ಮೊತ್ತ **ರೂ.1.75 ಲಕ್ಷಗಳು**. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.01.2023**. ವಿವರವಾದ ಟೆಂಡರ್ ದಸ್ತಾವೇಜನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು
ವಾಸಾಸಂಇ/ವಾ.ಪ್ರ/3838/ಎಂಎಎ/2022–23

ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ

ಅಲ್ಪಾವಧಿ ಟೆಂಡರ್ ಇ–ಪ್ರಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: 19/1082–1091/2022–23 ದಿನಾಂಕ: 26.12.2022

ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮುಖಾಂತರ ಈ ಕಛೇರಿ ವ್ಯಾಪ್ತಿಯಲ್ಲಿ ರಾಮನಗರ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಲೆಕ್ಕ ಶೀರ್ಷಿಕೆ: ವಿವಿಧ ಯೋಜನೆಯಡಿಯಲ್ಲಿ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ. ಗರಿಷ್ಠ ಅಂದಾಜು ಮೊತ್ತ ರೂ. 47.50/– ಲಕ್ಷಗಳು, ಕನಿಷ್ಠ ಅಂದಾಜು ಮೊತ್ತ ರೂ. 6.50/– ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: 05.01.2023 ಸಂಜೆ 4.00 ಗಂಟೆವರೆಗೆ. ತೆರೆಯುವ ದಿನಾಂಕ: 06/01/2023 ಸಂಜೆ 4.30 ಗಂಟೆವರೆಗೆ. ಇತರೆ ಮಾಹಿತಿಗಳನ್ನು ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ,
ಧನ್ವಂತರಿ ರಸ್ತೆ, ಆನಂದ ರಾವ್ ವೃತ್ತದ ಸಮೀಪ, ಬೆಂಗಳೂರು – 560009.
ದೂರವಾಣಿ ಸಂ: 080–22876553. ಫ್ಯಾಕ್ಸ್: 080–22340139.
ಇ–ಮೇಲ್: directorayush.eproc@gmail.com

ಅಧಿಸೂಚನೆ ಸಂಖ್ಯೆ: ಆವೈಮ/27/ಸರಬ/2022–23 ದಿನಾಂಕ: 28.12.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಅವಶ್ಯಕವಾಗಿ ಬೇಕಾಗಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸುವ ಅಲ್ಪಾವಧಿ ಇ–ಟೆಂಡರ್.

ಅಲ್ಪಾವಧಿ ಇ–ಟೆಂಡರ್ ಅನುಸೂಚಿಗಳು

(1) ಇ–ಟೆಂಡರ್ ಅಧಿಸೂಚನೆ **ದಿನಾಂಕ: 28.12.2022.** (2) ಇ–ಟೆಂಡರ್ ಅಧಿಸೂಚನೆ ಪ್ರತಿ ದೊರೆಯುವ **ದಿನಾಂಕ: 31.12.2022.** (3) ಇ–ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.01.2023, ಸಂಜೆ 04.00 ಗಂಟೆ**ಯುವರೆಗೆ. (4) ಇ–ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 23.01.2023, ಬೆಳಿಗ್ಗೆ 11.00 ಗಂಟೆಗೆ.** (5) ಇ–ಟೆಂಡರ್ ದಾಖಲೆ ತೆರೆಯುವ ಸ್ಥಳ: ಪ್ರಾಚಾರ್ಯರ ಕೊಠಡಿ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

ಇ–ಟೆಂಡರ್–ನಿಯಮಗಳು/ನಿಬಂಧನೆಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ **ದಿನಾಂಕ: 31.12.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿಗಳು/ಸಹಾಯಕ ಆಡಳಿತಾಧಿಕಾರಿಗಳು ಟೆಂಡರ್ ಸಮಿತಿ,
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/3825/ಆಕಾರ್/2022–23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂಖ್ಯೆ:ಬೆಂಅಪ್ರಾ/ವಿಭೂಸ್ವಾಅ–1/D.K.S.K.L./48/2022–23 ದಿನಾಂಕ:31.12.2022

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಶವಂತಪುರ/ಹೆಸರುಘಟ್ಟ ಹೋಬಳಿ, **ಸೋಮಶೆಟ್ಟಿಹಳ್ಳಿ, ಲಕ್ಷ್ಮೀಪುರ ಹಾಗೂ ಕೆಂಪಾಪುರ** ಗ್ರಾಮಗಳಿಗೆ ಸಂಬಂಧಿಸಿದಂತೆ ಜಮೀನುಗಳ ಅಧಿಸೂಚಿತ ಖಾತೆದಾರರು, ಅನುಭವದಾರರು, ಆಕ್ಷೇಪಣೆದಾರರು ಹಾಗೂ ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ॥ ಕೆ.ಶಿವರಾಮಕಾರಂತ ಬಡಾವಣೆ ರಚಿಸುವ ಸಲುವಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ:ಬಿಡಿಎ/ಕಮೀಷನರ್/ಡಿಸಿ(ಎಲ್‌ಎ)/ಎಸ್‌ಎಲ್‌ಎಒ/ಎ5/ಪಿಆರ್/283/2008–09, ದಿನಾಂಕ:30.12.2008 ನ್ನು ಹೊರಡಿಸಿದ್ದು, ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 31.12.2008ರ ಭಾಗ–3, ಪುಟ ಸಂಖ್ಯೆ 1368ರಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Civil Appeal No. 7661-63/2018(Arising out of SLP(C) No. 10216–10218/2018) Dated 03/08/2018 ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ ನಅಇ/553/ಬೆಂಭೂಸ್ವಾ/2018 ದಿನಾಂಕ 29/10/2018 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ. ಕೆ.ಶಿವರಾಮ ಕಾರಂತ ಬಡಾವಣೆಯನ್ನು 3546 ಎಕರೆ 12 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸುವ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 18(3) ರಡಿಯಲ್ಲಿ ಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ/553/ಎಂಎನ್‌ಎಕ್ಸ್/2018, ದಿನಾಂಕ 30.10.2018 ರಂದು ಬಿಡಿಎ ಕಾಯ್ದೆ 1976 ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 01.11.2018 ರಂದು ಪ್ರಕಟಿಸಲಾಗಿರುತ್ತದೆ.

ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ.4/1, 10, 22/3, 28/15ಎ1, 28/15ಎ2, 45/1, 55/5, 57, 63/2 ಮತ್ತು 76/1, ಮತ್ತು ಲಕ್ಷ್ಮೀಪುರ ಗ್ರಾಮದ ಸರ್ವೆ ನಂ.23, 30, 32, 33/4, 38 ಮತ್ತು 43/ಎ&ಬಿ, ಹಾಗೂ ಕೆಂಪಾಪುರ ಗ್ರಾಮದ ಸರ್ವೆ ನಂ.45, 46/1, 46/2 54 ಮತ್ತು 56/2, ರ ಈ ಜಮೀನುಗಳಿಗೆ ಸಂಬಂಧಪಟ್ಟ ಎಲ್ಲಾ ಖಾತೆದಾರರು, ಅನುಭವದಾರರು ಮತ್ತು ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 12(2)ರಡಿ ಅವಾರ್ಡ್ ನೋಟೀಸ್‌ನ್ನು ಲಭ್ಯವಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಮೂಲಕ ಈಗಾಗಲೇ ಜಾರಿ ಮಾಡಲಾಗಿದ್ದು, ಒಂದು ವೇಳೆ 12(2) ನೋಟಿಸ್ ತಲುಪದಿದ್ದಲ್ಲಿ ಸದರಿ ಪ್ರಕಟಣೆಯನ್ನೇ ಭೂಸ್ವಾಧೀನ ಕಾಯ್ದೆ 12(2) ನೋಟೀಸ್ ಎಂದು ಪರಿಗಣಿಸಿ, ಮೇಲ್ಕಂಡ ಸರ್ವೆ ನಂಬರ್‌ಗಳ ಸ್ವತ್ತುಗಳನ್ನು ಮರ–ಮಾಲ್ಕಿ ಕಟ್ಟಡಗಳ ಸಮೇತವಾಗಿ ಜಮೀನಿನ ಸ್ವಾಧೀನವನ್ನು ಭೂಸ್ವಾಧೀನ ಕಾಯ್ದೆ 16(1)ರನ್ವಯ ದಿನಾಂಕ:04.01.2023ರಂದು ಹಸ್ತಾಂತರಿಸಲು ಈ ಮೂಲಕ ತಿಳಿಯಪಡಿಸಿದೆ. ಇಲ್ಲವಾದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇರೆಗೆ ಭೂಸ್ವಾಧೀನ ಕಾಯ್ದೆಯನ್ವಯ ಮುಂದಿನ ಕ್ರಮ ಜರುಗಿಸಲಾಗುವುದು. ಈ ಪ್ರಕಟಣೆಯನ್ನು ಭೂಸ್ವಾಧೀನ ಕಾಯ್ದೆ ಕಲಂ 12(2) ಎಂದು ಪರಿಗಣಿಸಿ ನಿಗದಿಪಡಿಸಿದ ದಿನಾಂಕದಂದು ಸ್ಥಳದಲ್ಲಿ ಹಾಜರಿದ್ದು ಜಮೀನನ್ನು ಸ್ವಾಧೀನಕ್ಕೆ ನೀಡುವಲ್ಲಿ ಸಹಕರಿಸಲು ಕೋರಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಡಾ॥ ಕೆ.ಶಿವರಾಮ ಕಾರಂತ ಬಡಾವಣೆ, ಬೆಂ.ಅ.ಪ್ರಾ. ಬೆಂಗಳೂರು

ಜನನಾಂಗ ಮರುಜೋಡಣೆ ಯಶಸ್ವಿ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಜನನಾಂಗ ಕಳೆದುಕೊಂಡಿದ್ದ ನೈಜೀರಿಯಾ ಮೂಲದ 12 ವರ್ಷದ ಬಾಲಕನಿಗೆ ಫೋರ್ಟಿಸ್ ಆಸ್ಪತ್ರೆ ವೈದ್ಯರ ತಂಡ 'ಸಂಕೀರ್ಣ ಶಸ್ತ್ರಚಿಕಿತ್ಸೆ' ಮೂಲಕ ಜನನಾಂಗವನ್ನು ಮರುಜೋಡಣೆ ಮಾಡುವಲ್ಲಿ ಯಶಸ್ವಿಯಾಗಿದೆ.

ಮೂತ್ರವಿಜ್ಞಾನ, ಯುರೋ-ಆಂಕಾಲಜಿ ವಿಭಾಗದ ನಿರ್ದೇಶಕರಾದ ಡಾ. ಮೋಹನ್ ಕೇಶವಮೂರ್ತಿ ಮತ್ತು ತಂಡ ಈ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿದೆ.

'ಆರು ವರ್ಷಗಳ ಹಿಂದೆಯೇ ರಸ್ತೆ ಅಪಘಾತದಲ್ಲಿ ಬಾಲಕನ ಶಿಶ್ನ ಹಾಗೂ ಬಲ ವೃಷಣ ಸಂಪೂರ್ಣ ಕತ್ತರಿಸಿಕೊಂಡಿತ್ತು. ಅಂದಿನಿಂದ ಬಾಲಕ ಸರಿಯಾಗಿ ಮೂತ್ರ ವಿಸರ್ಜಿಸಲು ಸಾಧ್ಯವಾಗದೆ, ಕ್ಯಾಥೆಟರ್ ಅಳವಡಿಸಿ ಪ್ಲಾಸ್ಟಿಕ್ ಚೀಲವನ್ನು ಮೂತ್ರ ಶೇಖರಣೆಗಾಗಿ ಹಾಕಲಾಗಿತ್ತು. ಅದೂ ಅಲ್ಲದೇ, ಅಪಘಾತದಿಂದ ಮೂತ್ರಕೋಶವು ದುರ್ಬಲವಾಗಿದ್ದರಿಂದ ಹೆಚ್ಚು ಸಮಯ ಮೂತ್ರವನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ' ಎಂದು ಡಾ. ಮೋಹನ್ ಕೇಶವಮೂರ್ತಿ ವಿವರಿಸಿದರು.

'ಈ ಬಾಲಕ ಫೋರ್ಟಿಸ್ ಆಸ್ಪತ್ರೆಗೆ ದಾಖಲಾದ ಬಳಿಕ, ತಪಾಸಣೆಗೆ ಒಳಪಡಿಸಲಾಯಿತು. ಬಾಲಕನಿಗೆ ಸದ್ಯ ಎರಡು ಹಂತಗಳ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಮೂರನೇ ಹಂತದಲ್ಲಿ ಮೂತ್ರನಾಳದ ಪುನರ್‌ನಿರ್ಮಾಣ ಮಾಡುವ ಅವಶ್ಯಕತೆ ಇದ್ದು, ಆರು ತಿಂಗಳ ನಂತರ ಅದಕ್ಕಾಗಿ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಬಾಲಕ ವಯಸ್ಕನಾದ ನಂತರ ಸಂಭೋಗಕ್ಕೆ ತೊಡಕು ಆಗದಂತೆ ಎಚ್ಚರಿಕೆ ವಹಿಸಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಪ್ರಸ್ತುತ ಬಾಲಕನ ಶಿಶ್ನವನ್ನು ಯಶಸ್ವಿಯಾಗಿ ಜೋಡಣೆ ಮಾಡಲಾಗಿದ್ದು, ಆರೋಗ್ಯವಾಗಿದ್ದಾನೆ. ಎಲ್ಲರಂತೆಯೇ ಶಿಶ್ನದ ಮೂಲಕ ಮೂತ್ರವಿಸರ್ಜನೆ ಮಾಡಬಹುದಾಗಿದೆ ಎಂದರು.

ಎನ್‌. ಆರ್‌. ರಮೇಶ್ ಆಸ್ತಿ ವಿವರ ಕೋರಿದ್ದ ಆರ್‌ಟಿಐ ಕಾರ್ಯಕರ್ತ

ಅಭ್ಯರ್ಥಿಗಳ ಆಸ್ತಿ ವಿವರವೇ ನಾಪತ್ತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದಿನ ಬಿಬಿಎಂಪಿ ಚುನಾವಣೆ ವೇಳೆ ಅಭ್ಯರ್ಥಿಗಳು ಸಲ್ಲಿಸಿದ್ದ ಆಸ್ತಿ ವಿವರವೇ ನಾಪತ್ತೆಯಾಗಿದೆ! ಮಾಹಿತಿ ಹಕ್ಕು ಕಾಯ್ದೆಯಡಿ ಆರ್‌ಟಿಐ ಕಾರ್ಯಕರ್ತರೊಬ್ಬರು ಸಲ್ಲಿಸಿದ್ದ ಅರ್ಜಿ ಕಚೇರಿಯಿಂದ ಕಚೇರಿಗೆ ವರ್ಗಾವಣೆಯಾಗಿ, ಕೊನೆಗೂ 'ಲಭ್ಯವಿಲ್ಲ' ಎಂಬ ಉತ್ತರದೊಂದಿಗೆ ಕೊನೆಯಾಗಿದೆ.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಡಿಯೂರು ವಾರ್ಡ್‌ನ ಈ ಹಿಂದಿನ ಸದಸ್ಯರು(2008ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎನ್.ಆರ್.ರಮೇಶ್ ಮತ್ತು 2015ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪೂರ್ಣಿಮಾ ರಮೇಶ್) ಚುನಾವಣೆ ವೇಳೆ ಸಲ್ಲಿಸಿದ್ದ ಆಸ್ತಿ ವಿವರದ ಮಾಹಿತಿಯನ್ನು ಮಾಹಿತಿ ಹಕ್ಕು ಹೋರಾಟಗಾರ ವಿ.ಶಶಿಕುಮಾರ್ ಕೋರಿದ್ದರು.

2022ರ ಸೆಪ್ಟೆಂಬರ್ 14ರಂದು ಬೆಂಗಳೂರು ದಕ್ಷಿಣ ಚುನಾವಣಾ ಶಾಖೆಯ ತಹಶೀಲ್ದಾರ್‌ಗೆ ಅರ್ಜಿ ಸಲ್ಲಿಸಿದ್ದರು. ಆ ಅರ್ಜಿಯನ್ನು ಬನಶಂಕರಿ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಗೆ ಅವರು ವರ್ಗಾಯಿಸಿದರು. ಅವರು ಅದನ್ನು ಪದ್ಮನಾಭನಗರದ ಕಾರ್ಯಪಾಲಕ ಎಂಜಿನಿಯರ್‌ಗೆ ವರ್ಗಾಯಿಸಿದರು.

ಚುನಾವಣೆಗೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ದಾಖಲೆಗಳು ಈ ಕಚೇರಿಯಲ್ಲಿ ಲಭ್ಯವಿಲ್ಲ ಎಂದು ಕಾರ್ಯಪಾಲಕ ಎಂಜಿನಿಯರ್ ಪತ್ರವನ್ನು ಹಿಂದಿರುಗಿಸಿದರು. ಈ ಪತ್ರ ಬಂದು ಒಂದು ತಿಂಗಳಾದರೂ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಕಂದಾಯ ಅಧಿಕಾರಿಗೆ ಶಶಿಕುಮಾರ್ ಮೇಲ್ಮನವಿ ಸಲ್ಲಿಸಿದರು. ಅವರು ನವೆಂಬರ್ 19ರಂದು ವಿಚಾರಣೆಗೆ ದಿನಾಂಕ ನಿಗದಿ ಮಾಡಿದರು. ಅಷ್ಟರಲ್ಲಿ ನವೆಂಬರ್ 18ರಂದು ಸಹಾಯಕ ಕಂದಾಯ ಅಧಿಕಾರಿಯು ಜಿಲ್ಲಾ ಚುನಾವಣಾಧಿಕಾರಿ(ಪಾಲಿಕೆಯ ಆಡಳಿತ ವಿಭಾಗದ ಹೆಚ್ಚುವರಿ ಆಯುಕ್ತ) ಅವರಿಗೆ ಪತ್ರ ಬರೆದು ಮಾಹಿತಿ ಇದ್ದರೆ ಒದಗಿಸಲು ಕೋರಿದ್ದರು.

ಚುನಾವಣೆ ಮುಗಿದ ಬಳಿಕ ಈ ದಾಖಲೆಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪತ್ರ ಒದಗಿಸಿದಲ್ಲಿ ಪರಿಶೀಲಿಸಲಾಗುವುದು ಎಂದು ಹೆಚ್ಚುವರಿ ಆಯುಕ್ತರ ಕಚೇರಿಯಿಂದ ಡಿಸೆಂಬರ್ 16ರಂದು ಉತ್ತರ ಬಂದಿತ್ತು. ಎಲ್ಲಿಯೂ ದಾಖಲೆಗಳು ಸಿಗದಿದ್ದರಿಂದ ಬನಶಂಕರಿ ಉಪ ವಿಭಾಗದ ಸಹಾಯಕ ಕಂದಾಯ ಅಧಿಕಾರಿಯು ಅರ್ಜಿದಾರರಿಗೆ ಪತ್ರವೊಂದನ್ನು ನೀಡಿದ್ದಾರೆ. 'ಹಿಂದಿನ ಅಧಿಕಾರಿಗಳು ದಾಖಲೆಗಳನ್ನು ವರ್ಗಾಯಿಸದ ಕಾರಣ ಈ ಕಚೇರಿಯಲ್ಲಿ ಮಾಹಿತಿ ಲಭ್ಯವಿರುವುದಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಚುನಾವಣೆ ವೇಳೆ ಸಲ್ಲಿಸಿದ್ದ ಆಸ್ತಿ ವಿವರದ ದಾಖಲೆಗಳೇ ಲಭ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಮಾಹಿತಿ ನೀಡಲು ಅಧಿಕಾರಿಗಳಿಗೆ ಭಯವೂ ಕಾಡುತ್ತಿರಬಹುದು. ಕರ್ನಾಟಕ ಮಾಹಿತಿ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸುತ್ತೇನೆ' ಎಂದು ಶಶಿಕುಮಾರ್ ಹೇಳಿದರು.

ಯುಪಿಐ: ಡಿಸೆಂಬರ್‌ನಲ್ಲಿ ದಾಖಲೆ ವಹಿವಾಟು

ನವದೆಹಲಿ (ಪಿಟಿಐ): ಏಕೀಕೃತ ಪಾವತಿ ವ್ಯವಸ್ಥೆಯ (ಯುಪಿಐ) ಮೂಲಕ ನಡೆದ ವಹಿವಾಟುಗಳ ಮೊತ್ತವು ಡಿಸೆಂಬರ್‌ನಲ್ಲಿ ದಾಖಲೆಯ ₹ 12.82 ಲಕ್ಷ ಕೋಟಿಗೆ ತಲುಪಿದೆ.

ಡಿಸೆಂಬರ್‌ನಲ್ಲಿ ಯುಪಿಐ ವ್ಯವಸ್ಥೆಯಲ್ಲಿ ಒಟ್ಟು 782 ಕೋಟಿ ವಹಿವಾಟುಗಳು ನಡೆದಿವೆ. ಯುಪಿಐ ವ್ಯವಸ್ಥೆಯ ಅಡಿಯಲ್ಲಿನ ನಡೆದ ಪಾವತಿಗಳ ಮೊತ್ತವು ಅಕ್ಟೋಬರ್‌ನಲ್ಲಿ ₹ 12 ಲಕ್ಷ ಕೋಟಿಯ ಗಡಿ ದಾಟಿತ್ತು.

ಸದ್ಯ ಈ ವ್ಯವಸ್ಥೆಯನ್ನು 381 ಬ್ಯಾಂಕ್‌ಗಳು ಅಳವಡಿಸಿಕೊಂಡಿವೆ.

ಮೆಟ್ರೊ: ಒಂದೇ ದಿನ ₹1.56 ಕೋಟಿ ವರಮಾನ

ಡಿ.31ರಂದು 6.29 ಲಕ್ಷ ಜನ ಪ್ರಯಾಣ, ಜ.1ರಂದು 5.56 ಲಕ್ಷ ಜನ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.31ರಂದು ವರ್ಷಾಂತ್ಯದ ದಿನ ಮೆಟ್ರೊ ರೈಲಿನಲ್ಲಿ 6.29 ಲಕ್ಷಕ್ಕೂ ಹೆಚ್ಚು ಮಂದಿ ಪ್ರಯಾಣಿಸಿದ್ದಾರೆ. ಒಂದೇ ದಿನ ₹1.56 ಕೋಟಿ ವರಮಾನವನ್ನು ಬಿಎಂಆರ್‌ಸಿಎಲ್ ಸಂಗ್ರಹಿಸಿದೆ.

ಹೊಸ ವರ್ಷದ ಆಚರಣೆಯಲ್ಲಿ ಭಾಗವಹಿಸುವ ಜನರ ಅನುಕೂಲಕ್ಕಾಗಿ ಮೆಟ್ರೊ ರೈಲುಗಳ ಸಂಚಾರವನ್ನು ರಾತ್ರಿ 11.30ರ ಬದಲಿಗೆ ಬೆಳಗಿನ ಜಾವ 2 ಗಂಟೆ ತನಕ ವಿಸ್ತರಿಸಲಾಗಿತ್ತು. ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾನಗರ ಭಾಗಗಳಿಗೆ ಹೋಗಲು ಹೆಚ್ಚಿನವರು ಮೆಟ್ರೊ ರೈಲನ್ನೇ ಅವಲಂಬಿಸಿದ್ದರು. ಎಂ.ಜಿ. ರಸ್ತೆಯಲ್ಲಿ ವಾಹನಗಳ ಸಂಚಾರ ನಿಷೇಧಿಸಲಾಗಿತ್ತು. ಅಲ್ಲದೇ, ವಾರಾಂತ್ಯ ರಜೆಯೂ ಇದ್ದದರಿಂದ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿತ್ತು.

ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವವರನ್ನು ಪೊಲೀಸರು ತಡೆದು ದಂಡ ವಿಧಿಸಿದರು. ಇದರ ಮುನ್ಸೂಚನೆ ಇದ್ದ ಬಹುತೇಕರು ಮೆಟ್ರೊ ರೈಲು ಪ್ರಯಾಣವನ್ನೇ ಆಯ್ಕೆ ಮಾಡಿಕೊಂಡಿದ್ದರು. ಪ್ರಯಾಣಿಕರ ಸಂಖ್ಯೆ ಹೆಚ್ಚಳ ಆಗುವ ನಿರೀಕ್ಷೆಯಿಂದ 100ಕ್ಕೂ ಹೆಚ್ಚು ಗೃಹ ರಕ್ಷಕ ಸಿಬ್ಬಂದಿಯನ್ನು ಬಿಎಂಆರ್‌ಸಿಎಲ್ ಹೆಚ್ಚುವರಿಯಾಗಿ ನಿಯೋಜಿಸಿಕೊಂಡಿತ್ತು.

ಶನಿವಾರ ತಡರಾತ್ರಿ ಮೆಜೆಸ್ಟಿಕ್–ಬೈಯಪ್ಪನಹಳ್ಳಿ ಮಾರ್ಗದಲ್ಲಿ ಎಂ.ಜಿ.ರಸ್ತೆ, ಕಬ್ಬನ್ ಪಾರ್ಕ್, ಟ್ರಿನಿಟಿ ನಿಲ್ದಾಣಗಳಲ್ಲಿ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಹತ್ತಿದ್ದಾರೆ. ಅಂದು ರಾತ್ರಿ 11.30ರ ನಂತರ ಎಂ.ಜಿ. ರಸ್ತೆ, ಟ್ರಿನಿಟಿ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳಿಂದ ಪ್ರಯಾಣಿಸುವವರಿಗೆ ₹50 ಮೊತ್ತದ ಕಾಗದದ ಟಿಕೆಟ್ ವಿತರಿಸಿತ್ತು.

ಹೊಸ ವರ್ಷದ ದಿನವಾದ ಜ.1ರಂದು 5.56 ಲಕ್ಷ ಜನ ಪ್ರಯಾಣಿಸಿದ್ದು, ₹1.45 ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಬಿಎಂಆರ್‌ಸಿಎಲ್ ವಿವರಿಸಿದೆ.

'ಸುಳ್ಳು ಸುದ್ದಿ ಹಬ್ಬಿಸುವ ಎಚ್‌ಡಿಕೆ'

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕರ್ನಾಟಕ ಭೇಟಿಯ ಬಳಿಕ ಜೆಡಿಎಸ್‌ಗೆ ಹಳೇ ಮೈಸೂರು ಭಾಗದಲ್ಲೂ ಸಂಪೂರ್ಣ ನೆಲಕಚ್ಚುವ ಭೀತಿ ಉಂಟಾಗಿದ್ದು, ಈ ಕಾರಣಕ್ಕೆ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹರಿಹಾಯ್ದಿದ್ದಾರೆ.

'ಅ ಮೂ ಲ್ – ಕೆ ಎ ಂ ಎ ಫ್ (ನಂದಿನಿ) ಜೊತೆ ವಿಲೀನ ಇಲ್ಲ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ರಾಜ್ಯ ಸಹಕಾರ ಸಚಿವರು ಈಗಾಗಲೇ ತಿಳಿಸಿದ್ದಾರೆ ಎಂದು ಹೇಳಿದರು.

ನೈಋತ್ಯ ರೈಲ್ವೆ
ಇ–ಟೆಂಡರ್ ಪ್ರಕಟಣೆ ಬಿಡ್ ಸಂ. ಜಿಇಎಂ/2022/ಬಿ/2896884
ದಿನಾಂಕ : 26–12–2022
ರೈಲುಗಳಿಗೆ ಹಿಂದಿರುಗಿಸುವುದನ್ನು ಒಳಗೊಂಡಂತೆ ಬೆಡ್‌ರೋಲ್‌ಗಳ ಲಿನೆನ್‌ಗಳ ವಾಷಿಂಗ್ ಮತ್ತು ಐರನಿಂಗ್ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 16–01–2023 ರಂದು 20:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ https://gem.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಬೆಂಗಳೂರು
ಪಿಯುಬಿ/582/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಯುವಜನೋತ್ಸವದಲ್ಲಿ ಕಲಾವಿದರೊಂದಿಗೆ ಪ್ರಕಾಶ್ ಯೋಗಿ ಗುರೂಜಿ, ಕುಲಪತಿ ಡಾ.ಎಸ್‌.ಎಂ. ಜಯಕರ್ ಇದ್ದರು.

ಕಾಂಗ್ರೆಸ್ ಶಾಸಕರಿಂದ ತಪ್ಪು ಮಾಹಿತಿ: ಸಿ.ಎಂ

ಬೆಂಗಳೂರು: ನಗರದ ಕೆಲವು ಕಾಂಗ್ರೆಸ್ ಶಾಸಕರು ಕೇಂದ್ರ ಸರ್ಕಾರದ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳನ್ನು ತಮ್ಮದೇ ಕಾರ್ಯಕ್ರಮ ಎಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಈ ಬಗ್ಗೆ ಜನರಿಗೆ ವಾಸ್ತವ ವಿಚಾರ ತಿಳಿಸುವ ಕೆಲಸ ಆಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಪಕ್ಷದ ಕಾರ್ಯಕರ್ತರಿಗೆ ತಿಳಿಸಿದ್ದಾರೆ.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ವಸಂತನಗರದಲ್ಲಿ ಸೋಮವಾರ ಅವರು 'ಬೂತ್ ವಿಜಯ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ಮಾರ್ಟ್ ಸಿಟಿ ಯೋಜನೆಯನ್ನು ಜಾರಿ ಮಾಡಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ. ನಗರದಲ್ಲಿ ಯೋಜನೆ ಕಾರ್ಯಗತಗೊಳಿಸಲು ₹500 ಕೋಟಿ ನೀಡಿದ್ದಾರೆ. ಈ ಯೋಜನೆ ಶಿವಾಜಿನಗರ, ಗಾಂಧಿನಗರ, ಚಿಕ್ಕಪೇಟೆ ಮುಂತಾದ ಪ್ರದೇಶಗಳಲ್ಲಿ ಅನುಷ್ಠಾನಗೊಂಡಿದೆ. ಆದರೆ, ಇಲ್ಲಿಯ ಶಾಸಕರು ಸ್ಮಾರ್ಟ್ ಸಿಟಿ ಯೋಜನೆಯ ಬಗ್ಗೆ ಹೇಳದೇ, ತಾವೇ ಕೆಲಸ ಮಾಡಿಸಿದ್ದು ಎಂದು ಹೇಳಿಕೊಳ್ಳುತ್ತಿದ್ದಾರೆ. ಇದರಲ್ಲಿ ಕಾಂಗ್ರೆಸ್ ಲಾಭ ಮಾಡಿಕೊಳ್ಳುವುದನ್ನು ಬಿಟ್ಟರೆ ಬೇರೆ ಏನೂ ಮಾಡಿಲ್ಲ. ಈ ವಿಚಾರವನ್ನು ಜನರಿಗೆ ತಿಳಿಸಬೇಕು ಎಂದರು.

'ನಗರೋತ್ಥಾನ ಯೋಜನೆಯಡಿ ಬೆಂಗಳೂರಿಗೆ ₹8 ಸಾವಿರ ಕೋಟಿ ನೀಡಿದ್ದೇವೆ. ರಾಜಕಾಲುವೆ ದುರಸ್ತಿ, ಉದ್ಯಾನಗಳು ಮತ್ತು ರಸ್ತೆಗಳ ಅಭಿವೃದ್ಧಿಗೆ ₹2 ಸಾವಿರ ಕೋಟಿ ನೀಡಿದ್ದೇವೆ' ಎಂದರು.

2024 ಮೆಟ್ರೊ 2ನೇ ಹಂತ ಪೂರ್ಣ: ಮೆಟ್ರೊ ರೈಲು ಯೋಜನೆಯ 2ನೇ ಹಂತವನ್ನು 2024 ರೊಳಗೆ ಪೂರ್ಣಗೊಳಿಸಲಾಗುವುದು. ಮೆಟ್ರೊ 3ನೇ ಹಂತಕ್ಕೆ ಕೇಂದ್ರದ ಅನುಮೋದನೆ ಸಿಕ್ಕಿದ ತಕ್ಷಣ ಕಾಮಗಾರಿ ಆರಂಭಿಸಲಾಗುವುದು. ಇದಕ್ಕೆ ₹26 ಸಾವಿರ ಕೋಟಿ ಬೇಕಾಗುತ್ತದೆ ಎಂದು ಹೇಳಿದರು.

ಕಾವೇರಿ 5 ನೇ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸಲಾಗುತ್ತಿದೆ. ಬಹಳ ವರ್ಷದಿಂದ ನನೆಗುದಿಗೆ ಬಿದ್ದಿರುವ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಎಲ್ಲ ಯೋಜನೆಗಳನ್ನು ಜನರ ಮುಂದೆ ಇಡಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿರುವ ಕಾರ್ಯಕ್ರಮಗಳನ್ನು ಕಾರ್ಯಕರ್ತರು ಹೆಮ್ಮೆಯಿಂದ ಜನರ ಬಳಿಗೆ ಹೋಗಿ ವಿವರಿಸಬೇಕು ಎಂದರು.

ಬೆಂಗಳೂರು ವಿಶ್ವವಿದ್ಯಾಲಯ: ಯುವಜನೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಪ್ರತಿಭೆಗಳಲ್ಲಿನ ಸೃಜನಶೀಲತೆ ಬೆಳೆಸಿ, ಪೋಷಿಸುವ ಉದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೋಮವಾರ 'ಯುವಜನೋತ್ಸವ–2023' ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಸಾಂಸ್ಕೃತಿಕ ಸಂಯೋಜಕ ಪ್ರೊ. ಕೆ. ರಾಮಕೃಷ್ಣಯ್ಯ ಮಾತನಾಡಿ, 'ಸುಮಾರು 25 ವರ್ಷಗಳಿಂದ ಬೆಂಗಳೂರು ವಿಶ್ವವಿದ್ಯಾಲಯವು ಯುವಜನೋತ್ಸವ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಈ ಬಾರಿಯ ಸ್ಪರ್ಧೆಗಳಲ್ಲಿ ಆಯ್ಕೆಯಾದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರನ್ನು ದಕ್ಷಿಣ ವಲಯದ ಅಂತರ ವಿಶ್ವವಿದ್ಯಾಲಯಗಳ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಕಳುಹಿಸಲಾಗುವುದು' ಎಂದು ತಿಳಿಸಿದರು.

'2022-23ನೇ ಸಾಲಿನಲ್ಲಿ 36ನೇ ದಕ್ಷಿಣ ವಲಯದ ಅಂತರ ವಿಶ್ವವಿದ್ಯಾಲಯಗಳ ಸಾಂಸ್ಕೃತಿಕ ಸ್ಪರ್ಧೆಗಳು ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಜ.27ರಿಂದ 30ರವರೆಗೆ ನಡೆಯಲಿವೆ' ಎಂದು ತಿಳಿಸಿದರು. ಉದ್ಘಾಟನಾ ಭಾಷಣ ಮಾಡಿದ ಪತಂಜಲಿ ಯೋಗಾಶ್ರಮ ಟ್ರಸ್ಟ್ ಅಧ್ಯಕ್ಷ ಪ್ರಕಾಶ್ ಯೋಗಿ ಗುರೂಜಿ, 'ಸೋಲು–ಗೆಲುವು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ' ಎಂದರು.

ಕುಲಪತಿ ಡಾ. ಎಸ್.ಎಂ. ಜಯಕರ, 'ಯುವಜನೋತ್ಸವಕ್ಕೆ ವಿದ್ಯಾರ್ಥಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಭಾರತೀಯ ಸಂಸ್ಕೃತಿ ಮತ್ತು ಯುವ ಶಕ್ತಿ ಅಸ್ಮಿತೆಯ ಅರಿವು ಹೊಂದಿರುವ ಯುವಕರನ್ನು ಉತ್ತೇಜಿಸುವಲ್ಲಿ ಯುವಜನೋತ್ಸವಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ' ಎಂದರು.

ಕುಲಸಚಿವ ಮಹೇಶ್ ಬಾಬು, ಪ್ರದರ್ಶನ ಕಲಾ ವಿಭಾಗದ ಪ್ರಾಧ್ಯಾಪಕ ಪ್ರೊ. ಎಸ್.ಎನ್. ಸುಶೀಲ ಇದ್ದರು.

ಆನ್‌ಲೈನ್ ಗೇಮಿಂಗ್‌ಗೆ ಕರಡು ನಿಯಮ

ನವದೆಹಲಿ (ಪಿಟಿಐ): 'ಆಟಗಳ ಫಲಿತಾಂಶದ ಮೇಲೆ ಆನ್‌ಲೈನ್ ಗೇಮಿಂಗ್ ಕಂಪನಿಗಳು ಬೆಟ್ಟಿಂಗ್‌ನಲ್ಲಿ ಭಾಗವಹಿಸುವಂತಿಲ್ಲ ಎಂಬ ಕರಡು ನಿಯಮ ರೂಪಿಸಲಾಗಿದೆ' ಎಂದು ಎಲೆಕ್ಟ್ರಾನಿಕ್ಸ್ ಮತ್ತು ಐಟಿ ರಾಜ್ಯ ಖಾತೆ ಸಚಿವ ರಾಜೀವ್ ಚಂದ್ರಶೇಖರ್ ಸೋಮವಾರ ಹೇಳಿದರು.

'ಆನ್‌ಲೈನ್ ಗೇಮಿಂಗ್ ನಿಯಮಗಳ ಕುರಿತು ಇರುವ ಸ್ವಯಂ ನಿಯಂತ್ರಕ ಸಂಸ್ಥೆಯಲ್ಲಿ ಎಲ್ಲ ಆನ್‌ಲೈನ್ ಗೇಮಿಂಗ್ ಕಂಪೆನಿಗಳು ನೋಂದಾಯಿಸಿಕೊಳ್ಳಬೇಕು' ಎಂದು ಹೇಳಿದರು.

'ಕರಡು ನಿಯಮಗಳ ಕುರಿತು ಕಂಪನಿಗಳು ಪ್ರತಿಕ್ರಿಯಿಸಲು ಜನವರಿ 17ರವರೆಗೆ ಗಡುವು ನೀಡಲಾಗಿದೆ. ಫೆಬ್ರುವರಿ ಹೊತ್ತಿಗೆ ಈ ಎಲ್ಲಾ ನಿಯಮಗಳು ಸಿದ್ಧವಾಗಲಿವೆ' ಎಂದರು.

ನಗರದಲ್ಲಿ ಇಂದು

ಸಾವಿತ್ರಿಬಾಯಿ ಫುಲೆ ಅವರ ಜಯಂತಿ ಮತ್ತು 'ಸಾವಿತ್ರಿಬಾಯಿಫುಲೆ ಪ್ರಶಸ್ತಿ' ಪ್ರಧಾನ ಸಮಾರಂಭ: ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಆಶಯ ನುಡಿ: ಎಂ. ವೆಂಕಟಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಮಂಜುಳಾ ಉಮೇಶ್, ಸಾಯಿರಾ, ಅಧ್ಯಕ್ಷತೆ: ಎನ್.ಎಸ್. ಸುಬ್ಬರಾಮಯ್ಯ, ಆಯೋಜನೆ: ಸಮತಾ ಸೈನಿಕ ದಳ ಮತ್ತು ನಾಗಸೇನಾ ವಿದ್ಯಾಲಯ, ಸ್ಥಳ: ನಾಗಸೇನಾ ವಿದ್ಯಾಲಯ ಆವರಣ, ಸದಾಶಿವನಗರ, ಬೆಳಿಗ್ಗೆ 10.30

ಸಾವಿತ್ರಿಬಾಯಿ ಫುಲೆ ಜನ್ಮದಿನಾಚರಣೆ ಅಂಗವಾಗಿ ಮಹಿಳೆಯರ ಹಕ್ಕುಗಳ ಕುರಿತು ಒಂದು ಸಂವಾದ: ಉದ್ಘಾಟನೆ: ಶರೀಫಾ ಕೆ., ಅತಿಥಿಗಳು: ಕಾವಲಮ್ಮ, ಎಂ.ಎಸ್. ಆಶಾದೇವಿ, ನಿರ್ಮಲಾ ಎಲಿಗಾರ್, ಕೆ. ಶಾಂತಕುಮಾರಿ, ಶಮಂತ, ಅಧ್ಯಕ್ಷತೆ: ತಬಸ್ಸುಮ್ ಪಾಷಾ, ಆಯೋಜನೆ: ಭೀಮ್ ಆರ್ಮಿ, ಸ್ಥಳ: ಗಾಂಧಿಭವನ, ಕುಮಾರಪಾರ್ಕ್, ಬೆಳಿಗ್ಗೆ 11

ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ನ್ಯಾಕ್ ಆಧಾರಿತ ಕಾರ್ಯಕ್ರಮ: ಉದ್ಘಾಟನೆ: ಲಿಂಗರಾಜ ಗಾಂಧಿ, ಸಂಪನ್ಮೂಲ ವ್ಯಕ್ತಿ: ವಿನಿತಾ ಸಾಹೂ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಬೆಳಿಗ್ಗೆ 11

ಐದು ದಿನಗಳ ಸಾಮಾಜಿಕ ನಾಟಕೋತ್ಸವ ಮತ್ತು ಗೀತಗಾಯನ: ಅತಿಥಿಗಳು: ಕೆ.ಜಿ. ನಾರಾಯಣ್, ರಾಜು, ರಾಮಚಂದ್ರರಾವ್, ದಿವಾಕರ್, ಇರಗಪ್ಪ, ಸಂಜೆ 5ಕ್ಕೆ, ನಾಟಕ ಪ್ರದರ್ಶನ: 'ಮಧ್ಯಮ ವ್ಯಾಯೋಗ', ತಂಡ: ಬಿಂಕಬಿನ್ನಾಣರು, ರಚನೆ: ಮಹಾಕವಿ ಭಾಸ, ನಿರ್ದೇಶನ: ಶಿವು ಹೊನ್ನಿಗಾನಹಳ್ಳಿ, ಆಯೋಜನೆ: ಏಕಲವ್ಯ ಫೌಂಡೇಷನ್, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಸಂಜೆ 7

ಬಾಗಲಗುಂಟೆಯಲ್ಲಿ ಸ್ವದೇಶಿ ಮೇಳ

ಪೀಣ್ಯ ದಾಸರಹಳ್ಳಿ : ದೇಶಿ ಉತ್ಪನ್ನಗಳಿಗೆ ಮಾರುಕಟ್ಟೆ ಹಾಗೂ ಬ್ರ್ಯಾಂಡ್ ಒದಗಿಸುವ ಸಲುವಾಗಿ ಬೃಹತ್ ಸ್ವದೇಶಿ ಮೇಳವನ್ನು ಆಯೋಜಿಸಲಾಗಿದೆ ಎಂದು ಸ್ವದೇಶಿ ಜಾಗರಣ ಮಂಚ್, ಕರ್ನಾಟಕದ ಸಂಘಟಕ ಜಗದೀಶ ಕೆ. ತಿಳಿಸಿದರು.

ಬಾಗಲಗುಂಟೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

ಬಾಗಲಗುಂಟೆಯ ಎಂಇಐ ಆಟದ ಮೈದಾನದಲ್ಲಿ ಜ.4 ರಿಂದ 5 ದಿನಗಳ ಕಾಲ ಸ್ವದೇಶಿ ಮೇಳ ನಡೆಯಲಿದೆ. ಬುಧವಾರ ಸಂಜೆ 5:30ಕ್ಕೆ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ. ಸಂಸದ ಡಿ.ವಿ ಸದಾನಂದಗೌಡ ಅಧ್ಯಕ್ಷತೆ ವಹಿಸಲಿದ್ದು, ಮಾಜಿ ಶಾಸಕ ಎಸ್ ಮುನಿರಾಜು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು.

ಮೇಳದ ಸಂಯೋಜಕ ವಸಂತ ಮೂರ್ತಿ ಮಾತನಾಡಿ, 'ಮಾರಾಟದ ಜತೆಗೆ ಭಾರತೀಯ ಸನಾತನ ಸಂಸ್ಕೃತಿ, ಆಚಾರ-ವಿಚಾರ ಪರಿಚಯಿಸುವ ವಂದೇ ಮಾತರಂ ನೃತ್ಯ ರೂಪಕ, ಸೀರೆ ಧರಿಸಿಕೊಂಡು ಬರುವ ಮಹಿಳೆಯರಿಗೆ ಲಕ್ಕಿ ಡ್ರಾ ಮುಖಾಂತರ ಸೌಭಾಗ್ಯವತಿ ಉಡುಗೊರೆ ನೀಡಲಾಗುವುದು. ರಂಗೋಲಿ ಸ್ಪರ್ಧೆ, ರೈತರೊಂದಿಗೆ ಸಂವಾದವೂ ನಡೆಯಲಿದೆ ಎಂದರು.

ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ನಡೆದ ಘಟನೆ • ಪ್ರೇಮ ವಿಚಾರ ಶಂಕೆ

ವಿದ್ಯಾರ್ಥಿನಿ ಹತ್ಯೆ: ಆರೋಪಿ ಆತ್ಮಹತ್ಯೆಗೆ ಯತ್ನ

ಪ್ರಜಾವಾಣಿ ವಾರ್ತೆ

ಲಯಸ್ಮಿತಾ

ಪವನ್ ಕಲ್ಯಾಣ್

ಯಲಹಂಕ: ರಾಜಾನುಕುಂಟೆ ದಿಬ್ಬೂರು ಬಳಿಯ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿ ಲಯಸ್ಮಿತಾ (19) ಅವರನ್ನು ಚಾಕುವಿನಿಂದ ಇರಿದು ಸೋಮವಾರ ಹತ್ಯೆ ಮಾಡಲಾಗಿದೆ. ಕೃತ್ಯ ಎಸಗಿರುವ ಆರೋಪಿ ಪವನ್ ಕಲ್ಯಾಣ್ (23) ಸಹ ಚಾಕುವಿನಿಂದ ಇರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಗುಟ್ಟಹಳ್ಳಿಯ ಲಯಸ್ಮಿತಾ, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಬಿ.ಟೆಕ್ ವ್ಯಾಸಂಗ ಮಾಡುತ್ತಿದ್ದರು. ಇವರ ತಂದೆ ನಾಗರಾಜ್ 2 ವರ್ಷ ಗಳ ಹಿಂದೆಯಷ್ಟೇ ಅಪಘಾತದಲ್ಲಿ ತೀರಿ ಕೊಂಡಿದ್ದರು. ತಾಯಿ ರಾಜೇಶ್ವರಿ ಹಾಗೂ ಇಬ್ಬರು ಸಹೋದರಿಯರು ಇದ್ದರು' ಎಂದು ಪೊಲೀಸರು ಹೇಳಿದರು.

'ಕೋಲಾರದವನೇ ಆಗಿದ್ದ ಆರೋಪಿ ಪವನ್ ಕಲ್ಯಾಣ್, ಲಯಸ್ಮಿತಾ ಅವರ ಸಂಬಂಧಿ. ನಗರದ ನೃಪತುಂಗ ವಿಶ್ವವಿದ್ಯಾಲಯದಲ್ಲಿ ಬಿಸಿಎ ವ್ಯಾಸಂಗ ಮಾಡುತ್ತಿದ್ದ. ಆತ್ಮಹತ್ಯೆಗೆ ಯತ್ನಿಸಿರುವ ಈತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದರು.

'ಲಯಸ್ಮಿತಾ ಹಾಗೂ ಪವನ್ ಸಂಬಂಧಿಕರು ಹಾಗೂ ಒಂದೇ ಊರಿನವರಾಗಿದ್ದರಿಂದ ಹಲವು ವರ್ಷಗಳಿಂದ ಪರಿಚಯವಿತ್ತು. ಬೇರೆ ಬೇರೆ ಕಡೆ ಓದುತ್ತಿದ್ದರೂ ಇಬ್ಬರೂ ಆಗಾಗ ಭೇಟಿಯಾಗುತ್ತಿದ್ದರು. ಈ ಬಗ್ಗೆ ಸ್ನೇಹಿತರು ಮಾಹಿತಿ ನೀಡಿದ್ದಾರೆ' ಎಂದು ಹೇಳಿದರು.

ಚಾಕು ಸಮೇತ ಬಂದಿದ್ದ ಆರೋಪಿ: 'ಶನಿವಾರ ಕಾಲೇಜಿಗೆ ಗೈರುಹಾಜರಾಗಿದ್ದ ಪವನ್, ಸೋಮವಾರವೂ ಹೋಗಿರಲಿಲ್ಲ. ಮಧ್ಯಾಹ್ನ 12.30ರ ಸುಮಾರಿಗೆ ಚಾಕು ಸಮೇತ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ ಆವರಣಕ್ಕೆ ಬಂದಿದ್ದ. ಲಯಸ್ಮಿತಾ ಅವರಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿಕೊಂಡಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಆವರಣದಲ್ಲಿ ಕುಳಿತಿದ್ದ ಇಬ್ಬರೂ ಪರಸ್ಪರ ಮಾತನಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಇಬ್ಬರ ನಡುವೆ ಜಗಳ ಆರಂಭವಾಗಿತ್ತು. ಲಯಸ್ಮಿತಾ ಮೇಲೆ ಹಲ್ಲೆ ಮಾಡಿದ್ದ ಆರೋಪಿ, ಚಾಕುವಿನಿಂದ ದೇಹದ ವಿವಿಧ ಭಾಗಗಳಿಗೆ ಇರಿದಿದ್ದ. ಲಯಸ್ಮಿತಾ ಕುಸಿದು ಬೀಳುತ್ತಿದ್ದಂತೆ ತಾನೂ ಚಾಕುವಿನಿಂದ ಇರಿದುಕೊಂಡಿದ್ದ. ಇಬ್ಬರನ್ನೂ ಗಮನಿಸಿದ್ದ ಸಹಪಾಠಿಗಳು ಮತ್ತು ಕಾಲೇಜಿನ ಭದ್ರತಾ ಸಿಬ್ಬಂದಿ, ರಕ್ಷಣೆಗೆ ಹೋಗಿದ್ದರು. ಇಬ್ಬರನ್ನೂ ಎತ್ತಿಕೊಂಡು ಆಸ್ಪತ್ರೆಗೆ ಕರೆದೊಯ್ದಿದ್ದರು. ಆದರೆ, ಮಾರ್ಗ ಮಧ್ಯೆಯೇ ಲಯಸ್ಮಿತಾ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದರು' ಎಂದೂ ಮೂಲಗಳು ಹೇಳಿವೆ.

'ಪ್ರೇಮದ ವಿಚಾರವಾಗಿ ಆರೋಪಿ ಕೃತ್ಯ ಎಸಗಿರುವ ಶಂಕೆ ಇದೆ. ರಾಜಾನುಕುಂಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'3ಂಗಳ ಹಿಂದೆ ಕಾಲೇಜಿಗೆ ಸೇರಿಸಿದ್ದೆ'

'ಓದಿನಲ್ಲಿ ಜಾಣೆಯಾಗಿದ್ದ ಮಗಳನ್ನು ತಿಂಗಳ ಹಿಂದೆಯಷ್ಟೇ ಬಿ.ಟೆಕ್ ಓದಲು ಕಾಲೇಜಿಗೆ ಸೇರಿಸಿದ್ದೆ. ಮಗಳಿಗೆ ರಕ್ಷಣೆ ನೀಡಬೇಕಾದ ಜವಾಬ್ದಾರಿ ಪ್ರಾಂಶುಪಾಲ ಹಾಗೂ ಭದ್ರತಾ ಸಿಬ್ಬಂದಿಗೆ ಇರಲಿಲ್ಲವೇ? ಅವರ ನಿರ್ಲಕ್ಷ್ಯದಿಂದ ಮಗಳನ್ನು ಕಳೆದುಕೊಂಡೆ' ಎಂದು ತಾಯಿ ರಾಜೇಶ್ವರಿ ಕಣ್ಣೀರಿಟ್ಟರು.

'ಮಗಳನ್ನು ಹಾಸ್ಟೆಲ್‌ನಲ್ಲಿ ಇರಿಸಿದ್ದೆ. ಬೆಳಿಗ್ಗೆ ಕಾಲೇಜಿಗೆ ಹೋಗುವಾಗ ಹಾಗೂ ಕಾಲೇಜಿನಿಂದ ಹಾಸ್ಟೆಲ್‌ಗೆ ಬಂದಾಗ ತಪ್ಪದೇ ಕರೆ ಮಾಡುತ್ತಿದ್ದಳು. ಸೋಮವಾರ ಬೆಳಿಗ್ಗೆ ಸಹ ಕರೆ ಮಾಡಿ ಕಾಲೇಜಿಗೆ ಹೋಗಿದ್ದಳು' ಎಂದು ಹೇಳಿದರು.

'ಚಾಕುವಿನಿಂದ ಇರಿದಿರುವ ಯುವಕ ನಮ್ಮ ದೂರದ ಸಂಬಂಧಿ. ಅವರ ಕುಟುಂಬದವರ ಜೊತೆ ಯಾವುದೇ ಜಗಳವೂ ಇರಲಿಲ್ಲ. ಆತ ಏಕೆ ನನ್ನ ಮಗಳನ್ನು ಕೊಂದನೋ ಗೊತ್ತಿಲ್ಲ. ನಮಗೆ ನ್ಯಾಯ ಬೇಕು' ಎಂದರು.

'ಆರೋಪಿ ಯುವಕ ಮಗಳ ಫೋಟೊವನ್ನು ವಾಟ್ಸ್‌ಆ್ಯಪ್ ಡಿ.ಪಿ ಆಗಿ ಹಾಕಿಕೊಂಡಿದ್ದ. ಮಗಳನ್ನು ಈ ಬಗ್ಗೆ ವಿಚಾರಿಸಿದಾಗ, ಆತನ ನಂಬರ್ ಬ್ಲಾಕ್ ಮಾಡಿದ್ದಾಗಿ ಹೇಳಿದ್ದಳು' ಎಂದೂ ತಿಳಿಸಿದರು.

'ಡ್ರಗ್ಸ್ ಮಾರಾಟ, ಗಲಾಟೆ ನಿರಂತರ'

'ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ 13 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿ.ವಿ ಆವರಣ ಹಾಗೂ ಸುತ್ತಮುತ್ತ ಕೆಲವರು ಡ್ರಗ್ಸ್ ಮಾರುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತಿದೆ. ಜೊತೆಗೆ ಪದೇ ಪದೇ ಗಲಾಟೆಗಳು ನಡೆಯುತ್ತಿದ್ದು, ಆಡಳಿತ ಮಂಡಳಿ ಹಾಗೂ ಪೊಲೀಸರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. 'ವರ್ಷದ ಹಿಂದೆಯಷ್ಟೇ ವಿ.ವಿಯಲ್ಲಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮಕ್ಕೆ ಸಂಬಂಧಪಟ್ಟಂತೆ ಗಲಾಟೆ ಆಗಿತ್ತು. ಇದೀಗ ಬೇರೆ ಕಾಲೇಜಿನ ವಿದ್ಯಾರ್ಥಿ ಚಾಕು ಹಿಡಿದುಕೊಂಡು ಬಂದು ವಿದ್ಯಾರ್ಥಿನಿಯನ್ನು ಕೊಲೆ ಮಾಡಿರುವುದು ಭದ್ರತೆ ವೈಫಲ್ಯ' ಎಂದು ಆರೋಪಿಸಿದರು.

ಸುದ್ದಿ 2 ನಿಮಿಷ

ಇಯರ್‌ಫೋನ್‌ಗಾಗಿ ಜಗಳ: ಪೇಂಟರ್ ಕೊಲೆ

ಬೆಂಗಳೂರು: ಇಯರ್‌ಫೋನ್ ವಿಚಾರವಾಗಿ ಸ್ನೇಹಿತರ ನಡುವೆ ಗಲಾಟೆಯಾಗಿದ್ದು, ಕಾರ್ತಿಕ್ (27) ಎಂಬುವವರನ್ನು ಕೊಲೆ ಮಾಡಲಾಗಿದೆ.

'ತಮಿಳುನಾಡು ಕೃಷ್ಣಗಿರಿಯ ಕಾರ್ತಿಕ್, ಪೇಂಟರ್ ಆಗಿದ್ದರು. ತಮ್ಮದೇ ಊರಿನ ಸ್ನೇಹಿತರ ಜೊತೆ ಕೆಲಸಕ್ಕೆಂದು ಇತ್ತೀಚೆಗೆ ನಗರಕ್ಕೆ ಬಂದಿದ್ದರು. ಕಾರ್ತಿಕ್ ಅವರನ್ನು ಕೊಲೆ ಮಾಡಿದ ಆರೋಪದಡಿ ಸ್ನೇಹಿತರಾದ ರಜನೀಶ್ ಹಾಗೂ ರವಿ ಎಂಬವವರನ್ನು ಬಂಧಿಸಲಾಗಿದೆ' ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಹೇಳಿದರು.

'ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ತಿಕ್ ಹಾಗೂ ಸ್ನೇಹಿತರು ಉಳಿದುಕೊಂಡಿದ್ದರು. ಡಿ. 31ರಂದು ರಜನೀಶ್ ಜನ್ಮದಿನವಿತ್ತು. ಅದರ ಜೊತೆಯಲ್ಲಿ ಹೊಸ ವರ್ಷ ಆಚರಿಸಲು ಸ್ನೇಹಿತರು ತೀರ್ಮಾನಿಸಿದ್ದಾರೆ. ಎಲ್ಲರೂ ಸೇರಿ ರಾತ್ರಿ ಪಾರ್ಟಿ ಮಾಡಿದ್ದರು' ಎಂದು ತಿಳಿಸಿದರು.

'ಪಾರ್ಟಿಯಲ್ಲಿ ಮದ್ಯ ಕುಡಿದು ಊಟ ಮಾಡಿದ್ದ ಸ್ನೇಹಿತರು, ಅದಾದ ನಂತರ ಕೊಠಡಿಯಲ್ಲಿ ಮಲಗಿದ್ದರು. ಆರೋಪಿ ರಜನೀಶ್ ನಿತ್ಯವೂ ಕಿವಿಗೆ ಇಯರ್‌ಫೋನ್ ಹಾಕಿಕೊಂಡು ನಿದ್ದೆ ಮಾಡುತ್ತಿದ್ದರು. ಡಿ. 31ರಂದು ರಾತ್ರಿಯೂ ಇಯರ್‌ಫೋನ್ ಹಾಕಿಕೊಂಡಿದ್ದರು. ಅದನ್ನು ಕಾರ್ತಿಕ್ ಕಿತ್ತುಕೊಂಡಿದ್ದ. ಎಚ್ಚರಗೊಂಡಿದ್ದ ರಜನೀಶ್, ಏರ್‌ಫೋನ್ ನೀಡುವಂತೆ ಒತ್ತಾಯಿಸಿದ್ದ.'

'ಇಯರ್‌ಫೋನ್ ವಿಚಾರವಾಗಿ ಇಬ್ಬರ ನಡುವೆ ಗಲಾಟೆ ಶುರುವಾಗಿತ್ತು. ಇದೇ ಸಂದರ್ಭದಲ್ಲೇ ರಜನೀಶ್ ಹಾಗೂ ರವಿ, ಕಾರ್ತಿಕ್ ಮೇಲೆ ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡು ಕಾರ್ತಿಕ್ ಮೃತಪಟ್ಟಿದ್ದರು' ಎಂದೂ ಪೊಲೀಸರು ಹೇಳಿದರು.

ಭೀಮಾ ಕೋರೆಗಾಂವ್ ವಿಜಯೋತ್ಸವ, ವೀರ ಯೋಧರಿಗೆ ನುಡಿನಮನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ 205ನೇ ಭೀಮಾ ಕೋರೆಗಾಂವ್ ವಿಜಯೋತ್ಸವ ಸಂಭ್ರಮ ಹಾಗೂ ವೀರ ಯೋಧರಿಗೆ ನುಡಿ ನಮನ ಕಾರ್ಯಕ್ರಮವನ್ನು ಆಚರಿಸಲಾಯಿತು.

ವಿಶ್ವವಿದ್ಯಾಲಯದ ಆಡಳಿತ ಕಚೇರಿಯಿಂದ ಅಧ್ಯಯನ ಕೇಂದ್ರದವರೆಗೆ ಅಂಬೇಡ್ಕರ್ ಭಾವಚಿತ್ರದೊಂದಿಗೆ ಮೆರವಣಿಗೆ ನಡೆಯಿತು. ಬೋಧಕ–ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಭೀಮಾ ಕೋರೆಗಾಂವ್ ಕದನದ ಬಗ್ಗೆ ಕ್ರಾಂತಿ ಗೀತೆಗಳು, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂದರ್ಭದಲ್ಲಿ ನಡೆದವು. ಕುಲಪತಿ ಪ್ರೊ.ಡಾ.ಎಸ್.ಎಂ. ಜಯಕರ್, ಕುಲಸಚಿವ ಎನ್. ಮಹೇಶ್ ಬಾಬು, ಸಿಂಡಿಕೇಟ್ ಸದಸ್ಯ ಡಾ. ಎಚ್. ಸುಧಾಕರ್, ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ.ಎನ್. ಸಂಜೀವ್ ರಾಜ್, ಪೊಲೀಸ್ ಅಧಿಕಾರಿ ಡಾ.ಎಂ.ನಂಜುಂಡಸ್ವಾಮಿ, ಪ್ರೊ.ಬಿ.ಸಿ.ಮೈಲಾರಪ್ಪ, ಡಾ.ಎಂ.ವೆಂಕಟ ಸ್ವಾಮಿ ಇದ್ದರು.

ಪೊಲೀಸರ ಸೋಗು: ಲಾಠಿ ತೋರಿಸಿ ₹ 80 ಲಕ್ಷ ಸುಲಿಗೆ

ಬೆಂಗಳೂರು: ಪೊಲೀಸರ ಸೋಗಿನಲ್ಲಿ ಲಾಠಿ ತೋರಿಸಿ ₹ 80 ಲಕ್ಷ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚಂದನ್ ಎಂಬುವವರು ಸುಲಿಗೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು. 'ದೂರುದಾರ ಚಂದನ್, ತುಮಕೂರಿನ ಅಡಿಕೆ ವ್ಯಾಪಾರಿ ಮೋಹನ್ ಎಂಬುವವರ ಕಾರು ಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ. ಚಂದನ್ ಹಾಗೂ ಕೆಲಸಗಾರ ಕುಮಾರಸ್ವಾಮಿ ಅವರಿಗೆ ಡಿ. 27ರಂದು ₹ 80 ಲಕ್ಷ ನೀಡಿದ್ದ ಮೋಹನ್, ಸೇಲಂನಲ್ಲಿರುವ ಪರಿಚಯಸ್ಥರಿಗೆ ನೀಡುವಂತೆ ಹೇಳಿದ್ದರು.

'ಹಣದ ಬ್ಯಾಗ್ ಪಡೆದಿದ್ದ ಚಂದನ್ ಹಾಗೂ ಕುಮಾರಸ್ವಾಮಿ, ಮಹೇಂದ್ರ ಎಕ್ಸ್‌ಯುವಿ ಕಾರಿನಲ್ಲಿ (ಕೆಎ 06 ಜೆಡ್ 7270) ತುಮಕೂರಿನಿಂದ ಹೊರಟಿದ್ದರು. ನೆಲಮಂಗಲ, ಗೊರಗುಂಟೆಪಾಳ್ಯ, ನಾಯಂಡನಹಳ್ಳಿ, ಮೈಸೂರು ರಸ್ತೆ ಮೂಲಕ ಕೆ.ಎಚ್. ರಸ್ತೆಗೆ ಬಂದಿದ್ದರು. ಸಿಗ್ನಲ್ ಇದ್ದಿದ್ದರಿಂದ ಕಾರು ನಿಲ್ಲಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಪೊಲೀಸ್ ಸ್ಟಿಕ್ಕರ್, ಪಿಎಸ್‌ಐ ಸಮವಸ್ತ್ರ: 'ಸಿಗ್ನಲ್‌ನಲ್ಲಿ ಚಂದನ್ ಕಾರಿನ ಪಕ್ಕವೇ ಮತ್ತೊಂದು ಕಾರು ಬಂದು ನಿಂತಿತ್ತು. ಅದಕ್ಕೆ ಪೊಲೀಸ್ ಸ್ಟಿಕ್ಕರ್ ಅಂಟಿಸಲಾಗಿತ್ತು. ಕಾರಿನಿಂದ ಇಳಿದಿದ್ದ ಇಬ್ಬರು, 'ನಾವು ಪೊಲೀಸರು. ಕಾರಿನಲ್ಲಿ ಪಿಎಸ್‌ಐ ಇದ್ದಾರೆ. ನೀವು ಅಕ್ರಮವಾಗಿ ಹಣ ಸಾಗಣೆ ಮಾಡುತ್ತಿದ್ದಿರಾ' ಎಂದು ಬೆದರಿಸಿದ್ದರು' ಎಂದು ಪೊಲಿಸರು ಹೇಳಿದರು.

'ಚಂದನ್ ಅವರನ್ನು ಹಿಂಬದಿ ಸೀಟಿನಲ್ಲಿ ಕೂರಿಸಿದ್ದ ಆರೋಪಿಯೊಬ್ಬ ತಾನೇ ಕಾರು ಚಲಾಯಿಸಿಕೊಂಡು ಸಮೀಪದಲ್ಲಿದ್ದ ಮೋರಿಯೊಂದರ ಬಳಿ ಹೋಗಿದ್ದ. ಅಲ್ಲಿಯೇ ಚಂದನ್ ಹಾಗೂ ಕುಮಾರಸ್ವಾಮಿ ಮೇಲೆ ಆರೋಪಿಗಳು ಹಲ್ಲೆ ಮಾಡಿದ್ದರು. ಲಾಠಿಯಿಂದ ಥಳಿಸಿದ್ದರು. ನಂತರ, ₹ 80 ಲಕ್ಷ ಕಸಿದುಕೊಂಡು ಸ್ಥಳದಿಂದ ಪರಾರಿಯಾಗಿದ್ದರು' ಎಂದು ತಿಳಿಸಿದರು.

'ಆರೋಪಿಗಳು ತಮಿಳು ಭಾಷೆಯಲ್ಲಿ ಮಾತನಾಡುತ್ತಿದ್ದರು. ಒಬ್ಬಾತ, ಪಿಎಸ್‌ಐ ಸಮವಸ್ತ್ರದಲ್ಲಿದ್ದ. ಲಾಠಿಗಳು ಸಹ ಇದ್ದವು' ಎಂಬುದಾಗಿ ದೂರುದಾರ ಮಾಹಿತಿ ನೀಡಿದ್ದಾರೆ. ಅದನ್ನು ಆಧರಿಸಿ ಈಗಾಗಲೇ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಕಾಯ್ದೆ ತಿದ್ದುಪಡಿಗೆ ಆಗ್ರಹ: ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟದಿಂದ ಸತ್ಯಾಗ್ರಹ

ಪಿಟಿಸಿಎಲ್: ಅಹೋರಾತ್ರಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದು ಪಡಿಗೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅಹೋರಾತ್ರಿ ಧರಣಿ ಆರಂಭಿಸಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು.

ಈ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ನ್ಯಾಯಾಲಯಗಳು ಅದೇ ರೀತಿ ತೀರ್ಪುಗಳನ್ನು ನೀಡುತ್ತಿವೆ. ಇದರಿಂದಾಗಿ ದಲಿತರು ಭೂಮಿ ವಂಚಿತರಾಗುತ್ತಿದ್ದಾರೆ ಎಂದು ಪ್ರತಿಭಟನಕಾರರು ಹೇಳಿದರು.

'ವಿಧಾನ ಮಂಡಲ ಎಸ್‌ಸಿಎಸ್‌ಟಿ ಕಲ್ಯಾಣ ಸಮಿತಿ 2021ರ ಸೆಪ್ಟೆಂಬರ್‌ನಲ್ಲೇ ವರದಿ ಸಲ್ಲಿಸಿದೆ. ಪಿಟಿಸಿಎಲ್ ಕಾಯ್ದೆಯಡಿ ಭೂಮಿ ಮರು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಲು ಕಾಲಮಿತಿ ಅನ್ವಯಿಸದಂತೆ ಕಾಯ್ದೆಗೆ ತಿದ್ದುಪಡಿ ಮಾಡುವ ಅಗತ್ಯವಿದೆ ಎಂದು ವರದಿಯಲ್ಲಿ ಶಿಫಾರಸು ಮಾಡಿದೆ.

ಆದರೂ, ಕಂದಾಯ ಸಚಿವ ಆರ್. ಅಶೋಕ್ ಅವರು ತಿದ್ದುಪಡಿಗೆ ಅಡ್ಡಿಪಡಿಸುತ್ತಿದ್ದಾರೆ. ಕೆಲವು ಮಂತ್ರಿಗಳು, ಶಾಸಕರು ಪರಿಶಿಷ್ಟರ ಭೂಮಿಯನ್ನು ಬೇನಾಮಿ ಹೆಸರಿನಲ್ಲಿ ಖರೀದಿ ಮಾಡಿರುವುದರಿಂದ ಈ ಕಾಯ್ದೆ ಅನುಷ್ಠಾನಕ್ಕೆ ಅಡ್ಡಿಪಡಿಸುತ್ತಿದ್ದಾರೆ' ಎಂದು ಅವರು ದೂರಿದರು.

ರಾಜ್ಯ ಸರ್ಕಾರ ಕೇವಲ ಭರವಸೆಯಲ್ಲೇ ಕಾಲ ತಳ್ಳುತ್ತಿದೆ. ಬೆಳಗಾವಿ ಅಧಿವೇಶನದಲ್ಲೂ ಪಿಟಿಸಿಎಲ್ ಕಾಯ್ದೆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಕಾಯ್ದೆ ತಿದ್ದುಪಡಿಯ ನಿರ್ಧಾರ ಕೈಗೊಳ್ಳುವ ತನಕ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್, ವಕೀಲ ದಾಸಪ್ಪ, ಆದಿ ದ್ರಾವಿಡ ಸಂಘಟಕ ಅಭಿಗೌಡ, ರಾಮ್‌ಬಾಬು, ಜಿ.ಮಂಗಳ ವೆಂಕಟೇಶ್, ಪಿಟಿಸಿಎಲ್ ಮಂಜುನಾಥ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ

ಮುಖ್ಯಾಂಶಗಳು

- ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದ ಕಾಯ್ದೆ ಜಾರಿ
- ಪರಿಶಿಷ್ಟ ಜಾತಿ ಮತ್ತು ಪಂಗಡ ಭೂಮಿ ವಂಚಿತವಾಗುತ್ತಿದೆ
- ರಾಜ್ಯ ಸರ್ಕಾರ ಕೇವಲ ಭರವಸೆಯಲ್ಲೇ ಕಾಲ ತಳ್ಳುತ್ತಿದೆ.

ಚಿತ್ರಾವಳಿ

ಶಾಂತಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ಕನ್ನಡ ಭವನವನ್ನು ಸಾಹಿತಿ ಚಂದ್ರಶೇಖರ ಕಂಬಾರ ಉದ್ಘಾಟಿಸಿದರು. ಶಾಸಕ ಎನ್.ಎ. ಹ್ಯಾರಿಸ್, ಶಾಂತಿನಗರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಕುಮಾರ್, ತಸಿಲ್ ಅಬ್ಬಾಸ್, ಜಾಗೃತಿ ಟ್ರಸ್ಟ್‌ನ ಅಧ್ಯಕ್ಷ ಬಿ. ನಾಗೇಶ್ ಮತ್ತು ಎನ್.ಆರ್. ಮಂಜುನಾಥ್ ಇದ್ದರು.

ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿರುವ ಮರಾಠವಾಡ ಕನ್ನಡ ಸಾಂಸ್ಕೃತಿಕ ಸಂಘ ಮತ್ತು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಹಯೋಗದಲ್ಲಿ ಆರ್ಚಿಡ್ ಟೆಕ್ನೋ ಸ್ಕೂಲ್‌ನಲ್ಲಿ ಭಾನುವಾರ ನಡೆದ 'ಹೊರನಾಡ ಕನ್ನಡೋತ್ಸವ ಸಾಂಸ್ಕೃತಿಕ ಉತ್ಸವ2022'ದಲ್ಲಿ ಮಹಾರಾಷ್ಟ್ರದ ವಿಧಾನ ಪರಿಷತ್ ಸದಸ್ಯ ಸತೀಶ್ ಚವಾಣ್, ಬಸವ ಕಲ್ಯಾಣದ ಬಸವಪ್ರಭು ಸ್ವಾಮೀಜಿ, ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ ಭಾಗವಹಿಸಿದ್ದರು

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸ್ನೇಹಸಮ್ಮಿಲನ ಸಮಾರಂಭಲ್ಲಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಜಗದೀಶ್, ಗೀತಾ.ಎಂ, ವೀರಣ್ಣಗೌಡ, ಏಕಾಂಬರೇಶ್ವರ್ ಹಾಗೂ ಪ್ರೊ.ಚಂದ್ರಿಕಾ ಪುರಾಣಿಕ್ ಅವರಿಗೆ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ.ಪಿ.ಕೃಷ್ಣ, ಧರ್ಮದರ್ಶಿಗಳಾದ ಕೆ.ಕೃಷ್ಣಸ್ವಾಮಿ, ಎಸ್.ಶೇಷನಾರಾಯಣ, ಎಂ.ಎಸ್.ನಟರಾಜ್, ಆರ್.ಬಿ.ಮೃತ್ಯುಂಜಯ, ಸಿ.ಪ್ರಶಾಂತ್ ಕುಮಾರ್, ಎನ್.ಪಿ.ಕಾರ್ತಿಕ್, ಎಂ.ವಿ.ಮುಕುಂದ್, ಜಿ.ಪರಮಶಿವಯ್ಯ ಹಾಗೂ ಪ್ರಾಂಶುಪಾಲ ಡಾ.ಎಸ್.ಎನ್.ವೆಂಕಟೇಶ್ ಇದ್ದರು.

ಬಿಎಂಟಿಸಿ ಖರೀದಿ ಪ್ರಕ್ರಿಯೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಬಸ್‌ಗಳ ಖರೀದಿ ಪ್ರಕ್ರಿಯೆಗೆ ಮುಂದಾಗಿರುವ ಬೆಂಗಳೂರು ಮೆಟ್ರೊಪಾಲಿಟನ್ ಸಾರಿಗೆ ಕಾರ್ಪೊರೇಷನ್ (ಬಿಎಂಟಿಸಿ) ಕ್ರಮವನ್ನು ಪ್ರಶ್ನಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ (ಪಿಐಎಲ್) ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪೋಲಿಯೊ ಪೀಡಿತ ಅಂಗವಿಕಲ ಸುನಿಲ್ ಕುಮಾರ್ ಜೈನ್ ಎಂಬುವವರು ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಮನು ಕುಲಕರ್ಣಿ, 'ಬಿಎಂಟಿಸಿ ಖರೀದಿಸುತ್ತಿರುವ 840 ಹೊಸ ಬಸ್‌ಗಳಲ್ಲಿ ಅಂಗವಿಕಲರಿಗೆ ಸೂಕ್ತ ಸೌಲಭ್ಯಗಳಿಲ್ಲ. ಅವರು ಬಸ್ ಹತ್ತಲು ಹಾಗೂ ಗಾಲಿ ಕುರ್ಚಿ ಪ್ರವೇಶಿಸಲು ಅನುಕೂಲತೆ ಇಲ್ಲ. ಹಾಗಾಗಿ, ಟೆಂಡರ್ ಪ್ರಕ್ರಿಯೆ ದೋಷಪೂರ್ಣವಾಗಿದೆ' ಎಂದರು.

'ಬಸ್ ಹತ್ತುವ ಮೆಟ್ಟಿಲಿನ ಎತ್ತರ 400 ಮಿಲಿ ಮೀಟರ್‌ನಿಂದ ಗರಿಷ್ಠ 650 ಮಿಮೀ ಇರುವಂತೆ ಅಂದರೆ, ಗಾಲಿಕುರ್ಚಿ ಮೂಲಕ ಪ್ರವೇಶಿಸಲು ಅನುಕೂಲವಾಗುವಂತೆ ಇರಬೇಕು. ಆದರೆ, ಈಗ ಖರೀದಿಸಲಾಗುತ್ತಿರುವ ಬಸ್‌ಗಳ ಎತ್ತರ ಹೆಚ್ಚಿದೆ. ಹೀಗಾಗಿ, ಬಿಎಂಟಿಸಿ 2022ರ ಅಕ್ಟೋಬರ್ 28ರಂದು ಹೊರಡಿಸಿರುವ ಟೆಂಡರ್ ಆದೇಶದ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಬೇಕು. ಬಸ್ ಖರೀದಿ ಪ್ರಕ್ರಿಯೆಯು ಈ ಅರ್ಜಿಯ ಕುರಿತಾದ ಅಂತಿಮ ಆದೇಶಕ್ಕೆ ಒಳಪಪಟ್ಟಿರುತ್ತದೆ ಎಂದು ಸ್ಪಷ್ಟಪಡಿಸಿ ಮಧ್ಯಂತರ ಆದೇಶ ಹೊರಡಿಸಬೇಕು' ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ ಪ್ರಕರಣದ ಪ್ರತಿವಾದಿಗಳಾದ ಬಿಎಂಟಿಸಿ ಅಧ್ಯಕ್ಷ, ಸಾರಿಗೆ ಇಲಾಖೆ ಕಾರ್ಯದರ್ಶಿ, ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ, ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯ ಹಾಗೂ ಅಂಗವಿಕಲರ ಸಬಲೀಕರಣ ಸಚಿವಾಲಯದ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಎರಡು ವಾರಗಳಲ್ಲಿ ಪ್ರತಿಕ್ರಿಯಿಸುವಂತೆ ಆದೇಶಿಸಿ ವಿಚಾರಣೆ ಮುಂದೂಡಿತು.

'ವಿವೇಚನಾರಹಿತ ಆದೇಶ ಸಲ್ಲ'

ಬೆಂಗಳೂರು: ಖಾಸಗಿ ಸಂಸ್ಥೆಯೊಂದನ್ನು ಕಪ್ಪು ಪಟ್ಟಿಗೆ ಸೇರಿಸಿದ್ದ ರೈಲ್ವೆ ಇಲಾಖೆಯ ಕ್ರಮವನ್ನು ರದ್ದುಪಡಿಸಿರುವ ಹೈಕೋರ್ಟ್, 'ಅಧಿಕಾರಿಗಳು ಹೊರಡಿಸುವ ಆದೇಶಗಳು ವಿವೇಚನಾ ರಹಿತವಾಗಿದ್ದರೆ ಅಂತಹ ಆದೇಶಗಳು ಅಸಮಂಜಸವಾಗುತ್ತವೆ' ಎಂದು ಅಭಿಪ್ರಾಯಪಟ್ಟಿದೆ.

ಈ ಸಂಬಂಧ 'ಕೃಷಿ ಇನ್ಫ್ರಾ ಟೆಕ್' ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ನ್ಯಾಯಾಂಗ, ಅರೆ ನ್ಯಾಯಾಂಗ ಮತ್ತು ಆಡಳಿತಾಧಿಕಾರಿಗಳು ನೀಡುವ ಆದೇಶಗಳು ಮುಂದಾಲೋಚನೆ ಮತ್ತು ವಿವೇಚನೆಯನ್ನು ಒಳಗೊಳ್ಳದೇ ಹೋದರೆ ಅಂತಹ ನಿರ್ಧಾರಗಳು ನಿರ್ಜೀವ ಎನಿಸಲಿವೆ' ಎಂದಿದೆ.

'ಯಾವುದೇ ಪ್ರಕರಣಗಳಲ್ಲಿ ನಿರ್ಧಾರ ಕೈಗೊಳ್ಳುವಾಗ ಗಂಭೀರ ಪರಿಶೀಲನೆ ನಡೆಸಬೇಕು. ಸಂಸ್ಥೆಯೊಂದನ್ನು ಕಪ್ಪು ಪಟ್ಟಿಗೆ ಸೇರಿಸುವಾಗ ಅದಕ್ಕೆ ಬಲವಾದ ಸಮರ್ಥನೆ ಮತ್ತು ಅದರಲ್ಲಿ ತರ್ಕಬದ್ಧತೆ ಇರಬೇಕು. ರೈಲ್ವೆ ಅಧಿಕಾರಿಗಳು ಒಂದು ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸುವ ಸಂದರ್ಭದಲ್ಲಿ ನೋಟಿಸ್ ಜಾರಿ ಮಾಡಿದರೆ ಮಾತ್ರವೇ ಸಾಕಾಗುವುದಿಲ್ಲ. ಪ್ರತಿವಾದಿಗಳು ಸಲ್ಲಿಸುವ ಆಕ್ಷೇಪಣೆ ಮತ್ತು ಮನವಿಗಳನ್ನೂ ಪರಿಶೀಲಿಸಿ ಸೂಕ್ತ ತೀರ್ಮಾನ ಪ್ರಕಟಿಸಬೇಕು. ಇಲ್ಲವಾದರೆ ಅದು ವಿವೇಚನಾ ರಹಿತ ಆದೇಶ ಎನಿಸುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ರೈಲ್ವೆ ಅಧಿಕಾರಿಗಳ ಆದೇಶವನ್ನು ರದ್ದುಪಡಿಸಿರುವ ನ್ಯಾಯಪೀಠ, 'ಕಾನೂನು ಪ್ರಕಾರ ಸೂಕ್ತ ಆದೇಶವನ್ನು ಹೊರಡಿಸಿ' ಎಂದು ರೈಲ್ವೆ ಮಂಡಳಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಆದೇಶಿಸಿದೆ.

ಲಿಂಬಾವಳಿ ಬಂಧನಕ್ಕೆ ಆಗ್ರಹ

ಬೆಂಗಳೂರು: 'ಪ್ರದೀಪ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಅರವಿಂದ ಲಿಂಬಾವಳಿ ಅವರನ್ನು ಬಂಧಿಸಿ ತನಿಖೆಗೊಳಪಡಿಸಬೇಕು' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜ್ಯ ಪ್ರಚಾರ ಸಮಿತಿ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಾವುದಾದರೂ ಮರಣ ಪತ್ರದಲ್ಲಿ ಜನಸಾಮಾನ್ಯರ ಹೆಸರಿದ್ದರೆ, ಪೊಲೀಸರು ಶೀಘ್ರವೇ ಬಂಧಿಸಿ ವಿಚಾರಣೆ ನಡೆಸುತ್ತಿದ್ದರು. ಆದರೆ ಬಿಜೆಪಿಯ ಸಚಿವರು ಅಥವಾ ಶಾಸಕರ ಹೆಸರಿದ್ದರೆ ಖುಲಾಸೆ ಮಾಡುತ್ತಾರೆ. ಅರವಿಂದ ಲಿಂಬಾವಳಿ ಅವರಿಗೆ ಸಾಕ್ಷ್ಯ ನಾಶಕ್ಕೆ ಅವಕಾಶ ನೀಡದೇ, ಶೀಘ್ರವೇ ಬಂಧಿಸಬೇಕು. ಪ್ರದೀಪ್ ಸಾವಿನಲ್ಲಿ ಅರವಿಂದ ಲಿಂಬಾವಳಿ ಪಾತ್ರ ಏನೆಂಬುದು ಎಲ್ಲರಿಗೂ ತಿಳಿಯಬೇಕು' ಎಂದರು.

'ಕೆ.ಎಸ್.ಈಶ್ವರಪ್ಪ ವಿರುದ್ಧ ಗುತ್ತಿಗೆದಾರ ಸಂತೋಷ್ ಪಾಟೀಲ್ ಮರಣಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದರು. ಪೊಲೀಸರು, ವಿಚಾರಣೆ ನಡೆಸದೇ ಈಶ್ವರಪ್ಪ ಅವರಿಗೆ ಕ್ಲೀನ್‌ಚಿಟ್ ನೀಡಿದರು. ಈಗ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಬಿಜೆಪಿ ಸಿದ್ಧತೆ ನಡೆಸುತ್ತಿದೆ. ಪ್ರದೀಪ್ ಆತ್ಮಹತ್ಯೆ ಪ್ರಕರಣ ಸಹ ಅದೇ ರೀತಿ ಮುಚ್ಚಿ ಹೋಗುವ ಅಪಾಯವಿದೆ' ಎಂದರು.

ಮುರುಘಾಮಠಕ್ಕೆ ಆಡಳಿತಾಧಿಕಾರಿ ನೇಮಕ ಪ್ರಶ್ನಿಸಿದ ಅರ್ಜಿ:12ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್‌ಜೆಎಂ) ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 12ಕ್ಕೆ ಮುಂದೂಡಿದೆ.

ಈ ಸಂಬಂಧ ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ, ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ್, ರಿಟ್ ಅರ್ಜಿ ತಿದ್ದುಪಡಿಗೆ ಮನವಿ ಮಾಡಿದರು. ಸರ್ಕಾರದ ಪರ ವಕೀಲರು, ಅಡ್ವೊಕೇಟ್ ಜನರಲ್ ಹಾಜರಿಲ್ಲದ ಕಾರಣ ಸಮಯಾವಕಾಶ ನೀಡುವಂತೆ ಕೋರಿದರು. ಇದೇ ವೇಳೆ ಪ್ರತಿವಾದಿ ಆಡಳಿತಾಧಿಕಾರಿ ಪಿ.ಎಸ್.ವಸ್ತ್ರದ ಪರ ಎಚ್. ಸುನಿಲ್ ಕುಮಾರ್ ವಕಾಲತ್ತು ಸಲ್ಲಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

'ಮುರುಘಾ ಶರಣರ ಪದಚ್ಯುತಿಗೆ ಸಂಬಂಧಿಸಿದಂತೆ ಈ ಹಿಂದೆ ಸಲ್ಲಿಸಲಾಗಿರುವ ಸಿವಿಲ್ ದಾವೆಯನ್ನೂ (ಸ್ಕೀಂ ಸೂಟ್) ಇದೇ ಅರ್ಜಿ ಜೊತೆಗೆ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು' ಎಂದು ಹಿರಿಯ ವಕೀಲ ಗಂಗಾಧರ ಗುರುಮಠ ಅವರ ಮನವಿಯನ್ನು ಒಪ್ಪದ ನ್ಯಾಯಪೀಠ, 'ಇದು ಆಡಳಿತಾಧಿಕಾರಿ ನೇಮಕ ಪ್ರಶ್ನಿಸಿದ ಅರ್ಜಿ ಮಾತ್ರವಾಗಿದ್ದು, ನಿಮ್ಮ ಮನವಿಯನ್ನು ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ ಸಲ್ಲಿಸಿ' ಎಂದು ಆದೇಶಿಸಿತು.

'ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು, ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಗಂಭೀರ ಆರೋಪದಡಿ ಪೊಕ್ಸೊ ಪ್ರಕರಣದಲ್ಲಿ ಜೈಲು ಸೇರಿದ್ದು, ರಾಜ್ಯ ಸರ್ಕಾರ ಪಿ.ಎಸ್.ವಸ್ತ್ರದ ಅವರನ್ನು 2022ರ ಡಿಸೆಂಬರ್ 13ರಂದು ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು. ಅವರು 2022ರ ಡಿಸೆಂಬರ್ 15ರಂದು ಅಧಿಕಾರ ಸ್ವೀಕರಿಸಿದ್ದಾರೆ.

ನಿತ್ಯ ವಾಹನ ಸವಾರರಿಗೆ ಸಮಸ್ಯೆ

ಮೃತ್ಯುಕೂಪವಾದ ರಾಜಕಾಲುವೆ

ರಾಜರಾಜೇಶ್ವರಿ ನಗರ: ಕಲ್ಯಾಣನಗರ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ರಾಜಕಾಲುವೆಗೆ ತಡೆಗೋಡೆ ಇಲ್ಲದ ಕಾರಣ ನಿತ್ಯ ವಾಹನ ಸವಾರರು ಸ್ವಲ್ಪ ಯಾಮಾರಿದರೂ ಬಾಯಿ ತೆರೆದುಕೊಂಡಿರುವ ರಾಜಕಾಲುವೆಯ ಪಾಲಾಗುತ್ತಿದ್ದಾರೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ರಸ್ತೆಯ ಬದಿಯಲ್ಲಿರುವ ರಾಜಕಾಲುವೆಗೆ ಈವರೆಗೂ ತಡೆಗೋಡೆ ನಿರ್ಮಿಸಿಲ್ಲ. ಈಸ್ಟ್ ವೆಸ್ಟ್ ಶಾಲೆ, ಟ್ರಿಬೈ ಪ್ರಾವಿಡೆಂಟ್ ಅಪಾರ್ಟ್‌ಮೆಂಟ್, ಲಿಂಗಧೀರನಹಳ್ಳಿ ಹಾಗೂ ಕಲ್ಯಾಣನಗರದ ನಿವಾಸಿಗಳು ಸೇರಿ ನೂರಾರು ನಾಗರಿಕರು, ಮಕ್ಕಳು ಹಾಗೂ ಹಿರಿಯರು ಈ ರಸ್ತೆಯಲ್ಲಿ ಸಂಚರಿಸುವುದೇ ದುಸ್ಸಾಹಸವಾಗಿದೆ. ರಾತ್ರಿ ವೇಳೆ ರಸ್ತೆ ಬದಿಯ ರಾಜಕಾಲುವೆ ಗೋಚರಿಸುವುದೇ ಇಲ್ಲ. ಇದರಿಂದ ವಾಹನ ಸವಾರರು ನೇರವಾಗಿ ಚರಂಡಿ ಪಾಲಾಗುತ್ತಿದ್ದಾರೆ ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಪಾಲಿಕೆ ಮಾಜಿ ಸದಸ್ಯ ಎ.ಎಂ. ಹನುಮಂತೇಗೌಡ ಮಾತನಾಡಿ, 'ರಸ್ತೆ ಅಭಿವೃದ್ಧಿ ಮಾಡಿದರೆ ಸಾಲದು ರಸ್ತೆಗೆ ಹೊಂದಿಕೊಂಡಂತಿರುವ ರಾಜಕಾಲುವೆ, ಹಳ್ಳ ಹಾಗೂ ಕೆರೆ ಏರಿಗಳಿಗೆ ತಡೆಗೋಡೆ ನಿರ್ಮಾಣ ಮಾಡಬೇಕು. ಇಲ್ಲವಾದಲ್ಲಿ ಅನಾಹುತಗಳು ತಪ್ಪಿದ್ದಲ್ಲ' ಎಂದು ಎಚ್ಚರಿಸಿದ್ದಾರೆ.

ತಡೆಗೋಡೆಯಿಲ್ಲದೆ ರಸ್ತೆಯಿಂದ ರಾಜಕಾಲುವೆಗೆ ಉರುಳಿಬಿದ್ದಿರುವ ಕಾರು

ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಹೇರೋಹಳ್ಳಿ ಭಾಗದಿಂದ ಪ್ರತಿನಿತ್ಯ ಶಾಲಾ ವಾಹನಗಳು, ಮಕ್ಕಳನ್ನು ಶಾಲೆಗೆ ಬಿಡಲು ನೂರಾರು ಪೋಷಕರು ಅದರಲ್ಲೂ ಶಾಲಾ ಮಕ್ಕಳು ಅಮಾಯಕವಾಗಿ ಇದರ ಪಕ್ಕದಿಂದಲೇ ನಡೆದು ಹೋಗುತ್ತಾರೆ. ಆದಷ್ಟು ಶೀಘ್ರ ರಾಜಕಾಲುವೆಗೆ ತಡೆಗೋಡೆ ನಿರ್ಮಾಣ ಮಾಡಬೇಕೆಂದು ಡಿ ಗ್ರೂಪ್ ನಿವಾಸಿ ಆರ್.ಚಂದ್ರಶೇಖರ್ ಒತ್ತಾಯಿಸಿದರು.

ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಿ.ರಮೇಶ್ ಮಾತನಾಡಿ, 'ರಾಜಕಾಲುವೆಗೆ ತಡೆಗೋಡೆಯಿಲ್ಲದೆ ಅಪಘಾತವಾಗುತ್ತಿರುವ ಮಾಹಿತಿ ತಿಳಿದುಬಂದಿದೆ. ಶೀಘ್ರದಲ್ಲಿಯೆ ತಡೆಗೋಡೆ ನಿರ್ಮಿಸಿ ಸಮಸ್ಯೆ ಬಗೆಹರಿಸಲಾಗುವುದು' ಎಂದು ಭರವಸೆ ನೀಡಿದರು.

ವೈಕುಂಠ ಏಕಾದಶಿ ಅಂಗವಾಗಿ ನಗರದ ರಾಜಾಜಿನಗರದ 5ನೇ ಹಂತದಲ್ಲಿರುವ ಕೈಲಾಸ ವೈಕುಂಠ ದೇವಸ್ಥಾನದಲ್ಲಿ ಸೋಮವಾರ ಭಕ್ತರು ದೇವರ ದರ್ಶನ ಪಡೆದರು – ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್ (ಎಡಚಿತ್ರ) ವೈಕುಂಠ ಏಕಾದಶಿ ಹಬ್ಬದ ಅಂಗವಾಗಿ ನಗರದ ವೈಯಾಲಿ ಕಾವಲ್‌ನಲ್ಲಿರುವ ತಿರುಮಲ ತಿರುಪತಿ ದೇವಸ್ಥಾನದಲ್ಲಿ ಸೋಮವಾರ ಮುಂಜಾನೆ ಭಕ್ತರು ವಿಶೇಷ ಪೂಜೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ.

ಕನ್ಯಾಕುಮಾರಿಗೆ ಸೈಕಲ್ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ಪ್ರಾಚೀನ ಸಂಸ್ಕೃತಿ, ಯೋಗ ಮತ್ತು ಭಾರತೀಯ ಸಾಂಪ್ರದಾಯಿಕ ಕಲೆಗಳ ಬಗ್ಗೆ ಅರಿವು ಮೂಡಿಸಲು ಸ್ಪಿಕ್‌ಮೆಕೆಯ ಸ್ಥಾಪಕ, 73 ವರ್ಷದ ಪ್ರೊ. ಕಿರಣ್ ಸೇಥ್ ಅವರು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಬೈಸಿಕಲ್ ಯಾತ್ರೆ ಹಮ್ಮಿಕೊಂಡಿದ್ದಾರೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತೀಯ ಶಾಸ್ತ್ರೀಯ ಸಂಗೀತ, ನೃತ್ಯ, ಜಾನಪದ ಸಂಗೀತ ಮತ್ತು ನೃತ್ಯ, ಧ್ಯಾನ, ಯೋಗ, ಚಲನಚಿತ್ರಗಳ ಪ್ರದರ್ಶನ ಜೊತೆಗೆ ಭಾರತೀಯ ಪರಂಪರೆಯ ಬಗ್ಗೆ ವಿದ್ಯಾರ್ಥಿಗಳಲ್ಲಿರುವ ಆಸಕ್ತಿಯನ್ನು ಉತ್ತೇಜಿಸಲು ಸ್ಪಿಕ್‌ಮೆಕೆ ಸಂಸ್ಥೆಯಿಂದ ಶಾಲಾ–ಕಾಲೇಜುಗಳಲ್ಲಿ ಕರಕುಶಲ ಶಿಬಿರಗಳನ್ನು ಆಯೋಜಿಸಲಾಗುತ್ತದೆ' ಎಂದರು.

ಕಿರಣ್ ಸೇಥ್ ಅವರು 2022ರ ಆಗಸ್ಟ್ 15ರಿಂದ ಕಾಶ್ಮೀರದ ಶ್ರೀನಗರದಿಂದ ಬೈಸಿಕಲ್ ಯಾತ್ರೆ ಪ್ರಾರಂಭಿಸಿದ್ದರು.

ಪ್ರೊ. ಕಿರಣ್ ಸೇಥ್ ಅವರ ಬೈಸಿಕಲ್ ಯಾತ್ರೆ ಸೋಮವಾರ ಬೆಂಗಳೂರಿನ ವಿಧಾನಸೌಧಕ್ಕೆ ಬಂದು ತಲುಪಿತು. – ಪ್ರಜಾವಾಣಿ ಚಿತ್ರ

'ಅಕ್ರಮ ವ್ಯಾಪಾರ ಬಂದ್ ಯಾವಾಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಆದೇಶ ಉಲ್ಲಂಘಿಸಿ ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ನಡೆಯುತ್ತಿರುವ ಅಕ್ರಮ ವ್ಯಾಪಾರಕ್ಕೆ ಕಡಿವಾಣ ಯಾವಾಗ, ಪಾದಚಾರಿಗಳು ಧೈರ್ಯವಾಗಿ ಸುತ್ತಾಡುವುದು ಯಾವಾಗ' ಎಂದು ಸಾರ್ವಜನಿಕರು, ಬಿಬಿಎಂಪಿ ಅಧಿಕಾರಿಗಳು ಹಾಗೂ ಪೊಲೀಸರನ್ನು ಪ್ರಶ್ನಿಸುತ್ತಿದ್ದಾರೆ.

'ಮೆಜೆಸ್ಟಿಕ್ ಅಕ್ರಮ ವ್ಯಾಪಾರ: ಪ್ರಶ್ನಿಸಿದರೆ ಇರಿತ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಡಿ. 31ರಂದು ಪ್ರಕಟಿಸಿದ್ದ ವರದಿ ಉಲ್ಲೇಖಿಸಿ ಸಾರ್ವಜನಿಕರು ಅಭಿಪ್ರಾಯ ಹಂಚಿಕೊಳ್ಳುತ್ತಿದ್ದಾರೆ. ಕೆಲ ಸಾರ್ವಜನಿಕರ ಆಯ್ದ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ರೌಡಿಗಳ ರೀತಿ ವರ್ತನೆ

ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ಅಕ್ರಮವಾಗಿ ವ್ಯಾಪಾರ ಮಾಡುತ್ತಿರುವವರು ರೌಡಿಗಳಂತೆ ವರ್ತಿಸುತ್ತಾರೆ. ಮೆಜೆಸ್ಟಿಕ್ ಮಾತ್ರವಲ್ಲದೇ ಕೆ.ಆರ್. ಮಾರ್ಕೆಟ್, ಅವೆನ್ಯೂ ರಸ್ತೆಯಲ್ಲೂ ಅಕ್ರಮ ವ್ಯಾಪಾರವಿದೆ. ರಸ್ತೆಯ ಅಕ್ಕ–ಪಕ್ಕದಲ್ಲಿ ಅಂಗಡಿ ಇಟ್ಟುಕೊಂಡಿರುವ ವ್ಯಾಪಾರಿಗಳು, ಚೌಕಾಶಿ ಮಾಡಿದರೂ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ.

ಕೆ.ಎಸ್.ಗಂಗಾಧರ, ಕೊಮ್ಮಘಟ್ಟ, ಕೆಂಗೇರಿ

ಅನುಚಿತ ವರ್ತನೆ: ನಗರದ ಹೆಸರಿಗೆ ಕಳಂಕ

ದೇಶ–ವಿದೇಶಗಳ ಜನ ಮೆಜೆಸ್ಟಿಕ್‌ಗೆ ಬಂದು ಹೋಗುತ್ತಾರೆ. ಸುರಂಗ ಮಾರ್ಗದಲ್ಲಿರುವ ಅಕ್ರಮ ವ್ಯಾಪಾರಿಗಳು, ಜನರ ಜೊತೆ ಅನುಚಿತವಾಗಿ ವರ್ತಿಸಿ ಬೆಂಗಳೂರಿನ ಹೆಸರಿಗೆ ಕಳಂಕ ತರುತ್ತಿದ್ದಾರೆ. ಇಂಥ ವ್ಯಾಪಾರಿಗಳಿಂದ ಪಾದಚಾರಿಗಳು ನಿತ್ಯವೂ ಯಾತನೆ ಅನುಭವಿಸುತ್ತಿದ್ದಾರೆ. ಮಹಿಳೆಯರ ಮೇಲೂ ಹಲ್ಲೆಗಳು ನಡೆಯುತ್ತಿವೆ.

ಎಸ್. ಹೇಮಂತ, ರಾಜಾಜಿನಗರ

ಗುಂಪು ಕಟ್ಟಿಕೊಂಡು ಗಲಾಟೆ

ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ಸಂಬಂಧಿಕರ ಮಗನೊಬ್ಬ ಕ್ಯಾಪ್ ಖರೀದಿಸಲು ಮುಂದಾಗಿದ್ದ. ಬಣ್ಣ ಚೆನ್ನಾಗಿಲ್ಲವೆಂದು ಕ್ಯಾಪ್ ವಾಪಸು ಕೊಟ್ಟಿದ್ದ. ಅಷ್ಟಕ್ಕೇ ವ್ಯಾಪಾರಿ ಅವಾಚ್ಯ ಶಬ್ದಗಳಿಂದ ಬೈದ. ಅದನ್ನು ಪ್ರಶ್ನಿಸಿದ್ದಕ್ಕೆ, ಅಕ್ಕ–ಪಕ್ಕದ ವ್ಯಾಪಾರಿಗಳೆಲ್ಲರೂ ಒಟ್ಟಿಗೆ ಬಂದು ಗಲಾಟೆ ಮಾಡಿದರು. ಸುರಂಗ ಮಾರ್ಗದಲ್ಲಿ ಹೊರಟಿದ್ದ ಪೊಲೀಸರನ್ನು ಹೇಳಿದಾಗ, ನಮ್ಮದೇ ತಪ್ಪೆಂದು ವ್ಯಾಪಾರಿಗಳ ಪರ ಮಾತನಾಡಿದರು. ನಮ್ಮಂತೆ ನಿತ್ಯವೂ ಸಾವಿರಾರು ಮಂದಿ ಸುರಂಗ ಮಾರ್ಗದಲ್ಲಿ ಓಡಾಡುತ್ತಾರೆ. ಅವರೆಲ್ಲರಿಗೂ ವ್ಯಾಪಾರಿಗಳಿಂದ ತೊಂದರೆ ಆಗಿದೆ. ಸುರಂಗ ಮಾರ್ಗದಲ್ಲಿ ಮುಲಾಜಿಲ್ಲದೇ ವ್ಯಾಪಾರ–ವಹಿವಾಟು ನಿರ್ಬಂಧಿಸಬೇಕು.

ಅಶೋಕ, ನೆಲಮಂಗಲ

ವಂಚನೆ: ವ್ಯಾಪಾರಿಗಳ ತೆರವು ಮಾಡಿ

ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ಕೆಲವರ ಚಿನ್ನಾಭರಣ, ಮೊಬೈಲ್ ಸಹ ಸುಲಿಗೆ ಮಾಡಲಾಗಿದೆ. ಸುರಂಗ ಮಾರ್ಗದಲ್ಲಿ ಎಲ್ಲ ವ್ಯಾಪಾರಿಗಳು ಜನರನ್ನು ವಂಚಿಸುತ್ತಿದ್ದಾರೆ. ಇಂಥ ವ್ಯಾಪಾರಿಗಳನ್ನು ತೆರವು ಮಾಡಬೇಕು. ಮಾಮೂಲಿ ಪಡೆದು ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡುತ್ತಿರುವ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಿ ಜೈಲಿಗಟ್ಟಬೇಕು.

ಮುಕುಂದ ಯಲ್ಲಾಪುರ, ತುಮಕೂರು

ಪ್ರಜಾವಾಣಿ@75

ಸುರಂಗ ಮಾರ್ಗದ ಮಳಿಗೆಗಳಿಂದ ಸಮಸ್ಯೆ ಎದುರಿಸುತ್ತಿರುವವರಲ್ಲಿ ನೀವೂ ಒಬ್ಬರಾಗಿದ್ದರೆ, ಚುಟುಕಾಗಿ ಬರೆದು ಕಳಿಸಿ. ನಿಮ್ಮ ಹೆಸರು, ವಿಳಾಸ, ಭಾವಚಿತ್ರವನ್ನೂ ಕಳುಹಿಸಿ.

96060 38256

ಮತದಾರರ ಪಟ್ಟಿ: ಒಂದೇ ತಿಂಗಳಲ್ಲಿ 80 ಸಾವಿರ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಮತದಾರರ ಮಾಹಿತಿ ಕಳ್ಳತನ ಪ್ರಕರಣ ಬೆಳಕಿಗೆ ಬಂದ ನಂತರ ಒಂದು ತಿಂಗಳಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರಿಸಲು 80,841 ಅರ್ಜಿ ಸಲ್ಲಿಕೆಯಾಗಿದೆ.

ನ.9ರಿಂದ ಡಿ.8ರ ನಡುವೆ 25 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿಶೇಷ ಅಭಿಯಾನ ನಡೆಸಲಾಗಿದ್ದು, ಈ ಸಂದರ್ಭದಲ್ಲಿ 57,252 ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಅಲ್ಲದೇ, ಮಹದೇವಪುರ, ಶಿವಾಜಿನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಿಂದ 23,589 ಅರ್ಜಿಗಳು ಬಂದಿವೆ. ಮತದಾರರ ಮಾಹಿತಿ ಕಳ್ಳತನ ಪ್ರಕರಣ ವರದಿಯಾದ ಬಳಿಕ ಈ ಮೂರು ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಯನ್ನು ಸಂಪೂರ್ಣ ಪರಿಶೀಲನೆ ನಡೆಸಲು ಭಾರತೀಯ ಚುನಾವಣಾ ಆಯೋಗ ಆದೇಶಿಸಿದೆ.

ಮತದಾರರ ಪಟ್ಟಿಗೆ ಸೇರ್ಪಡೆಯಾಗಲು 2022ರ ಜನವರಿಯಿಂದ ನವೆಂಬರ್ ತನಕದ 10 ತಿಂಗಳ ಅವಧಿಯಲ್ಲಿ 3.7 ಲಕ್ಷ ಅರ್ಜಿಗಳು ಸ್ವೀಕಾರಗೊಂಡಿವೆ. ಈಗ ಕೇವಲ ಒಂದು ತಿಂಗಳಲ್ಲಿ 80 ಸಾವಿರಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿರುವುದು ವಿಶೇಷ. ವ್ಯಾಪಕ ಪ್ರಚಾರ ನೀಡಿದ್ದರಿಂದ ಇಷ್ಟು ಪ್ರಮಾಣದ ಅರ್ಜಿ ಸ್ವೀಕೃತವಾಗಿವೆ ಎಂದು ಬಿಬಿಎಂಪಿ ಹಿರಿಯ ಅಧಿಕಾರಿಗಳು ಹೇಳುತ್ತಾರೆ.

ಮತದಾರರ ಮಾಹಿತಿ ಕಳವು ಪ್ರಕರಣವು ಜನರಲ್ಲಿ ಜಾಗೃತಿ ಮೂಡಿಸಿದೆ. ನಾಗರಿಕ ಗುಂಪುಗಳು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿಗೆ ಅರ್ಜಿ ಸಲ್ಲಿಸುವುದು ಹೆಚ್ಚಾಗಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದರು.

ತಿದ್ದುಪಡಿ ಕೋರಿ 44,197 ಅರ್ಜಿಗಳು, ಮತದಾರರ ಪಟ್ಟಿಯಿಂದ ಕೈಬಿಡಲು 14,952 ಅರ್ಜಿಗಳು ಬಂದಿವೆ. ಮಹದೇವಪುರ, ಶಿವಾಜಿನಗರ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಲ್ಲೇ ಹೆಚ್ಚು ಅರ್ಜಿಗಳು ಬಂದಿರುವುದು ಮತ್ತೊಂದು ವಿಶೇಷ. ಮತದಾರರ ಪಟ್ಟಿಯನ್ನು ಜ.5ರಂದು ಪ್ರಕಟಿಸಲು ಬಿಬಿಎಂಪಿ ಸಜ್ಜಾಗಿದೆ.

ಸಂಕ್ಷಿಪ್ತ ಸುದ್ದಿ

'ಚುನಾವಣೆ ಬಳಿಕ ಜೆಡಿಎಸ್ ಅಸ್ತಿತ್ವ ಇಲ್ಲ'

ಅಹಮದಾಬಾದ್ (ಪಿಟಿಐ): ಕರ್ನಾಟಕದಲ್ಲಿ ಜೆಡಿಎಸ್ ಅಳಿವಿನಂಚಿನಲ್ಲಿದ್ದು, ವಿಧಾನಸಭಾ ಚುನಾವಣೆಯ ನಂತರ ಅಸ್ತಿತ್ವವನ್ನು ಪೂರ್ಣವಾಗಿ ಕಳೆದುಕೊಳ್ಳಲಿದೆ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ನಾಯಕ ಅಮಿತ್ ಶಾ ಅವರನ್ನು 'ಸರ್ವಾಧಿಕಾರಿ ಹಿಟ್ಲರ್ ಸಂಪುಟದ ಗೊಬೆಲ್‌ನ ಹೊಸ ಅವತಾರ' ಎಂದು ಟೀಕಿಸಿರುವುದಕ್ಕೆ ತೀವ್ರವಾಗಿ ಆಕ್ಷೇಪಿಸಿದರು.

ಕುಮಾರಸ್ವಾಮಿ ಅವರು ಅಸಂಸದೀಯ ಪದ ಬಳಸಿರುವುದು ಅವರು ರಾಜಕೀಯವಾಗಿ ಭ್ರಮನಿರಸನಗೊಂಡಿರುವುದರ ಸಂಕೇತ. ಚುನಾವಣೆ ಬಳಿಕ ಜೆಡಿಎಸ್ ಅಸ್ತಿತ್ವ ಕಳೆದುಕೊಳ್ಳಲಿದೆ ಎಂಬ ಕಾರಣಕ್ಕೆ ಹೀಗೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ವಿಜಯಪುರ ಜಿಲ್ಲೆಯ ಶಾಲೆಗಳಿಗೆ ಇಂದು ರಜೆ

ಬೆಂಗಳೂರು: ಸಿದ್ದೇಶ್ವರ ಸ್ವಾಮೀಜಿಯವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲು ತೀರ್ಮಾನಿಸಲಾಗಿದೆ. ವಿಜಯಪುರ ಜಿಲ್ಲೆಯ ಶಾಲಾ–ಕಾಲೇಜು ಮತ್ತು ಸರ್ಕಾರಿ ಕಚೇರಿಗಳಿಗೆ ಮಂಗಳವಾರ ರಜೆ ಘೋಷಿಸಿ ಆದೇಶ ಹೊರಡಿಸಲಾಗಿದೆ.

ಹೈದರಾಬಾದ್ ರೇಸ್

ಚಾರ್ ಏಕ್ ಚಾರ್ ಗೆಲ್ಲುವ ನಿರೀಕ್ಷೆ

ರಾಣಿ ಮಹಾಲಕ್ಷ್ಮಿಬಾಯಿ ಪ್ಲೇಟ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಚಾರ್ ಏಕ್ ಚಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಆಯುರ್ ತೇಜ್ 1, ಕ್ಯಾಂಟರ್‌ಬ್ಯುರಿ 8, ಆರ್ಯ 4
2ನೇ ರೇಸ್: ಆಲ್ ಟೈಮ್ ಲೆಜೆಂಡ್ 8, ಮಿಸ್ ಲಿಟ್ಲ್ ಏಂಜಲ್ 4, ಮಲಾಲ 5
3ನೇ ರೇಸ್: ಚಾರ್ ಏಕ್ ಚಾರ್ 5, ಜನರಲ್ ಅಟ್ಲಾಂಟಿಕ್ 3, ಮಿರಾನ 2
4ನೇ ರೇಸ್: ವಿಂಡ್ ಸ್ಟ್ರೈಟ್ 1, ಅಪೆಕ್ಸ್ ಸ್ಟಾರ್ 3, ರೆಸರ್ಜೆನ್ಸ್ 5
5ನೇ ರೇಸ್: ಸಿಟಿ ಆಫ್ ಬ್ಲಿಸ್ 1, ಬ್ಯೂಟಿ ಆಫ್ ಪರೇಡ್ 2, ಶಾಜಾಮ್ 3
6ನೇ ರೇಸ್: ಮಾಸ್ಟರ್ ಟಚ್ 9, ಇಟ್ಸ್ ಆನ್ 7, ವಿಶನ್ ಆಫ್ ರೋಸ್ 5
7ನೇ ರೇಸ್: ಗುಡ್ ಟ್ರೈಡಿಂಗ್ಸ್ 6, ಸ್ಪೇಸ್ ಟೈಮ್ 9, ಚ್ಯಾಲೆಂಜರ್ 1
8ನೇ ರೇಸ್: ಕಮಿಂಗ್ ಹೋಮ್ 9, ಗೋಲ್ಡನ್ ಫೋರ್ಜರ್ 3, ಏಂಜಲ್ ಟೆಸೊರೊ 1

ಉತ್ತಮ ಬೆಟ್: ಆಯುರ್ ತೇಜ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

NOTICE IS HEREBY GIVEN THAT THE SHARE CERTIFICATE(S) WITH Folio number: 1019813SHARE CERTIFICATE(S) NO 102933 FOR 5000 ORDINARY SHARES BEARING DISTINCTIVE NO(S) 31644466 to 31649465 OF ICICI BANK LIMITED AND THE SHARE CERTIFICATE(S) NO 1749786 FOR 500 ORDINARY SHARES BEARING DISTINCTIVE NO(S) 6412467044 to 6412467543 OF ICICI BANK LIMITED STANDING IN THE NAME OF DAMODHAR VEMULKAR HAS BEEN REPORTED LOST AND THAT AN APPLICATION FOR ISSUE OF DUPLICATE CERTIFICATE(S) IN RESPECT THEREOF HAS BEEN MADE TO THE COMPANY'S INVESTOR SERVICE CENTRE, KFIN TECHNOLOGIES LTD, GACHIBOWLI, HYDERABAD 500032. TO WHOM OBJECTION, IF ANY, AGAINST ISSUANCE OF SUCH DUPLICATE SHARE CERTIFICATE(S) SHOULD BE MADE WITHIN 15 DAYS FROM THE DATE OF PUBLICATION OF THIS NOTICE. THE PUBLIC ARE CAUTIONED AGAINST DEALING IN ANY MANNER WITH THESE SHARES.

PUBLIC NOTICE

DOCUMENT MISSING
I have lost my original Sale Deed pertaining to the purchase of site bearing No.28 situated at Mamatha Enclave, Vajamangala Village, Mysore Taluk. Finders will be suitably rewarded.
Kindly contact: Satish Rao Mobile No. 6366950329.

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

REQUIRED, TEAMLEADER, Telecaller & Field_Executive For Bank Loan collection. Direct recruitment to company. 9620206756, 9620200756.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Walk-in

JOB VACANCY
100 FIELD TECHNICIANS
20 ZONAL SUPERVISORS
for Bangalore location.
Graduates/Diploma/ITI with basic knowledge of laptop operations/ hardware networking experience, walk-in for interview with Bio data, Degree certificates, adhaar, PAN card for immediate job.
Salary upto 3.5 Lakhs/pa with all benefits like PF, ESIC, Bonus. Male candidates, ready to join immediately with spoken Kannada will be preferred.
Dates 03,04,05 Jan 2023, time - 10.30am to 5pm . Venue :Vasavi Hostel Trust ,No. 15,Vasavi Temple Road, V. V. Puram Bangalore-4 #
email: searchspect@gmail.com
9743109334
9632379692

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

Dealers And Stockists

STEEL DOOR along with frame and hardware @ 10000 Per door. Please call for Business / Dealer appointment 7483159770

REAL ESTATE SELLING

Sites

Frazer Town

2200 SQFT Prime property Frazer Town, Double 100 Feet Road, next to east Railway Entrance. Available outright sale. Clear Documents. 7019763295, 9789058373, 9886782390.

PERSONAL

Change of Name

I, VEERESHA, Residing at No. 200/66, L.G. Ramanna Layout, Bairaveshwara Nagar, Bangalore North, Bangalore-58, have changed my name to VEERESH BADIGER, vide affidavit dated 29/12/2022, before notary R. Ramesh, Bangalore.

KRISHINA DEVI, Mother/o, 14826538W, HAV, DEEPAK SINGH Vill- 35B, Golden Enclave, Lohgarh, S.A.S Nagar Zirakpur, Mohali, Punjab changed name KRISHINA DEVI to KRISHNA DEVI 31/12/2022 Notary K.V. Mani Bangalore

CHANGE OF NAME
I, **RAMAN VENKATESH JOSHI** Residing at #A101, Block A 1st Floor, Garuda Blossom Apartment, Basavanapura Main Road, Bhattarahalli, near Jeevajyoti Glass & Flywood Wearhouse, Benglauru-560049 have change my name to **RAMAN JOSHI** vide affidavit dated 31.12.2022, before notary J. Anand Kumar, Bengaluru. Henceforth I hall be called **RAMAN JOSHI** only.

I, SMT. SAHANA VIJAYASHANKAR, W/o. Late Immanuel Ruben Robert John, D/o. G.V. Vijayashankar, Aged 35 years, presently R/at No. 311, Sumukha Greenville, Sarvabhouma Nagar, Bilekahalli Bengaluru Karnataka 560076 hereby declare that I have changed my minor son's name from Sri. AKHIL IMMANUEL JOHN to Sri. AKHIL VIKHYAATH vide affidavit dated 30.12.2022 sworn before Dr. R.S. Vijay Notary Public Govt. of India Bengaluru.

I, PUTALABAI RATHOD, Residing at #12 1st Main 7th Cross, Kenchenahalli, R.R.Nagar, Bangalore-98. I, have changed my name to LALITABAI RATHOD, Vide affidavit dated:29/12/2022 Sworn before Notary S.R.THULASIKRISHNA, Bangalore

BHAGGIYA LAKSHMI W/o. 6493396X, HAV, R Mathi, R/a. Ammundi Katpadi Vellore, TN, my name BHAGGIYA LAKSHMI to BAGYALAKSHMI R notary B.M. Chandrashekar.

14822828W, HAV, Akshaya Kumar Pradhan, 1ATC, son name record's PRABHASH RANJAN PRADHAN to PRABASH RANJAN PRADHAN notary B.M. Chandrashekar.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರು, ನಂ. 51/1, ವಾಣ ವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು–560004 (ಮಾಲೀಕರು) ಇಲ್ಲಿ ವಾಸವಾಗಿರುವ **ಶ್ರೀ ಸಿದ್ಧಾರ್ಥ ಚನ್ನಗಿರಿ ಸಂತೋಷ್** ಬಿನ್ ದಿ॥ ಸಿ ಎನ್ ಸಂತೋಷ್, ಇವರೊಂದಿಗೆ ಬೆಂಗಳೂರು ದಕ್ಷಿಣ ತಾಲೂಕು, ಉತ್ತರಹಳ್ಳಿ ಹೋಬಳಿ, ಕಗ್ಗಲಿಪುರ ಗ್ರಾಮ, ಇಲ್ಲಿರುವ 2 (ಎರಡು) ಎಕರೆ 07 (ಏಳು) ಗುಂಟೆ (ಅಂದಾಜು) ಭೂಮಿಯ ಜಂಟಿ ಅಭಿವೃದ್ಧಿಗೆ ಉದ್ದೇಶಿಸಿದ್ದು, ಈ ಕೆಳಗಿನ ಷೆಡ್ಯೂಲ್‌ನಲ್ಲಿ ಅದರ ವಿವರಗಳನ್ನು ನೀಡಲಾಗಿದೆ ಹಾಗೂ ಇದನ್ನು ಇನ್ನು ಮುಂದಕ್ಕೆ **"ಷೆಡ್ಯೂಲ್ ಆಸ್ತಿ"** ಎಂದು ಉಲ್ಲೇಖಿಸಲಾಗುವುದು.

ಯಾವುದೇ ವ್ಯಕ್ತಿ / ವ್ಯಕ್ತಿಗಳು ಮೇಲೆ ನಮೂದಿಸಿದ ಷೆಡ್ಯೂಲ್ ಆಸ್ತಿಯ ವ್ಯವಹಾರದ ಬಗ್ಗೆ ಅಥವಾ ಯಾವುದೇ ವ್ಯಕ್ತಿ/ಗಳು ಇದರ ಬಗ್ಗೆ ಯಾವುದೇ ಕ್ಲೈಮು, ಹಕ್ಕು, ಟೈಟಲ್ ಅಥವಾ ಆಸಕ್ತಿ ಹೊಂದಿದಲ್ಲಿ ಅಥವಾ ಮಾಲೀಕರ ಮತ್ತು ಅಥವಾ ಷೆಡ್ಯೂಲ್ ಆಸ್ತಿಯ ಬಗೆಗಿನ ಸಂಬಂಧ ಯಾವುದೇ ಇದ್ದಲ್ಲಿ, ಆತ/ಅವಳು ಈ ನೋಟೀಸ್ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಲಿಖಿತ ಮೂಲಕ ಸಂಬಂಧಿಸಿದ ಸೂಕ್ತ ದಾಖಲೆಗಳ ಸಹಿತ ಕೆಳಸಹಿದಾರರಿಗೆ ಸಲ್ಲಿಸತಕ್ಕದ್ದು. ಯಾವುದೇ ರೀತಿಯ ನಿಜವಾದ ಮತ್ತು/ ಅಥವಾ ಹಕ್ಕಿನ ಆಕ್ಷೇಪಣೆ ಮತ್ತು /ಅಥವಾ ಕ್ಲೈಮುಗಳು ಈ ಸಮಯದೊಳಗೆ ಸಲ್ಲಿಕೆಯಾಗದಿದ್ದಲ್ಲಿ, ನನ್ನ ಕಕ್ಷಿದಾರರು ಯಾರೂ ಕ್ಲೈಮುದಾರರು ಇಲ್ಲ ಎಂದು ಪರಿಗಣಿಸಿ, ಷೆಡ್ಯೂಲ್ ಆಸ್ತಿಯ ಜಂಟಿ ಅಭಿವೃದ್ಧಿ ಬಗ್ಗೆ ಮಾಲೀಕರೊಂದಿಗೆ ಮುಂದಿನ ಕ್ರಮ ಕೈಗೊಳ್ಳುವರು. ನಂತರ ಬಂದ ಯಾವುದೇ ರೀತಿಯ ಕ್ಲೈಮುಗಳನ್ನು ಪರಿಗಣಿಸಲಾಗುವುದಿಲ್ಲ ಹಾಗು ಅದು ನಮ್ಮ ಕಕ್ಷಿದಾರರಿಗೆ ಸಂಬಂಧಿಸಿದ್ದಾಗಿರುವುದಿಲ್ಲ.

ಷೆಡ್ಯೂಲ್

ಬೆಂಗಳೂರು ದಕ್ಷಿಣ ತಾಲೂಕು, ಬೆಂಗಳೂರು, ಉತ್ತರಹಳ್ಳಿ ಹೋಬಳಿ ಕಗ್ಗಲಿಪುರ ಗ್ರಾಮ ಇಲ್ಲಿರುವ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಭೂಮಿಯ ಸರ್ವೆ ನಂ. 176/1, ವಿಸ್ತೀರ್ಣ 2 (ಎರಡು) ಎಕರೆ 07 (ಏಳು) ಗುಂಟೆಗಳು (ಅಂದಾಜು), 2 (ಎರಡು) ಗುಂಟೆಗಳ ಖರಾಬು ಭೂಮಿಯನ್ನು ಹೊರತುಪಡಿಸಿದಂತೆ, ಚಕ್ಕುಬಂದಿ:

ಪೂರ್ವಕ್ಕೆ : ನಿರ್ಧರಿತ ರಾಹೆ 209 ಬೈಪಾಸ್ (ಸರ್ವೆ ನಂ. 176/1 ಮತ್ತು 176/2)
ಪಶ್ಚಿಮಕ್ಕೆ : ರಸ್ತೆ
ಉತ್ತರಕೆ : ಸರ್ವೆ ನಂ. 174 ಮತ್ತು 175 ರ ಭೂಮಿ ಮತ್ತು
ದಕ್ಷಿಣಕ್ಕೆ : ಸರ್ವೆ ನಂ. 176/4 ರ ಭೂಮಿ

ದಿನಾಂಕ: 28.12.2022
ಸ್ಥಳ: ಬೆಂಗಳೂರು

ಶ್ರೀ ಹರ್ಷ ಸುಧೀಂದ್ರ – ಪಾಲುದಾರರು
ಮೆ॥ ಸಿರಿಲ್ ಅಮರ್‌ಚಂದ್ ಮಂಗಲ್‌ದಾಸ್
ವಕೀಲರು ಮತ್ತು ಸಾಲಿಸಿಟರ್ಸ್ (ಸಲಹಾ ವಕೀಲರು)
ಪ್ರೆಸ್ಟೀಜ್ ಫಾಲ್ಕನ್ ಟವರ್, 3ನೇ ಮಹಡಿ, ಬ್ರುಂಟನ್ ರಸ್ತೆ, ಕ್ರೆಗ್ ಪಾರ್ಕ್ ಲೇಔಟ್, ವಿಕ್ಟೋರಿಯಾ ಲೇಔಟ್, ಬೆಂಗಳೂರು – 560025, ದೂ: (91–80) 67922000

BOOK YOUR CLASSIFIEDS ONLINE
DH DECCAN HERALD ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH
MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

DECCAN HERALD DH@75 ESTD.1948

PURAVANKARA PRESENTS
DH BENGALURU 2040 SUMMIT
POWERED BY ATHER

ಅಪಾರ ಸಾಧ್ಯತೆಗಳು

ಬೆಂಗಳೂರನ್ನು 2040ರ ವೇಳೆಗೆ ವಿಶ್ವದಲ್ಲಿಯೇ ಅತ್ಯಂತ ವಾಸಯೋಗ್ಯ ನಗರಗಳಲ್ಲೊಂದಾಗಿ ಪರಿವರ್ತಿಸಿ, ಈ ನಗರವನ್ನು ಭವಿಷ್ಯತ್ತಿನ ಸಮುದಾಯವಾಗಿ ರೂಪಿಸುವುದು ನಮ್ಮ ಕನಸು.

ಭವಿಷ್ಯದಲ್ಲಿ ಸುಸ್ಥಿರವಾದ, ಮೂಲ ಸೌಕರ್ಯಗಳುಳ್ಳ, ಬದುಕಲು ಅತ್ಯಂತ ಸೂಕ್ತವಾದ ತಾಣವಾಗಿ ಬೆಂಗಳೂರನ್ನು ಅಭಿವೃದ್ಧಿಪಡಿಸುವ ನಮ್ಮ ಈ ಗುರಿಗೆ ವಿಭಿನ್ನ ಚಿಂತನೆಗಳುಳ್ಳ ಮತ್ತು ದೂರದೃಷ್ಟಿಯುಳ್ಳ ಮನಸ್ಸುಗಳನ್ನು ಡಿ.ಎಚ್.ಬೆಂಗಳೂರು 2040 ಶೃಂಗಸಭೆಯು ಒಂದೂಗೂಡಿಸಲಿದೆ.

ಡಿ.ಎಚ್.ಬೆಂಗಳೂರು 2040 ಶೃಂಗಸಭೆಯ ಎರಡನೇ ಆವೃತ್ತಿಗೆ ಸುಸ್ವಾಗತ.

ಸಮಾವೇಶಗಳು ಮತ್ತು ಪರಿಣತರ ಬಗೆಗಿನ ಹೆಚ್ಚಿನ ಮಾಹಿತಿಗಾಗಿ bit.ly/dhbengaluru2040summit ಗೆ ಲಾಗ್ ಆನ್ ಆಗಿ ಅಥವಾ QR code ಅನ್ನು ಸ್ಕ್ಯಾನ್ ಮಾಡಿ

7 ಜನವರಿ 2023 | 12 ಸಮಾವೇಶಗಳು | 30 ಪರಿಣತರು

BANKING PARTNER
ಕೆನರಾ ಬ್ಯಾಂಕ್ Canara Bank A Government of India Undertaking Together We Can
ASSOCIATE SPONSORS
ADFACTORS PR Knowledge-driven communications
IndianOil XP95 95 OCTANE PREMIUM PETROL
MANIPAL ACADEMY of HIGHER EDUCATION BENGALURU CAMPUS (Institution of Eminence Deemed to be University)
Scan to know more

ಕ್ಷೇಮ ಕುಶಲ



ಹೊಟ್ಟೆಯಲ್ಲಿ ಚಿಟ್ಟೆಯ ಕುಣಿತ

ಪ್ರಜ್ಞಾ ಮತ್ತಿಹಳ್ಳಿ

ಅಮಾವಾಸ್ಯೆಯ ನಟ್ಟ ನಡುರಾತ್ರಿ, ಸ್ಮಶಾನದ ದೊಡ್ಡ ಹುಣಸೆಮರದ ತುದಿಯಲ್ಲಿ ತಲೆಕೆಳಕಾಗಿ ಜೋತು ಬಿದ್ದ ಬಾಣಂತಿದೆವ್ವ ಊಳಿಡುತ್ತಿದೆ. ನಿನ್ನೆಯಷ್ಟೇ ಮಣ್ಣು ಸೇರಿದ ಹೆಣ ಹೊಸ ಜಾಗದಲ್ಲಿ ನಿದ್ರೆ ಬರದೆ ಮಗ್ಗಲು ಬದಲಿಸಿದೆ. ವಿಕಾರವಾಗಿ ತಲೆ ಕೆದರಿಕೊಂಡ ದಡಿಯನೊಬ್ಬ ದಾಪುಗಾಲಿಡುತ್ತ ಬರುತ್ತಿದ್ದಾನೆ. ಅವನ ಮುಷ್ಟಿಯಲ್ಲಿ ಪೊಟ್ಟಣ ಕಟ್ಟಿದ ಕಾಗದದಲ್ಲಿ ರಕ್ತವೊಸರುವ ಕಾಡುಬೆಕ್ಕಿನ ಕರುಳ ಮಾಲೆ...

ಈ ಸಾಲುಗಳನ್ನು ಓದುತ್ತಿದ್ದರೆ ಹೊಟ್ಟೆಯಲ್ಲೇನೋ ಝಿಲ್ಲನೆ ಸರಿದಾಡುತ್ತದೆಯಲ್ಲವೆ? ಅದೇ ಭಯ. ನಾವೆಲ್ಲ ಚಿಕ್ಕವರಿದ್ದಾಗ ಇಂತಹ ಕಥೆಗಳನ್ನು ಓದುತ್ತಿದ್ದರೆ ಕೂತಲ್ಲೇ ಕೂಗಿಕೊಳ್ಳುವಂತೆ ಆಗುತ್ತಿತ್ತು. ಗಂಟಲೊಣಗಿ ಧ್ವನಿ ಹೂತು ಹೋಗುತ್ತಿತ್ತು. ಮೊನ್ನೆ ಮೊನ್ನೆ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದ ಕಾಂತಾರ ಸಿನಿಮಾದಲ್ಲಿ ಕಾಡನಡುವೆ ಓಡುವ ನಾಯಕನ ಎದುರಿಗೆ ಥಟ್ಟನೆ ಆಕಾರವೊಂದು ಪ್ರತ್ಯಕ್ಷವಾಗುತ್ತದೆ. ಇಡೀ ಥಿಯೇಟರ್ ಚಿಟ್ಟನೆ ಚೀರಿಕೊಳ್ಳುತ್ತದೆ. ಅರೆ ಅದು ಸಿನಿಮಾ ಎಂದು ಗೊತ್ತು. ಆದರೂ ನಾವು ಹಾಗೇಕೆ ಭಯಪಡುತ್ತೇವೆ? ಓದುತ್ತಿರುವುದು ಕಥೆಯ ಪುಸ್ತಕ ಎಂದು ಗೊತ್ತಿದ್ದರೂ ಅಷ್ಟೇಕೆ ನಡುಕ ಹುಟ್ಟಬೇಕು?

ಹೆದರಿಕೆಯಾದಾಗ, ಅದು ನಮಗೆ ಅರ್ಥ ಆಗುವುದಕ್ಕೂ ಮುನ್ನವೇ, ನಮ್ಮ ಮೆದುಳಿನ ಆಳದಲ್ಲಿ ಹುದುಗಿರುವ ಬಾದಾಮಿಯಾಕಾರದ ನ್ಯೂರಾನ್‌ಗಳ ಗುಚ್ಛಕ್ಕೆ ಗೊತ್ತಾಗುತ್ತದೆ, ಇದು ಅಲಾರಾಂ ತರಹ ಕೆಲಸ ಮಾಡುತ್ತದೆ. ಇದಕ್ಕೆ ಎಷ್ಟು ಚೆಂದದ ಹೆಸರಿದೆ ಗೊತ್ತೆ? 'ಅಮಿಗ್‌ಡಲಾ'. ಇದು ಹೈಪೊಥೆಲಮಸ್ ಮೂಲಕ ದೇಹಕ್ಕೆ ಸಂದೇಶ ಕಳಿಸುತ್ತದೆ. ಆಗ ಪಿಟ್ಯುಟರಿ ಗ್ರಂಥಿಯಿಂದ ಅಡ್ರೆನಾಲ್ ಹಾರ್ಮೊನು ಹಾಗೂ ಕಾರ್ಟಿಸೋಲ್ ಹಾರ್ಮೊನುಗಳು ಉತ್ಪತ್ತಿಯಾಗುತ್ತವೆ. ಈ ಸಂದೇಶದ ಪರಿಣಾಮವಾಗಿ ಹೃದಯವು ಸಹಜ ಸ್ಥಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ರಕ್ತವನ್ನು ಉತ್ಪಾದನೆ ಮಾಡುತ್ತದೆ. ಉಸಿರಾಟದ ವೇಗ ಹೆಚ್ಚಾಗುತ್ತದೆ. ರಕ್ತವು ಹೃದಯದಿಂದ ಹೊರಗೆ, ಅಂದರೆ ಅಂಗಾಂಗಗಳ ಕಡೆಗೆ ಹರಿಯುತ್ತದೆ. ನಮ್ಮೆಲ್ಲ ಅಂಗಾಂಗಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕ ಚಲಿಸಲು ಶುರುವಾಗುತ್ತದೆ. ಅಂದರೆ ನಮ್ಮ ದೇಹವು ತನ್ನನ್ನು ತಾನು ರಕ್ಷಿಸಿಕೊಳ್ಳಲು ಕಾರ್ಯಪ್ರವೃತ್ತವಾಗುತ್ತದೆ. ಈ ಹಾರ್ಮೊನು ದೇಹದ ಬೇರೆಲ್ಲ ಕಾರ್ಯಗಳನ್ನು ಸ್ಥಗಿತಗೊಳಿಸಿ ಕೇವಲ ರಕ್ಷಣಾಕಾರ್ಯಕ್ಕೆ ಮಾತ್ರ ಗಮನ ಹರಿಸುವಂತೆ ನಮ್ಮ ಅಂಗಾಂಗಗಳನ್ನು ಸಜ್ಜುಗೊಳಿಸುತ್ತದೆ. ಉದಾಹರಣೆಗೆ, ಅಂತಹ ಸಮಯದಲ್ಲಿ ಓಡುವುದಿದ್ದರೆ ಅಥವಾ ಹೊಡೆದಾಡುವುದಿದ್ದರೆ ಕೈಕಾಲುಗಳು ಸಹಜ ಸಮಯಕ್ಕಿಂತ ಹೆಚ್ಚಿನ ಚುರುಕುತನದಲ್ಲಿ ಚಲಿಸಬಲ್ಲವು. ಆದರೆ ಆ ಸಮಯದಲ್ಲಿ ಜೀರ್ಣಕ್ರಿಯೆ ನಿಂತುಬಿಡುತ್ತದೆ. ಆದ್ದರಿಂದ ಭಯವಾದಾಗ ಹಸಿವಾಗುವುದಿಲ್ಲ. ಹೀಗೆ ಜೀರ್ಣಕ್ರಿಯೆ ನಿಲ್ಲುವುದರಿಂದಲೇ ಹೊಟ್ಟೆಯಲ್ಲಿ ಒಂಥರ ಸುಳಿಸುಳಿ ಅಂತ ಏನೋ ತಿರುಗುವ ಅನಿಸಿಕೆ ಆಗುತ್ತದೆ. ಅದನ್ನೇ 'ಹೊಟ್ಟೆಯಲ್ಲಿ ಚಿಟ್ಟೆ ಹಾರುತ್ತವೆ' ಎನ್ನುತ್ತಾರೆ. ನೀರು ಉತ್ಪಾದನೆಯ ಕೆಲಸವೂ ನಿಂತುಬಿಡುತ್ತದೆ. ಹಾಗೆಂದರೆ ಕಣ್ಣೀರೂ ಬರುವುದಿಲ್ಲ; ಬಾಯಿಯ ದ್ರವವೂ ನಿಂತುಬಿಡುತ್ತದೆ. ಅದಕ್ಕಾಗಿಯೇ ಬಾಯಿ ಒಣಗುತ್ತದೆ. ಕಣ್ಣಾಪಾಪೆಗಳು ಸಹಜ ಸ್ಥಿತಿಗಿಂತ ದೊಡ್ಡದಾಗುತ್ತವೆ; ಅವುಗಳ ನೋಟದ ಶಕ್ತಿಯೂ ಹೆಚ್ಚುತ್ತದೆ. ಹೀಗೆ ನಮ್ಮನ್ನು ಭಯದ ಸ್ಥಿತಿಯಲ್ಲಿ ಹುಟ್ಟಿದ ಅಪಾಯವನ್ನು ನಾವು ಎದುರಿಸಬಹುದು.

> ನಮ್ಮ ಭಯಗಳ ಸ್ವರೂಪ ಮತ್ತು ಪ್ರಮಾಣ ಹಾಗೂ ಅವುಗಳ ತೀವ್ರತೆ ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತವೆ.

ಇದೇ ಹೊತ್ತಿನಲ್ಲಿ ಇನ್ನೊಂದು ಪ್ರಶ್ನೆ ಏಳುತ್ತದೆ. ಕಾಡಿನಲ್ಲಿ ಹೋಗುವಾಗ ಎದುರಾಗುವ ಕಾಡುಪ್ರಾಣಿಗಳನ್ನು ಕಂಡಾಗ ಉಂಟಾಗುವ ಹೆದರಿಕೆಗೂ, ಝೂನಲ್ಲಿ ನೋಡುವ ಪ್ರಾಣಿಗಳ ಬಗ್ಗೆ ಹುಟ್ಟುವ ಭಯಕ್ಕೂ ವ್ಯತ್ಯಾಸವಿರುತ್ತದೆಯಲ್ಲವೆ? ದೆವ್ವದ ಸಿನಿಮಾವನ್ನು ನೋಡುವಾಗ ಹೆದರುತ್ತೇವಾದರೂ, ನಡುರಾತ್ರಿ ಒಬ್ಬರೇ ಇದ್ದಾಗ ಹುಟ್ಟುವ ಭಯಕ್ಕಿಂತಲೂ ಇದು ಭಿನ್ನವಾಗಿರುತ್ತದೆ. ಇದಕ್ಕೆ ಕಾರಣವೆಂದರೆ ನಮ್ಮ ಮೆದುಳಿನಲ್ಲಿ ಉಂಟಾಗುವ ರಾಸಾಯನಿಕ ಕ್ರಿಯೆ. ನಾನು ಹೇಳಿದ ಈ ಅಮಿಗ್‌ಡಲಾ ಇದೆಯಲ್ಲ, ಇದು ತನ್ನ ಹೆಸರಿನಷ್ಟೇ ಚೆಂದದ ಕೆಲಸವನ್ನೂ ಮಾಡುತ್ತದೆ. ಇದಕ್ಕೆ 'ಹಿಪ್ಪೊಕ್ಯಾಂಪಸ್' ಎಂಬ ಮೆದುಳಿನ ಭಾಗದ ಜೊತೆ ಬಹಳ ಹತ್ತಿರದ ಸಂಪರ್ಕ ಇದೆ. ಹಿಪ್ಪೊಕ್ಯಾಂಪಸ್ ಎಂದರೆ ನಾವು ಪರಿಸರಪ್ರಜ್ಞೆಯಿಂದ ಸಂಗ್ರಹಿಸಿದ ಸಕಲ ಜ್ಞಾನಗಳ ಸಂಗ್ರಹ. ಅದು ಕ್ರಿಯಾಶೀಲಗೊಂಡಾಗ ನಮ್ಮ ವಿವೇಕ ಮತ್ತು ತಾರ್ಕಿಕ ಪ್ರಜ್ಞೆ ಜಾಗೃತಗೊಳ್ಳುತ್ತದೆ. ನಾವೆಲ್ಲಿದ್ದೇವೆ? ಸನ್ನಿವೇಶ ಎಂತಹುದು? ಇದು ನಿಜದ ದೆವ್ವವಾ? ಸಿನಿಮಾವಾ? ಅಥವಾ ಮನುಷ್ಯನ ಪಾತ್ರವಾ? ಇಂತಹ ತರ್ಕಬದ್ಧ ತಿಳಿವಳಿಕೆ ಹುರಿಗೊಳ್ಳುತ್ತದೆ. ಆದ್ದರಿಂದಲೇ ನಮ್ಮ ಭಯಗಳ ಸ್ವರೂಪ ಮತ್ತು ಪ್ರಮಾಣ ಹಾಗೂ ಅವುಗಳ ಆಳ – ಇವೆಲ್ಲವೂ ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ರೀತಿಯಾಗಿರುತ್ತವೆ. ನಮ್ಮೂರ ಜಾತ್ರೆಗೆ ದೈತ್ಯಾಕಾರದ ತೊಟ್ಟಿಲು ಬರುತ್ತದೆ. ಅದರ ಜೊತೆಗೆ ಮತ್ತೆಷ್ಟೋ ಆಟಗಳು ಬರುತ್ತವೆ. ಹಿಂದೆ-ಮುಂದೆ ಜೋಲಿಯಾಡುತ್ತ ಆಕಾಶದೆತ್ತರಕ್ಕೆ ಏರುವ ದೋಣಿ, ಪ್ರತಿಯೊಂದು ಕಪ್ಪು ತನ್ನ ಸುತ್ತಲೂ ತಾನು 'ರಿಂವ್ ರಿಂವ್' ಎಂದು ಸುತ್ತು ತಿರುಗುತ್ತ ಅಂತಹ ಅನೇಕ ಕಪ್ಪುಗಳಿರುವ ಸಾಸರ್‌ನಂತಹ ಆಕಾರ ಗಿರಿಗಿರಿ ತಿರುಗುವ ಆಟ – ಹೀಗೇ ಬಹಳಷ್ಟು ಬರುತ್ತವೆ. ಯಾವುದನ್ನು ಆಡಿದರೆ ಹೆಚ್ಚು ಭಯವಾಗುತ್ತದೆಯೋ ಅದಕ್ಕೆ ಜನ ಮುಗಿಬಿದ್ದು ಸರತಿ ಸಾಲಿನಲ್ಲಿ ನಿಲ್ಲುತ್ತಾರೆ. 'ಅಯ್ಯೊ! ಇದು ರಾಶಿ ಹೆದರಿಕೆ ಆಗ್ತೆ ಆಡಾಣ ಬಾ' ಎಂದು ಎಳೆದೊಯ್ಯುತ್ತಾರೆ. ಇದು ಅಷ್ಟೇನು ಹೆದರಿಕೆ ಉಂಟಾಗಿಸದಿದ್ದರೆ ದುಡ್ಡು ದಂಡ ಎಂದು ಬೈಯುತ್ತಾರೆ. ಅಂದರೆ ದುಡ್ಡು ಕೊಡುವುದೇ ಭಯಪಡಲಿಕ್ಕೆ!

'ಒಂದು ಭೂತದ ಸಿನಿಮಾ ರಿಲೀಸ್ ಆಗಿದೆ ಮಾರಾಯ. ಥಿಯೇಟರ್‌ನಲ್ಲಿ ಒಬ್ಬನೇ ಕುಂತು ನೋಡಿದರೆ ಹತ್ತು ಸಾವಿರ ಕೊಡ್ತಾರಂತೆ. ಅಬ್ಬಾ !ಅಷ್ಟು ಭಯ ಬರುವುದಾದರೆ ನಡಿರಿ ಹೋಗಿ ನೋಡೋಣ' ಎಂದು ಜನಜಂಗುಳಿ ನುಗ್ಗುತ್ತದೆ. ಏಕೆ ಜನರು ಭಯವನ್ನು ರೋಮಾಂಚನದ ಸಾಲಿಗೆ ಸೇರಿಸುತ್ತಾರೆ? ಹಾಗಾದರೆ ಭಯ ಅಂದರೆ ಮನುಷ್ಯನಿಗೆ ಇಷ್ಟದ ಭಾವವೆ? ಅದನ್ನು ಮನಃಶಾಸ್ತ್ರಜ್ಞರು ನಕಾರಾತ್ಮಕ ಭಾವವೆಂದು ಗುರುತಿಸುತ್ತಾರೆ. ಆದರೂ ನಮಗೆ ಭಯಪಡುವುದು ಯಾಕಿಷ್ಟ? ಭಯ ಉಂಟಾದಾಗ ಅಮಿಗ್‌ಡಲಾ ಪ್ರತಿಕ್ರಿಯೆಯಿಂದ ಆಗುವ ರಾಸಾಯನಿಕ ಪರಿಣಾಮಗಳನ್ನು ಹಿಪ್ಪೊಕ್ಯಾಂಪಸ್ ತನ್ನ ತಾರ್ಕಿಕ ಜ್ಞಾನದಿಂದ ತುಂಡರಿಸುತ್ತದೆ. ಹೀಗೆ ಭಯಗೊಳ್ಳುವ, ಮತ್ತದು ತಾರಕಕ್ಕೆ ಏರುತ್ತಿದ್ದಂತೆ ತುಂಡಾಗುವ ಕ್ರಿಯೆಯಿದೆಯಲ್ಲ, ಅದೊಂದು ತರಹ ತೊಟ್ಟಿಲು ಮೇಲೇರಿ ಕೆಳಗಿಳಿಯುವ ಕ್ರಿಯೆಯ ತರಹ ಇರುತ್ತದೆ. ಇದನ್ನು ಮನಸ್ಸು ಒಂದು 'ಮಜ'ವಾಗಿಯೇ ಭಾವಿಸುತ್ತದೆ. ಮಾತ್ರವಲ್ಲ, ಬೇರೆ ನಶೆಗಳ ತರಹವೇ ಮಜವೂ ನಶೆಯಾಗಿ, ಅದನ್ನು ಪದೇ ಪದೇ ಹುಡುಕಿಕೊಂಡು ಪಡೆಯಲಾಗುತ್ತದೆ.

❖

ಹೊಟ್ಟೆಕಿಚ್ಚಿನ ಬೆಳಕು!

ಡಾ. ಕೆ. ಎಸ್. ಪವಿತ್ರ

ಸಹಜವಾಗಿ ನಾವೆಲ್ಲರೂ ಹೊಟ್ಟೆಕಿಚ್ಚಿನ ಭಾವವನ್ನು ಯಾವುದಾದರೊಂದು ಕ್ಷಣದಲ್ಲಿ ಅನುಭವಿಸಿರುತ್ತೇವೆ. ಆದರೆ 'ಹೊಟ್ಟೆಕಿಚ್ಚು' ನಿಮಗಾಗಿದೆಯೇ ಎಂಬ ಪ್ರಶ್ನೆಗೆ 'ಹೌದು' ಎಂದು ಉತ್ತರಿಸಲು ಹಿಂದೆ ಮುಂದೆ ನೋಡುತ್ತೇವೆ. ನಮಗೆ ಹೊಟ್ಟೆಕಿಚ್ಚು ಉಂಟಾಗಿದೆ – ಎಂದು ಒಪ್ಪಿಕೊಳ್ಳುವುದು ನಾಚಿಕೆ ಪಡುವಂತಹ, ತಲೆತಗ್ಗಿಸುವಂತಹ ಸಂಗತಿ ಎಂದೇ ನಮ್ಮ ಗ್ರಹಿಕೆ. ಆದರೆ ಹೊಟ್ಟೆಕಿಚ್ಚನ್ನು ಧನಾತ್ಮಕವಾಗಿ ಪರಿವರ್ತಿಸಿಕೊಳ್ಳಬಹುದು.

ಕರುಳಿಗೂ ಮೆದುಳಿಗೂ ಸಂಬಂಧವಿದೆ ಎನ್ನುವುದನ್ನು ವಿಜ್ಞಾನ ಬಲವಾಗಿ ದೃಢಪಡಿಸಿದೆ. ಮೆದುಳು-ಮನಸ್ಸುಗಳಲ್ಲಿ ಉಂಟಾಗುವ 'ಅಸೂಯೆ', 'ಈರ್ಷ್ಯೆ' ಎಂಬ ಮನಃಸ್ಥಿತಿಗೆ ನಮ್ಮ ಭಾಷೆ ಕೊಟ್ಟಿರುವ ನುಡಿಗಟ್ಟು 'ಹೊಟ್ಟೆ ಉರಿ', 'ಹೊಟ್ಟೆಕಿಚ್ಚು'. ಅಂದರೆ ಹೊಟ್ಟೆಕಿಚ್ಚಿನ ಮೂಲ ಮನಸ್ಸೇ. 'ನಿನಗೇನು ಸಿಕ್ಕಿದೆ, ಅದು ನನಗೆ ಬೇಕು'' ಎಂಬ ಮನದ ಮಾತು, ಮತ್ತೊಬ್ಬರ ಹಣ/ಅಂತಸ್ತು/ಅಂಕ/ ರೂಪ/ ಹೆಸರು /ಯಶಸ್ಸು ಇತ್ಯಾದಿಗಳ ಬಗೆಗೆ ಹುಟ್ಟಿದಾಗ ಅದು ಹೊಟ್ಟೆಕಿಚ್ಚು ಎನಿಸಿಕೊಳ್ಳುತ್ತದೆ. ಅಣ್ಣ-ತಮ್ಮ-ಅಕ್ಕ-ತಂಗಿಯರ ನಡುವಿನ ಚಿಕ್ಕ-ಪುಟ್ಟ ಜಗಳದಿಂದ ಹಿಡಿದು, ಇತರರ ಅಭಿವೃದ್ಧಿಯನ್ನು ನೋಡಿ ಸಹಿಸದೆ ಅವರಿಗೆ ಪ್ರಾಣಾಪಾಯ ಮಾಡುವಂತಹ ಗಂಭೀರ ನಡವಳಿಕೆಯವರೆಗೂ ಇದು ಕಾರಣವಾಗಬಹುದು. ಹೊಟ್ಟೆಕಿಚ್ಚು ಹಲವು ಬೇರೆ ಬೇರೆ ಭಾವಗಳನ್ನು ಒಟ್ಟಾಗಿಸಿದ ಸಂಕೀರ್ಣ ಭಾವನೆ. ಅದರಲ್ಲಿ ಕೋಪ, ದುಃಖ, ಹತಾಶೆ - ಇವೇ ಮೊದಲಾದ ಭಾವನೆಗಳ ಮಿಶ್ರಣವಿದೆ. ಹೊಟ್ಟೆಕಿಚ್ಚಿನಲ್ಲಿರುವ ವ್ಯಕ್ತಿ ತನಗೆ ಈಗ ಸಿಕ್ಕಿರುವುದನ್ನು ಪೂರ್ತಿಯಾಗಿ ಪಕ್ಕಕ್ಕೆ ತಳ್ಳುತ್ತಾನೆ, ಮತ್ತೊಬ್ಬರಿಗೆ ಸಿಕ್ಕಿರುವುದಕ್ಕಾಗಿ ಹಾತೊರೆಯುತ್ತಾನೆ.

ಹೊಟ್ಟೆಕಿಚ್ಚು ವಿವಿಧ ರೀತಿಗಳಲ್ಲಿ ವ್ಯಕ್ತವಾಗಬಹುದು. ಯಶಸ್ಸು /ಅವಕಾಶ ಸಿಕ್ಕ ವ್ಯಕ್ತಿಗಳಿಗೆ ನೋವುಂಟುಮಾಡುವಂಥ ಮಾತನಾಡುವುದು; ಅವರ ಯಶಸ್ಸು / ಸಾಧನೆಗಳನ್ನು ಪೂರ್ಣ ನಿರ್ಲಕ್ಷಿಸಿ, ತಾವು ಅದನ್ನು ಗಮನಿಸಿಯೇ ಇಲ್ಲ ಎಂಬಂತೆ ತೋರಿಸಿಕೊಳ್ಳುವುದು; ಅವರಿಗೆ ಅರ್ಹತೆಯಿರದಿದ್ದರೂ ಅದು ಹೇಗೋ ದೊರಕಿದೆ, ಅದರ ಕಾರಣ ಅದೃಷ್ಟ ಅಥವಾ ಪ್ರಭಾವ ಎಂದು ಆಗಾಗ್ಗೆ ಹೇಳುವುದು; ಇತರರೊಡನೆ ಅವರ ಬಗ್ಗೆ ಕೀಳಾಗಿ ಮಾತನಾಡುವುದು - ಇವೆಲ್ಲವೂ ಹೊಟ್ಟೆಕಿಚ್ಚು ವ್ಯಕ್ತವಾಗುವ ಸಾಮಾನ್ಯ ರೀತಿಗಳು.

ಹೊಟ್ಟೆಕಿಚ್ಚಿನ ಭಾವನೆ ಪ್ರಬಲವಾದದ್ದು. ನಾವು ನೋಡುವ ದೃಷ್ಟಿಯ ಮೇಲೆ ತೆಳುವಾದ ತೆರೆಯೆಳೆದು ಬಿಡುವ ಶಕ್ತಿ ಅದಕ್ಕಿದೆ. ಸ್ಪಷ್ಟವಾಗಿ ಕಾಣುತ್ತಿರುವಂಥದ್ದನ್ನೂ ನೋಡಲು ನಾವು ಅಸಮರ್ಥರಾಗಬಹುದು; ಅಥವಾ ಇರುವ ವಿಷಯ ಬೇರೆಯೇ ಆಗಿ ಕಾಣುವಂತಾಗಬಹುದು. ದಂಪತಿಗಳು ಮತ್ತು ಮಕ್ಕಳು - ಈ ಎರಡೂ ಗುಂಪುಗಳಲ್ಲಿ ಇದು ಕಂಡು ಬರುತ್ತದೆ. ಅಂದರೆ ಹೆಚ್ಚು ಅಂಕ ಗಳಿಸಿದ ಸಹಪಾಠಿಗೆ, ಟೀಚರ್ 'ಪಾರ್ಶಿಯಾಲಿಟಿ' ಮಾಡಿದ್ದಾರೆ; 'ಅವನು ತಪ್ಪು ಬರೆದರೂ ಅಂಕ ಕೊಟ್ಟಿದ್ದಾರೆ' ಎಂದು ಮಕ್ಕಳು ಹೇಳಬಹುದು. ಸುಮ್ಮನೇ ಅತ್ತ-ಇತ್ತ ನೋಡುತ್ತಿರುವ ಪತಿ, ಮತ್ತೊಬ್ಬ ಮಹಿಳೆಯನ್ನೇ ದಿಟ್ಟಿಸಿ ಗಮನಿಸುತ್ತಿದ್ದಾರೆ ಎಂದು ಪತ್ನಿ ಅವನನ್ನು ದೂರಬಹುದು.

ಹೊಟ್ಟೆಕಿಚ್ಚು ಮೂಡಿಸುವ ಇಂಥ ತೆರೆಯು ಸಾಧಕರ ಪರಿಶ್ರಮವನ್ನು ಗಮನಿಸದಿರುವಂತೆಯೂ ಮಾಡಿಬಿಡುತ್ತದೆ. ಪ್ರಾಕೃತಿಕವಾಗಿ ನಮ್ಮೆಲ್ಲರಲ್ಲಿ ಇರುವ ಸಾಮಾನ್ಯ ಗುಣವೆಂದರೆ ಪರಿಶ್ರಮ ಪಡಲು ಸೋಮಾರಿತನ ಮತ್ತು ಪ್ರಶಂಸೆ-ಯಶಸ್ಸುಗಳಿಗಾಗಿ ಹಾತೊರೆಯುವುದು. ಹಾಗಿದ್ದರೆ ಹೊಟ್ಟೆಕಿಚ್ಚಿನಿಂದ ನಾವು ಕಲಿಯಲು, ನಮ್ಮ ಲಾಭಕ್ಕಾಗಿ ಅದನ್ನು ಪರಿವರ್ತಿಸಿಕೊಳ್ಳುವುದು ಸಾಧ್ಯವೇ? 'ಸಾಧ್ಯವಿದೆ' ಎನ್ನುತ್ತದೆ, ಮನೋವಿಜ್ಞಾನ. ಹೇಗೆ? ನಿಮಗೆ ಮತ್ತೊಬ್ಬರ ಸಾಧನೆ/ಯಶಸ್ಸಿನಿಂದ 'ಇರಿಟೇಟ್' ಆಗುವಾಗ (ಅಂದರೆ ನಿಮಗೆ ಹೊಟ್ಟೆಕಿಚ್ಚಾದಾಗ) ಹೀಗೆ ಅನುಸರಿಸಿ:

- ಮೊದಲು ನಿಮಗೆ ಉಂಟಾಗುತ್ತಿರುವ ಭಾವನೆಯನ್ನು 'ಹೊಟ್ಟೆಕಿಚ್ಚು' ಎಂದು ಒಪ್ಪಿಕೊಳ್ಳಿ. ಅದು ಅಸಹಜ ಭಾವನೆಯಲ್ಲ; 'ಮತ್ತೊಬ್ಬರಿಗೆ ಸಿಕ್ಕಿದ್ದು ನಮಗೆ ಸಿಕ್ಕಿಲ್ಲ' ಎಂಬ ನೋವಿನಿಂದ ಉಂಟಾಗಿದ್ದು.
- ನಿಮಗೆ ದೊರಕಿರುವ ಅಥವಾ ನಿಮ್ಮಲ್ಲಿರುವ ಒಳ್ಳೆಯ ಅಂಶಗಳನ್ನು ಗುರುತಿಸಿ, ಅದಕ್ಕಾಗಿ ಸಂತಸ ಪಡುವುದು ಬಲು ಮುಖ್ಯ.
- ಅಸೂಯೆಯು ಎಳೆಯುವ ತೆರೆಯನ್ನು ಪ್ರಯತ್ನಪೂರ್ವಕವಾಗಿ ಕಿತ್ತು ಹಾಕಿ. ಪರಿಶ್ರಮದ ಕಡೆ ಮನಸ್ಸನ್ನು ಕೇಂದ್ರೀಕರಿಸಿ. ನಿಮ್ಮಲ್ಲಿ ಪ್ರತಿಭೆ -ಅದೃಷ್ಟ ಕಡಿಮೆ ಎನಿಸಿದರೂ ಸರಿಯೆ, ಪರಿಶ್ರಮ ನಿಮ್ಮನ್ನು ಬಲು ಎತ್ತರಕ್ಕೆ ಕೊಂಡೊಯ್ಯಬಲ್ಲದು.
- ಸಂಬಂಧಗಳಲ್ಲಿ, ವಿಶೇಷವಾಗಿ ದಾಂಪತ್ಯದಲ್ಲಿ ಅಸೂಯೆ ಉಂಟಾದಾಗ, ವ್ಯಂಗ್ಯ-ಕೊಂಕು ಮಾತುಗಳನ್ನು ಬದಿಗಿಟ್ಟು, ನಿಮಗಾಗುತ್ತಿರುವ ನೋವನ್ನು ನೇರವಾಗಿ ಹೇಳುವುದು ಅಗತ್ಯ. ಎಷ್ಟೋ ಬಾರಿ ಇಲ್ಲಿ ಇನ್ನೊಬ್ಬರಿಗೆ ಏನೋ ಸಿಕ್ಕಿದೆ ಎನ್ನುವುದಕ್ಕಿಂತ 'ನಮಗೆ ಏನೋ ಸಿಕ್ಕಿಲ್ಲ' ಎಂಬ ನೋವು ಮುಖ್ಯವಾಗುತ್ತದೆ.
- ನಿಮಗೆ ಏನನ್ನಿಸುತ್ತಿದೆ (ಅದು ಇತರರ ಬಗೆಗೇ ಆಗಲಿ, ಎಷ್ಟೇ ಕೆಟ್ಟ ಅಭಿಪ್ರಾಯವೇ ಆಗಲಿ) ಎನ್ನುವುದನ್ನು ಬರೆಯುವುದು ಸೂಕ್ತ. ಆಗ ನಿಮ್ಮ ಯೋಚನಾ ಸರಣಿಯೇ ಅಸಂಬದ್ಧ ಎನಿಸಬಹುದು! ಹೊಟ್ಟೆಕಿಚ್ಚಿನಿಂದ ಹೊರಬರುವುದು ಸುಲಭ ಎನಿಸಬಹುದು.
- ಆತ್ಮವಿಶ್ವಾಸದ ಕುಸಿಯುವಿಕೆಯನ್ನು ಸರಿಪಡಿಸಿಕೊಳ್ಳುವ ಸುಲಭ ದಾರಿಗಳೆಂದರೆ ಪ್ರಾಮಾಣಿಕತೆ, ಸರಿಯಾದ ಸಂವಹನ ಮತ್ತು ತನಗಿರುವ ಧನಾತ್ಮಕ ಸಂಗತಿಗಳ ಬಗೆಗೆ ಗಮನಿಸುವಿಕೆ. ಹಾಗಾಗಿ ನಿಮಗೆ ಗೆಲುವು ಸಿಕ್ಕಿಲ್ಲ ಎಂದು ಸಂಕಟವೇ ಆಗುತ್ತಿದ್ದರೂ, ಇನ್ನೊಬ್ಬರಿಗೆ ಸಿಕ್ಕಿದೆ ಎಂದು ಅಸೂಯೆಯಾಗುತ್ತಿದ್ದರೂ, ಆ ಕ್ಷಣದಲ್ಲಿ ಅಭಿನಂದನೆ ಹೇಳುವುದು ಬೇಕೇ ಬೇಕು. ಕೇವಲ ಗೆಲುವು/ಅಂಕ/ದುಡ್ಡು ಇವುಗಳಷ್ಟೇ ಮುಖ್ಯವಲ್ಲ, 'ಸಂತಸವಾಗಿರುವುದು' 'ತೃಪ್ತ ಮನಸ್ಸು' – ಇವು ಬಹಳ ಅಗತ್ಯ.

ಹೊಟ್ಟೆಕಿಚ್ಚು ಸುಡುವುದು ನಮ್ಮನ್ನೇ! ಅದರ ಶಕ್ತಿಯನ್ನು 'ಪರಿಶ್ರಮ'ವಾಗಿ ಪರಿವರ್ತಿಸಿಕೊಂಡರೆ, ಅದು ಸಾಧನೆಯಾಗಿ ಬದಲಾಗಬಹುದು. ಮುಂದಿನ ಬಾರಿ ಹೊಟ್ಟೆಕಿಚ್ಚಿನ ಅನುಭವವಾದಾಗ, 'ನನಗೇನೂ ಅವರ ಮೇಲೆ ಹೊಟ್ಟೆಕಿಚ್ಚಿಲ್ಲ' ಎಂದು ತಳ್ಳಿಹಾಕಬೇಡಿ. 'ಹೌದು ನನಗೆ ಹೊಟ್ಟೆಕಿಚ್ಚಾಗುತ್ತಿದೆ' ಎಂದು ಒಪ್ಪಿಕೊಂಡು ಅದನ್ನು ಪರಿಶ್ರಮವಾಗಿಸಲು ಪ್ರಯತ್ನಿಸಿ. ಆಗ ಯಶಸ್ಸು ನಿಮ್ಮದಾಗುತ್ತದೆ!

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

ಗಣಿತ

ಮಾದರಿ ಪ್ರಶ್ನೋತ್ತರ–

32) ಒಂದು ಪ್ರದೇಶದ ಮಕ್ಕಳ ದಿನನಿತ್ಯದ ಕೈ ಖರ್ಚಿನ ಹಣವನ್ನು (Pocket allowance) ತೋರಿಸುತ್ತದೆ. ಸರಾಸರಿ ಕೈ ಖರ್ಚಿನ ಹಣವು 18 ಆದರೆ ಬಿಟ್ಟು ಹೋಗಿರುವ ಆವೃತ್ತಿ f ನ್ನು ಕಂಡುಹಿಡಿಯಿರಿ.

ಕೈ ಖರ್ಚಿನ ಹಣ	ಮಕ್ಕಳ ಸಂಖ್ಯೆ (f_i)
11-13	7
13-15	6
15-17	9
17-19	13
19-21	f
21-23	5
23-25	4

ಪರಿಹಾರ:–

ಬಿಟ್ಟು ಹೋಗಿರುವ ಆವೃತ್ತಿ f ನ್ನು ಕಂಡುಹಿಡಿಯಿರಿ.

ಸರಾಸರಿ ಕೈ ಖರ್ಚಿನ ಹಣವು $\bar{X} = 18$ (ದತ್ತ)

ವರ್ಗಾಂತರ	ಮಕ್ಕಳ ಸಂಖ್ಯೆ (f_i)	ಮಧ್ಯಬಿಂದು (x_i)	$f_i x_i$
11-13	7	12	84
13-15	6	14	84
15-17	9	16	144
17-19	13	18	234
19-21	f	20	20f
21-23	5	22	110
23-25	4	24	96
Total	$f_i = 44+f$		Sum $f_i x_i$ = 752+20f

ಸರಾಸರಿ ಸೂತ್ರ $= \bar{X} = \sum f_i x_i / \sum f_i = (752 + 20f)/(44 + f)$

ಬಿಟ್ಟು ಹೋಗಿರುವ ಆವೃತ್ತಿ f =

$\Rightarrow 18 = (752 + 20f)/ (44 + f)$

$\Rightarrow 18(44 + f) = (752 + 20f)$

$\Rightarrow 792 + 18f = 752 + 20f$

$\Rightarrow 792 + 18f = 752 + 20f$

$\Rightarrow 792 - 752 = 20f - 18f$

$\Rightarrow 40 = 2f$

$\Rightarrow f = 20$

ಬಿಟ್ಟು ಹೋಗಿರುವ ಆವೃತ್ತಿ f=20 ಆಗಿದೆ

33) ನಜೀಮ ಒಂದು ಚಿಕ್ಕನದಿಯಲ್ಲಿ ಗಾಳ ಹಾಕಿ ಮೀನು ಹಿಡಿಯುತ್ತಿರುತ್ತಾಳೆ. ಗಾಳದ ಸಲಾಕೆಯ ತುದಿಯು ನೀರಿನ ಮಟ್ಟದಿಂದ 1.8m ಎತ್ತರದಲ್ಲಿದೆ ಮತ್ತು ದಾರದ ತುದಿಯಲ್ಲಿರುವ ಗಾಳವು ಅವಳಿಂದ ನೀರಿನ ಮೇಲ್ಮೈ ಮೇಲೆ 3.6m ದೂರದಲ್ಲಿದೆ ಹಾಗೂ ಗಾಳದ ಸಲಾಕೆಯ ತುದಿಗೆ ಲಂಬವಾಗಿರುವ ನೀರಿನ ಮೇಲ್ಮೈಯ ಬಿಂದುವಿನಿಂದ 2.4 ದೂರದಲ್ಲಿದೆ. ಗಾಳದ ದಾರವು (ಸಲಾಕೆಯ ತುದಿಯಿಂದ ಗಾಳದವರೆಗೆ) ಬಿಗಿಯಾಗಿದೆ ಎಂದು ಭಾವಿಸಿದಾಗ ಅವಳು ಎಷ್ಟು ಉದ್ದದ ದಾರ ಹೊರ ಹಾಕಬೇಕು? (ಚಿತ್ರವನ್ನು ನೋಡಿ) ಅವಳು ದಾರವನ್ನು ಪ್ರತಿ ಸೆಕೆಂಡಿಗೆ 5cm ವೇಗದಲ್ಲಿ ಎಳೆದರೆ 12 ಸೆಕೆಂಡಗಳ ನಂತರ ಅವಳಿಂದ ಗಾಳಕ್ಕೆ ಇರುವ ಕ್ಷಿತಿಜೀಯ ದೂರವೇನು?



ಪರಿಹಾರ:– AB ಗಾಳದ ಸಲಾಕೆಯು ಎತ್ತರ BC ಗಾಳದ ಸಲಾಕೆ ತುದಿಗೆ ಲಂಬವಾಗಿರುವ ನೀರಿನ ಮೇಲ್ಮೈ ದಾರದ ಉದ್ದ ACಯನ್ನು ಪೈಥಾಗೋರಸ್ ಪ್ರಮೇಯ ಬಳಸಿ ಕಂಡು ಹಿಡಿಯಬಹುದು.



ΔABCದಲ್ಲಿ

$AC^2 = AB^2 + BC^2$

$AB^2 = (1.8\ m)^2 + (2.4\ m)^2$

$AB^2 = (3.24 + 5.76)\ m^2$

$AB^2 = 9.00\ m^2$

$\Rightarrow AB = \sqrt{9}\ m = 3m$

ದಾರದ ಉದ್ದ 3 m.

ದಾರವನ್ನು ಪ್ರತಿ ಸೆಕೆಂಡಿಗೆ 5 ಸೆಂಮೀ. ವೇಗದಲ್ಲಿ ಎಳೆದರೆ 12 ಸೆಕೆಂಡುಗಳ ನಂತರ ಅವಳಿಂದ ಗಾಳಕ್ಕೆ ಇರುವ ಕ್ಷಿತೀಜಿಯ ದೂರ

$= 12 \times 5 = 60$ cm



AD = AC – 12 ಸೆಕೆಂಡಗಳಲ್ಲಿ ನಜೀಮನು ಎಳೆದ ದಾರದ ಉದ್ದ

$= (3.00 - 0.6)$ m

$= 2.4$ m

ΔADB ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$AB^2 + BD^2 = AD^2$

$(1.8\ m)^2 + BD^2 = (2.4\ m)^2$

$BD^2 = (5.76 - 3.24)\ m^2 = 2.52\ m^2$

$BD = 1.587$ m

$= BD + 1.2$ m

$= (1.587 + 1.2)$ m $= 2.787$ m

= 2.79 m

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿಯ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ

ಭೌತಶಾಸ್ತ್ರ

ಮಾದರಿ ಪ್ರಶ್ನೋತ್ತರ

35) ಬೆಳಕಿನ ಚದುರುವಿಕೆಯ ಧ್ರುವೀಕರಣ ಬಗ್ಗೆ ಬರೆಯಿರಿ

ಉತ್ತರ:– (..ಹಿಂದಿನ ಸಂಚಿಕೆಯಿಂದ)

ದುಪ್ಪಟ್ಟು ಬಾಣಗಳು ಚಿತ್ರದ ಸಮತಲದಲ್ಲಿನ ಧ್ರುವೀಕರಣವನ್ನು ಸೂಚಿಸುತ್ತದೆ. (ಇದೆರಡರ ನಡುವೆ ಅಧ್ರುವೀಕೃತ ಬೆಳಕಿನಲ್ಲಿ ಪ್ರಾವಸ್ಥಾ ಸಂಬಂಧವಿರುವುದಿಲ್ಲ). ಆಪಾತ ತರಂಗದ ವಿದ್ಯುತ್‌ಕ್ಷೇತ್ರದ ಪ್ರಭಾವದಿಂದ ಅಣುಗಳ ಇಲೆಕ್ಟ್ರಾನ್‌ಗಳು ಈ ಎರಡೂ ದಿಕ್ಕುಗಳಲ್ಲಿ ಚಲನೆಯ ಘಟಕಗಳನ್ನು ಪಡೆದುಕೊಳ್ಳುತ್ತವೆ.

ಸೂರ್ಯನ ದಿಕ್ಕಿಗೆ 90°ಯಲ್ಲಿ ವೀಕ್ಷಿಸುತ್ತಿರುವ ವೀಕ್ಷಕನನ್ನು ಚಿತ್ರದಲ್ಲಿ ತೋರಿಸಲಾಗಿದೆ .ಸ್ಪಷ್ಟವಾಗಿ, ದುಪ್ಪಟ್ಟು ಬಾಣಗಳಿಗೆ ಸಮಾಂತರವಾದ ವೇಗೋತ್ಕರ್ಷ ಹೊಂದಿದ ವಿದ್ಯುದಂಶಗಳು ಈ ವೀಕ್ಷಕನೆಡೆಗೆ ಶಕ್ತಿಯನ್ನು ಹೊರಸೂಸುವುದಿಲ್ಲ, ಏಕೆಂದರೆ ವೇಗೋತ್ಕರ್ಷವು ಅಡ್ಡ ಘಟಕವನ್ನು ಹೊಂದಿರುವುದಿಲ್ಲ. ಆದ್ದರಿಂದ ಅಣುವು ಚದುರಿಸಿದ ವಿಕಿರಣವನ್ನು ಚುಕ್ಕಿಗಳಿಂದ ಸೂಚಿಸಲಾಗುತ್ತದೆ. ಇದು ಚಿತ್ರದ ಸಮತಲಕ್ಕೆ ಲಂಬವಾಗಿ ಧ್ರುವೀಕೃತಗೊಂಡಿರುತ್ತದೆ. ಇದು ಆಕಾಶದಿಂದ ಚದುರಿದ ಬೆಳಕಿನ ಧ್ರುವೀಕರಣವನ್ನು ವಿವರಿಸುತ್ತದೆ.



ಚಿತ್ರ (a) ಆಕಾಶದಿಂದ ಬಂದ ಚದುರಿದ ನೀಲಿ ಬೆಳಕಿನ ಧ್ರುವೀಕರಣ. ಆಪಾತ ಸೂರ್ಯನ ಬೆಳಕು ಅಧ್ರುವೀಕೃತವಾಗಿದೆ (ಚುಕ್ಕಿಗಳು ಮತ್ತು ಬಾಣಗಳು). ಮಾದರಿ ಅಣುವೊಂದನ್ನು ತೋರಿಸಿದೆ. ಹಾಳೆಯ ಸಮತಲಕ್ಕೆ ಲಂಬವಾಗಿ ಅಣುವು ಬೆಳಕನ್ನು 90°ಯಿಂದ ಚದುರಿಸುತ್ತದೆ (ಚುಕ್ಕಿಗಳು ಮಾತ್ರ).

(b) ಬ್ರೂಸ್ಟರ್ ಕೋನದಲ್ಲಿ ಪಾರದರ್ಶಕ ಮಾಧ್ಯಮದಿಂದ ಪ್ರತಿಫಲನಗೊಂಡ ಬೆಳಕಿನ ಧ್ರುವೀಕರಣ (ಪ್ರತಿಫಲಿತ ಕಿರಣವು ವಕ್ರೀಭವಿತ ಕಿರಣಕ್ಕೆ ಲಂಬವಾಗಿದೆ).

36) ಯಾವುದನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು.?

ಉತ್ತರ:– *90*°ಯಲ್ಲಿ ಬೆಳಕಿನ ಚದುರುವಿಕೆ ಮತ್ತು ಬ್ರೂಸ್ಟರ್ ಕೋನದಲ್ಲಿನ ಪ್ರತಿಫಲನದ ಸಂದರ್ಭದಲ್ಲಿ, ವಿದ್ಯುತ್ ಕ್ಷೇತ್ರದ ಎರಡು ಲಂಬ ಘಟಕಗಳಲ್ಲಿ ಒಂದು ಶೂನ್ಯವಾಗಿರುತ್ತದೆ. ಬೇರೆ ಕೋನಗಳಲ್ಲಿ ಎರಡು ಘಟಕಗಳೂ ಇರುತ್ತವೆ. ಆದರೆ ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರುತ್ತದೆ. ಅಧ್ರುವೀಕೃತ ಪುಂಜದ ಎರಡು ಲಂಬ ಘಟಕಗಳಿಂದ ಇವುಗಳನ್ನು ಪಡೆದುಕೊಂಡಿರುವುದರಿಂದಾಗಿ ಈ ಎರಡು ಲಂಬ ಘಟಕಗಳ ನಡುವೆ ಸ್ಥಿರವಾದ ಪ್ರಾವಸ್ಥಾ ಸಂಬಂಧವಿರುವುದಿಲ್ಲ. ತಿರುಗುತ್ತಿರುವ ವಿಶ್ಲೇಷಕದಿಂದ ಅಂತಹ ಬೆಳಕನ್ನು ವೀಕ್ಷಿಸಿದಾಗ, ವೀಕ್ಷಕನು ಗರಿಷ್ಟ ಮತ್ತು ಕನಿಷ್ಟ ತೀವ್ರತೆಯನ್ನು ಕಾಣುತ್ತಾನೆ. ಆದರೆ ಪೂರ್ಣ ಕತ್ತಲನ್ನಲ್ಲ. ಇಂತಹ ಬೆಳಕನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು.

37) ವಿದ್ಯುತ್ ಕಾಂತೀಯ ವಿಕಿರಣದ ಫೋಟಾನ್ ಚಿತ್ರಣವನ್ನು ಸಂಕ್ಷಿಪ್ತವಾಗಿ ತಿಳಿಸಿ

ಉತ್ತರ:– ವಿದ್ಯುತ್ ಕಾಂತೀಯ ವಿಕಿರಣದ ಫೋಟಾನ್ ಚಿತ್ರಣವನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಹೇಳಬಹುದು.

(i) ದ್ರವ್ಯದೊಂದಿಗಿನ ವಿಕಿರಣದ ಪ್ರಕ್ರಿಯೆಯಲ್ಲಿ, ವಿಕಿರಣವು ಕಣದಂತೆ ವರ್ತಿಸುತ್ತದೆ. ಈ ಕಣಗಳನ್ನು ಫೋಟಾನ್‌ಗಳೆಂದು ಕರೆಯುತ್ತೇವೆ.

(ii) ಪ್ರತಿ ಫೋಟಾನ್‌ನ ಶಕ್ತಿಯು $E\ (=h\nu)$ ಹಾಗೂ ಸಂವೇಗವು $p\ (= h\nu/c)$, ಹಾಗೂ ಇಲ್ಲಿ c, ಯು ಬೆಳಕಿನ ವೇಗವಾಗಿರುತ್ತದೆ.

(iii) ವಿಕಿರಣದ ತೀವ್ರತೆ ಎಷ್ಟೇ ಇದ್ದರೂ ಒಂದು ನಿರ್ದಿಷ್ಟ ಆವೃತ್ತಿ ν, ಅಥವಾ ತರಂಗದೂರ λ, ಹೊಂದಿರುವ ಎಲ್ಲಾ ಬೆಳಕಿನ ಫೋಟಾನ್‌ಗಳ ಶಕ್ತಿಯು $E\ (=h\nu = hc/\lambda)$ ಹಾಗೂ ಸಂವೇಗವು $p(= h\nu/c = h/\lambda)$ ಗೆ ಸಮನಾಗಿರುತ್ತದೆ ನಿರ್ದಿಷ್ಟ ತರಂಗದದೂರದ ಬೆಳಕಿನ ತೀವ್ರತೆಯನ್ನು ಹೆಚ್ಚಿಸಿದಾಗ ಪ್ರತಿ ಸೆಕೆಂಡಿನಲ್ಲಿ ಬಿಂದು ನಿರ್ಧಿಷ್ಟ ಕ್ಷೇತ್ರದ ಮೂಲಕ ಹಾದುಹೋಗುವ ಫೋಟಾನ್‌ಗಳ ಸಂಖ್ಯೆಯು ಮಾತ್ರ ಹೆಚ್ಚಾಗುತ್ತದೆ (ಪ್ರತಿ ಫೊಟಾನ್‌ಗಳ ಶಕ್ತಿಯು ಒಂದೇ ಆಗಿರುತ್ತದೆ) ಹೀಗಾಗಿ ಪೋಟಾನ್‌ನ ಶಕ್ತಿಯು ವಿಕಿರಣದ ತೀವ್ರತೆಯೊಂದಿಗೆ ಸ್ವತಂತ್ರವಾಗಿರುತ್ತದೆ.

(iv) ಫೋಟಾನ್‌ನ ವಿದ್ಯುದಾವೇಶವು ತಟಸ್ಥವಾಗಿದೆ ಹಾಗೂ ವಿದ್ಯುತ್ಕಾಂತೀಯ ಕ್ಷೇತ್ರಗಳಿಂದ ವಿಚಲನೆಗೊಳ್ಳುವುದಿಲ್ಲ.

(v) ಫೋಟಾನ್ ಕಣ ಡಿಕ್ಕಿಯಲ್ಲಿ (ಫೋಟಾನ್ – ಎಲೆಕ್ಟ್ರಾನ್ ನಡುವಿನ ಡಿಕ್ಕಿಯಂತೆ) ಒಟ್ಟು ಶಕ್ತಿ ಹಾಗೂ ಒಟ್ಟು ಸಂವೇಗವು ಸಂರಕ್ಷಿತವಾಗಿರುತ್ತದೆ. ಆದಾಗ್ಯೂ ಯಾವುದೇ ಡಿಕ್ಕಿಯಲ್ಲಿ ಪೋಟಾನ್‌ಗಳ ಸಂಖ್ಯೆಯು ಸಂರಕ್ಷಿತವಾಗಿರುವುದಿಲ್ಲ ಫೋಟಾನ್ ಹೀರಲ್ಪಡಬಹುದು ಅಥವಾ ಹೊಸ ಫೋಟಾನ್ ಸೃಷ್ಟಿಯಾಗಬಹುದು.

38) ಲೇಸರ್‌ನಿಂದ ಉತ್ಪತ್ತಿಯಾಗುವ ಏಕವರ್ಣೀಯ ಬೆಳಕಿನ ಆವೃತ್ತಿಯು 6.0×10^{14} Hz ಆಗಿದ್ದು, ಅದರ ಸಾಮರ್ಥ್ಯ 2.0×10^{-3} W.

(a) ಈ ಬೆಳಕಿನಲ್ಲಿರುವ ಫೋಟಾನ್‌ನ ಶಕ್ತಿಯನ್ನು ಲೆಕ್ಕಿಸಿ.

(b) ಪ್ರತಿಯೊಂದು ಸೆಕೆಂಡಿಗೆ ಸರಾಸರಿ ಹೊರಸೂಸುವ ಫೋಟಾನ್‌ಗಳು ಎಷ್ಟು?

ಪರಿಹಾರ (a) ಪ್ರತಿಯೊಂದು ಪೋಟಾನಿನ ಶಕ್ತಿ

$E = h\nu = (6.63 \times 10^{-34}\ J\ s)(6.0 \times 10^{14}\ Hz)$

$= 3.98 \times 10^{-19}$ J

(b) ಪ್ರತಿ ಸೆಕೆಂಡಿಗೆ ಹೊರಸೂಸುವ ಫೋಟಾನುಗಳ ಸಂಖ್ಯೆ N ಆಗಿರಲಿ. ಆದುದರಿಂದ ಕಿರಣ ಸಾಮರ್ಥ್ಯ P ಎಂಬುದು N ಬಿಂದು ಫೋಟಾನ್‌ನ ಶಕ್ತಿ E,

so that $P = NE$. ನಂತರ

$$N = \frac{P}{E} = \frac{2.0 \times 10^{-3}\ W}{3.98 \times 10^{-19}\ J}$$

= 5.0 ×1015 ಪ್ರತಿ ಸೆಕೆಂಡಿನ ಪೋಟಾನುಗಳು.

ನಿಮಗಿದು ತಿಳಿದಿರಲಿ

* ಪ್ರಾಚೀನ ದಿನಗಳಲ್ಲಿ ವಿದ್ಯುಚ್ಛಕ್ತಿ ಮತ್ತು ಕಾಂತೀಯತೆಯನ್ನು ಪ್ರತ್ಯೇಕ ವಿಷಯಗಳಂತೆ ಪರಿಗಣಿಸಲಾಗುತ್ತಿತ್ತು. 1820ರಲ್ಲಿ ಡ್ಯೆನಿಶ್ ವಿಜ್ಞಾನಿ ಒಯಿರ್ಸ್ಟೆಡ್ ಅವರು' ಒಂದು ದಿಕ್ಸೂಚಿಯ ಬಳಿ ವಿದ್ಯುತ್ ಪ್ರವಹಿಸುತ್ತಿರುವ ತಂತಿಯನ್ನು ಇಟ್ಟಾಗ ದಿಕ್ಸೂಚಿಯ ಸೂಚಿಯು ಓರೆಯಾಗುತ್ತದೆ ಎಂಬುದನ್ನು ತೋರಿಸಿದರು.

* ಅಂಪೇರ್ ಮತ್ತು ಫ್ಯಾರಡೆ ಇದನ್ನು ಬೆಂಬಲಿಸಿ ಚಲನೆಯಲ್ಲಿರುವ ವಿದ್ಯುದಾವೇಶಗಳು ಕಾಂತಕ್ಷೇತ್ರವನ್ನು ಮತ್ತು ಚಲಿಸುತ್ತಿರುವ ಆಯಸ್ಕಾಂತವು ವಿದ್ಯುತ್ ಶಕ್ತಿಯನ್ನು ಉತ್ಪಾದಿಸುತ್ತದೆ ಎಂದು ಹೇಳಿದರು. ಮುಂದೆ ಸ್ಕಾಟಿಷ್ ಭೌತಶಾಸ್ತ್ರಜ್ಞ ಮ್ಯಾಕ್ಸವೆಲ್ ಮತ್ತು ಡಚ್ ಭೌತಶಾಸ್ತ್ರಜ್ಞ ಲೋರೆಂಟ್ ಈ ಎರಡು ವಿಷಯಗಳ ಪರಸ್ಪರಾವಲಂಬನೆಯನ್ನು ತೋರಿಸಿಕೊಟ್ಟರು.

ನುಡಿದಂತೆ ನಡೆದ ಸಜ್ಜನಿಕೆಯ ಸ್ವಾಮೀಜಿ...

• ಸಿದ್ದರಾಜ ಪೂಜಾರಿ

ವಿಜಯಪುರ: ಕನ್ನಡ ನಾಡು ಸೇರಿದಂತೆ ದೇಶ, ವಿದೇಶಗಳಲ್ಲಿ ಆರೇಳು ದಶಕಗಳಿಂದ ಪ್ರತಿ ನಿತ್ಯವೂ ಪ್ರವಚನವನ್ನೇ ಉಸಿರಾಗಿಸಿಕೊಂಡಿರುವ ವಿಜಯಪುರ ಜ್ಞಾನ ಯೋಗಾಶ್ರಮದ ಸಿದ್ಧೇಶ್ವರ ಸ್ವಾಮೀಜಿ ಅವರ ಬದುಕು ಅತ್ಯಂತ ಸರಳವಾದುದು. ಸಜ್ಜನಿಕೆಯನ್ನು ಮೈಗೂಡಿಸಿಕೊಂಡು ಬಾಳಿ, ಬದುಕಿ, ಸರಳತೆಯನ್ನೇ ಬೋಧಿಸಿದವರು.

ಶ್ರೀಗಳು ವಿಜಯಪುರದ ಆಶ್ರಮದಲ್ಲೇ ಇರಲಿ ಅಥವಾ ಪ್ರವಚನ ನೀಡಲು ನಾಡಿನ ಯಾವುದೇ ನಗರ, ಪಟ್ಟಣ, ಹಳ್ಳಿಗೇ ಹೋಗಲಿ, ಅಲ್ಲಿಯೂ ಸಹ ತಮ್ಮ ಸರಳ ಜೀವನಕ್ಕೆ ಸೀಮಿತರಾಗಿದ್ದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಿತ್ಯ ಮುಂಜಾನೆ ನಾಲ್ಕು ಗಂಟೆಗೆ ಏಳುತ್ತಿದ್ದ ಶ್ರೀಗಳು ಅಧ್ಯಯನ, ಧ್ಯಾನ, ಬರವಣಿಗೆಯಲ್ಲಿ ತೊಡಗುತ್ತಿದ್ದರು. ಬಳಿಕ ಸ್ನಾನ, ಪೂಜೆ ಮುಗಿಸಿ, ಬೆಳಿಗ್ಗೆ 6ಕ್ಕೆ ಸರಿಯಾಗಿ ಪ್ರವಚನ ಆರಂಭಿಸುತ್ತಿದ್ದರು. ಪ್ರವಚನದ ಆರಂಭದಲ್ಲಿ ಶಿಷ್ಯ ಬಳಿಕ ಪ್ರಾರ್ಥನೆ ಮಾಡಿದ ಬಳಿಕ ಸರಿಯಾಗಿ 45 ನಿಮಿಷ ಪ್ರವಚನ ನೀಡುತ್ತಿದ್ದರು. ಒಂದು ಸೆಕೆಂಡ್ ಕೂಡ ಹೆಚ್ಚು ಕಡಿಮೆಯಾಗುತ್ತಿರಲಿಲ್ಲ.

ತಮ್ಮ ಮುಂದೆ ಸಾಗರೋಪಾದಿಯಲ್ಲಿ ಕುಳಿತ ಜನಸ್ತೋಮವನ್ನು ಸೂಜಿಗಲ್ಲಿನಂತೆ ಆಕರ್ಷಿಸುವ ನಯವಾದ ಭಾಷೆ ಎಂಥವರನ್ನೂ ಮೋಡಿ ಮಾಡುತ್ತಿತ್ತು. ಆ ನುಡಿಗಳು ಕೇಳುಗರಿಗೆ ಆತ್ಮತೃಪ್ತಿ ನೀಡುತ್ತಿತ್ತು.

ಕಠಿಣವಾದ ವಿಷಯವನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳಾತೀಸರಳವಾಗಿ ತಿಳಿಸುತ್ತಿದ್ದರು. ನವಿರಾದ ಭಾಷೆ, ಕಾವ್ಯ ಶೈಲಿಯ ಸುಂದರ ಮಾತು ಕೇಳಲು ಜನ ಮುಗಿ ಬೀಳುತ್ತಿದ್ದರು. ಅವರ ಮಾತು ಅಷ್ಟೊಂದು ಪರಿಣಾಮಕಾರಿಯಾಗಿರುತ್ತಿತ್ತು. ಕೇವಲ ಮಾತಿಗೆ ಸೀಮಿತರಾಗದ ಅವರು ನುಡಿದಂತೆ ನಡೆದುಕೊಳ್ಳುತ್ತಿದ್ದರು.

ಪ್ರವಚನ ಮುಗಿದ ಬಳಿಕ ಐದಾರು ಕಿ.ಮೀ ವಾಯು ವಿಹಾರ ಮಾಡುತ್ತಿದ್ದರು. ಬಳಿಕ ಒಂದೆಡೆ ಕುಳಿತು ಜನರೊಂದಿಗೆ ಚರ್ಚೆ, ಹರಟೆಯಲ್ಲಿ ತೊಡಗುತ್ತಿದ್ದರು. ಅಲ್ಲಿ ತಾವು ಮಾತನಾಡದೇ ಜನರ ಮಾತನ್ನು ಮುಗ್ಧ ಮಗುವಿನಂತೆ ಆಲಿಸುತ್ತಿದ್ದರು. ಆಧ್ಯಾತ್ಮ, ಪ್ರಕೃತಿ, ವಿಜ್ಞಾನ, ಕೃಷಿ, ಶಿಕ್ಷಣ ಸೇರಿದಂತೆ ದೈನಂದಿನ ಜನಜೀವನದ ಬಗ್ಗೆ ಜನರಿಂದಲೇ ಕೇಳಿ ತಿಳಿಯುತ್ತಿದ್ದರು.

ಶ್ರೀಗಳು ಪ್ರಕೃತಿ ಪ್ರಿಯರಾಗಿದ್ದರು. ಹೀಗಾಗಿಯೇ ಆಶ್ರಮ ಗಿಡಮರಗಳು ಹಚ್ಚ ಹಸಿರಿನಿಂದ ಕೂಡಿದೆ. ಅಲ್ಲಿ ಸದಾಕಾಲ ಪಕ್ಷಿಗಳ ಚಿಲಿಪಿಲಿ ನಿನಾದ ಅನುರಣಿಸುತ್ತದೆ. ಪ್ರಕೃತಿಗೆ ಧಕ್ಕೆಯಾಗಬಾರದು ಎಂದು ಬಲವಾಗಿ ಪ್ರತಿಪಾದಿಸಿದ್ದರು ಶ್ರೀಗಳು. ಪ್ರಕೃತಿಯನ್ನು ಕೆಡಿಸಬೇಡಿ ಎನ್ನುತ್ತಿದ್ದರು.

ಆಶ್ರಮ ಆವರಣದಲ್ಲಿ ಮೈಚಾಚಿಕೊಂಡಿರುವ ಬೃಹದಾಕಾರದ ಆಲದ ಮರದ ಇಳಿಬಿದ್ದ ಕೊಂಬೆಗಳನ್ನು ಕತ್ತರಿಸಲು ಮುಂದಾದಾಗ ಶ್ರೀಗಳು ತಡೆದು, ಇಳಿಬಿದ್ದ ಕೊಂಬೆಗಳಿಗೆ ಕಂಬವನ್ನು ನಿಲ್ಲಿಸಿ ಆಶ್ರಯ ಒದಗಿಸಿರುವುದನ್ನು ಈಗಲೂ ಕಾಣಬಹುದು.

ಗಿಡಗಳಲ್ಲಿ ಅರಳಿರುವ ಹೂಗಳನ್ನು ಅವರು ಕೀಳಲು ಬಿಡುತ್ತಿರಲಿಲ್ಲ. ಬಹಳಷ್ಟು ಹೂವನ್ನು ಬಳಸದೇ ಒಂದೇ ಹೂವನ್ನು ದೇವರಿಗೆ ಅರ್ಪಿಸಿ ಪೂಜೆ ಸಲ್ಲಿಸುತ್ತಿದ್ದರು. ಪ್ರಕೃತಿ, ಪ್ರಾಣಿಗಳನ್ನು ಅವರು ಪ್ರೀತಿಸುತ್ತಿದ್ದರು.



ಬಿಡುವಿದ್ದಾಗ ಮಧ್ಯಾಹ್ನ ಅಲ್ಪ ವಿಶ್ರಾಂತಿ, ಬಳಿಕ ಮತ್ತೆ ಅಧ್ಯಯನದಲ್ಲಿ ತೊಡಗುತ್ತಿದ್ದರು. ಸಂಜೆ ಕೆಲ ಹೊತ್ತು ಸಂಗೀತ ಆಲಿಸುತ್ತಿದ್ದರು. ಶಹನಾಯ್, ಜಲ ತರಂಗ, ಕೊಳಲು ವಾದನ ಅವರಿಗೆ ಇಷ್ಟ. ಭಕ್ತಿ, ಭಜನೆ, ಶಿವಶರಣರ ವಚನಗಳು, ಶ್ಲೋಕಗಳನ್ನು ಆಲಿಸುತ್ತಿದ್ದರು.

ಪ್ರತಿ ರಾತ್ರಿ 10 ಗಂಟೆ ಒಳಗಾಗಿ ಮಲಗುತ್ತಿದ್ದರು. ತಾವು ಮಲಗುವ ಕೊಠಡಿಯೊಳಗೆ ಗಾಳಿ, ಬೆಳಕು ಇರುವಂತೆ ಬಯಸುತ್ತಿದ್ದರು. ಎಸಿ, ಫ್ಯಾನ್ ಬಳಸುತ್ತಿರಲಿಲ್ಲ.

ಪ್ರತಿ ಭಾನುವಾರ ಸಂಜೆ 6ರಿಂದ 7 ರ ವರೆಗೆ ಇಂಗ್ಲಿಷ್‌ನಲ್ಲಿ ಮಾತನಾಡುತ್ತಿದ್ದರು. ಭಾರತೀಯ ತತ್ವಜ್ಞಾನ, ವೇದ ಉಪನಿಷತ್ ಬಗ್ಗೆ ಮಾತನಾಡುತ್ತಿದ್ದರು.

ಸದಾಕಾಲ ಶ್ವೇತ ವಸ್ತ್ರಾಧಾರಿಯಾಗಿರುತ್ತಿದ್ದರು. ಸಾದಾ ನಿಲುವಂಗಿ, ಆ ಅಂಗಿಗೆ ಜೇಬು ಇರುತ್ತಿರಲಿಲ್ಲ. ಅದು ಎರಡೇ ಜೋಡಿ ವಸ್ತ್ರಗಳಿರುತ್ತಿದ್ದವು. ಸ್ವಲ್ಪ ಹರಿದಿದ್ದರೂ ತೊಡುತ್ತಿದ್ದರು. ತಾವೇ ಹೊಲಿಗೆ ಹಾಕಿಕೊಳ್ಳುತ್ತಿದ್ದರು. ಒಂದು ದಿನ ಹೀಗೆ ಹರಿದ ಅಂಗಿಯನ್ನು ನೋಡಿದ ಭಕ್ತರೊಬ್ಬರು ಹೊಸ ವಸ್ತ್ರ ತಂದುಕೊಡುವುದಾಗಿ ಹೇಳಿದಾಗ, 'ಬೇಡ, ಅಂಗಿ ಒಂದು ಕಡೆ ಹರಿದರೇನಂತೆ ಉಳಿದೆಡೆ ಚನ್ನಾಗಿದೆ. ಹರಿದ ಕಡೆ ಏಕೆ ನೋಡುತ್ತೀರಿ, ಉಳಿದೆಡೆ ಚನ್ನಾಗಿದೆ ಅಲ್ಲಿನೋಡಿ' ಎಂದು ಹೇಳಿದರು.

ಶ್ರೀಗಳು ಮಿತ ಆಹಾರಿಯಾಗಿದ್ದರು. ಉಪ್ಪು ಕಾರವಿಲ್ಲದ ಸಪ್ಪೆ ಆಹಾರ ಸೇವಿಸುತ್ತಿದ್ದರು. ಒಂದು ರೊಟ್ಟಿಯನ್ನು ನಾಲ್ಕು ಭಾಗ ಮಾಡಿ ಅದರಲ್ಲಿ ಕಾಲು ಭಾಗ ಮಾತ್ರ ಸೇವಿಸುತ್ತಿದ್ದರು. ಅಷ್ಟೇ ಅಲ್ಲ ಅವರು ಸ್ನಾನಕ್ಕೆ ರಾಸಾಯನಿಕ ಯುಕ್ತ ಸೋಪನ್ನು ಬಳಸುತ್ತಿರಲಿಲ್ಲ. ಎಣ್ಣೆಯನ್ನು ಹಚ್ಚಿಕೊಂಡು ಅಭ್ಯಂಜನ ಸ್ನಾನ ಮಾಡುತ್ತಿದ್ದರು.

ಅವರಿಗೆ ಕಾಯಿಲೆಗಳು ಅಷ್ಟಾಗಿ ಎಂದೂ ಬಾಧಿಸಲಿಲ್ಲ. ಹೀಗಾಗಿ ಆಸ್ಪತ್ರೆ ಸಮೀಪ ಸುಳಿದವರಲ್ಲ, ಔಷಧ ಬಳಸಿದವರೂ ಅಲ್ಲ. ಅಗತ್ಯವಿದ್ದರೆ ಅಲ್ಪಸ್ವಲ್ಪ ಆಯುರ್ವೇದ ಔಷಧವನ್ನು ಬಳಸುತ್ತಿದ್ದರು. ಅವರು ಎಂದೂ ಯಾವುದೇ ಸಿನಿಮಾ ನೋಡಿದವಲ್ಲ, ಟಿವಿಯನ್ನು ವೀಕ್ಷಿಸುತ್ತಿರಲಿಲ್ಲ. ಆದರೆ, ಪತ್ರಿಕೆಗಳನ್ನು ಅರ್ಧ ತಾಸು ಓದುತ್ತಿದ್ದರು.

ಜನಸಾಮಾನ್ಯರ ಹತ್ತಿರವೇ ಇರುತ್ತಿದ್ದರು. ಪ್ರವಚನದ ವೇಳೆ ಪ್ರಸಾದ ವ್ಯವಸ್ಥೆ ಇದ್ದಾಗ ಅವರೇ ಬಡಿಸುತ್ತಿದ್ದರು. ಜನರೊಂದಿಗೆ ಬೆರೆಯುತ್ತಿದ್ದರು. ಪಾದ ಮುಟ್ಟಿ ನಮಸ್ಕರಿಸಲು ಅವರು ಯಾರಿಗೂ ಅವಕಾಶ ನೀಡುತ್ತಿರಲಿಲ್ಲ. ಪ್ರತಿಯಾಗಿ ತಾವೂ ನಮಸ್ಕರಿಸುತ್ತಿದ್ದರು.

ಯಾವುದೇ ವ್ಯವಹಾರವನ್ನೂ ಅವರು ಎಂದೂ ಮಾಡುತ್ತಿರಲಿಲ್ಲ. ಕೈಯಲ್ಲಿ ಎಂದೂ ಹಣವನ್ನೇ ಮುಟ್ಟಲಿಲ್ಲ, ಅಷ್ಟೊಂದು ಸರಳತೆಯ ಮೂರ್ತಿವೆತ್ತವರು ಸಿದ್ಧೇಶ್ವರ ಶ್ರೀ.

ಲೇಖಕ: ಸಾಹಿತಿ, ಬನಹಟ್ಟಿ
ನಿರೂಪಣೆ: ಬಸವರಾಜ್ ಸಂಪಳ್ಳಿ

ಸವಾರಿಯ ಖುಷಿಯಲ್ಲಿ...

ಕಾರನ್ನು ನಯವಾಗಿ ತಿರಸ್ಕರಿಸಿದರು...

ಸಿದ್ಧೇಶ್ವರ ಸ್ವಾಮೀಜಿ ಅವರ ಸರಳ ಜೀವನಕ್ಕೆ ಹತ್ತಾರು ಉದಾಹರಣೆಗಳನ್ನು ಕೊಡಬಹುದು. ಅವುಗಳಲ್ಲಿ ಇದೂ ಒಂದು.

ಆರೇಳು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಶ್ರೀಗಳ ಪ್ರವಚನ ನಡೆದಿತ್ತು. ಅವರ ಆಧ್ಯಾತ್ಮಿಕ ವಿಚಾರಗಳಿಗೆ ಮಾರುಹೋಗಿದ್ದ ಭಕ್ತರೊಬ್ಬರು, ಪ್ರವಚನದ ಮಂಗಲ ದಿನದಂದು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯದ ಹೊಸ ಕಾರು ಖರೀದಿಸಿ ತಂದರು. ಅದನ್ನು ಶ್ರೀಗಳಿಗೆ ತೋರಿಸಿ, 'ಬುದ್ಧಿ ಈ ಕಾರು ನಿಮಗಾಗಿ ತಂದಿದ್ದೇನೆ. ದಯವಿಟ್ಟು ಕಾರಿನ ಕೀ ಸ್ವೀಕರಿಸಿ' ಎಂದು ವಿನಮ್ರವಾಗಿ ವಿನಂತಿಸಿದರು.

ಅದಕ್ಕೆ ಮುಗುಳ್ನಕ್ಕ ಸ್ವಾಮೀಜಿ, 'ಸಂತೋಷ. ಒಂದು ಸುತ್ತು ಹಾಕಿಸಿ' ಎಂದು ಕಾರಿನ ಕೀಯನ್ನು ಭಕ್ತರಿಗೆ ನೀಡಿದರು. ಕಾರಿನಲ್ಲಿ ಸುತ್ತಿ ಬಂದು 'ಅದ್ಭುತ' ಎಂದರು. ನಂತರ ಅವರನ್ನು ಆಶೀರ್ವದಿಸಿ ನಿಮ್ಮಂತಹ ಭಕ್ತರು ನಮಗೆ ದೊರೆತಿರುವುದು ನಮ್ಮ ಸೌಭಾಗ್ಯ. ಕಾರಿನ ಅನುಭವ ಮರೆಯಲಾಗದು. ನಾನು ಒಂದೇ ಕಾರಿನಲ್ಲಿ ಓಡಾಡಿದರೆ ನಿರಾಸಕ್ತಿ ಉಂಟಾಗುತ್ತದೆ' ಎಂದು ಹೇಳಿ ಕಾರನ್ನು ನಯವಾಗಿ ತಿರಸ್ಕರಿಸಿ ಅದೇ ಮಂದಹಾಸದೊಡನೆ ತೆರಳಿದ್ದರು' ಎಂದು ಅವರ ನಿಕಟವರ್ತಿಗಳು ಹೇಳುತ್ತಾರೆ.

ಸಿದ್ಧೇಶ್ವರ ಸ್ವಾಮೀಜಿ ಅಸ್ತಂಗತ

ಒಂದನೇ ಪುಟದಿಂದ

ಸುಮಾರು 20 ದಿನಗಳಿಂದ ಆಹಾರ ತ್ಯಜಿಸಿದ್ದ ಶ್ರೀಗಳು ಸೋಮವಾರ ಬೆಳಿಗ್ಗೆ ಸ್ವಲ್ಪ ಗಂಜಿ ಸೇವಿದ್ದರು. ಬಳಿಕ ಕ್ಷಣ, ಕ್ಷಣಕ್ಕೆ ಉಸಿರಾಟ, ನಾಡಿಬಡಿತ ಕ್ಷೀಣವಾಯಿತು.

ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲು ವೈದ್ಯರು, ನಾಡಿನ ವಿವಿಧ ಮಠಾಧೀಶರು, ಮಠದ ಶಿಷ್ಯರು, ಗಣ್ಯರು ಅವರ ಮನವೊಲಿಸಿದರೂ ಆಸ್ಪತ್ರೆಗೆ ಹೋಗಲು ಶ್ರೀಗಳು ನಿರಾಕರಿಸಿದ್ದರು.

ಆಶ್ರಮಕ್ಕೆ ಶನಿವಾರ ರಾತ್ರಿ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಚಿವ ಗೋವಿಂದ ಕಾರಜೋಳ ಅವರು ಸಹ ಉನ್ನತಮಟ್ಟದ ಚಿಕಿತ್ಸೆಗೆ ವ್ಯವಸ್ಥೆ ಮಾಡುವುದಾಗಿ ಮನವಿ ಮಾಡಿದರೂ ಶ್ರೀಗಳು ಒಪ್ಪಲಿಲ್ಲ.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ತಮ್ಮ ಫೋನ್ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಪರ್ಕಿಸಿ ಶ್ರೀಗಳ ಜೊತೆ ಮಾತನಾಡಲು ಅನುವು ಮಾಡಿಕೊಟ್ಟಿದ್ದರು. ಪ್ರಧಾನಿ ಸಹ ಉನ್ನತ ಮಟ್ಟದ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿದರೂ ಶ್ರೀಗಳು ಕೈಮುಗಿಯುವ ಮೂಲಕ ಈ ಜೀವಕ್ಕೆ ಚಿಕಿತ್ಸೆ ಅಗತ್ಯವಿಲ್ಲ, ಸಹಜವಾಗಿ ತೆರಳಲು ಬಿಡಿ ಎಂದು ಕೈಸನ್ನೆ ಮಾಡಿದ್ದರು.

ಅಂತಿಮ ದರ್ಶನಕ್ಕೆ ವ್ಯವಸ್ಥೆ ಇಂದು:

ಶ್ರೀಗಳ ಅಗಲಿಕೆ ವಿಷಯ ತಿಳಿಯುತ್ತಿರುವಂತೆ ನಾಡಿನ ವಿವಿಧ ಮಠಾಧೀಶರು, ಸಚಿವರು, ಶಾಸಕರು, ಭಕ್ತರ ದಂಡು ಆಶ್ರಮದತ್ತ ಧಾವಿಸುತ್ತಿದ್ದು, ಕಂಬನಿ ಮಿಡಿಯುತ್ತಿದ್ದಾರೆ.

ಇಂದು ಅಂತಮ ಸಂಸ್ಕಾರ: ಶ್ರೀಗಳ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಮಂಗಳವಾರ (ಜ.3) ಬೆಳಿಗ್ಗೆ 6 ರಿಂದ ಮಧ್ಯಾಹ್ನ 3ರ ವರೆಗೆ ವಿಜಯಪುರ ನಗರದ ಸೈನಿಕ ಶಾಲೆಯಲ್ಲಿ ವ್ಯವಸ್ಥೆ ಕಲ್ಪಿಸಲಾಗಿದೆ. ಬಳಿಕ ಸಂಜೆ 4ಕ್ಕೆ ಅಂತಿಮ ಯಾತ್ರೆಯು ಸೈನಿಕ ಶಾಲೆಯಿಂದ ಆರಂಭಗೊಂಡು, ಶಿವಾಜಿ ವೃತ್ತ, ಗಾಂಧಿ ಚೌಕಿ, ಸಿದ್ಧೇಶ್ವರ ಗುಡಿ ಮೂಲಕವಾಗಿ ಸಾಗಿ ಆಶ್ರಮ ತಲುಪಲಿದೆ. ಸಂಜೆ 6.05ಕ್ಕೆ ಸಕಲ ಸರ್ಕಾರಿ ಗೌರವಗಳೊಂದಿಗೆ ಶ್ರೀಗಳ ಅಂತಿಮ ಸಂಸ್ಕಾರ ನಡೆಯಲಿದೆ.

'ಗುಡಿ ಕಟ್ಟಬಾರದು, ಸಮಾಧಿ ಮಾಡಬಾರದು' ಎಂಬ ಶ್ರೀಗಳ ಆಶಯದಂತೆ ಅಗ್ನಿಸ್ಪರ್ಶ ಮಾಡುವ ಮೂಲಕ ಅಂತಿಮ ಸಂಸ್ಕಾರ ನಡೆಸಲು ನಿರ್ಧರಿಸಲಾಗಿದೆ.

ಅಂತ್ಯಸಂಸ್ಕಾರದಲ್ಲಿ ಮಠಾಧೀಶರು, ಗಣ್ಯರು, ಮಾಧ್ಯಮದವರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ವಿಜಯ ಮಹಾಂತೇಶ ತಿಳಿಸಿದ್ದಾರೆ.

ಆಶ್ರಮದ ಶಿಷ್ಯ ವರ್ಗ, ನಾಡಿನ ಹಿರಿಯ ಮಠಾಧೀಶರು, ಗಣ್ಯರು ಶ್ರೀಗಳ ಅಂತ್ಯ ಸಂಸ್ಕಾರದ ವಿಧಿವಿಧಾನಗಳನ್ನು ನಡೆಸಲು ಅಗತ್ಯ ಸಿದ್ಧತೆ ಕೈಗೊಂಡಿದ್ದಾರೆ.

ಶ್ರೀಗಳ ಅಂತಿಮ ದರ್ಶನಕ್ಕೆ ಸಹಸ್ರಾರು ಭಕ್ತರು ಆಶ್ರಮದತ್ತ ಧಾವಿಸುತ್ತಿರುವುದರಿಂದ ಯಾವುದೇ ಅಸ್ತವ್ಯಸ್ತವಾಗದಂತೆ ನೋಡಿಕೊಳ್ಳಲು ಜಿಲ್ಲಾಧಿಕಾರಿ ವಿಜಯ ಮಹಾಂತೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್ ಅಗತ್ಯ ವ್ಯವಸ್ಥೆ, ಭದ್ರತೆ ಮಾಡಿದ್ದಾರೆ.

ಅಂತಿಮ ದರ್ಶನಕ್ಕೆ 5 ಲಕ್ಷದಿಂದ 10 ಲಕ್ಷ ಭಕ್ತರು ಬರುವ ನಿರೀಕ್ಷೆ ಇದ್ದು, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಉಪಾಹಾರದ ವ್ಯವಸ್ಥೆ ಮಾಡಿದ್ದಾರೆ. ಸಾರ್ವಜನಿಕರೂ ಸಹ ಭಕ್ತರಿಗೆ ಉಪಾಹಾರದ ವ್ಯವಸ್ಥೆ ಮಾಡಬಹುದು ಎಂದು ಕನ್ಹೇರಿ ಮಠದ ಅದೃಶ್ಯ ಕಾಡಸಿದ್ಧೇಶ್ವರ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ತಿಳಿಸಿದರು.

ವಿಶಾಲವಾದ ಭಾವವುಳ್ಳವರೇ ಸಂತರು, ಶರಣರು. ಅವರಿಗೂ ನಮಗೂ ವಿಶೇಷ ವ್ಯತ್ಯಾಸವಿಲ್ಲ. ಅವರು ಒಳಗೆ ಸಿರಿವಂತರು, ಹೊರಗೆ ಬಡವರು. ನಾವು ಹೊರಗೆ ಸಿರಿವಂತರು, ಒಳಗೆ ಬಡವರು.

ಪ್ರಶಸ್ತಿ, ಪುರಸ್ಕಾರಗಳಿಂದ ದೂರ

ಸಿದ್ಧೇಶ್ವರ ಶ್ರೀಗಳು ತಮ್ಮ ನಡೆ, ನುಡಿಗಳಲ್ಲಿ ಒಂದೇ ಆಗಿದ್ದ, ಅಪರೂಪದಲ್ಲೇ ಅಪರೂಪದ ಸಂತರಾಗಿದ್ದರು. ಎಂದಿಗೂ ಡಂಬಾಚಾರ, ಪಾದಪೂಜೆಯನ್ನು ಭಕ್ತರಿಂದ ಬಯಸದ ಅವರು, ತಾವು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಹೂವು, ಫಲತಾಂಬೂಲ, ಕಾಣಿಕೆ ನೀಡಿದರೂ ಸ್ವೀಕರಿಸದ ಅಪ್ಪಟ ಸಂತರಾಗಿದ್ದರು.

2019ರಲ್ಲಿ ಭಾರತ ಸರ್ಕಾರದ ಅತ್ಯುನ್ನತ ನಾಗರಿಕ ಗೌರವ 'ಪದ್ಮಶ್ರೀ' ಪ್ರಶಸ್ತಿಗೆ ಆಯ್ಕೆಯಾದಾಗ, 'ನಾನೊಬ್ಬ ಸರಳ ಸನ್ಯಾಸಿ, ಪ್ರಶಸ್ತಿ, ಪುರಸ್ಕಾರಗಳ ಅಗತ್ಯ ನನಗಿಲ್ಲ' ಎಂದು ನಯವಾಗಿ ನಿರಾಕರಿಸಿದ್ದರು.

ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಪ್ರಕಟಿಸಿದಾಗಲೂ ಅದನ್ನೂ ಶ್ರೀಗಳು ಸ್ವೀಕರಿಸಲಿಲ್ಲ. ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರ ಆಶ್ರಮದ ಅಭಿವೃದ್ಧಿಗಾಗಿ ₹25 ಲಕ್ಷ ಅನುದಾನ ನೀಡಿದಾಗಲೂ ಸ್ವೀಕರಿಸದೇ ಮರಳಿಸಿದರು.

ಸಿದ್ಧೇಶ್ವರ ಶ್ರೀಗಳ ನುಡಿಮುತ್ತುಗಳು

ನಮ್ಮದಾಗಿರುವ ಭಾಗ್ಯದಲ್ಲಿಯೇ ನಾವು ಸಂತುಷ್ಟರಾಗಿರಬೇಕು. ಅನ್ಯರ ಭಾಗ್ಯವನ್ನು ಕಂಡು ಆನಂದ ಪಡಬೇಕು.

* * *

ಜಾಣತನದ ಸಿಟ್ಟು ದೇಶವನ್ನು ಕಟ್ಟುತ್ತದೆ, ಜೀವನವನ್ನು ತಿದ್ದಿ ತೀಡಿ ಸುಂದರಗೊಳಿಸುತ್ತದೆ. ಹಿತಾಹಿತವನ್ನರಿಯದೇ ಮಾಡಿದ ಸಿಟ್ಟು ಎಲ್ಲರನ್ನೂ ಕೆಡಿಸುತ್ತದೆ. ಆ ಕ್ರೋಧವು ಅದನ್ನು ತಡೆಯುತ್ತದೆ. ಆವೇಶರಹಿತ ಸೌಮ್ಯ-ಶಾಂತ ಜೀವನವನ್ನು ಕರುಣಿಸುತ್ತದೆ!

* * *

ವಿವಾಹವು ಒಡೆತನಕ್ಕಲ್ಲ; ಗೆಳೆತನಕ್ಕೆ ಕೂಡಿ ಪ್ರೇಮದಿಂದ ಬಾಳುವುದಕ್ಕೆ. ಯಾರಿಗೆ ಯಾರೂ ಒಡೆಯರಲ್ಲ, ಎಲ್ಲರಿಗೂ ದಯಾನಿಧಿ ದೇವನೇ ಒಡೆಯನು.

* * *

ನಾವು ಯಾವುದೇ ಊರನ್ನು ಪ್ರವೇಶಿಸುವಾಗ ಅಲ್ಲಿ ಒಂದು ಸುಸ್ವಾಗತದ ಫಲಕವಿರುತ್ತದೆ. ಅದೇ ಫಲಕದ ಹಿಂದೆ 'ಹೋಗಿ ಬನ್ನಿ ನಮಸ್ಕಾರ' ಎಂದಿರುತ್ತದೆ. ಅವಸರದಲ್ಲಿ ನಾವು ಸ್ವಾಗತವನ್ನಷ್ಟೇ ನೋಡುತ್ತೇವೆ.

* * *

ಮನೆಯಲ್ಲಿದ್ದಾಗ ನಾನು ಗೃಹಸ್ಥ, ಮಠದಲ್ಲಿದ್ದಾಗ ನಾನು ಸನ್ಯಾಸಿ. ಈ ಮನೆ-ಮಠಗಳ ಸಂಬಂಧವನ್ನು ಕಳೆದಾಗ ಉಳಿದುದೇ ನಾನು.

* * *

ಎಲ್ಲ ಮತ ಧರ್ಮಗಳಿಗೂ ತಮ್ಮ ತಮ್ಮದೇ ಆದ ಸಿದ್ಧಾಂತಗಳಿವೆ. ನಮ್ಮ ದರ್ಶನ ನಮಗೆ ಹೇಗೆ ಸರಿಯೋ, ಹಾಗೆಯೇ ಅವರ ದರ್ಶನ ಅವರಿಗೆ ಸರಿ. ಹೀಗೆ ಭಾವಿಸಿದಾಗ ವಾದ ವಿವಾದವಿಲ್ಲ.

* * *

ಯಾವ ಹೂವೂ ಹಿಮಾಲಯವನ್ನೇರಿ ಧ್ಯಾನ ಮಾಡಿಲ್ಲ, ವಿಶ್ವವಿದ್ಯಾಲಯದ ಕಟ್ಟೆಯನ್ನೇರಿ ವಿದ್ಯೆ ಸಂಪಾದನೆ ಮಾಡಿಲ್ಲ. ಆದರೂ ಎಲ್ಲ ಹೂಗಳು ದೇವರಿಗರ್ಪಿತವಾಗಿವೆ.

* * *

ಮೂರ್ತಿಗೆ ಬೆಲೆ ಕಟ್ಟಬಹುದೇ ವಿನಾ ದೇವರಿಗೆ ಬೆಲೆ ಕಟ್ಟಲಾಗದು. ದೇವರು ಅಮೂಲ್ಯ, ಅಚಿಂತ್ಯ, ಅಗಮ್ಯ.

ಆಶ್ರಮಕ್ಕೆ ಬಂದಿದ್ದ ಭಕ್ತರನ್ನು ಭೇಟಿಯಾದ ಕ್ಷಣ

'ಕಿಸೆ'ಯಿಲ್ಲದ ವೈರಾಗ್ಯಮೂರ್ತಿ

ಒಂದನೇ ಪುಟದಿಂದ

ವಿಜಯಪುರ ಜ್ಞಾನಯೋಗಾಶ್ರಮದ ಸಂಸ್ಥಾಪಕರಾದ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳ ಪ್ರವಚನ ಕೇಳಿ ಆಕರ್ಷಿತರಾದ ಸಿದ್ಧೇಶ್ವರ ಶ್ರೀಗಳು, ಮುಂದೆ ಅದೇ ಆಶ್ರಮದ ಅಧ್ಯಕ್ಷರಾದದ್ದು ವಿಶೇಷ.

ಸದಾ ಶ್ವೇತವಸ್ತ್ರಧಾರಿ: ಸದಾಕಾಲ ಶ್ವೇತವಸ್ತ್ರಧಾರಿಯಾಗಿರುತ್ತಿದ್ದ ಸಿದ್ಧೇಶ್ವರ ಶ್ರೀಗಳು ಎಂದಿಗೂ ಹಣ, ಅಧಿಕಾರ, ಅಂತಸ್ತು, ಕೀರ್ತಿ, 'ಪ್ರಭಾವ' ಬೀರುವ ವ್ಯಕ್ತಿತ್ವಕ್ಕೆ ಆಸೆ ಪಟ್ಟವರಲ್ಲ. ತಮ್ಮ ಬಳಿ ಅದಾವುದೂ ಸುಳಿಯದಂತೆ ಎಚ್ಚರಿಕೆ ವಹಿಸಿದ್ದರು. 'ಕಿಸೆ' ಇಲ್ಲದ ಅಂಗಿಯನ್ನೇ ತೊಟ್ಟು ಪಾರದರ್ಶಕತೆಗೆ ಸಾಕ್ಷಿಯಾಗಿದ್ದರು.

ಕನ್ನಡ, ಮರಾಠಿ, ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ನಿರರ್ಗಳವಾಗಿ ಪ್ರವಚನ ನೀಡುತ್ತಿದ್ದರು. ತಾವು ಓದಿ, ಅಧ್ಯಯನ ಮಾಡಿ, ಪ್ರಪಂಚ ಪರ್ಯಟನೆ ಮೂಲಕ ಕಂಡುಕೊಂಡ ನೈಜ ಅನುಭವಾಮೃತವನ್ನು ತಮ್ಮ ಪ್ರವಚನದಲ್ಲಿ ಭಕ್ತರಿಗೆ ಮನಮುಟ್ಟುವಂತೆ ಅವರದೇ ಶೈಲಿಯಲ್ಲಿ ಉಣಬಡಿಸುತ್ತಿದ್ದರು.

ಅವರ ಪ್ರವಚನ ಕೇಳಲು ಬೆಳ್ಳಂಬೆಳಿಗ್ಗೆಯೇ ಧರ್ಮ, ಜಾತಿ ಭೇದವಿಲ್ಲದೇ ಸಹಸ್ರಾರು ಜನರು ನೆರೆಯುತ್ತಿದ್ದರು. ಪ್ರವಚನದ ವೇಳೆ ಒಂದು ಸೂಜಿ ಬಿದ್ದರೂ ಕೇಳುವಷ್ಟು ನಿಶ್ಯಬ್ದ. ಭಕ್ತರು ಅಷ್ಟೊಂದು ಏಕಾಗ್ರತೆಯಿದ ಪ್ರವಚನ ಆಲಿಸುತ್ತಿದ್ದರು.

ಆಳವಾದ ಅಧ್ಯಯನ: ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಅಲ್ಲಮ ಪ್ರಭು, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಏಸುಕ್ರಿಸ್ತ, ಪೈಗಂಬರ್, ಮಹಾವೀರ, ಲೆನಿನ್, ಕಾರ್ಲ್ ಮಾರ್ಕ್ಸ್, ನೆಲ್ಸನ್ ಮಂಡೇಲಾ ಸೇರಿದಂತೆ ವಿಶ್ವದ ಎಲ್ಲ ದಾರ್ಶನಿಕರನ್ನು ಆಳವಾಗಿ ಅಧ್ಯಯನ ಮಾಡಿ ಅರಗಿಸಿಕೊಂಡಿದ್ದ ಶ್ರೀಗಳು ಅವರೆಲ್ಲರ ಚಿಂತನೆಗಳನ್ನು ತಮ್ಮ ಪ್ರವಚನದ ಮೂಲಕ ಜನಮಾನಸಕ್ಕೆ ತಲುಪಿಸುತ್ತಿದ್ದರು.

ಶ್ರೀಗಳ ಬಳಿ ಯಾವುದೇ ಜಾತಿ, ಧರ್ಮ, ಲಿಂಗ ತಾರತಮ್ಯ ಇರಲಿಲ್ಲ. ಅವರ ಮಾತು, ನಡೆ, ನುಡಿಯಲ್ಲಿ ಯಾವುದೇ ಟೀಕೆ, ಟಿಪ್ಪಣಿ ಇರಲಿಲ್ಲ. ಯಾವುದೇ ರಾಗ, ದ್ವೇಷಕ್ಕೆ ಅಲ್ಲಿ ಅವಕಾಶ ಇರಲಿಲ್ಲ. ಸಕಾರಾತ್ಮಕ ಚಿಂತನೆಯೇ ಪ್ರವಚನದ ಸಾರವಾಗಿತ್ತು.



'ಹೃದಯ ಸ್ವಚ್ಛ ಇರಬೇಕು, ತಲೆ ಖಾಲಿ ಇರಬೇಕು, ಯಾವುದೂ ಇರುವ ಹಾಗೇ ಇರುವುದಿಲ್ಲ' ಎಂದು ಸರಳ, ಸುಲಲಿತ ಭಾಷೆಯಲ್ಲಿ ಅಕ್ಕರೆಯಿಂದ ಹೇಳುತ್ತ ಭಕ್ತರ ಹೃದಯದೊಳಗೆ ಪ್ರವೇಶಿಸುತ್ತಿದ್ದರು.

ಸಿದ್ಧಾಂತ ಶಿಖಾಮಣಿ, ಭಗವದ್ಗೀತೆಯನ್ನು ಕನ್ನಡಕ್ಕೆ ಸರಳೀಕರಿಸಿ, ಅನುವಾದ ಮಾಡಿದ್ದರು. ಅವರ ಪ್ರವಚನದ ನೂರಾರು ಪುಸ್ತಕಗಳು ಪ್ರಕಟವಾಗಿವೆ. ಆದರೆ, ತಾವು ಬದುಕಿರುವವರೆಗೂ ತಮ್ಮ ಬಗ್ಗೆ ಯಾರೊಬ್ಬರೂ ಒಂದಕ್ಷರ ಬರೆಯಲು ಅವರು ಅವಕಾಶವನ್ನು ನೀಡಿರಲಿಲ್ಲ.

ಕಿಸೆಯಿಲ್ಲದ ಸಂತನನ್ನು ರಾಜಕೀಯ, ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ಹುನ್ನಾರವೂ ನಡೆಯಿತು. ಆದರೆ, ಯಾವುದೇ ವಿವಾದಕ್ಕೆ ಒಳಗಾಗದೇ ಕಪ್ಪುಚುಕ್ಕೆ, ಕಳಂಕವೂ ಸುಳಿಯದಂತೆ ಎಚ್ಚರದಿಂದ ಅವರು ಆದರ್ಶಪ್ರಾಯ ಜೀವನವನ್ನು ಅಕ್ಷರಶಃ ಬಾಳಿದರು, ಬದುಕಿದರು.

ಹರಿದುಬಂದ ಭಕ್ತ ಸಾಗರ

ಸಿದ್ಧೇಶ್ವರ ಶ್ರೀಗಳನ್ನು ನೋಡಲು ಸೋಮವಾರ ಭಕ್ತರ ಸಾಗರವೇ ಆಶ್ರಮದತ್ತ ಹರಿದುಬಂದಿತ್ತು. ಆಶ್ರಮದ ಆವರಣದಲ್ಲಿ ಮಹಿಳೆಯರು ಭಜನೆ ಮಾಡುವ ಹಾಗೂ ನಗರದ ಅನೇಕ ದೇವಾಲಯ, ದರ್ಗಾದಲ್ಲಿ ಭಕ್ತರು ವಿಶೇಷ ಪ್ರಾರ್ಥನೆ ಸಲ್ಲಿಸುವ ಮೂಲಕ ಶ್ರೀಗಳು ಬೇಗ ಗುಣಮುಖವಾಗಲಿ ಎಂದು ಆಶಿಸಿದರು. ಆದರೆ, ಅದಾವುದು ನೆರವೇರದೇ ದುಃಖದಲ್ಲಿ ಮುಳುಗಿದರು.

ಸಂಕ್ಷಿಪ್ತ ಸುದ್ದಿ

ಬಿಲ್ ಬಾಕಿ ಇಲ್ಲ: ನೀರಾವರಿ ನಿಗಮ ಸ್ಪಷ್ಟನೆ

ತುಮಕೂರು: ಆತ್ಮಹತ್ಯೆ ಮಾಡಿಕೊಂಡಿರುವ ಗುತ್ತಿಗೆದಾರ ಟಿ.ಎನ್. ಪ್ರಸಾದ್‌ಗೆ ಯಾವುದೇ ಬಿಲ್ ಬಾಕಿ ಉಳಿಸಿಕೊಂಡಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕರು ಸ್ಪಷ್ಟಪಡಿಸಿದ್ದಾರೆ.

'ಹೇಮಾವತಿ ನಾಲಾ ವಿಭಾಗದಲ್ಲಿ ನಿರ್ವಹಿಸಿದ್ದ ಕಾಮಗಾರಿಗೆ ₹1 ಲಕ್ಷ ಬಿಲ್ ಬಾಕಿ ನೀಡಬೇಕಿದ್ದು, ಅದಕ್ಕಾಗಿ ಅವರು ಅಲೆದಾಡುತ್ತಿದ್ದರು' ಎಂದು ಮೃತರ ಕುಟುಂಬದವರು ಆರೋಪಿಸಿದ್ದರು. ಈ ಸಂಬಂಧ ಸ್ಪಷ್ಟನೆ ನೀಡಿರುವ ವ್ಯವಸ್ಥಾಪಕರು, ಹೇಮಾವತಿ ನಾಲಾ ವಿಭಾಗದಿಂದ ಪ್ರಸಾದ್ ಅವರ ಯಾವುದೇ ಬಿಲ್‌ಗಳನ್ನು ಬಾಕಿ ಉಳಿಸಿಕೊಂಡಿಲ್ಲ ಎಂದು ತಿಳಿಸಿದ್ದಾರೆ.

ಯಡಿಯೂರಪ್ಪಗೆ 'ಮಾಚಿದೇವಶ್ರೀ' ಪ್ರಶಸ್ತಿ

ಚಿತ್ರದುರ್ಗ: ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರನ್ನು 'ಮಾಚಿದೇವಶ್ರೀ' ಪ್ರಶಸ್ತಿಗೆ ಹಾಗೂ ಧಾರ್ಮಿಕ ದತ್ತಿ ಸಚಿವೆ ಶಶಿಕಲಾ ಜೊಲ್ಲೆ ಅವರನ್ನು 'ಮಾತೋಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಮಡಿವಾಳ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ ತಿಳಿಸಿದರು.

'ಮಾಚಿದೇವಶ್ರೀ ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಮಾತೋಶ್ರೀ ಪ್ರಶಸ್ತಿಯು ₹ 10,000 ನಗದು, ಫಲಕ ಒಳಗೊಂಡಿದೆ. ಚಿತ್ರದುರ್ಗ ಹೊರವಲಯದ ಮಠದ ಆವರಣದಲ್ಲಿ ಜ.5ರಂದು ಹಮ್ಮಿಕೊಂಡಿರುವ ಕಾಯಕ ಜನೋತ್ಸವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚರ್ಚ್ ಮೇಲೆ ದಾಳಿ: ಆರೋಪಿ ಬಂಧನ

ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿರುವ ಸೇಂಟ್ ಮೇರಿಸ್ ಚರ್ಚ್ ಮೇಲೆ ಡಿ.27ರಂದು ನಡೆದಿದ್ದ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸಲಾಗಿದೆ.

'ಅಲ್ಲಿ 2 ವರ್ಷಗಳ ಹಿಂದೆ ಕೆಲಸ ಮಾಡುತ್ತಿದ್ದ ವಿಶ್ವ ಬಿನ್ ಮಹದೇವು (24) ಎಂಬಾತ ಈ ಕೃತ್ಯ ಎಸಗಿದ್ದಾನೆ. ಮದ್ಯ ಸೇವಿಸಿ ಬಂದು, ಚರ್ಚ್‌ನ ಹುಂಡಿಯಲ್ಲಿದ್ದ ಹಣ ಕಳವು ಮಾಡುವ ಉದ್ದೇಶದಿಂದ ದಾಳಿ ನಡೆಸಿದ್ದಾನೆ. ಆಗ ಬಾಲಯೇಸು ಮೂರ್ತಿ ಬಿದ್ದು ಹಾನಿಯಾಗಿದೆ. ಘಟನೆಯ ಹಿಂದೆ ಯಾವುದೇ ಧಾರ್ಮಿಕ ಆಯಾಮಗಳಿಲ್ಲ' ಎಂದು ಎಸ್ಪಿ ಸೀಮಾ ಲಾಟ್ಕರ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಿ ವಿರುದ್ಧ ಅತಿಕ್ರಮ ಪ್ರವೇಶ, ಕಳವು ಪ್ರಕರಣ ದಾಖಲಿಸಲಾಗಿದೆ. ಮೂರು ತಂಡಗಳು ತನಿಖೆ ನಡೆಸಿದ್ದವು. ಕೃತ್ಯಕ್ಕೆ ಬಳಸಿದ್ದ ಕೈಗವಸು ಆಧಾರದ ಮೇಲೆ ಆರೋಪಿಯನ್ನು ಪತ್ತೆ ಹಚ್ಚಲಾಗಿದೆ' ಎಂದು ಮಾಹಿತಿ ನೀಡಿದರು.

10ರಂದು ನೇಪಾಳ ಪ್ರಧಾನಿ 'ಪ್ರಚಂಡ' ವಿಶ್ವಾಸಮತ ಯಾಚನೆ

ಕಠ್ಮಂಡು (ಪಿಟಿಐ): ನೇಪಾಳದ ನೂತನ ಪ್ರಧಾನಿ ಪುಷ್ಪಕಮಲ್ ದಹಲ್ ಪ್ರಚಂಡ ಅವರು ಜ.10ರಂದು ಸಂಸತ್ತಿನಲ್ಲಿ ವಿಶ್ವಾಸಮತ ಕೋರಲು ನಿರ್ಧರಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಸಿಪಿಎನ್-ಮಾವೊವಾದಿ ಕೇಂದ್ರದ ನಾಯಕ ಪ್ರಚಂಡ ಅವರು ಡಿ.26 ರಂದು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

'ಜ.10ರಂದು ಸಂಸತ್ತಿನ ಕಾರ್ಯ-ಸೂಚಿಯಲ್ಲಿ ವಿಶ್ವಾಸಮತದ ವಿಷಯ ಸೇರಿಸಲು ಪ್ರಧಾನಿ ಪತ್ರ ಕಳುಹಿಸಿದ್ದಾರೆ' ಎಂದು ಸಂಸತ್ ಸಚಿವಾಲಯದ ವಕ್ತಾರ ರೋಜನಾಥ್ ಪಾಂಡೆ ಹೇಳಿದ್ದಾರೆ.

ವಚನಾನಂದ ಸ್ವಾಮೀಜಿಗೆ ಪಿತೃ ವಿಯೋಗ



ಅಥಣಿ (ಬೆಳಗಾವಿ ಜಿಲ್ಲೆ): ವೀರಶೈವ ಪಂಚಮಸಾಲಿ ಸಮಾಜದ ಹರಿಹರ ಪೀಠದ ವಚನಾನಂದ ಸ್ವಾಮೀಜಿ ಅವರ ಪೂರ್ವಾಶ್ರಮದ ತಂದೆ ದುಂಡಪ್ಪ ಅದೃಶ್ಯಪ್ಪ ಗೋರಗೊಂಡ (80) ಸೋಮವಾರ ನಿಧನರಾದರು.

ತಾಲ್ಲೂಕಿನ ತಾಂವಶಿ ಗ್ರಾಮದವರಾದ ಅವರು ಅನಾರೋಗ್ಯದ ಕಾರಣ ಚಿಕಿತ್ಸೆಗಾಗಿ ಮಿರಜ್‌ನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ವಚನಾನಂದ ಶ್ರೀಗಳೂ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ತಾಂವಶಿಯಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಮಹದಾಯಿ: ಜಲ– ಜನ ಆಂದೋಲನ ಸಮಾವೇಶವನ್ನು ನಗಾರಿ ಬಾರಿಸುವ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಉದ್ಘಾಟಿಸಿದರು. ಮುಖಂಡರಾದ ಸಲೀಂ ಅಹ್ಮದ್, ಎಚ್‌.ಕೆ. ಪಾಟೀಲ, ರಣದೀಪ್‌ಸಿಂಗ್ ಸುರ್ಜೇವಾಲಾ, ಬಿ.ಕೆ. ಹರಿಪ್ರಸಾದ್, ಕೆ.ಎಚ್‌ ಮುನಿಯಪ್ಪ, ಸತೀಶ ಜಾರಕಿಹೊಳಿ, ಪ್ರಸಾದ ಅಬ್ಬಯ್ಯ, ಅನಿಲಕುಮಾರ ಪಾಟೀಲ, ಎ.ಎಂ.ಹಿಂಡಸಗೇರಿ ಇದ್ದರು (ಎಡಚಿತ್ರ) ಆಂದೋಲನ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್‌ನಿಂದ ಮಹದಾಯಿ: ಜಲ– ಜನ ಆಂದೋಲನ ಸಮಾವೇಶ

'ತರಾತುರಿಯಲ್ಲಿ ಅನುಮೋದನೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಮಹದಾಯಿ ಕುರಿತು ಗೆಜೆಟ್ ಹೊರಡಿಸಿ 2 ವರ್ಷ 10 ತಿಂಗಳು ಕಳೆದಿದ್ದರೂ ಸುಮ್ಮನೆ ಕುಳಿತಿದ್ದ ಬಿಜೆಪಿ, ನಾವು ಇವತ್ತು ಇಲ್ಲಿ ಹೋರಾಟ ಆರಂಭಿಸಲಿದ್ದೇವೆ ಎನ್ನುವುದು ಗೊತ್ತಾಗುತ್ತಿದ್ದಂತೆ ತರಾತುರಿಯಿಂದ ಡಿಪಿಆರ್‌ಗೆ (ವಿಸ್ತೃತ ಯೋಜನಾ ವರದಿ) ಅನುಮೋದನೆ ನೀಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ನೆಹರೂ ಮೈದಾನದಲ್ಲಿ ಸೋಮವಾರ ಕಾಂಗ್ರೆಸ್ ಆಯೋಜಿಸಿದ್ದ ಮಹದಾಯಿ: ಜಲ– ಜನ ಆಂದೋಲನ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

'ಅಧಿಕಾರಕ್ಕೆ ಬಂದರೆ 24 ಗಂಟೆಯಲ್ಲಿಯೇ ಮಹದಾಯಿ ಯೋಜನೆ ಅನುಷ್ಠಾನಗೊಳಿಸುತ್ತೇನೆಂದು ರಕ್ತದಲ್ಲಿ ಬರೆದುಕೊಡುವುದಾಗಿ ಬಿ.ಎಸ್. ಯಡಿಯೂರಪ್ಪ ಇದೇ ಮೈದಾನದಲ್ಲಿ ಹೇಳಿದ್ದರು. ಆದರೆ, ಇದುವರೆಗೆ ಅದು ಸಾಧ್ಯವಾಗಿಲ್ಲ. ಇದನ್ನು ಈ ಭಾಗದ ಜನರ ಮುಂದಿಡಬೇಕು. ಮಹದಾಯಿ ಯೋಜನೆಯನ್ನು ಕೈಗೆತ್ತಿಕೊಂಡು ಹೋರಾಟ ನಡೆಸಬೇಕು. ಹುಬ್ಬಳ್ಳಿ-ಯಲ್ಲಿ ಸಮಾವೇಶ ನಡೆಸಬೇಕೆಂದು 15 ದಿನಗಳ ಹಿಂದೆಯಷ್ಟೇ ನಾವು ದೆಹಲಿಯಲ್ಲಿ ತೀರ್ಮಾನ ಕೈಗೊಂಡಿದ್ದೆವು. ಈ ವಿಷಯ ಗೊತ್ತಾದ ಮೇಲೆಯೇ ಬಿಜೆಪಿಯವರು ಡಿಪಿಆರ್‌ಗೆ ಅನುಮೋದನೆ ನೀಡಿದ್ದಾರೆ' ಎಂದು ಹರಿಹಾಯ್ದರು.

'ಮಹದಾಯಿ ಜಲ ನ್ಯಾಯಮಂಡಳಿಯು 2018ರಲ್ಲಿ ತೀರ್ಪು ನೀಡಿತ್ತು, 2020ರಲ್ಲಿ ಗೆಜೆಟ್ ಹೊರಡಿಸಲಾಗಿತ್ತು. ಇಷ್ಟು ದಿನಗಳ ವರೆಗೆ ಏಕೆ ಸುಮ್ಮನಿದ್ರಿ, ನಿದ್ರೆ ಮಾಡುತ್ತಿದ್ದರಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ? ಈಗ ವಿಜಯೋತ್ಸವ ಆಚರಿಸಲು ನಾಚಿಕೆಯಾಗುವುದಿಲ್ಲವೇ' ಎಂದು ಟೀಕಿಸಿದರು.

'ಮಹದಾಯಿ ಅನುಷ್ಠಾನಗೊಳಿಸಲು ₹ 93 ಕೋಟಿ ವೆಚ್ಚವಾಗಬಹುದೆಂದು ಅಂದಾಜಿಸಲಾಗಿತ್ತು. ಯೋಜನೆ ವಿಳಂ-ಬವಾಗಿದ್ದರಿಂದ ಈಗ ಅದು ₹ 1,677 ಕೋಟಿಗೆ ತಲುಪಿದೆ. ಯೋಜನಾ ವೆಚ್ಚದಲ್ಲಿ ಆಗಿರುವ ಹೆಚ್ಚಳವನ್ನು ಯಾರು ಕೊಡುತ್ತಾರೆ? ಕೇಂದ್ರ ಸರ್ಕಾರ ಕೊಡುತ್ತದೆಯೇ? ರಾಜ್ಯ ಸರ್ಕಾರ ಎಲ್ಲಿಂದ ಇಷ್ಟೊಂದು ಹಣ ತರುತ್ತದೆ, ಇದು ಯಾರಪ್ಪನ ದುಡ್ಡು' ಎಂದು ಹರಿಹಾಯ್ದರು.

4 ಎಂಜಿನ್ ಸರ್ಕಾರದ ವಿರುದ್ಧ ಹೋರಾಟ: 'ರಾಜ್ಯದಲ್ಲಿ ಹಾಗೂ ಕೇಂದ್ರದಲ್ಲಿ ಮಾತ್ರ ಬಿಜೆಪಿ ಸರ್ಕಾರವಿಲ್ಲ. ಮಹಾರಾಷ್ಟ್ರ, ಗೋವಾದಲ್ಲೂ ಅವರದ್ದೇ ಸರ್ಕಾರವಿದೆ. ಮಹದಾಯಿ ಅನುಷ್ಠಾನಗೊಳಿಸಲು ನಾವು 4 ಎಂಜಿನ್ ಸರ್ಕಾರದ ವಿರುದ್ಧ ಹೋರಾಟ ನಡೆಸಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

'ಮಹದಾಯಿ ಹೋರಾಟದಲ್ಲಿ ಪಾಲ್ಗೊಂಡಿದ್ದ ರೈತ ಮುಖಂಡರು, ಚಿತ್ರನಟರು, ಕನ್ನಡ ಸಂಘಟನೆಗಳವರು, ಜನರು ಏಕೆ ನಿಮ್ಮ ವಿಜಯೋತ್ಸವದಲ್ಲಿ ಪಾಲ್ಗೊಳ್ಳಲಿಲ್ಲ. ಬಿಜೆಪಿಯವರು ಹೇಳುವುದೆಲ್ಲ ಸುಳ್ಳು ಎಂದು ಈಗ ಎಲ್ಲರಿಗೂ ಗೊತ್ತಾಗಿದೆ. ನಮಗೆ ಸುಳ್ಳು ಹೇಳುವ ಸರ್ಕಾರ ಬೇಡ' ಎಂದರು.

ಪಕ್ಷದ ಹಿರಿಯ ನಾಯಕರಾದ ಎಚ್‌.ಕೆ. ಪಾಟೀಲ, ರಣದೀಪ್‌ಸಿಂಗ್ ಸುರ್ಜೆವಾಲಾ, ಬಿ.ಕೆ. ಹರಿಪ್ರಸಾದ್, ಕೆ.ಎಚ್. ಮುನಿಯಪ್ಪ ಮಾತನಾಡಿದರು.

'ಬಿಜೆಪಿ ಸುಳ್ಳಿನ ವಿಶ್ವವಿದ್ಯಾಲಯ'

ಹುಬ್ಬಳ್ಳಿ ನಗರದ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಬಿಜೆಪಿ ಸುಳ್ಳಿನ ವಿಶ್ವವಿದ್ಯಾಲಯವಾಗಿದ್ದು, ಮಹದಾಯಿ ಹಾಗೂ ಮೀಸಲಾತಿ ವಿಷಯದಲ್ಲಿ ಸುಳ್ಳಿನ ಮೇಲೆ ಸುಳ್ಳು ಹೇಳುತ್ತ ಜನರ ದಿಕ್ಕು ತಪ್ಪಿಸುವುದೇ ಬಿಜೆಪಿ ಕೆಲಸವಾಗಿದೆ' ಎಂದು ಟೀಕಿಸಿದರು.

'ಮಹದಾಯಿ ವಿಷಯದಲ್ಲಿ ಬಿಜೆಪಿ ಹಿಂದಿನಿಂದಲೂ ಜನರ ದಿಕ್ಕು ತಪ್ಪಿಸುತ್ತ ಬಂದಿದೆ. ಗೋವಾ, ಕರ್ನಾಟಕ ಮತ್ತು ಕೇಂದ್ರದಲ್ಲಿ ಅವರದ್ದೇ ಸರ್ಕಾರವಿದ್ದರೂ ಯೋಜನೆ ಅನುಷ್ಠಾನ ಮಾಡಲು ಅವರಿಂದ ಸಾಧ್ಯವಾಗಿಲ್ಲ. ಆ ಕುರಿತು ನಾವು ಜನಾಂದೋಲನ ನಡೆ-ಸುತ್ತಿದ್ದೇವೆ ಎಂದಾಗ, ತರಾತುರಿಯಲ್ಲಿ ದಿನಾಂಕವಿಲ್ಲದ ಡಿಪಿಆರ್ ತೋರಿಸಿದ್ದಾರೆ' ಎಂದು ಕಿಡಿಕಾರಿದರು.

'ದರ್ಗಾ ತೆರವು ತಪ್ಪು'

'ಹುಬ್ಬಳ್ಳಿಯ ಬೈರಿದೇವರಕೊಪ್ಪದ ರಸ್ತೆ ಬಳಿ ಇದ್ದ ಹಜರತ್ ಸಯ್ಯದ್ ಮೊಹಮ್ಮದ್ ಶಾ ಖಾದ್ರಿ ದರ್ಗಾವನ್ನು ರಸ್ತೆ ವಿಸ್ತರಣೆ ನೆಪದಲ್ಲಿ ತೆರವುಗೊಳಿಸಿರುವುದು ತಪ್ಪು. ನಾನು ಮುಖ್ಯಮಂತ್ರಿಯಾಗಿದ್ದಾಗ ಕೆಲವರು ದರ್ಗಾ ಸ್ಥಳಾಂತರಗೊಳಿಸಲು ಕೇಳಿದ್ದರು. ನಾನು ಅದಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. ಆದರೆ, ಈಗ ದ್ವೇಷದ ರಾಜಕಾರಣಕ್ಕಾಗಿ ಒಡೆದು ಹಾಕಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ವರ್ಷದೊಳಗೆ ಪೂರ್ಣಗೊಳಿಸದಿದ್ದರೆ ನಾನು ಕಾರಜೋಳ ಅಲ್ಲ'

ಬೆಳಗಾವಿ: 'ಕಳಸಾ–ಬಂಡೂರಿ ನಾಲಾ ಯೋಜನೆ ಕಾಮಗಾರಿಯನ್ನು ಒಂದೇ ವರ್ಷದಲ್ಲಿ ಪೂರ್ಣಗೊಳಿಸದಿದ್ದರೆ ನನ್ನ ಹೆಸರು ಗೋವಿಂದ ಕಾರಜೋಳ ಅಲ್ಲ' ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

'ಒಂದು ತಿಂಗಳಲ್ಲಿ ಕಾಮಗಾರಿಗೆ ಚಾಲನೆ ನೀಡುತ್ತೇನೆ. ಏನೇ ಅಡ್ಡಿಗಳಿದ್ದರೂ ವರ್ಷ ಉರುಳುವುದರಲ್ಲಿ ಎಲ್ಲವನ್ನೂ ಮುಗಿಸುತ್ತೇನೆ' ಎಂದು ಅವರು ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದರು.

'2007ರ ಮಾ.23ರಂದು ಗೋವಾದಲ್ಲಿ ಸೋನಿಯಾ ಗಾಂಧಿ ಭಾಷಣ ಮಾಡಿ, ಕರ್ನಾಟಕಕ್ಕೆ ಒಂದು ಹನಿ ಮಹದಾಯಿ ನೀರನ್ನು ನೀಡುವುದಿಲ್ಲ ಎಂದಿದ್ದರು. ಅದಕ್ಕೆ ನಿಮ್ಮ ಉತ್ತರವೇನು' ಎಂದು ಎಚ್‌.ಕೆ.ಪಾಟೀಲ ಅವರಿಗೆ ಪ್ರಶ್ನೆ ಮಾಡಿದರು.

ಹೋರಾಟದ 'ಉದ್ದೇಶ' ಸ್ಪಷ್ಟಪಡಿಸಲಿ: ಜೋಶಿ ಆಗ್ರಹ (ಗದಗ ವರದಿ): 'ಗಾಂಧಿ ಹೆಸರು ಹೇಳಿಕೊಂಡು 55 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್‌ಗೆ ದೇಶದ ಯಾವುದೇ ಸಮಸ್ಯೆ ಬಗೆಹರಿಸಲು ಆಗಲಿಲ್ಲ. ದೇಶದ ಹಿತ ಕಡೆಗಣಿಸಿದ ಕಾಂಗ್ರೆಸ್ ಈಗ ಮಹದಾಯಿ ಹೋರಾಟ ಮಾಡುತ್ತಿದೆ. ಈಗ ಯಾವ ಉದ್ದೇಶ ಇಟ್ಟುಕೊಂಡು ಕಾಂಗ್ರೆಸ್ ಈ ಸಮಾವೇಶ ನಡೆಸುತ್ತಿದ್ದೆ ಎಂದು ಸ್ಪಷ್ಟಪಡಿಸಬೇಕು' ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆಗ್ರಹಿಸಿದರು.

ಕಾಂಗ್ರೆಸ್ ಕಾರ್ಯಕರ್ತ ಸೇರಿ ಇಬ್ಬರು ಸಾವು

ಹುಬ್ಬಳ್ಳಿ: ಇಲ್ಲಿನ ಜೆ.ಸಿ. ನಗರದ ಜೋಶಿ ಪೆಟ್ರೋಲ್ ಬಂಕ್ ಎದುರು ಸಾರಿಗೆ ಸಂಸ್ಥೆ ಬಸ್ ಹರಿದು ಕಾಂಗ್ರೆಸ್ ಕಾರ್ಯಕರ್ತ ಅಣ್ಣಿಗೇರಿ ರೈತ ನಿಂಗಪ್ಪ ಮನ್ನಾಪುರ (62) ಹಾಗೂ ಭಿಕ್ಷುಕರೊಬ್ಬರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಒಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅನುಮೋದನೆ ವಿರೋಧಿಸಿ ಕೇಂದ್ರಕ್ಕೆ ಗೋವಾ ನಿಯೋಗ

ಪಣಜಿ: ಮಹದಾಯಿ ನದಿಗೆ ಅಡ್ಡಲಾಗಿ ಎರಡು ಜಲಾಶಯ ನಿರ್ಮಿಸುವ ಕರ್ನಾಟಕದ ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಅನುಮೋದನೆ ನೀಡಿರುವುದನ್ನು ವಿರೋಧಿಸಿ ಕೇಂದ್ರಕ್ಕೆ ನಿಯೋಗ ಕರೆದೊಯ್ಯಲು ಗೋವಾ ಸರ್ಕಾರ ತೀರ್ಮಾನಿಸಿದೆ.

'ತಮ್ಮ ನೇತೃತ್ವದ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಿದೆ' ಎಂದು ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸೋಮವಾರ ತಿಳಿಸಿದರು.

ನದಿ ನೀರು ಹಂಚಿಕೆ ಕುರಿತು ಕರ್ನಾಟಕ– ಗೋವಾ ನಡುವೆ ಹಲವು ವರ್ಷಗಳಿಂದ ವಿವಾದವಿದೆ. ಎರಡು ಜಲಾಶಯ ನಿರ್ಮಿಸುವ ಡಿಪಿಆರ್‌ಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ ಎಂದು ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈಚೆಗೆ ಪ್ರಕಟಿಸಿದ್ದರು. ಹೀಗಾಗಿ, ಈ ವಿಷಯ ಚರ್ಚಿಸಲು ಗೋವಾದ ಮುಖ್ಯಮಂತ್ರಿ ಸೋಮವಾರ ವಿಶೇಷ ಸಂಪುಟ ಸಭೆ ಕರೆದಿದ್ದರು.

ಸುದ್ದಿ 2 ನಿಮಿಷ

ಬಸವರಾಜನ್ ಕಾರ್ಯದರ್ಶಿ

ಹೊಳಲ್ಕೆರೆ: ತಾಲ್ಲೂಕಿನ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ವಿಶ್ವಸ್ಥ ಸಮಿತಿಯ ಕಾರ್ಯದರ್ಶಿ-ಯನ್ನಾಗಿ ಚಿತ್ರದುರ್ಗದ ಮಾಜಿ ಶಾಸಕ ಎಸ್.ಕೆ.ಬಸವರಾಜನ್ ಅವರನ್ನು ಆಯ್ಕೆ ಮಾಡಲಾಗಿದೆ.

ಆಶ್ರಮದ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಸೋಮವಾರ ನಡೆದ ಟ್ರಸ್ಟಿಗಳ ಸಭೆಯಲ್ಲಿ ಕಾರ್ಯದರ್ಶಿಯಾಗಿ ಎಸ್.ಕೆ.ಬಸವರಾಜನ್, ಖಜಾಂಚಿಯಾಗಿ ಡಾ.ಜಿ.ಎನ್.ಮಲ್ಲಿಕಾರ್ಜುನಪ್ಪ ಅವರನ್ನು ಆಯ್ಕೆ ಮಾಡಲಾಯಿತು. ಆಶ್ರಮದ ಬ್ಯಾಂಕ್ ವ್ಯವಹಾರ, ವಿವಿಧ ಇಲಾಖೆಗಳ ಕಾರ್ಯಗಳು, ಹಣಕಾಸು ವ್ಯವಹಾರಗಳನ್ನು ನಿರ್ವಹಿಸಲು ಅನುಮೋದನೆ ನೀಡಲಾಯಿತು.

ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾದ ನಂತರ ಅವರನ್ನು ಆಶ್ರಮದ ವಿಶ್ವಸ್ಥ ಸಮಿತಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲಾಗಿತ್ತು. ಈಗ ಸಮಿತಿಗೆ ಎಸ್.ಕೆ. ಬಸವರಾಜನ್ ಅವರನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಿರುವುದು ಕುತೂಹಲ ಕೆರಳಿಸಿದೆ.

ಶಾಸಕರ ಸೇರ್ಪಡೆಗೆ ವಿರೋಧ: 'ಆಶ್ರಮದ ವ್ಯವಹಾರಗಳಲ್ಲಿ ರಾಜಕೀಯ ವ್ಯಕ್ತಿಗಳು ಭಾಗವಹಿಸಬಾರದು ಎಂದು ರಾಘವೇಂದ್ರ ಸ್ವಾಮೀಜಿ 1943ರಲ್ಲೇ ಆಶ್ರಮದ ಬೈಲಾದಲ್ಲಿ ಬರೆದಿದ್ದಾರೆ. ಆದ್ದರಿಂದ ಶಾಸಕ ಎಂ.ಚಂದ್ರಪ್ಪ ಅವರನ್ನು ಅನಾಥ ಸೇವಾಶ್ರಮದ ಟ್ರಸ್ಟಿಯಾಗಿ ತೆಗೆದುಕೊಳ್ಳಬಾರದು' ಎಂದು ಸಮಿತಿ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಶಾಸಕ ಎಂ.ಚಂದ್ರಪ್ಪ, 'ನಾನು ಟ್ರಸ್ಟಿಯಾಗಿ ಇರುವುದು ಬೇಡ. ಗೌರವ ಸದಸ್ಯನಾಗಿ ಆಶ್ರಮದ ಅಭಿವೃದ್ಧಿಗೆ ನೆರವಾಗುತ್ತೇನೆ' ಎಂದು ಸಭೆಯಿಂದ ನಿರ್ಗಮಿಸಿದರು.

ಶಿರಾಡಿ ಘಾಟಿ: ಚತುಷ್ಪಥ ರಸ್ತೆ ₹ 1,976 ಕೋಟಿ ಕಾಮಗಾರಿಗೆ ಟೆಂಡರ್

ಮಂಗಳೂರು: 'ಶಿರಾಡಿ ಘಾಟಿಯಲ್ಲಿ ಮಾರನಹಳ್ಳಿಯಿಂದ ಅಡ್ಡಹೊಳೆ ನಡುವೆ ರಾಷ್ಟ್ರೀಯ ಹೆದ್ದಾರಿ 75 ಅನ್ನು ಚತುಷ್ಪಥವನ್ನಾಗಿ ಅಭಿವೃದ್ಧಿಪಡಿಸುವ ₹1,976 ಕೋಟಿ ಮೊತ್ತದ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ' ಎಂದು ಕೇಂದ್ರ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಸಂಸದ ನಳಿನ್ ಕುಮಾರ್ ಕಟೀಲ್ ಅವರಿಗೆ ಪತ್ರ ಬರೆದಿರುವ ಅವರು, 'ಈ ಚತುಷ್ಪಥ ಕಾಮಗಾರಿಯ ಜೊತೆಗೆ, ಮಂಗಳೂರು-ಬೆಂಗಳೂರು ನಡುವಿನ ಸಂಚಾರಕ್ಕೆ ತಗಲುವ ಪ್ರಯಾಣ ವೆಚ್ಚವನ್ನು ಕಡಿತಗೊಳಿಸುವ ಸಲುವಾಗಿ ಶಿರಾಡಿ ಘಾಟಿಯಲ್ಲಿ 23 ಕಿ.ಮೀ ಉದ್ದದ ಸುರಂಗ ಮಾರ್ಗ ನಿರ್ಮಿಸುವ ಪ್ರಸ್ತಾವವೂ ಇದೆ. ₹ 15 ಸಾವಿರ ಕೋಟಿ ವೆಚ್ಚದ ಈ ಕಾಮಗಾರಿಗೆ 2023ರ ಏಪ್ರಿಲ್ ಒಳಗೆ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ಅಂತಿಮಗೊಳಿಸಿ, ಮೇ ತಿಂಗಳಿನಲ್ಲೇ ಟೆಂಡರ್ ಆಹ್ವಾನಿಸಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

'ಸಕಲೇಶಪುರದಿಂದ ಮಾರನಹಳ್ಳಿಯವರೆಗೆ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಹೆದ್ದಾರಿಯನ್ನು ತಕ್ಷಣವೇ ದುರಸ್ತಿ ಪಡಿಸಲಾಗುತ್ತದೆ. ದುರಸ್ತಿ ಕಾಮಗಾರಿಗೆ ₹12.20 ಕೋಟಿ ಅಂದಾಜು ವೆಚ್ಚವಾಗಲಿದೆ. ಇದರ ಟೆಂಡರ್‌ಗಳ ಮೌಲ್ಯಮಾಪನ ಮಾಡಲಾಗುತ್ತಿದೆ. ಗುಂಡಿ ಮುಚ್ಚುವ ಕಾಮಗಾರಿಯನ್ನು ಈ ಗುತ್ತಿಗೆದಾರರೇ ನಿರ್ವಹಿಸಲಿದ್ದಾರೆ' ಎಂದು ಗಡ್ಕರಿ ಅವರು 2022ರ ಡಿ.20ರಂದು ತಮಗೆ ಬರೆದ ಪತ್ರವನ್ನು ನಳಿನ್ ಅವರು ಸೋಮವಾರ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ.

'ಅಧಿಕಾರಕ್ಕೆ ಬಂದ 2 ವರ್ಷದಲ್ಲಿ ಪೂರ್ಣ'

ಹುಬ್ಬಳ್ಳಿ: 'ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡೇ ವರ್ಷದಲ್ಲಿ ಕಳಸಾ ಬಂಡೂರಿ ನಾಲಾ ಜೋಡಣೆ ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ಇದಕ್ಕಾಗಿ ₹2,000 ಕೋಟಿಯಾಗಲೀ, ₹ 3,000 ಕೋಟಿಯಾಗಲಿ ಖರ್ಚು ಮಾಡಿ ಕಾಮಗಾರಿ ಪೂರ್ಣಗೊಳಿಸುತ್ತೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಘೋಷಿಸಿದರು.

ಇಲ್ಲಿನ ನಡೆದ ಮಹದಾಯಿ: ಜಲ– ಜನ ಆಂದೋಲನ ಸಮಾವೇಶದಲ್ಲಿ ಅವರು ಮಾತನಾಡಿದರು. 'ಮಹದಾಯಿ ಜೊತೆ ಕೃಷ್ಣಾ, ತುಂಗಾ, ಮೇಕೆದಾಟು, ಎತ್ತಿನ ಹೊಳೆ ಸೇರಿದಂತೆ ಎಲ್ಲ ಯೋಜನೆಗಳನ್ನು ಸಂಪೂರ್ಣ ಅನುಷ್ಠಾನಗೊಳಿಸುತ್ತೇವೆ. ನುಡಿದಂತೆ ನಡೆಯದಿದ್ದರೆ ಮರುಕ್ಷಣವೇ ರಾಜಕೀಯದಲ್ಲಿ ಇರಲ್ಲ' ಎಂದರು.

ತನಿಖೆಗೆ ಸಹಕಾರ: ಲಿಂಬಾವಳಿ

ಬೆಂಗಳೂರು: 'ಉದ್ಯಮಿ ಪ್ರದೀಪ್ ಆತ್ಮಹತ್ಯೆ ಪ್ರಕರಣದ ತನಿಖೆಗೆ ಎಲ್ಲ ರೀತಿಯಲ್ಲೂ ಸಹಕಾರ ನೀಡುತ್ತೇನೆ' ಎಂದು ಶಾಸಕ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರದೀಪ್ ನಮ್ಮ ಕಾರ್ಯಕರ್ತ. 2009ರ ಲೋಕಸಭಾ ಚುನಾವಣೆಯಲ್ಲಿ ಸಾಮಾಜಿಕ ಜಾಲತಾಣದ ಗುತ್ತಿಗೆ ಪಡೆದು ಕೆಲಸ ಮಾಡಿದ್ದರು. ಬಳಿಕ ಪಕ್ಷ ಸೇರಿ ವಾರ್ಡ್ ಮಟ್ಟದಲ್ಲೂ ಕೆಲಸ ಮಾಡಿದ್ದರು. ಅವರ ಸಾವು ಆಘಾತವುಂಟು ಮಾಡಿದೆ' ಎಂದು ಹೇಳಿದರು.

'ಕಳೆದ ಜುಲೈನಲ್ಲಿ ನನ್ನ ಕಚೇರಿಯಲ್ಲಿ ಜನತಾ ದರ್ಶನಕ್ಕೆ ಬಂದಿದ್ದರು. ಕೆಲ ಕಂಪನಿಗಳಲ್ಲಿ ಹಣ ಹೂಡಿದ್ದು, ಹಿಂದಕ್ಕೆ ಪಡೆಯಲು ನೆರವು ಕೋರಿದ್ದರು. ಅವರಿಗೆ ನೆರವಾಗಲು ಆ ಕಂಪ-ನಿಗಳವರಿಗೆ ದೂರವಾಣಿ ಕರೆ ಮಾಡಿ ಹಣ ವಾಪಸಿಗೆ ತಿಳಿಸಿದ್ದೆ' ಎಂದರು.

'ಹಣ ಹಿಂದಿರುಗಿಸದಿದ್ದಾಗ 15 ದಿನದ ಬಳಿಕ ಮತ್ತೆ ಕರೆ ಮಾಡಿ ಖಾರವಾಗಿಯೇ ಹಣ ಹಿಂದಕ್ಕೆ ನೀಡಲು ಸೂಚಿಸಿದ್ದೆ. ಕೆಲ ದಿನಗಳ ಬಳಿಕ ಪ್ರದೀಪ್ ಸಿಕ್ಕಾಗ, ಸಮಸ್ಯೆ ಬಗೆಹರಿದಿದೆ ಎಂದಿದ್ದರು. ಆದರೆ, ಡೆತ್ ನೋಟ್‌ನಲ್ಲಿ ಅರವಿಂದ ಲಿಂಬಾವಳಿ ಹೇಳಿದ ನಂತರ ಹಣ ನೀಡಲು ಒಪ್ಪಿದ್ದಾರೆ ಎಂದು ಬರೆದಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆ ನಡೆಯಬೇಕು' ಎಂದು ಒತ್ತಾಯಿಸಿದರು.

ಕಾನೂನು ಪ್ರಕಾರ ತನಿಖೆ: ಬೊಮ್ಮಾಯಿ

ಈ ಪ್ರಕರಣದ ಸಂಬಂಧ ಶಾಸಕ ಅರವಿಂದ ಲಿಂಬಾವಳಿ ವಿರುದ್ಧ ಕಾನೂನಿನ ಪ್ರಕಾರ ತನಿಖೆ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಮೃತರ ಪತ್ನಿಯ ದೂರಿನ ಅನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರ ಮಧ್ಯ ಪ್ರವೇಶಿ-ಸುವುದಿಲ್ಲ ಎಂದರು.

ಮೀಸಲಾತಿ: ಮತ್ತೆ 32 ವರದಿ

ಒಂದನೇ ಪುಟದಿಂದ...

'ಮೀಸಲಾತಿ ಸೌಲಭ್ಯಗಳಿಂದ ವಂಚಿತವಾದ ಸಣ್ಣಪುಟ್ಟ ಸಮುದಾಯಗಳು ಸಲ್ಲಿಸಿದ ಅಹವಾಲುಗಳನ್ನು ಆಲಿಸಿ, ಆ ಸಮುದಾಯಗಳು ನೆಲೆಸಿರುವ ಜಾಗಗಳಿಗೆ ತೆರಳಿ ಸಾರ್ವಜನಿಕ-ವಾಗಿ ವಿಚಾರಣೆಯ ಮೂಲಕ ಸಾಮಾಜಿಕ, ಶೈಕ್ಷಣಿಕ ಸ್ಥಿತಿ, ವೃತ್ತಿ, ಜೀವನಶೈಲಿಯ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಲಾಗಿದೆ. ಅವರ ಬದುಕಿನ ಸ್ಥಿತಿಗತಿಯನ್ನು ಆಧರಿಸಿ, ಹಿಂದುಳಿದ ವರ್ಗಗಳ ಪ್ರವರ್ಗಕ್ಕೆ ಸೇರಿಸಬಹುದೆಂಬ ಬಗ್ಗೆ ಆಧಾರಗಳ ಸಹಿತ ಶಿಫಾರಸನ್ನು ಸಲ್ಲಿಸಲಾಗುತ್ತದೆ. ಇಂತಹ ಜಾತಿಗಳನ್ನು ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಸಬೇಕೇ, ಬೇಡವೇ ಎಂದು ಸರ್ಕಾರ ತೀರ್ಮಾನಿಸಲಿದೆ. ಶಿಫಾರಸನ್ನು ತಿರಸ್ಕರಿಸಲೂಬಹುದು' ಎಂದು ಮೂಲಗಳು ತಿಳಿಸಿವೆ.

'ಸದ್ಯ, ರಾಜ್ಯದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಯಲ್ಲಿ ಬ್ರಾಹ್ಮಣ, ಜೈನ, ಆರ್ಯವೈಶ್ಯ, ನಗರ್ತ, ಮೊದಲಿಯಾರ್ ಜಾತಿಗಳು ಮಾತ್ರ ಇವೆ ಎಂದೇ ಪರಿಗಣಿಸಲಾಗಿದೆ. ಆದರೆ, ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜಾತಿ ಪಟ್ಟಿಗೆ ಸೇರದ ಎಲ್ಲ ಜಾತಿಗಳು, ಇಡಬ್ಲ್ಯುಎಸ್ ಪಟ್ಟಿಗೆ ಸೇರುವ ಅವಕಾಶ ಇದೆ. ಹೀಗಾಗಿ, ಆಯೋಗ ಸಲ್ಲಿಸಿದ ವರದಿಗಳ ಆಧಾರದಲ್ಲಿ ಸರ್ಕಾರ ತೆಗೆದುಕೊಳ್ಳಬಹುದಾದ ತೀರ್ಮಾನ ಮತ್ತು ಈಗಿರುವ ಪ್ರವರ್ಗಗಳ ಮರುವಿಂಗಡಣೆಯ ಬಳಿಕ ಇಡಬ್ಲ್ಯುಎಸ್ ಪಟ್ಟಿಗೆ ಇನ್ನು 30ಕ್ಕೂ ಹೆಚ್ಚು ಜಾತಿಗಳು ಸೇರುವ ಸಾಧ್ಯತೆ ಇದೆ' ಎಂದೂ ಮೂಲಗಳು ಹೇಳಿವೆ.

ವೈಕುಂಠ ಏಕಾದಶಿ

ವೈಕುಂಠ ಏಕಾದಶಿ ಅಂಗವಾಗಿ ಮಂಗಳೂರಿನ ರಥಬೀದಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರ ವಿಶೇಷ ದೀಪಾಲಂಕಾರ ಮಾಡಲಾಗಿತ್ತು. ದಿನಪೂರ್ತಿ ದೇವಳಕ್ಕೆ ಭೇಟಿ ನೀಡಿದ ಭಕ್ತರು ದೇವರ ದರ್ಶನ ಪಡೆದರು

ವನ್ಯಜೀವಿ- ಮಾನವ ಸಂಘರ್ಷ: ಅರಣ್ಯಾಧಿಕಾರಿಗಳ ಮೇಲೆ ಕೆಂಗಣ್ಣು

9 ಹುದ್ದೆಗಳು ಬೆಂಗಳೂರಿನಿಂದ ಸ್ಥಳಾಂತರ

• ವೆಂಕಟೇಶ್ ಜಿ.ಎಚ್

ಶಿವಮೊಗ್ಗ: ರಾಜ್ಯದಾದ್ಯಂತ ವನ್ಯಜೀವಿ–ಮಾನವ ಸಂಘರ್ಷ ಪ್ರಕರಣ ಹೆಚ್ಚುತ್ತಿರುವುದರಿಂದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಬೆಂಗಳೂರಿನ ಕಚೇರಿ ಬಿಟ್ಟು ಕಾಡಿಗೆ ಭೇಟಿ ನೀಡುತ್ತಿಲ್ಲ ಎಂಬ ಕಾರಣಕ್ಕೆ 9 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಹಾಗೂ ಹೆಚ್ಚುವರಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಹುದ್ದೆಗಳನ್ನು ರಾಜ್ಯದ ವಿವಿಧೆಡೆಗೆ ವರ್ಗಾಯಿಸಲಾಗಿದೆ.

ಜನವಸತಿ ಪ್ರದೇಶಕ್ಕೆ ನುಗ್ಗಿದ ಹಿನ್ನೆಲೆಯಲ್ಲಿ ಕಳೆದ 10 ದಿನಗಳಲ್ಲಿ ರಾಜ್ಯದಲ್ಲಿ ಎಂಟು ಆನೆಗಳನ್ನು ಸೆರೆ ಹಿಡಿಯಲಾಗಿದೆ. ಚಿರತೆ ದಾಳಿಯಿಂದ ಕೆಲವೆಡೆ ಜೀವಗಳು ಬಲಿಯಾಗಿವೆ. ಆನೆ ಹಿಂಡಿನಿಂದ ಬೆಳೆಹಾನಿ ಆಗುತ್ತಿರುವ ಕುರಿತು ಮುಖ್ಯಮಂತ್ರಿ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ವನ್ಯಜೀವಿ ಮಂಡಳಿ ಸಭೆಯಲ್ಲಿ ಚರ್ಚಿಸಲಾಗಿತ್ತು.

ಹಿರಿಯ ಅರಣ್ಯಾಧಿಕಾರಿಗಳ ಕಾರ್ಯವೈಖರಿ ಬಗ್ಗೆ ಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಚೇರಿ ಬಿಟ್ಟು ಕಾಡಿಗೆ ತೆರಳುವಂತೆ ಸೂಚಿಸಿದ್ದರು. ಸಭೆಯ ಬೆನ್ನಲ್ಲೇ ಹುದ್ದೆಗಳನ್ನು ಬೆಂಗಳೂರಿನಿಂದ ಹೊರಗಡೆಗೆ ಸ್ಥಳಾಂತರಿಸುವ ನಿರ್ಧಾರಕ್ಕೆ ಸರ್ಕಾರ ಬಂದಿದೆ.

ಅದರಲ್ಲೂ ಪಿಸಿಸಿಎಫ್ ಹಾಗೂ ಎಪಿಸಿಸಿಎಫ್ ಹುದ್ದೆಗಳನ್ನು ಕಚೇರಿ ಮತ್ತು ಸಿಬ್ಬಂದಿ ಸಮೇತ ಶಿವಮೊಗ್ಗ, ಚಿತ್ರದುರ್ಗ, ಹಾಸನ, ಮೈಸೂರು, ಮಡಿಕೇರಿ, ಧಾರವಾಡ ಸೇರಿ ರಾಜ್ಯದ ವಿವಿಧ ಭಾಗಗಳಿಗೆ ಸ್ಥಳಾಂತರಗೊಳಿಸ-ಲಾಗಿದೆ. ಆಡಳಿತಾತ್ಮಕ ಕಾರಣಗಳಿಂದ ಈ ಹುದ್ದೆಗಳನ್ನು ವರ್ಗಾಯಿಸಿ ಅರಣ್ಯ, ಜೀವಿಸ್ಥಿತಿ ಮತ್ತು ಪರಿಸರ ಇಲಾಖೆಯ ಜಂಟಿ ಕಾರ್ಯದರ್ಶಿ ಆರ್. ಇಂದ್ರೇಶ್ ಸೋಮವಾರ ಆದೇಶ ಹೊರಡಿಸಿದ್ದಾರೆ. ಈ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಪಿಸಿಸಿಎಫ್ ಹಾಗೂ ಎಪಿಸಿಸಿಎಫ್ ಹುದ್ದೆಗಳು ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಕೇಡರ್‌ನವಾಗಿವೆ. ಅಧಿಕಾರಿ, ಸಿಬ್ಬಂದಿ ಸಹಿತ ಕಚೇರಿಗಳನ್ನು ಸ್ಥಳಾಂತರಿಸಿರುವುದರಿಂದ ಅವರಿಗೆ ಹುದ್ದೆಗೆ ತಕ್ಕಂತೆ ಕಚೇರಿ, ವಸತಿ ಗೃಹ, ಓಡಾಟಕ್ಕೆ ವಾಹನ ವ್ಯವಸ್ಥೆ ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂಬ ಬೇಡಿಕೆ ಅಧಿಕಾರಿಗಳ ವಲಯದಿಂದ ಕೇಳಿಬಂದಿದೆ' ಎಂದು ಮೂಲಗಳು ತಿಳಿಸಿವೆ.

'ಐಎಎಸ್ ಹಾಗೂ ಐಪಿಎಸ್‌ನ ಶೇ 50ರಷ್ಟು ಅಧಿಕಾರಿಗಳು ಬೆಂಗಳೂರಿನಲ್ಲಿಯೇ ನೆಲೆ ಕಂಡುಕೊಂಡಿದ್ದಾರೆ. ಆಡಳಿತಾತ್ಮಕ ಕಾರಣದಿಂದ ಅವರನ್ನು ಹೊರಗಿಟ್ಟು, ನಮ್ಮ ಮೇಲೆ ಮಾತ್ರ ಏಕೆ ಸರ್ಕಾರಕ್ಕೆ ಕೆಂಗಣ್ಣು' ಎಂಬುದು ಎಪಿಸಿಸಿಎಫ್ ದರ್ಜೆಯ ಅಧಿಕಾರಿಯೊಬ್ಬರ ಪ್ರಶ್ನೆಯಾಗಿದೆ.

ಶಿವಮೊಗ್ಗಕ್ಕೆ ಅರಣ್ಯ ಭೂ ದಾಖಲೆಗಳ ಕಚೇರಿ

ಅರಣ್ಯ ಹಾಗೂ ಕಂದಾಯ ಭೂಮಿಯ ವ್ಯಾಜ್ಯಗಳು, ಒತ್ತುವರಿಗೆ ಸಂಬಂಧಿಸಿದ ಹೆಚ್ಚಿನ ಸಂಗತಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಇವೆ. ಹೀಗಾಗಿ ಎಪಿಸಿಸಿಎಫ್ ನೇತೃತ್ವದ ಅರಣ್ಯ ಭೂ ದಾಖಲೆಗಳ ಕಚೇರಿ ಶಿವಮೊಗ್ಗಕ್ಕೆ ಸ್ಥಳಾಂತರಗೊಂಡಿದೆ. ಜಿಲ್ಲೆಯ ಜನ ದಾಖಲೆಗಳನ್ನು ಅರಸಿ ಬೆಂಗಳೂರಿಗೆ ಹೋಗುವುದು ತಪ್ಪಲಿದೆ. ಆನೆ–ಮಾನವ ಸಂಘರ್ಷ ಹೆಚ್ಚಾಗಿರುವುದರಿಂದ ಆನೆ ಯೋಜನೆ ಕಚೇರಿ ಹಾಸನಕ್ಕೆ, ಹುಲಿ ಯೋಜನೆ ಕಚೇರಿಗಳು ಮೈಸೂರಿಗೆ ವರ್ಗಾವಣೆ ಆಗಿವೆ ಎಂದು ಅರಣ್ಯಾಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಯಾವ ಕಚೇರಿಗಳು ಎಲ್ಲಿಗೆ?

- ಎಪಿಸಿಸಿಎಫ್– ಅರಣ್ಯ ಭೂ ದಾಖಲೆಗಳು– ಶಿವಮೊಗ್ಗ
- ಎಪಿಸಿಸಿಎಫ್– ಅರಣ್ಯ ಕಾನೂನು ಕೋಶ– ಚಿತ್ರದುರ್ಗ
- ಎಪಿಸಿಸಿಎಫ್ – ಆನೆ ಯೋಜನೆ– ಹಾಸನ
- ಎಪಿಸಿಸಿಎಫ್ – ಅರಣ್ಯ ಮೌಲ್ಯಮಾಪನ– ಮೈಸೂರು
- ಎಪಿಸಿಸಿಎಫ್– ಕಾಂಪಾ ಕಚೇರಿ – ಬಳ್ಳಾರಿ
- ಎಪಿಸಿಸಿಎಫ್– ರಾಷ್ಟ್ರೀಯ ಅರಣ್ಯ ಕ್ರಿಯಾ ಯೋಜನೆ ಕಾರ್ಯಕ್ರಮ ಹಾಗೂ ಬಿದಿರು ಯೋಜನೆ– ಧಾರವಾಡ
- ಎಪಿಸಿಸಿಎಫ್ – ಸಾಮಾಜಿಕ ಅರಣ್ಯ ಹಾಗೂ ಯೋಜನೆಗಳು– ಧಾರವಾಡ
- ಪಿಸಿಸಿಎಫ್ – ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ– ಮಡಿಕೇರಿ
- ಪಿಸಿಸಿಎಫ್ – ಕರ್ನಾಟಕ ಅರಣ್ಯ ಕೈಗಾರಿಕಾ ಅಭಿವೃದ್ಧಿ ನಿಗಮ– ಹುಬ್ಬಳ್ಳಿ

ನೋಟು ರದ್ದತಿ ಸಿಂಧುತ್ವ ಎತ್ತಿ ಹಿಡಿದ 'ಸುಪ್ರೀಂ'

ಒಂದನೇ ಪುಟದಿಂದ...

ಜತೆಗೆ, ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತೀರ್ಪು ನೀಡುವಾಗ ನ್ಯಾಯಾಲಯಗಳು ಹೆಚ್ಚು ಎಚ್ಚರದಿಂದ ಇರಬೇಕು. ಅದಕ್ಕೆ ಸಾಕಷ್ಟು ಪ್ರಾಯೋಗಿಕ ಜ್ಞಾನದ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಿದೆ.

ಈ ಅಧಿಸೂಚನೆಯಿಂದ ಸಾಕಷ್ಟು ಜನರಿಗೆ ಅಡಚಣೆಯಾಗಿದೆ ಎಂಬ ವಾದವನ್ನು ತಿರಸ್ಕರಿಸಿದ ನ್ಯಾಯಪೀಠ, ದೊಡ್ಡ ಮಟ್ಟದ ಹಿತಾಸಕ್ತಿಯನ್ನು ಪರಿಗಣಿಸಿದಾಗ ವೈಯಕ್ತಿಕ ಹಿತಾಸಕ್ತಿ ನಗಣ್ಯವಾಗುತ್ತದೆ ಎಂದು ವಿಶ್ಲೇಷಿಸಿದೆ.

ಈ ನೀತಿಯಿಂದ ಸಂಕಷ್ಟಕ್ಕೆ ಒಳಗಾಗಿರುವವರಿಗೆ ನೆರವಾಗಲು ಒಂದು ಯೋಜನೆ ರೂಪಿಸಬೇಕು ಹಾಗೂ ನೈಜ ಕಾರಣವುಳ್ಳ ಪ್ರಜೆಗಳಿಗೆ ಈಗಲೂ ನೋಟುಗಳನ್ನು ವಿನಿಮಯ ಮಾಡುವ ಅವಕಾಶ ಇರುವಂತಹ ವೇದಿಕೆ ಕಲ್ಪಿಸಬೇಕು ಎಂಬ ಬೇಡಿಕೆಯನ್ನು ಕೂಡ ತಿರಸ್ಕರಿಸಿರುವ ನ್ಯಾಯಪೀಠ, ಸೂಕ್ತ ಪರಿಣತಿ ಇಲ್ಲದೇ ಆರ್ಥಿಕತೆ ಹಾಗೂ ಹಣಕಾಸಿನ ವಿಷಯಗಳಲ್ಲಿ ಇಂತಹ ಯೋಜನೆಗಳನ್ನು ರೂಪಿಸು ವುದು ಸೂಕ್ತವಲ್ಲ. ಇದು ತಜ್ಞರಿಗೆ ಮೀಸಲಿರುವ ವಲಯಗಳನ್ನು ಒತ್ತುವರಿ ಮಾಡಿದಂತೆ ಆಗುತ್ತದೆ ಎಂದು ಹೇಳಿದೆ.

ಒಂದೊಮ್ಮೆ ಕೇಂದ್ರ ಸರ್ಕಾರಕ್ಕೆ ಅಂತಹ ಲಾಭಗಳನ್ನು ವಿಸ್ತರಿಸಲು ಕಾರಣಗಳು ಸೂಕ್ತವೆನಿಸಿದಲ್ಲಿ ಅದು ಅದರ ವಿವೇಚನೆಗೆ ಬಿಟ್ಟ ವಿಚಾರ. ನಮ್ಮ ಅಭಿಪ್ರಾಯದಲ್ಲಿ ಅದನ್ನು ನ್ಯಾಯಾಂಗದ ಆದೇಶದ ಅನುಸಾರ ಮಾಡಲಾಗದು. ಕೇಂದ್ರ ಸರ್ಕಾರ ನಿರ್ದಿ-ಷ್ಟಪಡಿಸಿದ ಅವಧಿಯ ನಂತರ ಅಮಾನ್ಯೀಕರಣಗೊಂಡ ನೋಟುಗಳನ್ನು ಸ್ವೀಕರಿಸಲು ಆರ್‌ಬಿಐಗೆ ಸ್ವತಂತ್ರ ಅಧಿಕಾರ ಇಲ್ಲ ಎಂದು ಸ್ಪಷ್ಟಪಡಿಸಿದೆ.

'ರಾಹುಲ್ ಕ್ಷಮೆಯಾಚಿಸುತ್ತಾರೆಯೇ'

ಸುಪ್ರೀಂ ಕೋರ್ಟ್‌ನ ತೀರ್ಪನ್ನು ಐತಿಹಾಸಿಕ ಎಂದು ಬಣ್ಣಿಸಿರುವ ಬಿಜೆಪಿ, ನೋಟು ರದ್ದತಿ ಬಗ್ಗೆ ಅಪಪ್ರಚಾರ ಮಾಡಿದ್ದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕ್ಷಮೆಯಾಚಿಸುತ್ತಾರೆಯೇ ಎಂದು ಪ್ರಶ್ನಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಮುಖಂಡ ರವಿಶಂಕರ ಪ್ರಸಾದ್, 'ನೋಟು ರದ್ದತಿ ತೀರ್ಮಾನದಿಂದ ಭಯೋತ್ಪಾದನಾ ಚಟುವಟಿಕೆಗೆ ದೊಡ್ಡ ಹೊಡೆತ ನೀಡಿದೆ ಎಂಬುದು ಸಾಬೀತಾಗಿದೆ. ಇದು ಆದಾಯ ತೆರಿಗೆಯನ್ನು ಹೆಚ್ಚಿಸಿತು ಹಾಗೂ ಆರ್ಥಿಕತೆಯನ್ನು ಶುದ್ಧೀಕರಿಸಿತು. ನೋಟು ರದ್ದತಿ ಬಗ್ಗೆ ರಾಹುಲ್ ಗಾಂಧಿ ವಿದೇಶದಲ್ಲೂ ಮಾತನಾಡಿದ್ದರು' ಎಂದರು.

'ಇದೊಂದು ರಾಷ್ಟ್ರೀಯ ಹಿತಾಸಕ್ತಿಯ ಐತಿಹಾಸಿಕ ತೀರ್ಮಾನ. ಈ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿದೆ. ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಬಹುಮತದ ತೀರ್ಪನ್ನು ನಿರ್ಲಕ್ಷಿಸಿ ವೃಥಾ ಹೇಳಿಕೆಗಳನ್ನು ನೀಡುತ್ತಿದ್ದಾರೆ' ಎಂದು ಟೀಕಿಸಿದರು.

'ಪ್ರಧಾನಿ ಕ್ಷಮೆಯಾಚಿಸಲಿ'

'ಸುಪ್ರೀಂ ಕೋರ್ಟ್ ಸಾಂವಿಧಾನಿಕ ಪೀಠವು ನೋಟು ರದ್ದತಿಯ ಕಾನೂನುಬದ್ಧತೆ ಬಗ್ಗೆಯಷ್ಟೇ ಹೇಳಿದೆ. ಅದರ ಪರಿಣಾಮಗಳ ಬಗ್ಗೆ ಅಲ್ಲ' ಎಂದು ಕಾಂಗ್ರೆಸ್ ಹೇಳಿದೆ.

ನೋಟು ರದ್ದತಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ ಎಂದು ಹೇಳುವುದು ತಪ್ಪು ದಾರಿಗೆಳೆಯುವ ಪ್ರಯತ್ನ ಎಂದೂ ಕಾಂಗ್ರೆಸ್ ಹೇಳಿದೆ. ನೋಟು ರದ್ದತಿಯ ಉದ್ದೇಶಗಳನ್ನು ಈಡೇರಿಸಲಾಗಿದೆಯೇ ಎಂಬುದರ ಬಗ್ಗೆ ತೀರ್ಪು ಏನನ್ನೂ ಹೇಳುವುದಿಲ್ಲ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ತಿಳಿಸಿದರು.

'ಮೋದಿ ಅವರ ತುಘಲಕ್ ನಿರ್ಧಾರದಿಂದ ಲಕ್ಷಾಂತರ ಸಣ್ಣ ಉದ್ಯಮಗಳು ನಾಶವಾದವು. ಜನರ ಮೇಲೆ ಕೆಟ್ಟ ಪರಿಣಾಮ ಬೀರಿತು. ಇದಕ್ಕಾಗಿ ಅವರು ಕ್ಷಮೆಯಾಚಿಸಬೇಕು' ಎಂದು ಒತ್ತಾಯಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್ ಅಭಿಮತ

‘ಮೀಸಲಾತಿ: ಸ್ಪಷ್ಟ ವೈಜ್ಞಾನಿಕ ನೀತಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೀಸಲಾತಿ ಕುರಿತು ವೈಜ್ಞಾನಿಕವಾದ ಸ್ಪಷ್ಟ ನೀತಿ ರೂಪಿಸದ ಪರಿಣಾಮ ಈಗ ಹಲವು ರೀತಿಯ ಬಿಕ್ಕಟ್ಟುಗಳನ್ನು ಎದುರಿಸಬೇಕಾಗಿದೆ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌. ಎನ್‌. ನಾಗಮೋಹನ ದಾಸ್ ಅಭಿಪ್ರಾಯಪಟ್ಟರು.

‘ಕೇವಲ ರಾಜಕೀಯ ಲಾಭ ಅಥವಾ ಒತ್ತಡಗಳಿಗೆ ಮೀಸಲಾತಿ ಕಲ್ಪಿಸುವುದರಿಂದ ಯಾವುದೇ ಸಮುದಾಯವು ಸಮಗ್ರ ಅಭಿವೃದ್ಧಿ ಸಾಧಿಸುವುದು ಕಷ್ಟಸಾಧ್ಯ’ ಎಂದು ಅವರು ಹೇಳಿದರು.

ದಲಿತ ಹಕ್ಕುಗಳ ಸಮಿತಿ -ಕರ್ನಾಟಕ, ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ನಗರದಲ್ಲಿ ಸೋಮವಾರ ಆಯೋಜಿಸಿದ್ದ ‘ಮೀಸಲಾತಿ - ಸಮುದಾಯಗಳು ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ ಪರಿಹಾರವೇ?’ ಕುರಿತ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

‘ಒಕ್ಕಲಿಗರು, ಲಿಂಗಾಯತರು ಸೇರಿ 44ಕ್ಕೂ ಹೆಚ್ಚು ಸಮುದಾಯಗಳು ಮೀಸಲಾತಿಗೆ ಹೋರಾಟ ನಡೆಸಿವೆ. ಈ ಸಮುದಾಯಗಳಲ್ಲಿ ಇರುವವರು ಬಹುತೇಕ ಕೃಷಿಕರು. ಸ್ವಾಭಿಮಾನದಿಂದ ಬದುಕು ಸಾಗಿಸುತ್ತಿದ್ದ ಕೃಷಿಕರು ಈಗ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ, ಮೀಸಲಾತಿಗೆ ಒತ್ತಾಯಿಸುತ್ತಿದ್ದಾರೆ. ಈ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಿದರೂ ಶೇ 40ರಷ್ಟು ಮಂದಿಗೆ ಮಾತ್ರವೇ ನೆರವಾಗಬಹುದು. ಉಳಿದವರ ಪರಿಸ್ಥಿತಿ ಬಗ್ಗೆಯೂ ಸರ್ಕಾರ ಯೋಚಿಸಬೇಕು’ ಎಂದು ಸಲಹೆ ನೀಡಿದರು.

‘ರಾಜ್ಯ ಸರ್ಕಾರಕ್ಕೆ 2ಸಿ ಮತ್ತು 2ಡಿ ವರ್ಗ ರೂಪಿಸುವ ಅಧಿಕಾರವಿದೆ. ಈ ರೀತಿ ವರ್ಗೀಕರಣಗಳಿಂದ ಯಾವ ರೀತಿ ಮೀಸಲಾತಿ ಕಲ್ಪಿಸಲಾಗುತ್ತಿದೆ ಎನ್ನುವುದು ಸ್ಪಷ್ಟವಾಗಿಲ್ಲ. ಹೀಗಾಗಿ, ಮೀಸಲಾತಿ ಕಲ್ಪಿಸುವ ಮುನ್ನ ಆಕ್ಷೇಪಗಳು ಬಾರದಂತೆ ಸಮಗ್ರ ಮಾಹಿತಿ ಸಂಗ್ರಹಿಸಿ ನಿಯಮಾವಳಿಗಳನ್ನು ರೂಪಿಸಬೇಕು. ನಂತರವೇ ನಿರ್ಧಾರಗಳನ್ನು ಕೈಗೊಳ್ಳಬೇಕು’ ಎಂದು ಹೇಳಿದರು.

ದಲಿತ ಹಕ್ಕುಗಳ ಸಮಿತಿಯ ಬಿ. ರಾಜಶೇಖರಮೂರ್ತಿ ಅವರು, ‘ಎಲ್ಲ ಸಮುದಾಯಗಳು ಇಂದು ಮೀಸಲಾತಿಗೆ ಆಗ್ರಹಿಸುತ್ತಿವೆ. ರೈತರು, ಈ ಪರಿಸ್ಥಿತಿಯನ್ನು ಕೆಲ ರಾಜಕಾರಣಿಗಳು ಮತ್ತು ಮಠಾಧಿಪತಿಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇದರಿಂದ ಅರ್ಹ ಬಡವರಿಗೂ ಮೀಸಲಾತಿ ದೊರೆಯುತ್ತಿಲ್ಲ’ ಎಂದು ಅಭಿಪ್ರಾಯಪಟ್ಟರು.

ಮುಖ್ಯಾಂಶಗಳು

- ರಾಜಕೀಯ ಲಾಭಕ್ಕೆ ಮೀಸಲಾತಿ ಸರಿಯಲ್ಲ
- ರಾಜ್ಯಕ್ಕೆ 2ಸಿ ಮತ್ತು 2ಡಿ ವರ್ಗ ರೂಪಿಸುವ ಅಧಿಕಾರವಿದೆ



ದುಂಡುಮೇಜಿನ ಸಭೆಯಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್ ಮಾತನಾಡಿದರು. ಲೇಖಕ ಎಲ್‌.ಎನ್‌. ಮುಕುಂದರಾಜ್, ಅತಿ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಎಂ.ಸಿ. ವೇಣುಗೋಪಾಲ್, ಡಿಎಸ್‌ಎಸ್ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮತ್ತು ರಾಷ್ಟ್ರೀಯ ಕಾನೂನು ಶಾಲೆಯ ಪ್ರಾಧ್ಯಾಪಕ ಪ್ರೊ. ಬಾಬು ಮ್ಯಾಥ್ಯೂ ಇದ್ದರು. – ಪ್ರಜಾವಾಣಿ ಚಿತ್ರ

ಜನಹಿತಕ್ಕೆ ಶರಣಾಗತಿಕಾರವಾದವರು ಇಂದು ಜಾತಿ ಹಿತಕ್ಕೆ ಶರಣಾಗುತ್ತಿದ್ದಾರೆ. ಹೀಗಾಗಿ, ಬೇರೆ, ಬೇರೆ ರೀತಿಯ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ

ಎಚ್‌.ಎನ್‌.ನಾಗಮೋಹನ ದಾಸ್, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಒಪಿಎಸ್: ವಿಧಾನಸಭಾ ಕ್ಷೇತ್ರಗಳಲ್ಲಿ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರು ಜಾರಿಗೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎನ್‌ಪಿಎಸ್ ನೌಕರರು ನಡೆಸುತ್ತಿದ್ದ ಧರಣಿಯನ್ನು ಸೋಮವಾರ ಅಂತ್ಯಗೊಳಿಸಿದ್ದಾರೆ.

‘ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ’ದ ಆಶ್ರಯದಲ್ಲಿ ಡಿ.19ರಿಂದ ಧರಣಿ ನಡೆಸುತ್ತಿದ್ದರು.

‘ಎನ್‌ಪಿಎಸ್ ನೌಕರರ ಸಭೆ ಕರೆಯುವುದಾಗಿ ಸಿ.ಎಂ ಭರವಸೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ 224 ವಿಧಾನಸಭಾ ಕ್ಷೇತ್ರಗಳಲ್ಲಿ ‘ವೋಟ್ ಫಾರ್ ಒಪಿಎಸ್’ ಅಭಿಯಾನ ಹಮ್ಮಿಕೊಳ್ಳಲಾಗುವುದು’ ಎಂದು ಸಂಘದ ರಾಜ್ಯಾಧ್ಯಕ್ಷ ಶಾಂತಾರಾಮ ಅವರು ತಿಳಿಸಿದ್ದಾರೆ.

‘ಹಳೆ ಪಿಂಚಣಿ ಯೋಜನೆ ನಮ್ಮ ಹಕ್ಕು’ ಎನ್ನುವ ಘೋಷ ವಾಕ್ಯದೊಂದಿಗೆ ಹೋರಾಟ ನಡೆಸಲಾಗುವುದು’ ಎಂದು ತಿಳಿಸಿದ್ದಾರೆ.

‘ಡಬಲ್ ಎಂಜಿನ್ ಸರ್ಕಾರ ಇದ್ದರೆ ಸಂಕಷ್ಟ’

ಕೂಡಲಸಂಗಮದಿಂದ ಬೆಂಗಳೂರುವರೆಗೆ ಸಮಾಜ ಪರಿವರ್ತನ ಸತ್ಯಾಗ್ರಹ ಯಾತ್ರೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಕೇಂದ್ರ ಹಾಗೂ ರಾಜ್ಯದಲ್ಲಿರುವ ಡಬಲ್ ಎಂಜಿನ್ ಸರ್ಕಾರ ಬದಲಾಯಿಸದಿದ್ದರೆ ಮುಂದಿನ ದಿನಗಳಲ್ಲಿ ಸಂಕಷ್ಟ ಹೆಚ್ಚಾಗಲಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲವಾಗಿ, ಉಸಿರಾಡಲೂ ಕಷ್ಟವಾಗಬಹುದು’ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಎಚ್ಚರಿಸಿದರು.

ಜನಾಂದೋಲನಗಳ ಮಹಾಮೈತ್ರಿ ಕರ್ನಾಟಕ, ಸಿಟಿಜನ್ ಫಾರ್ ಡೆಮೊಕ್ರಸಿ, ಜನತಂತ್ರ ಪಯೋಗ ಶಾಲೆ ಹಾಗೂ ಸಂಯುಕ್ತ ಹೋರಾಟ ಮುಖಂಡರು ಸೇರಿಕೊಂಡು ಜಿಲ್ಲೆಯ ಕೂಡಲಸಂಗಮದಿಂದ ಬೆಂಗಳೂರುವರೆಗೆ ಹಮ್ಮಿಕೊಂಡಿರುವ ಸಮಾಜ ಪರಿವರ್ತನ ಸತ್ಯಾಗ್ರಹ ಯಾತ್ರೆಗೆ ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಪ್ರಧಾನಮಂತ್ರಿ, ಮುಖ್ಯಮಂತ್ರಿ ಬದಲಾವಣೆಯಿಂದ ಮಾತ್ರ ಎಲ್ಲ ಬದಲಾಗುವುದಿಲ್ಲ. ವ್ಯವಸ್ಥೆಯನ್ನೇ ಬದಲಾಯಿಸಬೇಕಾದ ಅಗತ್ಯವಿದೆ. ಕೃಷಿ ಕಾಯ್ದೆ ವಾಪಸ್ ಪಡೆಯಬೇಕು’ ಎಂದು ಆಗ್ರಹಿಸಿದರು.

ಯಾತ್ರೆ ಸಂಯೋಜಕ ಎಸ್. ಆರ್. ಹಿರೇಮಠ ಮಾತನಾಡಿ, ‘ಆಹಾರ ಸ್ವಾವಲಂಬನೆಗೆ ರಾಷ್ಟ್ರೀಯ ಭೂಕಬಳಿಕೆ ನೀತಿ ಜಾರಿಯಾಗಬೇಕು. ಕೃಷಿಯೇತರರಿಗೆ ಕೃಷಿ ಭೂಮಿ ನೀಡಬಾರದು. ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವುದಲ್ಲದೆ, ಖರೀದಿ ಮಾಡಬೇಕು’ ಎಂದು ಆಗ್ರಹಿಸಿದರು.

‘ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಬದಲಾವಣೆಯಾಗಬೇಕು. ಕೃಷಿ ಹಾಗೂ ಕೂಲಿ ಕಾರ್ಮಿಕರು ಗೌರವಯುತ ಜೀವನ ನಡೆಸುವಂತೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಇದೊಂದು ಎರಡನೇ ಸ್ವಾತಂತ್ರ್ಯ ಹೋರಾಟವಾಗಿದೆ’ ಎಂದರು.

ರೈತ ಸಂಘದ ಗೌರವಾಧ್ಯಕ್ಷ ಚಾಮರಸ ಪಾಟೀಲ, ಪತ್ರಕರ್ತ ಡಿ. ಉಮಾಪತಿ, ಶರಣಪ್ಪ ಉದ್ಬಾಳ, ಮಹಮ್ಮದ್ ಯೂಸೂಫ್ ಕನ್ನಿ, ನಾಗರತ್ನ ಪಾಟೀಲ ಮತ್ತಿತರರು ಉಪಸ್ಥಿತರಿದ್ದರು.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಸೋಮವಾರ ಆರಂಭಗೊಂಡ ಸಮಾಜ ಪರಿವರ್ತನ ಸತ್ಯಾಗ್ರಹ ಯಾತ್ರೆಯಲ್ಲಿ ಎಸ್‌.ಆರ್‌.ಹಿರೇಮಠ, ಬಡಗಲಪುರ ನಾಗೇಂದ್ರ ಪಾಲ್ಗೊಂಡಿದ್ದರು

‘ನಳಿನ್, ಬಿಎಸ್‌ವೈ.. ಬಿಜೆಪಿಗೆ ಯಾರೂ ಮುಖ್ಯವಲ್ಲ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ನಮ್ಮಲ್ಲಿ ದೇವದುರ್ಲಭ ಎನಿಸಿಕೊಂಡ ಕಾರ್ಯಕರ್ತರ ಪಡೆ ಇದೆ. ಅವರಿಂದಾಗಿಯೇ ಪಕ್ಷ ಈ ಮಟ್ಟಕ್ಕೆ ಬೆಳೆದಿದೆ. ಪಕ್ಷಕ್ಕೆ ನಳಿನ್ ಕುಮಾರ್ ಕಟೀಲ್, ಯಡಿಯೂರಪ್ಪ... ಯಾರೂ ಮುಖ್ಯವಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಬಿಜೆಪಿಯಿಂದ ಏರ್ಪಡಿಸಿರುವ ‘ಬೂತ್ ವಿಜಯ’ ಅಭಿಯಾನಕ್ಕೆ ಸೋಮವಾರ ಇಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.

‘ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ಭಯೋತ್ಪಾದನೆಯ ನಂಟು ಇದೆ ಎಂದು ಹೇಳಿದ್ದು ರಾಜ್ಯದ ಪೊಲೀಸ್ ಮಹಾ ನಿರ್ದೇಶಕರು ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆಯೇ (ಎನ್‌ಐಎ) ಹೊರತು ಬಿಜೆಪಿ ಅಲ್ಲ. ಆದರೆ, ಭಯೋತ್ಪಾದಕರನ್ನು ಬೆಂಬಲಿಸುವ ಹೇಳಿಕೆಯನ್ನು ಕೆಪಿಸಿಸಿ ಅಧ್ಯಕ್ಷರು ನೀಡಿದರು. ಅವರಿಗೆ ಬೆಳಗಾವಿಯ ಕುಕ್ಕರ್ ಹಾಗೂ ಮಂಗಳೂರಿನ ಕುಕ್ಕರ್ ಮೇಲೆ ತುಂಬಾ ಪ್ರೀತಿ. ಬೆಳಗಾವಿಯ ಕುಕ್ಕರ್ ಒಡೆದರೆ ಅವರ ಮನೆ ಒಡೆಯುತ್ತದೆ. ಮಂಗಳೂರಿನ ಕುಕ್ಕರ್ ಒಡೆದರೆ ದೇಶವೇ ಒಡೆಯುತ್ತದೆ’ ಎಂದು ಹೇಳಿದರು.

ಪಿಂಚಣಿ: ಸಾರಿಗೆ ಸಂಸ್ಥೆ ನಿವೃತ್ತರಿಂದ ಪ್ರತಿಭಟನೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠವು 2016ರಂದು ನೀಡಿರುವ ತೀರ್ಪಿನ ಅನ್ವಯವೇ ಪಿಂಚಣಿ ಸೌಲಭ್ಯ ನೀಡಬೇಕು ಎಂದು’ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಒಕ್ಕೂಟ ಒತ್ತಾಯಿಸಿದೆ.

ಸುಪ್ರೀಂ ಕೋರ್ಟ್ ಆದೇಶ ಅನುಸರಿಸಿ ಇಪಿಎಫ್‌ಒ ಕಳೆದ ವರ್ಷ ಡಿಸೆಂಬರ್ 29ರಂದು ಹೊರಡಿಸಿದ ಸುತ್ತೋಲೆ ಕುರಿತು ಒಕ್ಕೂಟದ ಸದಸ್ಯರು ಭಾನುವಾರ ಸಭೆ ನಡೆಸಿ ಚರ್ಚಿಸಿದರು.

‘ನೌಕರರ ಭವಿಷ್ಯ ನಿಧಿ ಸಂಸ್ಥೆಯು (ಇಪಿಎಫ್‌ಒ) ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಕೂಡ ಕಳೆದ ವರ್ಷ ಏಪ್ರಿಲ್ 11ರಂದು ವಿಚಾರಣೆ ನಡೆಸಿ, ಹಳೆಯ ತೀರ್ಪನ್ನೇ ಪಾಲನೆ ಮಾಡುವಂತೆ ಸೂಚಿಸಿತ್ತು. ಆದರೆ ಅದನ್ನು ಸಂಸ್ಥೆ ಪಾಲಿಸಿಲ್ಲ’ ಎಂದು ಒಕ್ಕೂಟ ಆಕ್ಷೇಪಿಸಿದೆ.

ತಮಗೆ ನ್ಯಾಯ ದೊರಕದೇ ಇದ್ದಲ್ಲಿ ಬೃಹತ್ ಪ್ರತಿಭಟಿಸುವುದಾಗಿ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಒಕ್ಕೂಟದ ನಂಜುಂಡೇಗೌಡ, ಶಂಕರ್ ಕುಮಾರ್, ಸುಬ್ಬಣ್ಣ ಎಚ್ಚರಿಸಿದ್ದಾರೆ.

ನಾಟಕ ತಿರುಚಿ ಪ್ರದರ್ಶನ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: ‘ನನ್ನ ‘ಸಾಂಬಶಿವ ಪ್ರಹಸನ’ ನಾಟಕವನ್ನು ರಂಗಾಯಣದಲ್ಲಿ ಅಸಹ್ಯಕರವಾಗಿ ತಿರುಚಿ ಪ್ರದರ್ಶಿಸಲಾಗಿದೆ’ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ. ಚಂದ್ರಶೇಖರ ಕಂಬಾರ ಅವರು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಸೋಮವಾರ ಬರೆದಿದ್ದಾರೆ.

‘ಇದರಿಂದ ನನಗೆ ವಿಷಾದವಾಗಿದೆ. ಪ್ರದರ್ಶಿಸುವುದಕ್ಕೆ ನನ್ನ ಅನುಮತಿ ಕೇಳಲೇಬೇಕಿತ್ತು. ಆದರೆ, ಕೇಳಿಲ್ಲ. ರಂಗಾಯಣವಾದರೂ ನನ್ನ ಅನುಮತಿ ಇಲ್ಲದೇ ನಾಟಕ ಪ್ರದರ್ಶನಕ್ಕೆ ಅವಕಾಶ ಕೊಟ್ಟಿರುವುದು ವಿಷಾದಕರ’ ಎಂದರು.

‘ನನ್ನ ನಾಟಕಗಳಲ್ಲಿ ವ್ಯಕ್ತಿಗತ ನಿಂದನೆ ಇರುವುದು ಸಾಧ್ಯವಿಲ್ಲ. ಅನುಮತಿ ಇಲ್ಲದೇ ನಾಟಕವನ್ನು ಪ್ರದರ್ಶಿಸಿದ್ದಕ್ಕೆ, ಪ್ರದರ್ಶಿಸಲು ಅವಕಾಶ ಮಾಡಿಕೊಟ್ಟವರಿಗೆ ಮತ್ತು ಇಲ್ಲದ ಸಾಹಿತ್ಯವನ್ನು ಸೇರಿಸಿದ್ದಕ್ಕೆ ನಿರ್ದೇಶಕರ ಮೇಲೆ ಮತ್ತು ಈ ಅಹಿತಕರ ವಾತಾವರಣಕ್ಕೆ ಕಾರಣರಾದ ಸಂಬಂಧಪಟ್ಟ ಎಲ್ಲರ ಮೇಲೂ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಪತ್ರದಲ್ಲಿ ಕೋರಿದ್ದಾರೆ.



ಡಾ.ಚಂದ್ರಶೇಖರ ಕಂಬಾರ

‘ಕಂಬಾರರು ಬರೆದ ಪತ್ರ ತಲುಪಿದ್ದು, ಅದನ್ನು ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ’ ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಪ್ರತಿಕ್ರಿಯಿಸಿದರು.

ಶನಿವಾರ ಪ್ರದರ್ಶನಗೊಂಡ ನಾಟಕದಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಅವಹೇಳನ ಮಾಡಲಾಗಿದೆ ಎಂದು ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಠಾಣೆಗೆ ದೂರು ನೀಡಿದ್ದರು. ಇದೀಗ, ಕಂಬಾರರು ಪತ್ರ ಬರೆದಿರುವುದನ್ನು ಸುಬ್ರಹ್ಮಣ್ಯ ಸ್ವಾಗತಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪತ್ರಕರ್ತರ ಸಮ್ಮೇಳನ ಮುಂದೂಡಿಕೆ

ಬೆಂಗಳೂರು: ಸಿದ್ಧೇಶ್ವರ ಸ್ವಾಮೀಜಿ ಅವರ ನಿಧನದ ಹಿನ್ನೆಲೆಯಲ್ಲಿ ವಿಜಯಪುರದಲ್ಲಿ ಇದೇ 9 ಮತ್ತು 10ರಂದು ನಡೆಸಲು ಉದ್ದೇಶಿಸಿದ್ದ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನವನ್ನು ಮುಂದೂಡಲಾಗಿದೆ.

ಸಮ್ಮೇಳನ ಮುಂದೂಡುವಂತೆ ಆತಿಥ್ಯ ವಹಿಸಿರುವ ವಿಜಯಪುರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ವಿನಂತಿಸಿಕೊಂಡಿದೆ. ವಿಜಯಪುರ ಜಿಲ್ಲಾಡಳಿತ ಮತ್ತು ಮುಖ್ಯಮಂತ್ರಿ ಸಚಿವಾಲಯದ ಅಧಿಕಾರಿಗಳ ಅಭಿಪ್ರಾಯವೂ ಇದೇ ಆಗಿತ್ತು. ಸಿಎಂ ಜೊತೆ ಸಮಾಲೋಚಿಸಿ ಮುಂದಿನ ದಿನಾಂಕ ತಿಳಿಸಲಾಗುವುದು.

ಸಂಘದ ಸರ್ವ ಸದಸ್ಯರ ಸಭೆ ವಿಜಯಪುರದ ಬದಲು ಹಾಸನದಲ್ಲಿ ಜ. 9ರಂದು ನಡೆಯಲಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯುಜೆ) ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದ್ದಾರೆ.

ಪುಸ್ತಕ ಆಯ್ಕೆ ಸಮಿತಿಗೆ ಸುರೇಶ್ ಜಂಗೆ ಅಧ್ಯಕ್ಷ

ಕಲಬುರಗಿ: ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿ ಅಧ್ಯಕ್ಷರನ್ನಾಗಿ ಗುಲಬರ್ಗಾ ವಿಶ್ವವಿದ್ಯಾಲಯದ ಗ್ರಂಥಪಾಲಕ ಹಾಗೂ ನ್ಯಾಕ್ ಸಮನ್ವಯಾಧಿಕಾರಿ ಡಾ.ಸುರೇಶ್ ಜಂಗೆ ಅವರನ್ನು ನೇಮಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶಿಸಿದೆ.

ಲಾಬೂರಾಮ್ ಗುಪ್ತಚರ ಐಜಿಪಿ

ಬೆಂಗಳೂರು: ಐಪಿಎಸ್ ಅಧಿಕಾರಿ ಲಾಬೂ ರಾಮ್ ಅವರನ್ನು ಗುಪ್ತಚರ ವಿಭಾಗದ ಐಜಿಪಿ ಹುದ್ದೆಗೆ ವರ್ಗಾಯಿಸಲಾಗಿದೆ.

ಈಶಾನ್ಯ ವಿಭಾಗದ ಐಜಿಪಿಯಾಗಿ ವರ್ಗವಣೆಗೊಂಡಿರುವ ಎನ್.ಸತೀಶ್ ಕುಮಾರ್, ಉತ್ತರ ವಲಯದ ಐಜಿಪಿಯಾಗಿಯೂ ಮುಂದುವರಿಯಲಿದ್ದಾರೆ. ರಮಣ್ ಗುಪ್ತ-ಕಮಿಷನರ್, ಹುಬ್ಬಳ್ಳಿ-ಧಾರವಾಡ, ಅನುಪಮ್ ಅಗರ್‌ವಾಲ್- ಡಿಐಜಿಪಿ, ಈಶಾನ್ಯ ವಲಯ, ಕಲಬುರಗಿ.

ಯಶಸ್ವಿನಿ ನೋಂದಣಿ 31ರವರೆಗೆ ಅವಕಾಶ

ಬೆಂಗಳೂರು: ಯಶಸ್ವಿನಿ ಯೋಜನೆಯ ನೋಂದಣಿಗೆ ನಿಗದಿಪಡಿಸಿದ ಕೊನೆಯ ದಿನವನ್ನು ಜ. 31ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

2022-23ನೇ ಸಾಲಿನಿಂದ ಈ ಯೋಜನೆಯನ್ನು ಮರು ಜಾರಿಗೊಳಿಸಲಾಗುತ್ತಿದ್ದು, ಹೊಸ ಸದಸ್ಯರ ನೋಂದಣಿಗೆ 2022ರ ನ.1ರಿಂದ ಡಿ. 31ರವರೆಗೆ ಅವಧಿ ನಿಗದಿಪಡಿಸಲಾಗಿತ್ತು.

ನಿಗದಿಪಡಿಸಿದ ಕೊನೆಯ ದಿನದ ಒಳಗೆ ಅರ್ಹರಿರುವ ಎಲ್ಲ ಸದಸ್ಯರ ನೋಂದಣಿ ಆಗದಿರುವುದರಿಂದ ಅವಧಿ ವಿಸ್ತರಿಸಲು ಶಾಸಕರು, ಅನೇಕ ಸಹಕಾರ ಸಂಘಗಳ ಸದಸ್ಯರು ಕೋರಿದ್ದಾರೆ. ಯೋಜನೆಗೆ ನಿಗದಿಪಡಿಸಿರುವ 30 ಲಕ್ಷ ನೋಂದಣಿ ಗುರಿಯನ್ನು ಕೊನೆಯ ದಿನದ ಒಳಗೆ ಸಾಧಿಸಲು ಸಾಧ್ಯವಾಗದಿರುವುದರಿಂದ ಸದಸ್ಯತ್ವ ನೋಂದಣಿ ಅವಧಿ ವಿಸ್ತರಿಸುವಂತೆ ಸಹಕಾರ ಇಲಾಖೆಗೆ ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಸ್ತಾವನೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರ
(ಜಲ ಸಂಪನ್ಮೂಲ ಇಲಾಖೆ)
ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ
(ವಿಳಾಸ : ಪ್ಲಾಟ ನಂ.21, ಕೋಟನೂರ ಧರಿಯಾಪೂರ ರಸ್ತೆ, ಜಿ. ಡಿ. ಎ. ಲೇಔಟ್, 3ನೇ ಮುಖ್ಯ ರಸ್ತೆ, “ಬಿ” ಬ್ಲಾಕ್, ಕಲಬುರಗಿ-585102) ಇ-ಮೇಲ್: eecadaipglb@gmail.com

ಸಂ.ಕಾ.ನಿ.ಅ./ಕಾಡಾವಿಭಾಗ/ತಾ.ಶಾ-1/2022-23/ ದಿನಾಂಕ: 02-01-2023

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ e-procurement portal ಪದ್ಧತಿಯಲ್ಲಿ ಮಾತ್ರ) (ಕರೆ-2)

ಮಾನ್ಯ ಆಡಳಿತಾಧಿಕಾರಿಗಳು, ನೀರಾವರಿ ಯೋಜನೆಗಳ ವಲಯ, ಕಾಡಾ, ಕಲಬುರಗಿ ರವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ. ವಿಭಾಗ ಕಲಬುರಗಿ ಇವರು ಅರ್ಹ ಗುತ್ತಿಗೆದಾರರಿಂದ ಸಿವಿಲ ಕಾಮಗಾರಿಗೆ ಟೆಂಡರ್ ಅಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.
1) ಕಾಮಗಾರಿಯ ವಿವರ: ಕಾರಂಜಾ ನಿರಾವರಿ ಯೋಜನೆ ಅಡಿಯಲ್ಲಿ ಕಾಸ್‌ವೇ, ಅಪ್ರೋಚ್ ರಸ್ತೆ ಕಾಮಗಾರಿ. 2) ಲೆಕ್ಕ ಶೀರ್ಷಿಕೆ : 4705 ವಿಶೇಷ ಅಬಿವೃದ್ಧಿ ಯೋಜನೆ. 3) ಟೆಂಡರಿಗಿಟ್ಟ ಮೊತ್ತ: ರೂ. 63,48,320.43 + GST, 4) ಗುತ್ತಿಗೆದಾರರ ಅರ್ಹತೆ : ಕೆ.ಪಿ.ಡಬ್ಲ್ಯೂಡಿ 1ನೇ ದರ್ಜೆ ಹಾಗೂ ಮೇಲ್ಪಟ್ಟು. 5) ಈ-ಸಂಗ್ರಹಣೆ ಪೋರ್ಟಲ್‌ಗೆ ಪ್ರವೇಶಕ್ಕಾಗಿ ಕಾಲಾವಧಿ : 03.01.2023 ರಿಂದ 10.01.2023 ಸಾಯಂಕಾಲ 5.00 ಗಂಟೆವರೆಗೆ. 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ್ ಫಾರಂ ಬೆಲೆ ಇ-ಪ್ರೊಕ್ಯೂರ್‌ಮೆಂಟ್ ನಿಯಮದಂತೆ ಇ- ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 10.01.2023 ಸಾಯಂಕಾಲ 5.00 ಗಂಟೆವರೆಗೆ. 8) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.01.2023 ಬೆಳಿಗ್ಗೆ 11.00 ಗಂಟೆಗೆ. 8) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ : 19.01.2023 ಬೆಳಿಗ್ಗೆ 11.00 ಗಂಟೆಗೆ. 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರು, ನೀರಾವರಿ ಯೋಜನೆಗಳು, ಕಾಡಾ ವಿಭಾಗ, ಕಲಬುರಗಿ 10) ಅಂತರಜಾಲ ತಾಣದ ವಿಳಾಸ: www.eproc.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ನೀರಾವರಿ ಯೋಜನೆಗಳು ಕಾಡಾ ವೀಭಾಗ, ಕಲಬುರಗಿ,
ವಾ.ಸಾ.ಸಂ.ಇ/ಕಲಬುರಗಿ/1050/ಎಂ.ಸಿ&ಎ/2022-23

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಯಾಂತ್ರಿಕ ಇಲಾಖೆ, ಕೆ.ಎಚ್.ರಸ್ತೆ, ಶಾಂತಿನಗರ, ಬೆಂಗಳೂರು- 560027,
ದೂರವಾಣಿ ಸಂಖ್ಯೆ : 080-22537519
ಟೆಂಡರ್ ಸಂಖ್ಯೆ: ಬೆಂಮಸಾಸಂ/ಕೇಕ/ತಾಂಇ/10/2022-23 ದಿನಾಂಕ:03.01.2023

ಟೆಂಡರ್ ಆಹ್ವಾನ ಸೂಚನಾ ಪತ್ರ (ಇ-ಪ್ರೋಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)

(1) ಬೆಂ.ಮ.ಸಾ.ಸಂಸ್ಥೆಗೆ ಅವಶ್ಯವಿರುವ 05 ಸಂಖ್ಯೆಯ ಡಬಲ್ ಡೆಕ್ಕರ್ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ಸರಬರಾಜು ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮೇಲ್ಕಂಡ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (2) ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ **ದಿನಾಂಕ: 01.02.2023 ಸಮಯ, 17:30 ಗಂಟೆಯವರೆಗೆ**. ಮುಂದುವರೆದು, ಟೆಂಡರ್‌ನ ವೇಳಾಪಟ್ಟಿ, ಕಾರ್ಯವ್ಯಾಪ್ತಿ, ಹಾಗೂ ಇತರೆ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ, ಸೇರ್ಪಡೆ/ತಿದ್ದುಪಡಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್ಲೋಡ್ ಮಾಡಲಾಗುವುದು/ಪ್ರಕಟಿಸಲಾಗುವುದು. **ಸೂಚನೆ:** ಆಸಕ್ತಿಯುಳ್ಳ ಬಿಡ್ಡುದಾರರು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಣಿಯಾಗಿರಬೇಕು. ಆಸಕ್ತಿಯುಳ್ಳ ಬಿಡ್ಡುದಾರರು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ **https://eproc.karnataka.gov.in** ಗೆ ಲಾಗ್ ಇನ್ ಮಾಡಿ ವಿವರಗಳನ್ನು ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್: **eprocurementhelpdesk@gmail.com** ಅಥವಾ ದೂರವಾಣಿ ಸಂಖ್ಯೆ: 080-22230960, 080-22234115ಕ್ಕೆ ಕರೆಮಾಡಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಬಿಡ್ ಸಲ್ಲಿಕೆಯ ತರಬೇತಿಯನ್ನು ಪಡೆಯಲು ಇ-ಪ್ರೋಕ್ಯೂರ್‌ಮೆಂಟ್ ಸೆಲ್‌ನ್ನು ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ **eprocurementhelpdesk@gmail.com**ಗೆ ಮೇಲ್ ಮಾಡಿ ಪಡೆಯಬಹುದಾಗಿರುತ್ತದೆ.

ಸಹಿ/-ಮುಖ್ಯ ಯಾಂತ್ರಿಕ ಅಭಿಯಂತರರು(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ)

ನಗರಸಭಾ ಕಾರ್ಯಾಲಯ, ಹರಿಹರ-577601
ಫೋ:08192-244266 ಫ್ಯಾಕ್ಸ್:08192-241024
E-mail ID no:itstaff_ulb_harihara@yahoo.com
ನಂ.ನಸಹ/ತಾಂತ್ರಿಕ/ಸಿಆರ್- 47/2022-23 ದಿನಾಂಕ: 31-12-2022

ಇ-ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಹರಿಹರ ನಗರಸಭೆಯ ಸ್ವಚ್ಛ ಭಾರತ್ ಮಿಷನ್ ಯೋಜನೆ, 2022-23ನೇ ಸಾಲಿನ ನಗರಸಭೆ ನಿಧಿ ಅನುದಾನ ಮತ್ತು ಎಸ್‌ಎಫ್‌ಸಿ ವಿಶೇಷ ಅನುದಾನದ ಒಟ್ಟು 4 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ-1999-2000ರ ಒಳಿಣ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-1 & 2ರ ನಿಯಮದನ್ವಯ ಈ ಕೆಳಗಿನ ಕಾಮಗಾರಿಗಳ ಇಂಡೆಂಟ್ ನಂಬರ್‌ಗಳ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಸಿವಿಲ್ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು e-procurement ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು https://eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ. (1) ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಬಗ್ಗೆ ವಿಚಾರಿಸಲು ಕೊನೆಯ ದಿನಾಂಕ: 11-01-2023 ರ ರಂದು ಸಾಯಂಕಾಲ 05-00 ಗಂಟೆಯವರೆಗೆ (2) ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ದಿನಾಂಕ:12-01-2023 ರಂದು ಸಾಯಂಕಾಲ 05-00 ಗಂಟೆಯವರೆಗೆ
ಇಂಡೆಂಟ್ ನಂಬರ್:-(1) **DMA/2021-22/OW/WORK_INDENT1 23417/Call-2.** ಅಂದಾಜು ಮೊತ್ತ:-23.54 ಲಕ್ಷ. (2) **DMA/2022-23/WT/W_INDENT 144424** ಅಂದಾಜು ಮೊತ್ತ:-20.00 ಲಕ್ಷ. (3) **DMA/2022-23/OW/WORK_INDENT142883** ಅಂದಾಜು ಮೊತ್ತ:-4.00 ಲಕ್ಷ. (4) **DMA/2022-23/OW/WORK_INDENT136038/Call-2** ಅಂದಾಜು ಮೊತ್ತ:-26.00 ಲಕ್ಷ.

ಸಹಿ/- ಅಧ್ಯಕ್ಷರು, ನಗರಸಭೆ, ಹರಿಹರ. | ಸಹಿ/- ಸಹಾಯಕ ಕಾರ್ಯಪಾಲಕ ಅಭಿಯಂತರರು ನಗರಸಭೆ,ಹರಿಹರ. | ಸಹಿ/-ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/774/ಎಂಸಿಎ/2022-23

ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯತ್, ಶಿವಮೊಗ್ಗ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಶಿವಮೊಗ್ಗ.
ದೂರವಾಣಿ: 08182-222382 Email: dhoshimoga@gmail.com
ಸಂಖ್ಯೆ: ಜಿಆಕುಕಶಿ/ಹೊ.ಗು/ಟೆಂಡರ್-01/2022-23 ದಿನಾಂಕ:31.12.2022

ಇ-ಟೆಂಡರ್ ಪ್ರಕಟಣೆ

ಉಲ್ಲೇಖ: ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು ಇವರ ಪತ್ರ ಸಂಖ್ಯೆ;ಎಸ್.ಆರ್.ಸಿ/08/2017-18(ಭಾಗ) ದಿನಾಂಕ:-20/12/2022.
2022-23 ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ಆರೋಗ್ಯ ಸಂಸ್ಥೆಗಳಲ್ಲಿ ಖಾಲಿ ಇರುವ ಫಾರ್ಮಸಿ ಅಧಿಕಾರಿ ಹಾಗೂ ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹುದ್ದೆಗಳಿಗೆ ಹೊರಸಂಪನ್ಮೂಲ ಸಂಸ್ಥೆಗಳಿಂದ ಸೇವೆಯನ್ನು ಪಡೆಯುವ ಸಂಬಂಧ ಕರ್ನಾಟಕ ಪಾರದರ್ಶಕ ಅಧಿನಿಯಮ(KTPP) 1999 ನಿಯಮಗಳು ಹಾಗೂ ದ್ವಿದಾಖಲಾತಿಸಲ್ಲಿಕೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಟೆಂಡರ್‌ದಾರರು ಭಾಗವಹಿಸಲು ಕೋರಿದೆ.
ಕ್ರ.ಸಂ. 1. ನೋಟಿಫಿಕೇಷನ್ ನಂ.: ಸಂಖ್ಯೆ: ಜಿಆಕುಕಶಿ/ಹೊ.ಗು/ಟೆಂಡರ್-01/2022-23 ದಿನಾಂಕ:28.12.2022 **ಟೆಂಡರ್ ಕರೆದಿರುವ ವಿವರ:** ಶಿವಮೊಗ್ಗ ಜಿಲ್ಲೆಯ ಆರೋಗ್ಯ ಸಂಸ್ಥೆಗಳಿಗೆ ಫಾರ್ಮಸಿ ಅಧಿಕಾರಿ (22) ಹಾಗೂ ಪ್ರಯೋಗಶಾಲಾ ತಾಂತ್ರಿಕ ಅಧಕಾರಿ (7) ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗ್ಗೆ. **ಟೆಂಡರ್ ದಾಖಲಿಸುವ ಅವಧಿ:** ದಿ: 03.01.2023 ರಿಂದ ದಿ: 13.01.2023 **ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ:** ರೂ. 61.78 ಲಕ್ಷ **ಷರಾ:** ಇ.ಎಂ.ಡಿ ಮೊತ್ತ ರೂ. 1,50,000/- ಲಕ್ಷ
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಶಿವಮೊಗ್ಗ ಇವರನ್ನು ಸಂಪರ್ಕಿಸುವುದು ಅಥವಾ (Website: www.eproc.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಶಿವಮೊಗ್ಗ
ವಾ.ಸಾ.ಸಂ.ಇ/ಎಂಸಿಎ/ಶಿ/11/01/22-23/1581

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಬೆಳಗಾವಿ
ನಂ.ಕಾ.ನಿ.ಅ/ಗ್ರಾಕುನೀ&ನೈ/ಬೆಳಗಾವಿ/ಪಿಬಿ-2,3/ಕು.ನೀ.ಸ.ಯೋ/ಟೆಂಡರ್-60/2022-23/3000 ದಿನಾಂಕ: 30-12-2022

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 60/2022-23
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಉಲ್ಲೇಖ: ನಂ. ಕಾ.ನಿ.ಅ./ಗ್ರಾ.ಕು.ನೀ.&ನೈ/ಬೆಳಗಾವಿ/ಪಿಬಿ-2,3/ಕು.ನೀ.ಸ.ಯೋ/ಕೆಡಬ್ಲ್ಯೂ-3, 4/ಟೆಂಡರ್-56/2022-23/2904 ದಿ: 20-12-2022
ಮೇಲಿನ ಉಲ್ಲೇಖ (1) ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
I) 1) ಇ-ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 09-01-2023 ಸಾಯಂಕಾಲ 16:00 ಗಂಟೆವರೆಗೆ 2) ಇ-ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 10-01-2023 ಸಾಯಂಕಾಲ 17:30 ಗಂಟೆ ನಂತರ 3) ಭರ್ತಿ ಮಾಡಿದ ಇ-ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್ ಅನುಮೋದಿಸಿದ ನಂತರ ಇಂಡೆಂಟ್ ನಂ:

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳು	:	34799/Call-6

II) ಟೆಂಡರ್ ಪೂರ್ವಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು ಗ್ರಾ.ಕು.ನೀ & ನೈ ವಿಭಾಗ ಬೆಳಗಾವಿ ಇವರ ಕಚೇರಿಯಲ್ಲಿ ದಿನಾಂಕ: 03-01-2023 ರಂದು ಬೆಳಿಗ್ಗೆ 11:30 ಗಂಟೆಗೆ ಇಂಡೆಂಟ್ ನಂ. 36660/Call-3, 36510/Call-8, 34821/Call-4/ (1 ಕೋಟಿ ಮೇಲಿನ ಕಾಮಗಾರಿಗಳು ಮಾತ್ರ)
ಸೂಚನೆ: ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-Procurement Portal www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 1464/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್
ಸಂ:ಕಾಅ/ಕನೀನಿನಿ/ಕಾವಿ.2/ಕಾಮಗಾರಿ/ತಾಶಾ-2/2022-23/1736 ದಿನಾಂಕ: 29-12-2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕಛೇರಿಯಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರ್‌ಮೆಂಟ್ www.eproc.karnataka.gov.in ಮುಖಾಂತರ ಈ ವಿಭಾಗದಡಿ ವ್ಯಾಪ್ತಿಯಲ್ಲಿ ಬರುವ ಏಳು **“ತುರ್ತು ಕಾಮಗಾರಿಗಳ”** ಟೆಂಡರನ್ನು **ಒಂದು ಲಕೋಟೆಯಲ್ಲಿ** ಆಹ್ವಾನಿಸಿದ್ದು, ಸದರಿ ಕಾಮಗಾರಿಗಳ ಟೆಂಡರಿಗಿಟ್ಟ ಮೊತ್ತ **1) ರೂ 6.99 ಲಕ್ಷಗಳು 2) ರೂ 2.98 ಲಕ್ಷಗಳು, 3) ರೂ 9.56 ಲಕ್ಷಗಳು, 4) ರೂ 9.99 ಲಕ್ಷಗಳು 5) ರೂ 9.99 ಲಕ್ಷಗಳು, 6) ರೂ 9.56 ಲಕ್ಷಗಳು, ಮತ್ತು 7) ರೂ 9.99 ಲಕ್ಷಗಳು** ಅಥವಾ ಇ.ಎಮ್.ಡಿ ಇತರೆ ಹೆಚ್ಚಿನ ವಿವರಗಳನ್ನು www.eproc.karnataka.gov.in ನಿಂದ ಪಡೆಯಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **09-01-2023 ರ ಮಧ್ಯಾಹ್ನ 4.30 ಘಂಟೆಯವರೆಗೆ** ಟೆಂಡರನ್ನು ದಿನಾಂಕ: **10-01-2023 ರಂದು ಮಧ್ಯಾಹ್ನ 4.40 ಘಂಟೆಗೆ** ತೆರೆಯಲಾಗುವದೆಂದು ನಿಗದಿಪಡಿಸಲಾಗಿರುತ್ತದೆ. ಟೆಂಡರನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದುಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೆಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು. ದೂರವಾಣಿ ಸಂ: 08533-271361.

ಸಹಿ/- ಕಾರ್ಯಪಾಲಕ ಅಭಿಯಂತರರು ಕನೀನಿನಿ
ನಂ.2 ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್
ವಾ.ಸಾ.ಇ./ಕೊಪ್ಪಳ/539/2022-23/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ನಿರ್ದೇಶಕರ ಕಛೇರಿ, ನಂ. 34, 1ನೇ ಮಹಡಿ, ಲೋಟಸ್ ಟವರ್ಸ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು - 01
ಸಂಖ್ಯೆ: ಪವಕನಿ/ಬುಉಯೋ/ಸಿಆರ್-16/2019-20 ದಿನಾಂಕ: 02.01.2023

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಇವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://eproc.karnataka.gov.in ಮುಖಾಂತರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಜನರಿಗಾಗಿ 10 ಸಂಚಾರಿ ಆರೋಗ್ಯ ಘಟಕ ಸೇವೆಯನ್ನು ಒದಗಿಸುವ ಕುರಿತು ವಿವರಗಳಂತೆ ಟೆಂಡರನ್ನು ಆಹ್ವಾನಿಸಿದ್ದಾರೆ.
ಟೆಂಡರ್ ವಿವರ: ಕಲ್ಯಾಣ ಕರ್ನಾಟಕದ 5 ಜಿಲ್ಲೆಗಳಲ್ಲಿ ಪರಿಶಿಷ್ಟ ಪಂಗಡದ ಜನರಿಗಾಗಿ 10 ಸಂಚಾರಿ ಆರೋಗ್ಯ ಘಟಕ ಸೇವೆಯನ್ನು ಒದಗಿಸುವ ಕುರಿತು. ಟೆಂಡರ್ ಕರೆದ ದಿನಾಂಕ : **03.01.2023**. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ : **02.02.2023**. ಅಂದಾಜು ಟೆಂಡರ್ ಮೌಲ್ಯ : **ರೂ. 3,78,00,000/-**
ವಿಶೇಷ ಸೂಚನೆ : ಹೆಚ್ಚಿನ ವಿವರಗಳಿಗಾಗಿ ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯದ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. **ದೂರವಾಣಿ ಸಂಖ್ಯೆ : 080-2261787.**

ಸಹಿ/- ಉಪ ನಿರ್ದೇಶಕರು,
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ
ವಾಸಾಸಂಇ/ವಾಪ್ರ/ಜಿಎ/3835/2022-23

ಮಾರಾಟದ ಸೂಚನೆ
ದೀಪಕ್ ಕೇಬಲ್ಸ್ (ಇಂಡಿಯಾ) ಲಿಮಿಟೆಡ್ (ದಿವಾಳಿತನ ಪ್ರಕ್ರಿಯೆಯಲ್ಲಿ) (IN LIQUIDATION)

ಇ-ಹರಾಜು
ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿ ಸಂಹಿತೆ 2016 ರಂತೆ ಆಸ್ತಿ ಮಾರಾಟ
ಇ-ಹರಾಜಿನ ದಿನಾಂಕ ಮತ್ತು ಸಮಯ: ಗುರುವಾರ, 19ನೇ ಜನವರಿ, 2023
(ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 12:00ರ ವರೆಗೆ)

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಲಯ, ಬೆಂಗಳೂರು (NCLT, Bengaluru) ಇವರ 4ನೇ ಜುಲೈ 2019 ರ ಆದೇಶದಂತೆ, ನೇಮಕವಾಗಿರುವ ವೃತ್ತಿಪರ ಸಮಾಪಕರ ಸ್ವಾಧೀನದಲ್ಲಿರುವ ದೀಪಕ್ ಕೇಬಲ್ (ಇಂಡಿಯಾ) ಲಿಮಿಟೆಡ್ (ಸಮಾಪನ ಪ್ರಕ್ರಿಯೆಯಲ್ಲಿ-in Liquidation) (DCIL)ನ ಆಸ್ತಿ ಮಾರಾಟ. ಉಕ್ತ ಆಸ್ತಿಗಳನ್ನು, ಭಾರತೀಯ ದಿವಾಳಿತನ ಮತ್ತು ಬ್ಯಾಂಕ್ರಪ್ಸಿಸಂಹಿತೆ 2016 ರಂತೆ ಆಸ್ತಿ ನಗದೀಕರಣಕ್ಕಾಗಿ ‘ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ’ ಮತ್ತು ಪುನರ್ ವಿಮರ್ಶೆಗೆ ಅವಕಾಶವಿಲ್ಲದಂತೆ’ -("AS IS WHAT IS", "WHATEVER THERE IS BASIS" and "NO RECOURSE-BASIS") ಆಸ್ತಿ ನಗದೀಕರಣಕ್ಕಾಗಿ ಮಾರಾಟ ಮಾಡಲಾಗುವುದು.
ಇ-ಪ್ರೊಕ್ಯೂರ್ಮೆಂಟ್ ಟೆಕ್ನಾಲಿಜೀಸ್ ಲಿಮಿಟೆಡ್ - ಆ್ಯಕ್ಷನ್ ಟೈಗರ್, ಇವರ ಇ-ಹರಾಜು ವೇದಿಕೆಯಾದ, https://ncltauction.auctiontiger.net ನಲ್ಲಿ ಮಾರಾಟ ಮಾಡಲಾಗುವುದು.

ಲಾಟ್ ಸಂ.	ಆಸ್ತಿಯ ವಿವರ	ಮೀಸಲು ಬೆಲೆ Reserve Price Rs.	ಇ.ಎಂ.ಡಿ. ಮೊತ್ತ EMD Amount Rs.
1	ಕೈಗಾರಿಕಾ ಆಸ್ತಿ 0.8 ಮೆ.ವ್ಯಾ.ನ ವಿಂಡ್‌ಮಿಲ್ ಮತ್ತು 2 ಎಕರೆ 10 ಗುಂಟ ಅಳತೆಯ ಭೂಮಿ, ಸ. ನಂ. 96, ಹರ್ತಿ ಗ್ರಾಮ, ಗದಗ ಹೋಬಳಿ, ಗದಗ ಜಿಲ್ಲೆ, ಕರ್ನಾಟಕ	1.80 ಕೋಟಿ	18.00 ಲಕ್ಷ

ಸೂಚನೆ:
1. https://ncltauction.auctiontiger.net ನಲ್ಲಿ ಲಭ್ಯವಿರುವ ಇ-ಹರಾಜು ಪ್ರೊಸೆಸ್ ಡಾಕ್ಯೂಮೆಂಟ್‌ನಲ್ಲಿ ಆಸ್ತಿ ವಿವರ, ಅರ್ಹತಾ ಮಾನದಂಡ, ಇ-ಹರಾಜು ಬಿಡ್ ಇತ್ಯಾದಿ ವಿವರಗಳನ್ನು ಪಡೆಯಬಹುದು ಅಥವಾ ip@beleyur.com ನಲ್ಲಿ ಲಿಕ್ವಿಡೇಟರ್‌ರವರನ್ನು ಅಥವಾ M/s. E-procurement Technologies Ltd nclt@auctiontiger.net / support@auctiontiger.net ನಲ್ಲಿ ಮತ್ತು ಫೋನ್ +91 97227 78828 ಸಂಪರ್ಕಿಸಬಹುದು.
2. ಉಕ್ತ ಆಸ್ತಿಯನ್ನು "ಯಾವುದು ಹೇಗಿದೆಯೋ, ಎಲ್ಲಿದೆಯೋ ಮತ್ತು ಎಷ್ಟಿದೆಯೋ ಹಾಗೆ ಮಾತ್ರ ಮತ್ತು ಪುನರ್ ವಿಮರ್ಶೆಗೆ ಅವಕಾಶವಿಲ್ಲದಂತೆ" ("AS IS WHAT IS", "WHATEVER THERE IS BASIS" and "NO RECOURSE-BASIS") ಮಾರಾಟ ಮಾಡಲಾಗುವುದು. ಆದರೂ ಯಶಸ್ವಿ ಇ-ಹರಾಜು ನಡೆದ ನಂತರ ಶೇ. 100ರಷ್ಟು ಮಾರಾಟ ಮೌಲ್ಯವನ್ನು ಪಡೆಯುವ ದಿನಾಂಕದವರೆಗೆ, ವಿಂಡ್‌ಮಿಲ್ಲಿನಿಂದ ಉತ್ಪಾದಿತವಾದ ಇನ್ನೂ ವಸೂಲಾಗದ ವರಮಾನವನ್ನೂ ಮತ್ತು ಲಿಕ್ವಿಡೇಶನ್ ವೆಚ್ಚವೆಂದು ಪರಿಗಣಿಸಬಹುದಾದ ಸಂಬಂಧಿಸಿದ ನಿರ್ವಹಣಾ ವೆಚ್ಚವನ್ನೂ ಮೊದಲು ತಿಳಿಸಿದ ನಿಬಂಧನೆಯಿಂದ ಹೊರತುಪಡಿಸಲಾಗಿದೆ.
3. ಆಸಕ್ತ ಬಿಡ್ಡುದಾರರು ತಮ್ಮ ಅರ್ಜಿಗಳನ್ನು ಇ.ಎಂ.ಡಿ ಮೊತ್ತದೊಂದಿಗೆ ವೃತ್ತಿಪರ ಸಮಾಪಕರಿಗೆ ದಿನಾಂಕ **ಮಂಗಳವಾರ, 17ನೇ ಜನವರಿ, 2023, ಸಂಜೆ 5:00 ಗಂಟೆಯೊಳಗೆ** ಸಲ್ಲಿಸತಕ್ಕದ್ದು.

ಸಹಿ/- ರವೀಂದ್ರ ಬೆಳೆಯೂರು
ವೃತ್ತಿಪರ ಸಮಾಪಕರು
ದಿನಾಂಕ: 2ನೇ ಜನವರಿ, 2023
ಸ್ಥಳ: ಬೆಂಗಳೂರು
ಇ-ಮೇಲ್: ip@beleyur.com, ಮೊಬೈಲ್: +91 94481 46963

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ವಿಜನಿನಿ ಎತ್ತಿನಹೊಳೆ ಯೋಜನಾ ವಿಭಾಗ, ನಂ:4 ಮಧುಗಿರಿ, ತುಮಕೂರು ಜಿಲ್ಲೆ-572132,
ದೂ ಸಂಖ್ಯೆ: 08137-282112 Email:eeyetmadhugiri4@gmail.com
ಕ್ರ.ಸಂ:ಕಾಇಂ:ವಿಜನಿನಿ/ಎಹೊಯೋ/ಮ/ವಿ.04/ಟೆ.ಅ-13-1/2022-23/ ದಿನಾಂಕ: 31.12.2022

ತಿದ್ದುಪಡಿ-1

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗೆ ತಿಳಿಸಲಾದ ಎತ್ತಿನಹೊಳೆ ಯೋಜನೆಯಡಿ ಕಾಲುವೆ ಕಾಮಗಾರಿಯನ್ನು ಎರಡು ಟೆಂಡರ್ ದಾಖಲೆಗಳ ವ್ಯವಸ್ಥೆಯಲ್ಲಿ ಅರ್ಹ ಗುತ್ತಿಗೆದಾರರುಗಳಿಂದ ಶೇಕಡವಾರು ಟೆಂಡರ್‌ಗಳನ್ನು ದಿನಾಂಕ:20.12.2022 ರಂದು ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ.13/2022-23 ರಲ್ಲಿ ಆಹ್ವಾನಿಸಲಾಗಿರುತ್ತದೆ.
ಕಾಮಗಾರಿಗಳ ಹೆಸರು : (1) Construction of Aquaduct from Ch Km. 258.810 to Km 259.440 including construction of Causeway CD works, and other structures under yettinahole project YGC Pkg-XXVII. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) ಜಿ.ಎಸ್.ಟಿ ಹೊರತು ಪಡಿಸಿ** : 4210.19 **(2)** Construction of gravity canal from Km.259.440 to Km 261.00 comprising of earth work excavation, formation of embankment, CC lining using mechanical paver including construction of CD works, Aquaduct and other structures under yettinahole project YGC Pkg-XXVIII. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) ಜಿ.ಎಸ್.ಟಿ ಹೊರತು ಪಡಿಸಿ** : 3955.28 (3) Construction of gravity canal from Km.261.00 to Km 261.690 comprising of earth work excavation, formation of embankment, CC lining using mechanical paver including construction of CD works, Cut & Cover and other structures under yettinahole project YGC Pkg-XXIX. **ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) ಜಿ.ಎಸ್.ಟಿ ಹೊರತು ಪಡಿಸಿ** : 1714.17
ಸದರಿ ಕಾಮಗಾರಿಯ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.
ಘಟನಾವಳಿ & ದಿನಾಂಕ : (1) ಇ-ಪ್ರೊಕ್ಯೂರ್‌ಮೆಂಟ್‌ನ ಮೂಲಕ ಟೆಂಡರ್ ಪುಸ್ತಕ ಪಡೆಯುವ ದಿನಾಂಕ: **03.01.2023** ರಿಂದ **17.01.2023** ಸಂಜೆ 5.30ರ ವರೆಗೆ (2) ಭರ್ತಿ ಮಾಡಲಾದ ಟೆಂಡರ್ ಪುಸ್ತಕ ಇ-ಪ್ರೊಕ್ಯೂರ್‌ಮೆಂಟ್‌ನ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **17.01.2023** ಸಂಜೆ 5.30 ರ ವರೆಗೆ (3) ಪ್ರೀ-ಬಿಡ್ ಸಭೆಯನ್ನು ದಿನಾಂಕ **10.01.2023** ರಂದು ಬೆಳಗ್ಗೆ 11.00 ಗಂಟೆಗೆ ಮುಖ್ಯ ಇಂಜಿನಿಯರ್, ವಿ.ಜ.ನಿ.ನಿ ತುಮಕೂರು ಇವರ ಕಚೇರಿಯಲ್ಲಿ ಆಯೋಜಿಸಲಾಗಿರುತ್ತದೆ 04. ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **19.01.2023** ಬೆಳಗ್ಗೆ 11.00 ಗಂಟೆಗೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ವಿಜನಿನಿ, ಎತ್ತಿನಹೊಳೆ ಯೋಜನಾ ವಿಭಾಗ ನಂ.4, ಮಧುಗಿರಿ

ಸುಭಾಷಿತ

ಇನ್ನೊಬ್ಬರನ್ನು ಸೋಲಿಸುವುದು ಬಹಳ ಸುಲಭ. ಆದರೆ, ಅವರ ಮನಸ್ಸು ಗೆಲ್ಲುವುದು ಬಹಳ ಕಷ್ಟ.

–ಎ.ಪಿ.ಜೆ. ಅಬ್ದುಲ್ ಕಲಾಂ

ರಾಜ್ಯದ ಆರ್ಥಿಕ ಸ್ಥಿತಿಗತಿ ವೆಚ್ಚಗಳಲ್ಲಿ ಬೇಕು ವಿವೇಕ

ರಾಜ್ಯದ ಆರ್ಥಿಕತೆಯ ಸ್ಥಿತಿಗತಿ ಕುರಿತ 'ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ'ಯು ರಾಜ್ಯ ಸರ್ಕಾರದ ವರಮಾನಕ್ಕೆ ಸಂಬಂಧಿಸಿದಂತೆ ಬಹಳ ಸುಂದರವಾದ ಚಿತ್ರಣವನ್ನು ನೀಡಿದೆ. ಆದರೆ, ಇದು ಇಡೀ ವಿದ್ಯಮಾನದ ಒಂದು ಮುಖ ಮಾತ್ರ. ರಾಜ್ಯ ಸರ್ಕಾರವು ಸಾಲ ಮಾಡುವ ಪ್ರಮಾಣವನ್ನು ನಿಯಂತ್ರಿಸದೇ ಇದ್ದರೆ ಅದು ಮುಂದೊಂದು ದಿನ ದೊಡ್ಡ ಸಮಸ್ಯೆಗೆ ಸಿಲುಕಬಹುದು. ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ಮಂಡನೆಯಾಗಿರುವ ವರದಿ ಪ್ರಕಾರ, ಸಾಂಕ್ರಾಮಿಕದ ಅವಧಿಯಲ್ಲಿ ಮಂದಗತಿಗೆ ತಿರುಗಿದ್ದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ನಂತರದಲ್ಲಿ ಶೇಕಡ 9.5ರಷ್ಟು ಬೆಳವಣಿಗೆ ಸಾಧಿಸಿದೆ. ರಾಜ್ಯದ ವರಮಾನ ಸಂಗ್ರಹವು ಶೇ 10ರಷ್ಟು ಹೆಚ್ಚಾಗಿದೆ. ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿ ವರಮಾನ ಸಂಗ್ರಹವು ಶೇ 30ರಷ್ಟು ಏರಿಕೆ ಕಂಡಿದೆ. ಏಪ್ರಿಲ್‌ನಲ್ಲಿ ಶೇ 6.39ರಷ್ಟು ಇದ್ದ ಹಣದುಬ್ಬರ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇ 5.81ಕ್ಕೆ ಇಳಿಕೆಯಾಗಿದೆ. ರಾಷ್ಟ್ರ ಮಟ್ಟದಲ್ಲಿ ಸರಾಸರಿ ಹಣದುಬ್ಬರ ದರವು ಶೇ 7.4ರ ಮಟ್ಟದಲ್ಲಿದೆ ಎಂಬುದು ಗಮನಾರ್ಹ. ರಾಜ್ಯ ಸರ್ಕಾರವು ತನ್ನ ವಾರ್ಷಿಕ ಬಜೆಟ್ ಮೊತ್ತ ₹ 2.65 ಲಕ್ಷ ಕೋಟಿ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಆದರೆ, ಪ್ರಸಕ್ತ ಹಣಕಾಸು ವರ್ಷದ ಮೊದಲ ಆರು ತಿಂಗಳಲ್ಲಿ ಸರ್ಕಾರದ ವರಮಾನವು ₹ 1 ಲಕ್ಷ ಕೋಟಿಗಿಂತ ತುಸು ಹೆಚ್ಚಿದೆ. ಇದರಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಬರುವ ತೆರಿಗೆ ಪಾಲು ಕೂಡ ಸೇರಿದೆ. ರಾಜ್ಯ ಸರ್ಕಾರದ ತೆರಿಗೆ ವರಮಾನ ಹಾಗೂ ತೆರಿಗೆ ಹೊರತುಪಡಿಸಿದ ವರಮಾನವು ವರ್ಷದ ಮೊದಲಾರ್ಧದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಹೆಚ್ಚಳ ಕಂಡಿದೆಯಾದರೂ, ವರಮಾನ ಕೊರತೆ ಕಾಣಿಸುವಂತಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಬಜೆಟ್ ಪ್ರಸ್ತಾವನೆಯಲ್ಲಿ, ₹ 14,699 ಕೋಟಿ ವರಮಾನ ಕೊರತೆಯ ಅಂದಾಜು ಮಾಡಲಾಗಿತ್ತು. ಬಜೆಟ್‌ನಲ್ಲಿ, ರಾಜ್ಯದ ವಿತ್ತೀಯ ಕೊರತೆಯು ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇ 3.26ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿತ್ತು. ಈಗ ಅದನ್ನು ಪರಿಷ್ಕರಿಸಲಾಗಿದ್ದು, ವಿತ್ತೀಯ ಕೊರತೆಯು ಶೇ 2.82ರಷ್ಟು ಮಾತ್ರ ಇರಲಿದೆ ಎಂದು ಹೇಳಲಾಗಿದೆ. ಇದು ಕೂಡ ಒಳ್ಳೆಯ ಸೂಚನೆಯೇ ಹೌದು. 2023ರಲ್ಲಿ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಕಾರಣ, ಉಚಿತ ಕೊಡುಗೆಗಳಿಗಾಗಿ ಒಂದಿಷ್ಟು ಹಣ ವಿನಿಯೋಗವಾಗುವ ಸಾಧ್ಯತೆ ಇರುತ್ತದೆ. ಆದರೆ ಸರ್ಕಾರವು ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸಬೇಕು, ವರಮಾನ ಕೊರತೆಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು.

ಸರ್ಕಾರವು ವೆಚ್ಚಗಳ ಮೇಲೆ ನಿಯಂತ್ರಣ ಸಾಧಿಸಬೇಕು, ವರಮಾನ ಕೊರತೆಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕು

ಇಷ್ಟೆಲ್ಲ ಇದ್ದರೂ, ರಾಜ್ಯದ ಸಾಲ ಹೆಚ್ಚುತ್ತಿರುವುದರ ಕಡೆ ಆಡಳಿತದಲ್ಲಿ ಇರುವವರು ತುರ್ತಾಗಿ ಗಮನಹರಿಸಬೇಕಾಗಿದೆ. ಈ ವರ್ಷದಲ್ಲಿ ಸರ್ಕಾರವು ₹ 72 ಸಾವಿರ ಕೋಟಿ ಸಾಲ ಮಾಡುವ ಅಂದಾಜು ಇದೆ. ₹ 65 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತವನ್ನು ವೇತನ ಹಾಗೂ ಪಿಂಚಣಿಗಾಗಿ ಮೀಸಲಿಡಬೇಕಾಗಿದೆ, ಸಾಲದ ಮರುಪಾವತಿ ಹಾಗೂ ಬಡ್ಡಿ ತೀರಿಸಲು ₹ 43 ಸಾವಿರ ಕೋಟಿಗಿಂತ ಹೆಚ್ಚಿನ ಮೊತ್ತ ತೆಗೆದಿರಿಸಬೇಕಾಗಿದೆ. ಇವು ರಾಜ್ಯದ ಅಭಿವೃದ್ಧಿ ಕಾರ್ಯಗಳ ಮೇಲೆ ವಿನಿಯೋಗಿಸಲು ಸಿಗುವ ಹಣದ ಲಭ್ಯತೆಯನ್ನು ಕಡಿಮೆ ಮಾಡುತ್ತವೆ. ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳಲ್ಲಿ ಬಿಲ್ ಪಾವತಿ ಬಾಕಿ ಇರುವ ಕಾರಣ, ಅಲ್ಲಿ ಸರ್ಕಾರದ ಕಡೆಯಿಂದ ಆಗಬೇಕಿರುವ ಪಾವತಿಗಳ ಮೊತ್ತ ದೊಡ್ಡ ಪ್ರಮಾಣದಲ್ಲಿ ಇದೆ. ಇದು ಕೂಡ ಕಳವಳ ಮೂಡಿಸುವ ಅಂಶ. ರಾಜ್ಯ ಸರ್ಕಾರದಿಂದ ಆಗಬೇಕಿರುವ ಎಲ್ಲ ಬಗೆಯ ಪಾವತಿಗಳ ಒಟ್ಟು ಮೊತ್ತವು ₹ 5.16 ಲಕ್ಷ ಕೋಟಿ. ಇದು ರಾಜ್ಯದ ಈ ವರ್ಷದ ಬಜೆಟ್ ಮೊತ್ತದ ಸರಿಸುಮಾರು ಎರಡು ಪಟ್ಟು. ರಾಜ್ಯಕ್ಕೆ ಹೆಚ್ಚಿನ ವರಮಾನ ತಂದುಕೊಡುವುದು ಮಾಹಿತಿ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಿಸಿದ ಇತರ ಉದ್ಯಮ ವಲಯಗಳು. ಜಾಗತಿಕ ಮಟ್ಟದಲ್ಲಿ ಎದುರಾಗಬಹುದಾದ ಆರ್ಥಿಕ ಹಿಂಜರಿತದ ಪರಿಣಾಮವಾಗಿ, ಐ.ಟಿ. ಮತ್ತು ಐ.ಟಿ. ಸಂಬಂಧಿತ ಉದ್ಯಮ ವಲಯದಿಂದ ಸಿಗುವ ವರಮಾನದಲ್ಲಿ ಆಗುವ ಕುಸಿತವನ್ನೂ ಸರ್ಕಾರವು ಮನಸ್ಸಿನಲ್ಲಿ ಇರಿಸಿಕೊಳ್ಳಬೇಕು. ವರಮಾನ ಹೆಚ್ಚಳವು ತುಸು ಸಮಾಧಾನ ಮೂಡಿಸುವಂತೆ ಇದೆಯಾದರೂ, ರಾಜ್ಯ ಸರ್ಕಾರದ ಹಣಕಾಸಿನ ಒಟ್ಟಾರೆ ಸ್ಥಿತಿಯು ಉತ್ತೇಜನಕಾರಿಯಾಗಿ ಇಲ್ಲ. ಹಣಕಾಸಿನ ವಿಚಾರದಲ್ಲಿ ಶಿಸ್ತು, ವೆಚ್ಚಗಳಲ್ಲಿ ವಿವೇಕ ಈ ಹೊತ್ತಿನ ತುರ್ತು. ಇದರಲ್ಲಿ ತಪ್ಪು ಹೆಜ್ಜೆ ಇರಿಸಿದರೆ ಕೆಲವು ವರ್ಷಗಳ ನಂತರದಲ್ಲಿ ರಾಜ್ಯವು ಹಣಕಾಸು ವಿಚಾರದಲ್ಲಿ ವಿಷವರ್ತುಲವೊಂದರಲ್ಲಿ ಸಿಲುಕಬಹುದು.

ದಿನದ ಟ್ವೀಟ್

ಸ್ಪಷ್ಟನೆ ಅಗತ್ಯ

ಮಾನ್ಯ ಬಸವರಾಜ ಬೊಮ್ಮಾಯಿ ಹಾಗೂ ಎಸ್.ಟಿ. ಸೋಮಶೇಖರ್ ಅವರೇ, ನಂದಿನಿ- ಅಮುಲ್ ವಿಲೀನ ಇಲ್ಲವೆಂದರಷ್ಟೇ ಸಾಲದು. ಕೆಎಂಎಫ್/ನಂದಿನಿ ಜೊತೆಗಿನ ವ್ಯವಹಾರ ಏನೇ ಇದ್ದರೂ ಅದನ್ನು ಕೆಎಂಎಫ್/ನಂದಿನಿಯೇ ನಿರ್ಧರಿಸಬೇಕು, ಅದರ ಷರತ್ತುಗಳ ಅನ್ವಯವೇ ನಡೆಯಬೇಕು, ಬೇರೆ ಯಾರಿಗೂ ಏನನ್ನೂ ಹೇರುವುದಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ

ತಾಂತ್ರಿಕ ವಿಚಾರಗಳ ಬಗ್ಗೆ ಸುಪ್ರೀಂ ಕೋರ್ಟ್ ತಾನು ಬಯಸಿದ್ದನ್ನು ಹೇಳಬಹುದು. ಆದರೆ, ನೋಟು ರದ್ದತಿಯು ದೇಶದ ಪಾಲಿಗೆ ಸಂಪೂರ್ಣವಾಗಿ ವಿನಾಶಕಾರಿ ಆಗಿತ್ತು ಎಂಬ ಸತ್ಯವನ್ನು ಅದು ದೂರ ಮಾಡುವುದಿಲ್ಲ.

ಸುಮಂತ್ ರಾಮನ್, ಟಿ.ವಿ. ನಿರೂಪಕ



25 ವರ್ಷಗಳ ಹಿಂದೆ

ಶನಿವಾರ, 3-1-1998

• ಸರ್ಕಾರಿ ನೌಕರರ ಮುಷ್ಕರ ರಾಜ್ಯದಾದ್ಯಂತ ಯಶಸ್ವಿ

ಬೆಂಗಳೂರು, ಜ. 2– ಕೇಂದ್ರ ಸರ್ಕಾರದ ಐದನೇ ವೇತನ ಆಯೋಗದ ಶಿಫಾರಸುಗಳನ್ನು ತಮಗೂ ಅನ್ವಯಿಸಬೇಕೆಂಬ ಬೇಡಿಕೆ ಮುಂದಿಟ್ಟು ರಾಜ್ಯ ಸರ್ಕಾರಿ ನೌಕರರು ಇಂದು ಆರಂಭಿಸಿರುವ ಅನಿರ್ದಿಷ್ಟ ಅವಧಿಯ ಮುಷ್ಕರವು ರಾಜ್ಯದಾದ್ಯಂತ ಸಂಪೂರ್ಣ ಯಶಸ್ವಿಯಾಗಿದೆ.

ನೌಕರರ ಮುಷ್ಕರದಿಂದಾಗಿ ಬೆಂಗಳೂರು, ಮಂಗಳೂರು, ಮೈಸೂರು ಮತ್ತು ಬೆಳಗಾವಿ ನಗರಗಳೂ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ಸರ್ಕಾರಿ ಕಚೇರಿಗಳ ಬಾಗಿಲು ಇಂದು ತೆಗೆದಿರಲಿಲ್ಲ. ಇದರಿಂದಾಗಿ ಆಡಳಿತ ಯಂತ್ರ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು.

ಮುಷ್ಕರ ಶಾಂತಿಯುತವಾಗಿ ನಡೆದಿದ್ದು, ಯಾವುದೇ ಅಹಿತಕರ ಘಟನೆಗಳು ನಡೆದ ಬಗ್ಗೆ ವರದಿಯಾಗಿಲ್ಲ. ಮುಷ್ಕರ ನಾಳೆಯೂ ಮುಂದುವರಿಯಲಿದೆ.

• ಹಣಕಾಸು ಕಂಪನಿಗಳಿಗೆ ಆರ್‌ಬಿಐ ಅಂಕುಶ

ಮುಂಬೈ, ಜ. 2 (ಪಿಟಿಐ): ರಿಸರ್ವ್ ಬ್ಯಾಂಕ್ ಇಂದು ಬ್ಯಾಂಕಿಂಗೇತರ ಹಣಕಾಸು ಕಂಪನಿ (ಎನ್‌ಬಿಎಫ್‌ಸಿ)ಗಳ ಮೇಲೆ ಕಟ್ಟುನಿಟ್ಟಿನ ಹಾಗೂ ಕಠಿಣ ನಿರ್ಬಂಧಗಳನ್ನು ಹೇರಿದ್ದು, ಅವುಗಳು ಠೇವಣಿಗಳಿಗೆ ಕೊಡಬಹುದಾದ ಬಡ್ಡಿದರವನ್ನು ಗರಿಷ್ಠ ಶೇಕಡ 16ಕ್ಕೆ ಮಿತಿಗೊಳಿಸಿದೆ.

ಸ್ವಂತ ನಿವ್ವಳ ಹಣಕಾಸು 25 ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರುವ ಹಾಗೂ ರೇಟಿಂಗ್ ಸಂಸ್ಥೆಗಳಿಂದ 'ಎ' ದರ್ಜೆಗಿಂತ ಕೆಳಗಿನ ಅರ್ಹತೆಯನ್ನು ಪಡೆದ ಹಣಕಾಸು ಸಂಸ್ಥೆಗಳು ಸಾರ್ವಜನಿಕರಿಂದ ಠೇವಣಿ ಸ್ವೀಕರಿಸದೇ ಇರುವಂತೆ ನಿರ್ಬಂಧ ಹೇರಿದೆ.

50 ವರ್ಷಗಳ ಹಿಂದೆ

ಬುಧವಾರ, 3-1-1973

• ಆಂಧ್ರ ಸಂಪೂರ್ಣ ಬಂದ್, 3 ಸ್ಥಳಗಳಲ್ಲಿ ಐದು ಬಾರಿ ಗೋಲಿಬಾರ್: 3 ಸಾವು

ಹೈದರಾಬಾದ್, ಜ. 2– ಪ್ರತ್ಯೇಕ ಆಂಧ್ರ ಚಳವಳಿಗಾರರ ಉದ್ರಿಕ್ತ ಗುಂಪನ್ನು ಚದುರಿಸಲು 3 ಊರುಗಳಲ್ಲಿ– ನೆಲ್ಲೂರು, ಅನಂತಪುರ ಮತ್ತು ಮಚಲಿಪಟ್ಟಣ ಸಮೀಪದ ನಗಯಲಂಕಗಳಲ್ಲಿ– ಐದು ಬಾರಿ ಪೊಲೀಸರು ಗುಂಡು ಹಾರಿಸಿದಾಗ ಮೂವರು ಮೃತಪಟ್ಟು, ಹಲವರು ಗಾಯಗೊಂಡರು. ಆಂಧ್ರ ವಲಯದ 12 ಜಿಲ್ಲೆಗಳಲ್ಲೂ ಇಂದು ಸಂಪೂರ್ಣ ಬಂದ್ ಆಚರಿಸಲಾಯಿತು.

ನೆಲ್ಲೂರಿನಲ್ಲಿ ಒಬ್ಬ, ಅನಂತಪುರದಲ್ಲಿ ಇಬ್ಬರು ಗುಂಡಿಗೆ ಬಲಿಯಾದರೆಂದು ವರದಿ. ಈ ಎರಡು ಸ್ಥಳಗಳಲ್ಲಿ ಪೊಲೀಸರು ಎರಡೆರಡು ಬಾರಿ ಗುಂಡು ಹಾರಿಸಿದ್ದರು.

• ಭೂಸನೂರು ಮಠ ಅವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

ನವದೆಹಲಿ, ಜ. 2– ಎಸ್.ಎಸ್.ಭೂಸನೂರು ಮಠ ಅವರ 'ಶೂನ್ಯ ಸಂಪಾದನೆಯ ಪರಾಮರ್ಶೆ' ವಿಮರ್ಶಾ ಕೃತಿಗೆ 1972ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ.

1972ರ ಡಿಸೆಂಬರ್ 30ರಂದು ಬೆಂಗಳೂರಿನಲ್ಲಿ ಅಕಾಡೆಮಿಯ ಅಧ್ಯಕ್ಷ ಡಾ. ಸುನೀತಿ ಕುಮಾರ್ ಚಟರ್ಜಿ ಅವರ ನಾಯಕತ್ವದಲ್ಲಿ ಸಭೆ ಸೇರಿದ್ದ ಕಾರ್ಯನಿರ್ವಾಹಕ ಮಂಡಲಿಯು 1972ರ ಪ್ರಶಸ್ತಿಗಾಗಿ 13 ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡಿತು.

ಮೀಸಲಾತಿ ಎನ್ನುವುದು ಬಡತನ ನಿರ್ಮೂಲನ ಕಾರ್ಯಕ್ರಮ ಅಲ್ಲ

ಯಾವ ಕಡೆ ಸಾಮಾಜಿಕ ನ್ಯಾಯದ ನಡೆ?

ಅನುರಣನ

ನಾರಾಯಣ ಎ.

ಕರ್ನಾಟಕದಲ್ಲಿ ಎರಡು ಪ್ರಬಲ ಜಾತಿಗಳಿಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರ ಸೂತ್ರವೊಂದನ್ನು ಕಂಡುಕೊಂಡಿದೆ ಎಂಬ ವರದಿಗಳಿವೆ. ಸೂತ್ರ ಏನೇ ಇರಲಿ, ಅದರ ಸಾಂವಿಧಾನಿಕ ಸಿಂಧುತ್ವದ ಪ್ರಶ್ನೆಗಳೇನೇ ಇರಲಿ, ಈ ಎರಡು ಜಾತಿಗಳಿಗೆ ಮೀಸಲಾತಿ ಹೆಚ್ಚಿಸಲು ಹೊರಟಿರುವ ಸರ್ಕಾರದ ನಡೆ ಅದ್ಯಾವ ರೀತಿಯ ಸಾಮಾಜಿಕ ನ್ಯಾಯದ ಕಡೆ ಎನ್ನುವ ಪ್ರಶ್ನೆಯನ್ನೀಗ ಎತ್ತಬೇಕಿದೆ.

'ನಮ್ಮ ಜಾತಿಗಳಲ್ಲೂ ಬಡವರಿದ್ದಾರೆ, ಈ ಬಡವರಿಗೆ ಇತರ ಜಾತಿಗಳ ಬಡವರಿಗೆ ಸಿಗುತ್ತಿರುವಷ್ಟು ಮೀಸಲಾತಿ ದೊರೆಯದೇ ಇರುವುದರಿಂದ ಅವರು ತಾರತಮ್ಯಕ್ಕೆ ಒಳಗಾಗಿದ್ದಾರೆ. ಹಾಗಾಗಿ, ನಮ್ಮ ಜಾತಿಯ ಬಡವರಿಗೆ ನೆರವಾಗುವ ದೃಷ್ಟಿಯಿಂದ ನಾವು ಮೀಸಲಾತಿ ಕೇಳಿದರೆ ತಪ್ಪೇನು? ಸಂವಿಧಾನ ಎಲ್ಲರನ್ನೂ ಸಮನಾಗಿ ಪರಿಗಣಿಸಬೇಡವೇ?' ಇದು, ಮೀಸಲಾತಿ ಬೇಕೆಂದು ಆಗ್ರಹಿಸುವ ಪ್ರಬಲ ಜಾತಿಯವರು ಮುಂದಿಡುವ ವಾದ.

ಪ್ರಬಲ ಜಾತಿಗಳಲ್ಲಿ ಕೂಡಾ ಬಡವರಿದ್ದಾರೆ ಎನ್ನುವುದು ನಿಜ. ಹಾಗೆಂದು, ಆ ಜಾತಿಗಳ ಬಡವರಿಗೆ ಮೀಸಲಾತಿ ನೀಡದಿದ್ದರೆ ಅದು ತಾರತಮ್ಯವಾಗುತ್ತದೆ ಎನ್ನುವುದು ಮಾತ್ರ ತಪ್ಪು. ಯಾಕೆಂದರೆ, ಮೀಸಲಾತಿ ಎನ್ನುವುದು ಬಡತನ ನಿರ್ಮೂಲನ ಕಾರ್ಯಕ್ರಮ ಅಲ್ಲ. ಬಡತನ ನಿರ್ಮೂಲನ ಕಾರ್ಯಕ್ರಮಗಳು ಏನಿವೆಯೋ ಅವು ಎಲ್ಲಾ ಜಾತಿಗಳಲ್ಲಿರುವ ಬಡವರಿಗೂ ದೊರೆಯುತ್ತವೆ. ಅದಕ್ಕೆ ಅವರ ಬಳಿ ಬಿಪಿಎಲ್ ಕಾರ್ಡ್ ಇದ್ದರೆ ಸಾಕು. ಬಿಪಿಎಲ್ ಕಾರ್ಡ್ ನೀಡುವುದು ಬಡತನದ ಆಧಾರದಲ್ಲಿ, ಜಾತಿಯ ಆಧಾರದಲ್ಲಿ ಅಲ್ಲ. ಸಾಲದ್ದಕ್ಕೆ ಜಾತಿ ಆಧಾರಿತ ಅಭಿವೃದ್ಧಿ ಮಂಡಳಿಗಳು ಕೂಡಾ ಇವೆ. ಹಾಗಾಗಿ, 'ನಮ್ಮ ಜಾತಿಯ ಬಡವರಿಗೆ ಅನ್ಯಾಯವಾಗುತ್ತಿದೆ' ಎಂಬ ವಾದದಲ್ಲಿ ಹುರುಳಿಲ್ಲ.

ಹಾಗಾದರೆ, ಮೀಸಲಾತಿ ಯಾರಿಗಾಗಿ? ರಾಜಕೀಯ ಅಧಿಕಾರದಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಎಲ್ಲ ಜಾತಿಯವರೂ ಪ್ರಾತಿನಿಧ್ಯ ಪಡೆಯಬೇಕೆಂಬ ಉದ್ದೇಶದಿಂದ ಮೀಸಲಾತಿ ಸೌಲಭ್ಯವನ್ನು ಸಂವಿಧಾನವು ನೀಡಿದೆ. ರಾಜಕೀಯ ಅಧಿಕಾರ ಮತ್ತು ಸರ್ಕಾರಿ ಹುದ್ದೆಗಳೆಲ್ಲಾ ಕೆಲವೇ ಜಾತಿಗಳ ಕೈಯ್ಯಲ್ಲಿ ಉಳಿದರೆ ಅದರಿಂದಾಗಿ ತಲೆದೋರಬಹುದಾದ ಅಸಮಾನತೆ, ಅಸಮಾಧಾನ, ಅಸಂತೃಪ್ತಿ ಮತ್ತು ಪರಕೀಯ ಪ್ರಜ್ಞೆಯಿಂದಾಗಿ ದೇಶದಲ್ಲಿ ಆಡಳಿತ ನಡೆಸುವುದು ಮತ್ತು ದೇಶವನ್ನು ಒಂದಾಗಿ ಉಳಿಸಿಕೊಳ್ಳುವುದು ಕಷ್ಟ. ಹಾಗಾಗಿ, ಯಾವ್ಯಾವ ಜಾತಿಗಳು ರಾಜಕೀಯದಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆದಿರಲಿಲ್ಲವೋ ಯಾವ್ಯಾವ ಜಾತಿಗಳಿಗೆ ಅವುಗಳ ಸಾಮಾಜಿಕ ಹಿಂದುಳಿದಿರುವಿಕೆಯ ಕಾರಣದಿಂದಾಗಿ ಮುಂದೆಯೂ ಅಂತಹ ಪ್ರಾತಿನಿಧ್ಯವನ್ನು ಮುಕ್ತವಾಗಿ ಸ್ಪರ್ಧಿಸಿ ಪಡೆದುಕೊಳ್ಳಲು ಸಾಧ್ಯವಿರಲಿಲ್ಲವೋ ಅಂತಹ ಜಾತಿಗಳಿಗೆ ಮೀಸಲಾತಿಯನ್ನು ಸಂವಿಧಾನ ನೀಡಿದೆ. ಇಂದಿಗೂ ಮುಂದೆಯೂ ಮೀಸಲಾತಿ ಪಡೆಯಲು ಇವೆರಡು ಅಂಶಗಳೇ ಮಾನದಂಡಗಳಾಗಿರತಕ್ಕದ್ದು. 'ನಮ್ಮ ಜಾತಿಯಲ್ಲೂ ಬಡವರಿದ್ದಾರೆ' ಎನ್ನುವುದು ಮೀಸಲಾತಿ ಕೇಳಲು ಮಾನದಂಡವಲ್ಲ.

ಪ್ರಬಲ ಜಾತಿಯವರು ಮುಂದಿಡುವ ಇನ್ನೊಂದು ವಾದ ಎಂದರೆ, 'ನಮ್ಮ ಜನಸಂಖ್ಯೆ ದೊಡ್ಡದಿದೆ, ನಮಗೆ ಸಿಗುವ ಮೀಸಲಾತಿ ಪ್ರಮಾಣ ಕಡಿಮೆ ಇದೆ' ಎಂದು. ಯಾವುದೋ ಒಂದು ಪ್ರಬಲ ಜಾತಿಯು ಮೀಸಲಾತಿ ಬೇಕೆಂದೋ ಅಥವಾ ಮೀಸಲಾತಿ ಹೆಚ್ಚಿಸಬೇಕೆಂದೋ ಕೇಳಬೇಕಾದರೆ ಅದಕ್ಕೆ ಆಧಾರ ಆ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನೀಡಲಾಗಿದೆಯೇ ಇಲ್ಲವೇ ಎನ್ನುವುದಲ್ಲ. ಬದಲಿಗೆ, ಆ ಜಾತಿಯ ಜನ ತಮ್ಮ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯದಲ್ಲಿ ಮತ್ತು ಉದ್ಯೋಗದಲ್ಲಿ ಈಗಾಗಲೇ ಪ್ರಾತಿನಿಧ್ಯ ಪಡೆದಿದ್ದಾರೆಯೇ ಇಲ್ಲವೇ ಎನ್ನುವುದು ಮುಖ್ಯ ವಿಚಾರ.

ಮೀಸಲಾತಿ ಹೆಚ್ಚಿಸಬೇಕು, ಪ್ರವರ್ಗ ಬದಲಾಗಬೇಕು ಎಂದು ಈಗ ಆಗ್ರಹಿಸುತ್ತಿರುವ ಎರಡೂ ಪ್ರಬಲ ಜಾತಿಗಳವರು ರಾಜಕೀಯದಲ್ಲಿ ಅವರ ಜನಸಂಖ್ಯೆಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಾತಿನಿಧ್ಯ ಪಡೆದಿದ್ದಾರೆ ಎಂಬುದಕ್ಕೆ ಪುರಾವೆ ಇದೆ. ಸರ್ಕಾರಿ ಉದ್ಯೋಗಗಳಲ್ಲಿ ಕೂಡಾ ಈ ಎರಡು ಜಾತಿಗಳ ಪ್ರಾತಿನಿಧ್ಯ ಬಹಳಷ್ಟು ಪ್ರಮಾಣದಲ್ಲಿ ಇದೆ ಎನ್ನುವುದು ಅಧಿಕೃತ ಅಂಕಿ ಸಂಖ್ಯೆಗಳಿಲ್ಲದೆ ಹೋದರೂ ಎಲ್ಲರಿಗೂ ತಿಳಿದಿರುವ ವಿಚಾರ. ಇಲ್ಲ ಎನ್ನುವುದಾದರೆ ಅದಕ್ಕೆ ಪುರಾವೆ ಒದಗಿಸಬೇಕು. ಪುರಾವೆ ಒದಗಿಸಿದರೂ ಬರೀ ಈ ಎರಡು ಜಾತಿಗಳಿಗೆ ಮಾತ್ರ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಉದ್ಯೋಗ ಬೇಕು ಎಂದರೆ ಅದು ಈಡೇರಿಸಲು ಅಸಾಧ್ಯವಾದ ಬೇಡಿಕೆ.

ಜನಸಂಖ್ಯೆಯ ಆಧಾರದಲ್ಲಿ ನಿರ್ಧರಿಸುವುದಾದರೆ ಅದನ್ನು ಎಲ್ಲಾ ಜಾತಿಗಳ ವಿಚಾರದಲ್ಲೂ ಮಾಡಬೇಕಾಗುತ್ತದೆ. ಅಂದರೆ, ಈಗಿರುವ ಮೀಸಲಾತಿಗೆ ಬದಲಾಗಿ ಎಲ್ಲಾ ಜಾತಿಗಳಿಗೂ ಅವರವರ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯದಲ್ಲಿ ಮತ್ತು ಉದ್ಯೋಗಗಳಲ್ಲಿ ಪ್ರಾತಿನಿಧ್ಯ ನೀಡುವ ವ್ಯವಸ್ಥೆ ಬರಬೇಕಾಗುತ್ತದೆ. ಮೀಸಲಾತಿ ವಿವಾದಕ್ಕೆ ಇದುವೇ ಅಂತಿಮ ಪರಿಹಾರ ಅಂತ ಕೆಲವರ ವಾದ. ಪರಿಹಾರ ಹೌದೋ ಅಲ್ಲವೋ ಎನ್ನುವುದು ಬೇರೆ ಪ್ರಶ್ನೆ. ಸದ್ಯಕ್ಕಂತೂ ಇದನ್ನು ಜಾರಿಗೆ ತರುವುದಕ್ಕೆ ತಯಾರಿಯೂ ಇಲ್ಲ, ಸಾಧ್ಯತೆಯೂ ಇಲ್ಲ.



ಪ್ರಬಲ ಜಾತಿಯವರು ಇನ್ನೊಂದು ವಾದ ಮಂಡಿಸುತ್ತಾರೆ. ಅದು ಹೀಗಿದೆ: 'ಅವರ ಜಾತಿಗೆ-ಜಾತಿಯನ್ನು ಇಡಿಯಾಗಿ ಪರಿಗಣಿಸಿದಾಗ– ರಾಜಕೀಯ ಮತ್ತು ಔದ್ಯೋಗಿಕ ಪ್ರಾತಿನಿಧ್ಯ ಸಿಕ್ಕರೂ ಕೆಲವು ಉಪಜಾತಿ, ಉಪಪಂಗಡಗಳಿಗೆ ಸರಿಯಾದ ಪ್ರಾತಿನಿಧ್ಯ ದೊರಕಿಲ್ಲ. ಹಾಗಾಗಿ ಅಂತಹ ಉಪಜಾತಿ, ಉಪಪಂಗಡಗಳಿಗೆ ಸೂಕ್ತ ಪ್ರಾತಿನಿಧ್ಯ ಕಲ್ಪಿಸುವುದಕ್ಕಾಗಿ ಮೀಸಲಾತಿ ಹೆಚ್ಚಳ ಅಥವಾ ಪ್ರವರ್ಗ ಬದಲಾವಣೆ ಬೇಕು'. ಮೇಲ್ನೋಟಕ್ಕೆ ಇದು ಸರಿಯಾದ ಬೇಡಿಕೆ ಅಂತ ಅನ್ನಿಸಬಹುದು. ಆದರೆ, ಪ್ರಶ್ನೆ ಇರುವುದು ಯಾವುದೋ ಜಾತಿ, ಪಂಗಡ ಅಥವಾ ಉಪಪಂಗಡಗಳಿಗೆ ಈಗಾಗಲೇ ರಾಜಕೀಯದಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಪ್ರಾತಿನಿಧ್ಯ ಇದೆಯೇ ಇಲ್ಲವೇ ಎನ್ನುವುದಷ್ಟೇ ಅಲ್ಲ. ಅಂತಹ ಜಾತಿ, ಪಂಗಡ, ಉಪಪಂಗಡಗಳಿಗೆ ಇತರ ಜಾತಿಗಳ ಜತೆಗೆ ಸ್ಪರ್ಧಿಸಿ ತಮ್ಮ ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳಲು ಯಾವುದೇ ರೀತಿಯ ಸಾಮಾಜಿಕ ಹಿಂದುಳಿದಿರುವಿಕೆಯ ಅಡಚಣೆ ಇದೆಯೇ ಎನ್ನುವುದನ್ನು ಕೂಡ ಪರಿಗಣಿಸಬೇಕಿದೆ.

ಕರ್ನಾಟಕದಲ್ಲಿ ಮೀಸಲಾತಿಗಾಗಿ ಪಟ್ಟುಹಿಡಿದಿರುವ ಪ್ರಬಲ ಜಾತಿಗಳಿಗೆ ಪ್ರಾತಿನಿಧ್ಯ ಕಡಿಮೆಯಾಗಿದೆ ಎನ್ನುವುದಕ್ಕೆ ಆಧಾರವಿಲ್ಲ. ಯಾವುದೋ ಉಪಪಂಗಡದ ವಿಚಾರದಲ್ಲಿ ಹಾಗಾಗಿದ್ದರೆ, ಅವರಿಗೆ ಸ್ಪರ್ಧಿಸಿ ತಮ್ಮ ಪ್ರಾತಿನಿಧ್ಯ ಹೆಚ್ಚಿಸಿಕೊಳ್ಳಲು ಸಾಮಾಜಿಕ ಹಿಂದುಳಿದಿರುವಿಕೆಯ ಅಡಚಣೆ ಇದೆ ಎನ್ನುವಂತಿಲ್ಲ. ಆರ್ಥಿಕ ಅಡಚಣೆ ಇದ್ದದ್ದೇ ಆದರೆ ಅದಕ್ಕೆ ಪರಿಹಾರ ಬಿಪಿಎಲ್ ಕಾರ್ಡ್ ವಿನಾ ಮೀಸಲಾತಿಯಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ, ಪ್ರಾತಿನಿಧ್ಯ ಕಡಿಮೆ ಇದೆ ಎನ್ನುವುದಕ್ಕೆ ಆಧಾರ ಇಲ್ಲದೆ ಇದ್ದರೂ ಈ ಎರಡೂ ಪ್ರಬಲ ಜಾತಿಗಳಿಗೂ ಈಗಾಗಲೇ ಮೀಸಲಾತಿ ಇದೆ. ಯಾವುದೋ ಉಪಪಂಗಡಕ್ಕೆ ಅನ್ಯಾಯವಾಗಿದ್ದರೆ, ಅಂತಹ ಉಪಪಂಗಡಗಳು ಕೇಳಬಹುದಾಗಿರುವುದು ಈಗಾಗಲೇ ಇರುವ ಮೀಸಲಾತಿಯಲ್ಲಿ ಒಳಮೀಸಲಾತಿಯನ್ನೇ ವಿನಾ ಮೀಸಲಾತಿ ಹೆಚ್ಚಳ ಅಥವಾ ಪ್ರವರ್ಗ ಬದಲಾವಣೆಯನ್ನಲ್ಲ.

ಒಟ್ಟಿನಲ್ಲಿ, ಯಾವ ಜಾತಿಗಳು ಈಗಾಗಲೇ ರಾಜಕೀಯದಲ್ಲಿ ಮತ್ತು ಸರ್ಕಾರಿ ನೌಕರಿಗಳಲ್ಲಿ ಬಹಳಷ್ಟು ಪ್ರಾತಿನಿಧ್ಯ ಹೊಂದಿರುವುವೋ ಅಥವಾ ಹೊಂದಿರದಿದ್ದರೂ ಅಂತಹ ಪ್ರಾತಿನಿಧ್ಯ ಸಂಪಾದಿಸಲು ಯಾವುದೇ ಸಾಮಾಜಿಕ ಹಿಂದುಳಿದಿರುವಿಕೆಯ ಅಡಚಣೆ ಅನುಭವಿಸುತ್ತಿಲ್ಲವೋ ಅಂತಹ ಜಾತಿಗಳು ಮೀಸಲಾತಿ ಬೇಕೆಂದು ಅಥವಾ ಮೀಸಲಾತಿ ಹೆಚ್ಚಿಸಬೇಕೆಂದು ಕೇಳಬಾರದು. ಕೇಳಿದರೂ ಸರ್ಕಾರ ನೀಡಬಾರದು. ನೀಡಿದರೂ ನ್ಯಾಯಾಂಗ ಅದನ್ನು ಒಪ್ಪಬಾರದು. ಈ ದೃಷ್ಟಿಯಿಂದ ನೋಡಿದಾಗ, ಆರ್ಥಿಕವಾಗಿ ಹಿಂದುಳಿದವರಿಗಾಗಿ ಜಾರಿಯಾಗಿರುವ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದದ್ದು ದುರದೃಷ್ಟಕರ.

ಯಾರಿಗೆ ಮೀಸಲಾತಿ ಬೇಕು, ಯಾರಿಗೆ ಬಿಪಿಎಲ್ ಕಾರ್ಡ್ ಸಾಕು ಅಂತ ಎಲ್ಲರಿಗೂ ಗೊತ್ತು. ಮೀಸಲಾತಿ ಪಡೆಯಲು ಅರ್ಹರಾಗಿದ್ದೂ ಯಾರಿಗೆ ಅದು ಲಭಿಸುತ್ತಿಲ್ಲವೋ ಅಂತಹವರಿಗೆ ಧ್ವನಿಯಿಲ್ಲ. ಗಟ್ಟಿ ಧ್ವನಿ ಇರುವವರು ಏನೇ ಕೇಳಿದರೂ ಇಲ್ಲ ಎನ್ನುವ ಧೈರ್ಯ ಸಂವಿಧಾನದ ಯಾವ ಅಂಗಗಳಿಗೂ ಉಳಿದಿಲ್ಲ. ಧ್ವನಿ ಇಲ್ಲದಿರುವುದೇ ಮೀಸಲಾತಿ ಪಡೆಯಲು ಇರುವ ಮೊದಲ ಅರ್ಹತೆ ಎನ್ನುವುದು ಎಲ್ಲರಿಗೂ ಮರೆತೇಹೋದಂತಿದೆ.

ಚುರುಮುರಿ



ಪೊಲಿಟಿಕಲ್ ರೆಸಿಪಿ

• ಲಿಂಗರಾಜು ಡಿ.ಎಸ್.

ಹಿರಿ, ಕಿರಿ, ಮರಿ ಪುಢಾರಿಗಳಿಗೆ ಪೊಲಿಟಿಕಲ್ ಕಿಚನ್ನಿಗೆ ಸ್ವಾಗತ. ನಾನು ಈವತ್ತು ನಿಮಗೆ ನಮ್ಮ ದೇಶದ ಹದಗೆಟ್ಟ ರಾಜಕೀಯದಲ್ಲಿ ಬಳಸುವ ಭ್ರಷ್ಟಾಚಾರದ ಅಕ್ರಮ, ಪರ್ಸೆಂಟೇಜ್, ಕಮಿಷನ್ ರೆಸಿಪಿಯಲ್ಲಿ ಏನೇನು ಸೀಕ್ರೆಟ್ ಇರುತ್ತೆ ಅಂತ ಹೇಳ್ತೀನಿ. ವಿದೇಶಿ ರಾಜಕಾರಣಿಗಳು ಜನರಿಗಾಗಿ ರೆಸಿಪಿ ಮಾಡುವಾಗ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಮಾತ್ರ ಹಾಕುವುದರಿಂದ ಸಂಪಾದನೆ ಸಾಧ್ಯವಿಲ್ಲ!

ಎಲ್ಲರಿಗೂ ಈ ಪಾಕ ಮಾಡೋಕ್ಕೆ ಬರಲ್ಲ. ಎಲೆಕ್ಷನ್ ಬಂತಲ್ಲ ಮುಂದ್ಲ ಖರ್ಚಿಗೆ ಕಾಸಿನ ರೆಸಿಪಿ ಮಾಡ್ಕೊಳ್ಳೋ ಅಗತ್ಯ ನಿಮಗೆ ತುಂಬ ಇರುತ್ತೆ! ರೆಸಿಪಿಯನ್ನು ಉಣ್ಣಿಸುವಾಗ ಬಿಳಿ ಅಂಗಿ, ಬಿಳಿ ಪ್ಯಾಂಟು ಅಥವಾ ಪಂಚೆ ಮತ್ತು ಬಿಳಿ ಪಾದರಕ್ಷೆ ಧರಿಸಿ ಡಿಕಾವಾಗಿ ಕಾಣ್ತಿದ್ದರೆ ಎಫೆಕ್ಟ್ ಜಾಸ್ತಿ!

ಮೊದಲು ನಿಮ್ಮ ರೆಸಿಪಿ ಉಣ್ಣುವವರನ್ನು ಗುರುತಿಸಿಕೊಳ್ಳಿ. ಇದನ್ನು ತಯಾರಿಸುವಾಗ ಸಿದ್ಧಾಂತಗಳನ್ನು ಮತ್ತು ನೈತಿಕ ಮೌಲ್ಯಗಳನ್ನು ದೂರದಲ್ಲಿಡಿ! ಭ್ರಷ್ಟಾಚಾರದ ರೆಸಿಪಿಗೆ ಧಾರಾಳವಾಗಿ ಹುಸಿನಗುವನ್ನ ಹಾಕಿ ಬಿಸಿ ಮಾಡಬೇಕು. ನಗು ಸ್ವಲ್ಪ ಜಾಸ್ತಿಯಾದ್ರೂ ಪರವಾಗಿಲ್ಲ. ಅದು ಚೆನ್ನಾಗಿ ಸೆಟ್ಲ್ ಆದ ಮೇಲೆ ಮಾತಿನ ಸಿಹಿಯನ್ನು ಹಾಕಿ, ಪಾಕ ಹದಕ್ಕೆ ಬರುವವರೆಗೆ ನಿಧಾನವಾಗಿ ತಿರುವುತ್ತಾ ತಳ ಹತ್ತದಂತೆ ನೋಡಿಕೊಳ್ಳಿ. ಆಮೇಲೆ ಭರವಸೆಗಳನ್ನು ಹಾಕುತ್ತಾ ಜೊತೆಗೆ ಕುಬುದ್ಧಿ ಮತ್ತು ಸುಳ್ಳನ್ನು ಸೇರಿಸಿ ಮಿಕ್ಸ್ ಮಾಡಿ. ಇದನ್ನು ಸಿದ್ಧಪಡಿಸುವಾಗ ಅನುಮಾನದ ಹೊಗೆ ಬರದ ಹಾಗೆ ನೋಡಿಕೊಳ್ಳಬೇಕು. ಕೊನೆಗೆ ಸುವಾಸನೆಗೋಸ್ಕರ ಸ್ವಲ್ಪವೇ ಪ್ರಾಮಾಣಿಕತೆಯನ್ನು ಹಾಕಿ ಅದರ ಮೇಲೆ ಬುದ್ಧಿವಂತಿಕೆ ಮತ್ತು ಭಂಡತನವನ್ನು ಬೆರೆಸಿ ಗಾರ್ನಿಶ್ ಮಾಡಿ. ನಿಮ್ಮ ರೆಸಿಪಿ ಈಗ ಸಿದ್ಧವಾಗಿದೆ ಸ್ನೇಹಿತರೇ!

ಈ ರೆಸಿಪಿ ದುರಾಚಾರದ್ದು, ಅಕ್ರಮದ ವಾಸನೆ ಬರ್ತಿದೆ ಅನ್ನುವ ವಿರೋಧಿಗಳ ಟೀಕೆಗೆ ಬೇಜಾರಾಗದಿರಿ. ಇದನ್ನು ಸಮಯ ಸಂದರ್ಭ ನೋಡಿಕೊಂಡು ನಮ್ಮಂಥಾ ಮಂಕುದಿಣ್ಣೆಗಳಿಗೆ ಉಣ್ಣಿಸೋದು ನಿಮ್ಮ ಧರ್ಮ, ಉಣ್ಣೋದು ನಮ್ಮ ಕರ್ಮ!

ಸಂಗತ

ಪ್ರವಾಸ ಮತ್ತು ಪ್ರಯಾಸ!

ಪ್ರವಾಸಿಗರಿಂದ ಪಂಚಾಯಿತಿಗಳು ವಸೂಲಿ ಮಾಡುವ ಹಣದಿಂದ ಸೌಕರ್ಯ ಕಲ್ಪಿಸಬಹುದಲ್ಲವೇ?

• ಪ. ರಾಮಕೃಷ್ಣಶಾಸ್ತ್ರಿ

ವರ್ಷದ ಕೊನೆಗೆ ಗೆಳೆಯರೊಂದಿಗೆ ಮೈಸೂರು ಜಿಲ್ಲೆಯ ಆಯ್ದ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿದ್ದೆ. ಎಲ್ಲಿ ನೋಡಿದರೂ ಜನ ಜನ ಜನ! ಕೋವಿಡ್ ಸಾಂಕ್ರಾಮಿಕದಿಂದ ಹೊದ್ದು ಮಲಗಿದ್ದ ಪ್ರವಾಸೋದ್ಯಮವನ್ನು ಬಡಿದೆಬ್ಬಿಸಿದಂತಿತ್ತು ಕಿಕ್ಕಿರಿದ ಜನಸಂದಣಿ. ಜನಸಂಚಾರ ಸ್ತಬ್ಧವಾಗಿದ್ದ ಕಾಲದಲ್ಲಿ ಪ್ರವಾಸೋದ್ಯಮ ಇಲಾಖೆಯ ಬರಿದಾದ ಹಣದ ಖಾತೆ ಈಗ ಸಂಪನ್ನವಾಗಿ ತುಂಬಿರಬಹುದೆಂದು ಖುಷಿಪಡಲು ಏನೂ ಕಾರಣವಿರಲಿಲ್ಲ. ಸರ್ಕಾರದ ಹೆಸರಿನಲ್ಲಿ ನಡೆಯುವ ಸುಲಿಗೆ ಮತ್ತು ಅಲ್ಲಿ ತಾಂಡವವಾಡುವ ಅವ್ಯವಸ್ಥೆ ನೋಡಿದರೆ, ಇದು ಪ್ರವಾಸೋದ್ಯಮವಲ್ಲ ಪ್ರಯಾಸೋದ್ಯಮ ಅಂತಲೇ ತೋರಿತು.

ತಲಕಾಡಿಗೆ ಪ್ರವೇಶಿಸುವ ಆರಂಭದಲ್ಲೇ ತಂಡವೊಂದು ಪ್ರವಾಸಿಗರ ವಾಹನವನ್ನು ತಡೆಯುತ್ತದೆ. ಗ್ರಾಮ ಪ್ರವೇಶಿಸಬೇಕಿದ್ದರೆ ಪಂಚಾಯಿತಿ ನಿಗದಿಪಡಿಸಿದ ಶುಲ್ಕವನ್ನು ಕೊಡಿ ಎಂದು ಕೈಯ್ಯೊಡ್ಡುತ್ತದೆ. ಅವರು ಕೊಡುವ ಮುದ್ರಿತ ರಸೀದಿ ಸಾಚಾವೋ ಖೊಟ್ಟಿಯೋ ಅಲ್ಲಿರುವ ದೇವರಿಗೇ ಗೊತ್ತು. ಹೀಗೆ ವಸೂಲಿ ಮಾಡಿದ ಹಣವನ್ನು ಪಂಚಾಯಿತಿ ಆ ಕ್ಷೇತ್ರದ ಅಭಿವೃದ್ಧಿಗೆ ಬಳಸಬೇಕು ತಾನೆ? ಇಲ್ಲವೇ ಇಲ್ಲ. ಕುಡಿಯುವ ನೀರಿಲ್ಲ, ಸಾರ್ವಜನಿಕರಿಗೆ ಬಯಲೇ ಶೌಚಾಲಯ.

ತಲಕಾಡಿನಿಂದ ಶಿವನಸಮುದ್ರದತ್ತ ಹೊರಟರೆ ಅಲ್ಲೂ ಇದೇ ಗತಿ. ಪಂಚಾಯಿತಿಯ ಕಡೆಯವರೆನಿಸಿಕೊಂಡವರಿಂದ ಸುಲಿಗೆ. ಉತ್ತಮ ರಸ್ತೆಯನ್ನೋ ಶುದ್ಧ ನೀರಿನ ಸರಬರಾಜನ್ನೋ ಅದರಿಂದ ಮಾಡಿದ್ದರೆ ಆಕ್ಷೇಪವಿರಲಿಲ್ಲ. ಸಹಸ್ರ ಸಹಸ್ರ ಪ್ರವಾಸಿಗರು ಬರುತ್ತಾರೆ, ಕುಡಿಯಲು ಶುದ್ಧ ನೀರಿಲ್ಲ, ಕಾಣಲು ಗಗನಚುಕ್ಕಿ, ಭರಚುಕ್ಕಿಯ ನೀರಷ್ಟೇ ಗತಿ. ಮೇಲಿಂದ ನೋಡಿದರೇ ಜಲಪಾತ ಕಾಣಿಸುತ್ತದೆ. ಮೆಟ್ಟಿಲುಗಳ ಮೂಲಕ ಕೆಳಗಿಳಿದು ನೋಡಬೇಕಿದ್ದರೆ ಶುಲ್ಕ ಕೊಡಬೇಕು. ಇಲ್ಲಿ ಆಕಾಶ ನೋಡಲು ದೊಣೆನಾಯಕನ ಒಪ್ಪಿಗೆ ಬೇಕೆಂಬ ಗಾದೆ ನೆನಪಾಗುತ್ತದೆ.

ನಂಜನಗೂಡಿನ ದೇವಾಲಯಕ್ಕೆ ಹೋದರೆ ಫಲಕವೊಂದು ಗಮನ ಸೆಳೆಯುತ್ತದೆ, 'ಮೋಕ್ಷ ಮಾರ್ಗಕ್ಕೆ ದಾರಿ'. ಹೌದು, ಈ ಫಲಕವಿರುವ ಬೀದಿಯ ಇಕ್ಕೆಲಗಳಲ್ಲೂ ರಾಶಿ ರಾಶಿ ಶೌಚ. ಅಷ್ಟೊಂದು ಜನಸಂದಣಿಯ ಕ್ಷೇತ್ರದಲ್ಲಿ ಶೌಚಾಲಯ ವ್ಯವಸ್ಥೆ ಕಲ್ಪಿಸಿ ಬೀದಿ ಶೌಚಕ್ಕೆ ಮೋಕ್ಷ ಒದಗಿಸಲು, ದೇವಾಲಯದ ಹಣ ಬಾಚುವ ಮುಜರಾಯಿ ಇಲಾಖೆಗೆ ಸಾಧ್ಯವೇ ಆಗಿಲ್ಲ. ಜನಸಂದಣಿ ಕಂಡರೆ, ಇಡೀ ದಿನ ದೇವರ ದರ್ಶನವಾಗಲಿಕ್ಕಿಲ್ಲ ಎಂಬ ಭಯ ಬೇಕಾಗಿಲ್ಲ. ಭಸ್ಮಧಾರಿಯೊಬ್ಬ ಓಡೋಡಿ ಬರುತ್ತಾನೆ. ಒಬ್ಬರಿಗೆ ನೂರು ರೂಪಾಯಿ ಕೊಟ್ಟರೆ ಶೀಘ್ರ ದೇವರ ದರ್ಶನ ಮಾಡಿಸುವುದಾಗಿ ಹೇಳುತ್ತಾನೆ. ಅನೇಕರು ಅವನಿಗೆ ಹಣ ಕೊಡುತ್ತಾರೆ. ಈ ಮೊತ್ತ ತೆರಲಾಗದೆ ಸರತಿಯಲ್ಲಿ ನಿಂತವರನ್ನು ದೂರ ಸರಿಸುತ್ತ ಶರವೇಗದಿಂದ ಆತ ಕಾಯುವ ಸಂಕಷ್ಟದ ನರಕದ ಹೆಬ್ಬಾಗಿಲುಗಳನ್ನು ದಾಟಿಸಿ ಸಾಕ್ಷಾತ್ ಪರಶಿವನ ಸನ್ನಿಧಿಗೆ ಕರೆದೊಯ್ಯುತ್ತಾನೆ! ಹೀಗೆ ಕೊಡುವ ಹಣಕ್ಕೆ ರಸೀದಿಯೇ ಇಲ್ಲ. ಹಣ ಕೊಡದವರು ಸರತಿ ಸಾಲಿನ ನೂಕಾಟದಲ್ಲಿ ಹೈರಾಣಾಗಿಹೋಗುವ ಕಾಲದಲ್ಲಿ, ಹಣ ಕೊಟ್ಟವ ಹಣದಿಂದ ದೇವರನ್ನೂ ಒಲಿಸಿಕೊಳ್ಳಬಲ್ಲೆ ಎಂಬ ವಿಜಯಗಾಂಭೀರ್ಯದಿಂದ ಹೊರಬರುತ್ತಾನೆ. ಭಕ್ತರೆಲ್ಲರೂ ಸಮಾನರೆಂದು ತಿಳಿದ ದೇವದೇವನ ಸನ್ನಿಧಿಯಲ್ಲೂ ಅದೆಂಥ ಭಕ್ತಿಯ ವ್ಯಾಪಾರ, ವ್ಯವಹಾರ!

ನರಸಿಂಹರಾಜಪುರದ ಹೊಯ್ಸಳ ಶಿಲ್ಪಕಲಾ ಸೌಂದರ್ಯದ ದೇವಾಲಯ ಖಂಡಿತ ವೀಕ್ಷಿಸಲೇಬೇಕಾದ್ದು. ಇಲ್ಲಿ ಪ್ರವಾಸಿಗರ ವಾಹನ ಪುರ ಪ್ರವೇಶಿಸುವಾಗಲೇ ಗಮನ ಸೆಳೆಯುವ ಫಲಕ, 'ನಿಮ್ಮ ವಾಹನವನ್ನು ಎಲ್ಲಿಯೇ ನಿಲ್ಲಿಸಿದರೂ ಗ್ರಾಮ ಪಂಚಾಯಿತಿಗೆ ₹ 50 ಶುಲ್ಕ ಕೊಡಬೇಕು'. ಸರಿ ಕೊಡೋಣ. ಡಿಸೆಂಬರ್ ತಿಂಗಳ ಕೊನೆ. ನಮಗೆ ಬಂದ ರಸೀದಿಯ ಸಂಖ್ಯೆ 124. ಯಾವುದೇ ಸರ್ಕಾರದ ರಸೀದಿಗಳ ಸಂಖ್ಯೆಗಳು ಮುಂದುವರಿಯುವುದು ನಿಯಮ. ಇಡೀ ವರ್ಷದಲ್ಲಿ 124 ವಾಹನಗಳು ಮಾತ್ರ ಬಂದಿರಲು ಸಾಧ್ಯವಿಲ್ಲ, ಈ ಸಂಖ್ಯಾಶಾಸ್ತ್ರದ ಮರ್ಮವೇನೆಂಬುದನ್ನು ದೇವರೇ ಬಲ್ಲ!



ದೇವಾಲಯ ಪ್ರವೇಶಕ್ಕಿಂತ ಬಹುದೂರದಲ್ಲಿ ಬ್ಯಾರಿಕೇಡ್ ಹಾಕಿ ಅಧಿಕಾರಿಗಳು ನಿಲ್ಲುತ್ತಾರೆ. ಇಲ್ಲಿ ತಲೆಗಂದಾಯವನ್ನು ಆನ್‌ಲೈನ್ ಮೂಲಕ ಅವರು ಹೇಳುವ ಖಾತೆಗೆ ರವಾನಿಸಬೇಕು. ಒಬ್ಬರು ಐವರ ತಲೆಗಂದಾಯ ಮಾತ್ರ ಸಲ್ಲಿಸಲು ಅವಕಾಶ. ಮೊಬೈಲಿನಲ್ಲಿ ಹಣ ರವಾನಿಸಲು ತಿಳಿಯದವರಿಗೆ ದೇವಾಲಯ ದರ್ಶನ ಭಾಗ್ಯವಿಲ್ಲ. ಶಾಲೆಗಳಿಂದ ತಂಡತಂಡವಾಗಿ ವಿದ್ಯಾರ್ಥಿಗಳನ್ನು ಕರೆತಂದ ಶಿಕ್ಷಕರಿಗೆ ಐವರಿಗಿಂತ ಹೆಚ್ಚಿನವರ ಶುಲ್ಕ ತುಂಬಿಸಲು ಅವಕಾಶ ಸಿಗಲಿಲ್ಲ. ಆದರೆ ಇಲ್ಲಿರುವ ಅಧಿಕಾರಿಗಳು ಸುಲಿಗೆ ಮಾಡಲಿಲ್ಲ. ಐವರ ಹಣ ಮಾತ್ರ ಹಾಕಿಸಿಕೊಂಡು ಜತೆಗೆ ಬಂದವರನ್ನೆಲ್ಲ ಒಳಗೆ ಬಿಡುತ್ತಿದ್ದರು. ಇದೇ ವ್ಯವಹಾರ ಮುಂದುವರಿದರೆ ಪ್ರವಾಸೋದ್ಯಮ ಇಲಾಖೆಗಾಗುವ ನಷ್ಟದ ಮೊತ್ತ ಸಣ್ಣದೇನಲ್ಲ.

ನಂಜನಗೂಡಿನಿಂದ ಮುಂದೆ ವನ್ಯಮೃಗ ಸಂರಕ್ಷಣಾ ಅರಣ್ಯವಿದೆ. ಮೃಗ ವೀಕ್ಷಣೆಗೆ ಸಾವಿರಾರು ಜನ ಬರುತ್ತಾರೆ. ಅರಣ್ಯ ಅಧಿಕಾರಿಗಳು ಹೇಳುತ್ತಾರೆ, 'ಇಂದು ಮೃಗಗಳಿಗೆ ಫೀಡಿಂಗ್ ದಿನ. ಅವು ನೋಡೋದಕ್ಕೆ ಸಿಗೋದಿಲ್ಲ'. ಘಾಟಿ ರಸ್ತೆಯ ಬುಡದಲ್ಲಿಯೇ ಫಲಕ ಹಾಕಿ, ಯಾವ ದಿವಸಗಳಲ್ಲಿ ಮೃಗದರ್ಶನಕ್ಕೆ ಅವಕಾಶವಿಲ್ಲ ಎಂಬುದನ್ನು ತಿಳಿಸಿದ್ದರೆ ಜನರ ಸಮಯ, ಹಣ, ಶ್ರಮ ಉಳಿಯುತ್ತಿತ್ತಲ್ಲವೆ!

ಎನ್ನ ಕಿವುಡನ ಮಾಡು, ಎನ್ನ ಕುರುಡನ ಮಾಡು ಎಂದು ವಚನಕಾರರು ಗೋಗರೆದದ್ದು ಈ ಪ್ರವಾಸ ತಾಣಗಳಲ್ಲಿ ನಡೆಯುವ ಅವ್ಯವಹಾರ, ಅಲಕ್ಷ್ಯ, ಅವ್ಯವಸ್ಥೆಯನ್ನು ಕಂಡ ಬಳಿಕ ಅಲ್ಲ ತಾನೆ?

ವಾಚಕರ ವಾಣಿ

ಪದನಾಮ: ಬೇಕಾಬಿಟ್ಟಿ ಬಳಕೆ ಸಲ್ಲ

ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗ ಹುದ್ದೆಯ ಹೆಸರನ್ನು ಈಚೆಗೆ 'ಗ್ರಾಮ ಆಡಳಿತ ಅಧಿಕಾರಿ' ಎಂದು ಬದಲಾಯಿಸಲಾಗಿದೆ. ಆದರೆ ಗ್ರಾಮದಲ್ಲಿನ ಇಡೀ ಆಡಳಿತ ಮತ್ತು ಅಲ್ಲಿ ಆಗಬೇಕಾದ ಕೆಲಸಗಳೆಲ್ಲ ಅವರ ವ್ಯಾಪ್ತಿಗೆ ಒಳಪಡುವುದಿಲ್ಲ. ಅವರಿಗೆ ಅವರದೇ ಆದ ಪ್ರತ್ಯೇಕ ಕಚೇರಿಯಾಗಲೀ ಇತರೆ ಸಿಬ್ಬಂದಿಯಾಗಲೀ ಇರುವುದಿಲ್ಲ. ಯಾವುದೇ ಕೆಲಸಗಳಿರಬಹುದು, ಸಮಸ್ಯೆಗಳಿರಬಹುದು, ಆಡಳಿತಾತ್ಮಕ ವಿಚಾರಗಳಿರಬಹುದು, ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಮತ್ತು ಆದೇಶ ಹೊರಡಿಸುವ ಅಧಿಕಾರವು ಅವರಿಗೆ ಇರುವುದಿಲ್ಲ. ಅವರು ನೇರವಾಗಿ ಸಾರ್ವಜನಿಕರಿಗೆ ಯಾವುದೇ ದಾಖಲೆ, ವರದಿ, ದೃಢೀಕರಣ ಪತ್ರ ನೀಡಲು ಬರುವುದಿಲ್ಲ. ಅವುಗಳನ್ನು ಮೇಲಿನ ಅಧಿಕಾರಿಗಳಿಗೆ ಸಲ್ಲಿಸಿ, ಅವುಗಳಿಗೆ ಅವರ ಸಹಿ ಬಿದ್ದರೆ ಮಾತ್ರ ಆ ದಾಖಲೆಗಳಿಗೆ ಮಾನ್ಯತೆ ಇರುತ್ತದೆ.

ಕೆಲವು ಇಲಾಖೆಗಳಲ್ಲಿ ಕೆಳಹಂತದಲ್ಲಿ ಇಲಾಖೆಗೆ ಸಂಬಂಧಿಸಿದ ಕೆಲಸಗಳನ್ನು ಮಾಡಲು 'ಸಹಾಯಕ'ರಿದ್ದಾರೆ. ಕೃಷಿ ಇಲಾಖೆಯಲ್ಲಿ 'ಕೃಷಿ ಸಹಾಯಕ' ಹುದ್ದೆಯ ಹೆಸರಿನ ನೌಕರರಿರುವಂತೆ ಗ್ರಾಮ ಲೆಕ್ಕಿಗರ ಹುದ್ದೆ. ಕಂದಾಯ ಇಲಾಖೆಯ ಕೆಳಹಂತದಲ್ಲಿನ ಕೆಲವು ಸೀಮಿತ ಕೆಲಸಗಳನ್ನು ರೆವಿನ್ಯೂ ಇನ್‌ಸ್ಪೆಕ್ಟರ್ ಅಧೀನದಲ್ಲಿ ನಿರ್ವಹಿಸಲು ಸೃಷ್ಟಿಸಿರುವ ಹುದ್ದೆ. ಹಾಗಾಗಿ ಅದನ್ನು ಗ್ರಾಮ ಆಡಳಿತ ಅಧಿಕಾರಿ ಎಂದು ಬದಲಾಯಿಸಿರುವುದು ಸರಿಯಲ್ಲ. ಅಧಿಕಾರಿ ಎಂಬ ಪದನಾಮಕ್ಕೆ ಹೆಚ್ಚಿನ ಮಹತ್ವವಿದೆ. ಅದನ್ನು ಬೇಕಾಬಿಟ್ಟಿ ಬಳಸುವುದು ಸರಿಯಲ್ಲ. ಇದರ ಬದಲು, 'ಕಂದಾಯ ಸಹಾಯಕ' ಎಂಬ ಪದನಾಮ ನೀಡುವುದು ಸೂಕ್ತ.

ಎ.ಬಿ. ಪುಟ್ಟರಾಜ್, ಹುಣಸೂರು

ಹೀಗೆ ಹೋಲಿಸಿದರೆ...?

ನಂದಿನಿ- ಅಮುಲ್ ಬಗ್ಗೆ
ಹೇಳಿಕೆ ತಪ್ಪಾಗಿ
ಅರ್ಥೈಸಿಕೊಂಡಿದ್ದಾರೆ
ಎಂಬ ಹೇಳಿಕೆಯನ್ನು
ಗೆದ್ದರೆ, ಆಡಲಿಕ್ಕೆ
ಸೋತರೆ, ನೋಡಲಿಕ್ಕೆ
ಬಂದಿದ್ದೇವೆ ಎಂಬ ಗಾದೆಗೆ
ಹೋಲಿಕೆ ಮಾಡಬಹುದೇನೋ?!

ಎಚ್.ಕೆ.ಕೊಟ್ರಪ್ಪ, ಹರಿಹರ

ಅಕ್ರಮ ಮದ್ಯ: ಕಡಿವಾಣವೇಕಿಲ್ಲ?

ಡಿಸೆಂಬರ್ ಕೊನೆಯ ವಾರದಲ್ಲಿ ಮದ್ಯ ಅತಿಹೆಚ್ಚು ಮಾರಾಟವಾಗಿರುವ ಸುದ್ದಿ (ಪ್ರ.ವಾ., ಜ. 2) ಬಂದಿದೆ. ರಾಜ್ಯದಲ್ಲಿ ಈ ಏಳು ದಿನಗಳಲ್ಲಿ 1,262 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದ್ದು, ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 14ರಷ್ಟು ಹೆಚ್ಚಳ ಆಗಿದೆ. ಹೊಸ ವರ್ಷಾಚರಣೆ ಸಂಭ್ರಮ ಇದಕ್ಕೆ ಒಂದು ಕಾರಣ ಇದ್ದಿರಬಹುದು. ಅದಕ್ಕಿಂತ ಹೆಚ್ಚಿಗೆ ಯುವಪೀಳಿಗೆ ಹೆಚ್ಚಿಗೆ ಮದ್ಯ ಬಳಸುತ್ತಿರುವುದು ಕೂಡ ಕಾರಣವಾಗಿರಬಹುದು. ಈ ಅಂಶವು ಪೋಷಕರ ಕಳವಳಕ್ಕೂ ಕಾರಣವಾಗಿರುವುದು ಸುಳ್ಳಲ್ಲ.

ಗ್ರಾಮಾಂತರ ಪ್ರದೇಶದಲ್ಲೂ ಈಗ ಮದ್ಯ ಎಲ್ಲಿ ಬೇಕಾದರೂ ಸಿಗುವಂತಾಗಿದೆ. ಹಳ್ಳಿಗಳ ಪುಟ್ಟ ಹೋಟೆಲ್, ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ನಡೆಯುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಹಳ್ಳಿಗಳ ದಾರಿ ದಾರಿಯಲ್ಲಿ ತಲೆ ಎತ್ತಿರುವ ಡಾಬಾಗಳು ಮದ್ಯ ಮಾರಾಟದ ತಾಣಗಳಾಗಿವೆ. ಅಕ್ರಮವೋ ಸಕ್ರಮವೋ ಅಂತೂ ಮದ್ಯ ಸಿಗುತ್ತದೆ ಎಂಬುದಷ್ಟೇ ಸತ್ಯ. ಅಕ್ರಮ ಮಾರಾಟ ತಡೆಯಲು ಸರ್ಕಾರ ಬಿಗಿ ಕ್ರಮ ಕೈಗೊಳ್ಳಬೇಕು.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಎಲ್‌ಎಸ್‌ಡಿ ತಂತ್ರಜ್ಞಾನ ಬಳಸುವ ಮುನ್ನ...

ಗ್ರಾಮೀಣ ಪ್ರದೇಶದಲ್ಲಿ ಹಗಲು ಹೊತ್ತಿನಲ್ಲೂ ಉರಿಯುವ ಬೀದಿ ದೀಪಗಳಿಂದ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಎಲ್‌ಎಸ್‌ಡಿ (ಲೈಟ್ ಸೆನ್ಸಿಟಿವ್ ಡಯೋಡ್) ತಂತ್ರಜ್ಞಾನ ಬಳಸುವ ಬಗ್ಗೆ ರವಿಕಿರಣ್ ಶೇಖರ್ ಅವರು ನೀಡಿರುವ ಸಲಹೆ (ವಾ.ವಾ., ಜ. 2) ಸೂಕ್ತವಾಗಿದೆ. ಆದರೆ ಇದರಿಂದ ಒಂದು ಸಮಸ್ಯೆಯೆಂದರೆ, ಮೋಡ ಕವಿದಾಗ ಅಥವಾ ಬಲ್ಬ್ ಮೇಲೆ ದೂಳು ಕುಳಿತಾಗ ಬೆಳಗಿನ ಹೊತ್ತು ದೀಪಗಳು ಉರಿದು ವಿದ್ಯುತ್ ನಷ್ಟ ಸಂಭವಿಸುತ್ತದೆ. ಅಲ್ಲದೆ ಪ್ರತೀ ವಿದ್ಯುತ್ ಕಂಬಕ್ಕೂ ನೂರು ರೂಪಾಯಿ ಖರ್ಚು ಮಾಡುವುದು ಬೊಕ್ಕಸಕ್ಕೆ ಹೊರೆಯಾದೀತು. ಅದರ ಬದಲು ಸ್ವಿಚ್ಚನ್ನು ಸಮಯಕ್ಕೆ ಅನುಗುಣವಾಗಿ ಆನ್ ಮಾಡುವ ಮತ್ತು ಆಫ್ ಮಾಡುವ ಕೆಲಸವನ್ನು ಸ್ಥಳೀಯ ನಿರುದ್ಯೋಗಿ ಯುವಕರಿಗೆ ವಹಿಸುವುದು ಉತ್ತಮ.

ಎಚ್.ಎಸ್. ಚಂದ್ರಶೇಖರ, ಬೆಂಗಳೂರು

ಮೆರವಣಿಗೆಗೆ ದುಂದುವೆಚ್ಚ ಬೇಡ

ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷರನ್ನು ಮೆರವಣಿಗೆಯಲ್ಲಿ ಕರೆತರಲು ಸುಮಾರು ₹ 4 ಲಕ್ಷ ವೆಚ್ಚದಲ್ಲಿ ರಥವನ್ನು ನಿರ್ಮಿಸುತ್ತಿರುವುದು ಮತ್ತು ಕಸಾಪದ ಎಲ್ಲ ಜಿಲ್ಲಾ ಘಟಕಗಳ ಅಧ್ಯಕ್ಷರ ಮೆರವಣಿಗೆಗೆ 11 ಸಾರೋಟುಗಳನ್ನು ಸಿದ್ಧಪಡಿಸುತ್ತಿರುವುದನ್ನು ಗಮನಿಸಿದರೆ, ಕನ್ನಡ ಸಾಹಿತ್ಯ ಪರಿಷತ್ತು ಗತಕಾಲದ 'ರಾಜ ವೈಭವ'ವನ್ನು ಪುನರ್‌ಸ್ಥಾಪಿಸಲು ಯತ್ನಿಸುತ್ತಿರುವಂತಿದೆ!

ವ್ಯವಸ್ಥಿತವಾಗಿ ಸಾಹಿತ್ಯ ಗೋಷ್ಠಿಗಳನ್ನು ನಡೆಸುವುದು, ಗಡಿ ವಿವಾದ, ಗಡಿ ಪ್ರದೇಶದಲ್ಲಿ ಕನ್ನಡ ಶಾಲೆಗಳ ಸ್ಥಿತಿಗತಿ, ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತೂ ಅದರ ಉನ್ನತೀಕರಣಕ್ಕೆ ನ್ಯಾಯಯುತವಾಗಿ ದೊರೆಯಬೇಕಾದ ಅನುದಾನ ಬಿಡುಗಡೆ ಮಾಡಿಸಿಕೊಳ್ಳಲು ವಿಫಲರಾಗಿರುವ ಜನಪ್ರತಿನಿಧಿಗಳ ನಿಷ್ಕ್ರಿಯತೆ, ಹಾಸಿಗೆ ಹಿಡಿದಿರುವ ಪುಸ್ತಕೋದ್ಯಮವನ್ನು ಪುನಶ್ಚೇತನಗೊಳಿಸುವುದು, ಕನ್ನಡ ಬರವಣಿಗೆಯನ್ನೇ ಬದುಕಾಗಿಸಿಕೊಂಡವರ, ಆರ್ಥಿಕವಾಗಿ ಸಶಕ್ತರಾಗಿಲ್ಲದ ಮತ್ತು ಜೀವನದ ಸಂಧ್ಯಾಕಾಲದಲ್ಲಿರುವ ಸಾಹಿತಿಗಳಿಗೆ ನೆರವು, ಹಿಂದಿನ ಸಮ್ಮೇಳನಗಳ ನಿರ್ಣಯಗಳನ್ನು ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವಂತಹ ವಿಷಯಗಳು ಸಮ್ಮೇಳನದಲ್ಲಿ ಆದ್ಯತೆ ಪಡೆಯಬೇಕು ಮತ್ತು ಅವುಗಳ ಕುರಿತು ಗಂಭೀರ ಚರ್ಚೆಯಾಗಬೇಕು. ಇದಕ್ಕೆ ಆದ್ಯತೆ ನೀಡದೆ, ಸಾಹಿತಿಗಳ ಮೆರವಣಿಗೆಗೆ ದುಂದುವೆಚ್ಚ ಮಾಡುವುದು ಸರಿಯಲ್ಲ.

ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಗನಕ್ಕೆ ನೆಗೆದ ನೋಟು ವಹಿವಾಟು

ಅಮಾನ್ಯಗೊಂಡ ₹500 ಹಾಗೂ ₹1,000 ಮುಖಬೆಲೆಯ ನೋಟುಗಳನ್ನು ಬದಲಾಯಿಸಿಕೊಳ್ಳಲು 2016ರ ನ.15ರಂದು ದೆಹಲಿಯ ರಿಸರ್ವ್ ಬ್ಯಾಂಕ್ ಕಚೇರಿ ಎದುರು ಸೇರಿದ್ದ ಜನ

₹500 ಮತ್ತು ₹1,000 ಮುಖಬೆಲೆಯ ಕರೆನ್ಸಿ ನೋಟುಗಳನ್ನು ಅಮಾನ್ಯ ಮಾಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು 2016ರ ನವೆಂಬರ್ 8ರಂದು ಘೋಷಿಸಿದ್ದರು. ಕಪ್ಪುಹಣವನ್ನು ಬಯಲಿಗೆಳೆಯುವುದು, ನಗದು ಹರಿವನ್ನು ಕಡಿಮೆ ಮಾಡುವುದು, ಡಿಜಿಟಲ್ ವಹಿವಾಟು ಹೆಚ್ಚಿಸುವುದು ಮುಂತಾದವುಗಳು ಇದರ ಉದ್ದೇಶ ಎಂದು ಹೇಳಲಾಗಿತ್ತು. ನೋಟು ರದ್ದತಿಯ ಬಳಿಕ 2016ರಲ್ಲಿ ನಗದು ಚಲಾವಣೆಯು ₹9 ಲಕ್ಷ ಕೋಟಿಗೆ ಇಳಿದಿತ್ತು. ನಂತರದ ದಿನಗಳಲ್ಲಿ ಚಲಾವಣೆಯಲ್ಲಿದ್ದ ನಗದು ಪ್ರಮಾಣವು ಏರಿಕೆಯಾಗುತ್ತಲೇ ಸಾಗಿದೆ. 2017ರಲ್ಲಿ ದೇಶದಲ್ಲಿ ನಗದು ಹರಿವು ₹13.35 ಲಕ್ಷ ಕೋಟಿಗೆ ಏರಿತ್ತು.

ನೋಟು ರದ್ದತಿಯಾಗಿ ಆರು ವರ್ಷಗಳ ಬಳಿಕವೂ ವಹಿವಾಟಿನಲ್ಲಿ ನಗದಿನ ಪ್ರಾಬಲ್ಯ ಮುಂದುವರಿದಿದೆ ಎಂಬುದು ಕಂಡು ಬರುತ್ತದೆ. ದೇಶದಲ್ಲಿದ್ದ ನಗದು ಹರಿವಿನ ಶೇ 86ರಷ್ಟು ನೋಟುಗಳನ್ನು ರದ್ದತಿಯಿಂದಾಗಿ ಹಿಂದಕ್ಕೆ ಪಡೆಯಲಾಗಿತ್ತು. ನೋಟು ರದ್ದತಿಯ ಸಂದರ್ಭದಲ್ಲಿ ದೇಶದಲ್ಲಿ ಇದ್ದ ನಗದು ಹರಿವಿನ ಮೌಲ್ಯವು ₹17.74 ಲಕ್ಷ ಕೋಟಿ ಆಗಿತ್ತು. ನೋಟು ರದ್ದತಿಯಿಂದಾಗಿ ₹15.41 ಲಕ್ಷ ಕೋಟಿ ಮೌಲ್ಯದ ನೋಟುಗಳು ಅಮಾನ್ಯಗೊಂಡಿದ್ದವು. ಇವುಗಳ ಪೈಕಿ ₹15.31 ಲಕ್ಷ ಕೋಟಿ ಮೌಲ್ಯದ ನೋಟುಗಳು ಬ್ಯಾಂಕ್‌ಗಳಿಗೆ ಜಮಾ ಆಗಿದ್ದವು. ಇದು ಅಮಾನ್ಯಗೊಂಡ ನೋಟುಗಳ ಶೇ 99.3ರಷ್ಟು.

ರದ್ದಾದ ನೋಟುಗಳಲ್ಲಿ ಬಹುಪಾಲು ಹಿಂದಕ್ಕೆ ಬಂದಿದ್ದವು. ಹೀಗಾಗಿ, ಕಪ್ಪುಹಣ ಬಯಲಿಗೆಳೆಯವುದು ಮುಂತಾದ ನೋಟು ರದ್ದತಿಯ ಉದ್ದೇಶ ವಿಫಲವಾಗಿದೆಯೇ ಎಂಬ ಪ್ರಶ್ನೆಗಳು ಈ ಹಿಂದೆ ಕೇಳಿ ಬಂದಿದ್ದವು.

ಭಾರತೀಯ ರಿಸರ್ವ್ ಬ್ಯಾಂಕ್ ದತ್ತಾಂಶದ ಪ್ರಕಾರ, 2022ರ ಡಿಸೆಂಬರ್ 23ರಂದು ದೇಶದಲ್ಲಿ ಇದ್ದ ನಗದು ಹರಿವಿನ ಮೌಲ್ಯವು ₹32.42 ಲಕ್ಷ ಕೋಟಿ. 2017ರ ಜನವರಿ 6ಕ್ಕೆ ಹೋಲಿಸಿದರೆ ಈಗ ಚಲಾವಣೆಯಲ್ಲಿರುವ ನಗದು ಮೊತ್ತವು ಸುಮಾರು ಮೂರು ಪಟ್ಟು ಅಥವಾ ಶೇ 260ರಷ್ಟು ಏರಿಕೆಯಾಗಿದೆ. ನೋಟು ರದ್ದತಿಯ ಹಿಂದಿನ ದಿನಗಳಿಗೆ ಹೋಲಿಸಿದರೆ ಚಲಾವಣೆಯಲ್ಲಿ ಇರುವ ನೋಟುಗಳ ಪ್ರಮಾಣವು ಶೇ 83ರಷ್ಟು ಹೆಚ್ಚಳವಾಗಿದೆ.

2022ರ ಡಿಸೆಂಬರ್ 2ರಂದು ಚಲಾವಣೆಯಲ್ಲಿದ್ದ ನೋಟುಗಳ ಮೌಲ್ಯ ₹31.92 ಲಕ್ಷ ಕೋಟಿ ಆಗಿತ್ತು. ಇದಕ್ಕೆ ಸರಿಯಾಗಿ ಒಂದು ವರ್ಷ ಹಿಂದೆ ₹29.56 ಲಕ್ಷ ಕೋಟಿ ಮೌಲ್ಯದ ನಗದು ಚಲಾವಣೆಯಲ್ಲಿ ಇತ್ತು. ಒಂದು ವರ್ಷದಲ್ಲಿ ಶೇ 8ರಷ್ಟು ಏರಿಕೆ ಆಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ 2022ರ ಡಿಸೆಂಬರ್ 19ರಂದು ಮಾಹಿತಿ ನೀಡಿದ್ದರು.



ಚಲಾವಣೆಯಲ್ಲಿರುವ ನೋಟುಗಳ ಮೌಲ್ಯದಲ್ಲಿ ಮಾತ್ರ ಹೆಚ್ಚಳ ಆಗಿದ್ದಲ್ಲ. ನೋಟುಗಳ ಸಂಖ್ಯೆಯಲ್ಲಿಯೂ ಭಾರಿ ಪ್ರಮಾಣದ ಏರಿಕೆ ಆಗಿದೆ. ನೋಟು ರದ್ದತಿಗೆ ಮೊದಲು 9 ಕೋಟಿಗೂ ಹೆಚ್ಚು ಸಂಖ್ಯೆಯ ನೋಟುಗಳು ಚಲಾವಣೆಯಲ್ಲಿ ಇದ್ದವು. 2022 ಮಾರ್ಚ್ 31ಕ್ಕೆ ಈ ಸಂಖ್ಯೆಯು 13 ಕೋಟಿಗಿಂತಲೂ ಹೆಚ್ಚಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸುವ ₹2, ₹5, ₹10, ₹20, ₹50, ₹100, ₹200, ₹500 ಮತ್ತು ₹2,000ದ ನೋಟುಗಳು ಇದರಲ್ಲಿ ಒಳಗೊಂಡಿವೆ.

ನಗದು ಬಳಕೆಗೆ ಕಾರಣವೇನು?: ಭಾರತವು ಹಿಂದಿನಿಂದಲೂ ನಗದು ಕೇಂದ್ರಿತ ಅರ್ಥ ವ್ಯವಸ್ಥೆಯಾಗಿದೆ. ಆಸ್ತಿ ಖರೀದಿ ಮತ್ತು ಮಾರಾಟ, ಬಳಸಿದ ವಾಹನಗಳ ಖರೀದಿ ಮತ್ತು ಮಾರಾಟ, ಚಿಲ್ಲರೆ ಮಾರಾಟದ ಅಂಗಡಿಗಳಲ್ಲಿ ಬಹುತೇಕ ವಹಿವಾಟು ನಗದಿನ ಮೂಲಕವೇ ನಡೆಯುತ್ತದೆ. ಸಣ್ಣ ಪಟ್ಟಣಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನಗದು ಮೂಲಕ ವಹಿವಾಟು ಹೆಚ್ಚುತ್ತಲೇ ಇದೆ. ಡಿಜಿಟಲ್ ವಹಿವಾಟಿನ ಕುರಿತು ತಿಳಿವಳಿಕೆ ಇಲ್ಲದಿರುವುದು, ಇಂಟರ್‌ನೆಟ್ ಅಲಭ್ಯತೆ, ನಗದು ಎಲ್ಲೆಡೆಯೂ ಸ್ವೀಕಾರಾರ್ಹ ಆಗಿರುವುದು ಜನರು ನಗದನ್ನೇ ಹೆಚ್ಚು ನೆಚ್ಚಿಕೊಳ್ಳಲು ಇರುವ ಕಾರಣಗಳು.

ಡಿಜಿಟಲ್ ವಹಿವಾಟಿನ ಕುರಿತು ಜಾಗೃತಿ ಮತ್ತು ಅರಿವು ಮೂಡಿಸಲು ಸರ್ಕಾರ ನಿರಂತರವಾಗಿ ಪ್ರಯತ್ನಿಸುತ್ತಿದೆ. ಅದು ಫಲಪ್ರದವೂ ಆಗಿದೆ. ಒಟ್ಟು ವಹಿವಾಟಿನಲ್ಲಿ ಡಿಜಿಟಲ್ ಪಾವತಿಯ ಪ್ರಮಾಣವು 2015–16ರಲ್ಲಿ ಶೇ 11.26ರಷ್ಟು ಇತ್ತು. 2021–22ರಲ್ಲಿ ಅದು ಹಲವು ಪಟ್ಟು ಏರಿಕೆಯಾಗಿದೆ. 2026–27ರ ಹೊತ್ತಿಗೆ ಅದು ಗರಿಷ್ಠ ಮಟ್ಟಕ್ಕೆ ತಲುಪಬಹುದು ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ.

ನೋಟು ರದ್ದತಿ ಯಶಸ್ವಿಯಾಯಿತೇ?

ಪ್ರಧಾನಿ ನರೇಂದ್ರ ಮೋದಿ ಅವರು 2016ರ ನವೆಂಬರ್ 8ರಂದು ರಾತ್ರಿ ಎಂಟು ಗಂಟೆಗೆ ಟಿ.ವಿ. ಭಾಷಣದಲ್ಲಿ ನೋಟು ರದ್ದತಿ ನಿರ್ಧಾರವನ್ನು ಪ್ರಕಟಿಸಿದರು. ನೋಟು ರದ್ದತಿ ನಿರ್ಧಾರದ ಬಗ್ಗೆ ತೀವ್ರವಾದ ಟೀಕೆಯು ಎದುರಾಗಿತ್ತು. ನೋಟು ರದ್ದತಿ ನಿರ್ಧಾರ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಪ್ರತಿಪಕ್ಷಗಳು ಸರ್ಕಾರದ ನಿರ್ಧಾರದ ವಿರುದ್ಧ ಟೀಕಾಪ್ರಹಾರ ಮಾಡಿದವು.

'ಕಾಗದದ ತುಂಡು': 'ಇಂದು ಮಧ್ಯರಾತ್ರಿಯಿಂದ ₹500 ಹಾಗೂ ₹1,000 ಮುಖಬೆಲೆಯ ನೋಟುಗಳು ಕೇವಲ ಕಾಗದದ ತುಂಡುಗಳು' ಎಂದು ಪ್ರಧಾನಿ ಹೇಳಿದರು. ದೇಶದ ಜನರಿಗೆ ಅಚ್ಚರಿ, ಗೊಂದಲ ಹಾಗೂ ಆಘಾತ ಒಟ್ಟೊಟ್ಟಿಗೇ ಎದುರಾದವು. ಜನರು ತಮ್ಮಲ್ಲಿರುವ ಐನೂರು ಹಾಗೂ ಸಾವಿರ ರೂಪಾಯಿಯ ನೋಟುಗಳನ್ನು ಬ್ಯಾಂಕ್‌ಗಳಿಗೆ ನೀಡಿ, ಬದಲಿಸಿಕೊಳ್ಳಲು ಮತ್ತು ಹಳೆ ನೋಟುಗಳನ್ನು ತಮ್ಮ ಖಾತೆಗಳಿಗೆ ಜಮಾ ಮಾಡಲು 52 ದಿನಗಳ ಕಾಲಾವಕಾಶ ನೀಡಿದರು.

ಜನರ ಬವಣೆಗೆ ಹೊಣೆ ಯಾರು?

ನೋಟು ರದ್ದತಿಯ ದಿಢೀರ್ ನಿರ್ಧಾರದಿಂದ ದಿಕ್ಕು ತೋಚದಂತಾದ ಜನಸಾಮಾನ್ಯರು, ತಮ್ಮಲ್ಲಿದ್ದ ಹಳೆಯ ನೋಟುಗಳನ್ನು ಬದಲಾಯಿಸಿಕೊಳ್ಳಲು ಕಷ್ಟಪಟ್ಟರು. ಬಿಸಿಲು, ಮಳೆಯ ನಡುವೆ ಬ್ಯಾಂಕ್‌ಗಳ ಮುಂದೆ ದಿನವಿಡೀ ಸರತಿಯಲ್ಲಿ ಕಾಯಬೇಕಾಯಿತು. ನಿತ್ಯದ ಕೆಲಸಗಳನ್ನು ಬಿಟ್ಟು, ಹಣ ತೆಗೆಯಲು ಎಟಿಎಂಗಳ ಮುಂದೆ ಸಾಲುಗಟ್ಟಿದರು. ವಯಸ್ಸಾದವರು ಹಾಗೂ ಮಹಿಳೆಯರು ನಿತ್ರಾಣಗೊಂಡರು. ಹಣ ತೆಗೆಯಲು ಮಿತಿ ಇದ್ದುದರಿಂದ, ಪದೇ ಪದೇ ಬ್ಯಾಂಕ್ ಹಾಗೂ ಎಟಿಎಂಗಳಿಗೆ ಎಡತಾಕಬೇಕಾದ ಸ್ಥಿತಿ ಎದುರಾಯಿತು. ದಿನಗೂಲಿ ಕಾರ್ಮಿಕರು ತಮ್ಮ ದೈನಂದಿನ ಕೂಲಿ ಕಳೆದುಕೊಳ್ಳಬೇಕಾಯಿತು. ನಗದು ಹಣದ ಮೇಲೆ ಅವಲಂಬಿತರಾಗಿದ್ದ ಹಳ್ಳಿಗರು ಹಾಗೂ ಸಣ್ಣ ಪಟ್ಟಣಗಳ ನಿವಾಸಿಗಳು ಬ್ಯಾಂಕ್ ಹಾಗೂ ಎಟಿಎಂ ಸೌಲಭ್ಯವಿರುವ ನಗರಗಳಿಗೆ ಬರುವ ಅನಿವಾರ್ಯ ಸೃಷ್ಟಿಯಾಯಿತು. ಈ ಪ್ರಕ್ರಿಯೆಯಲ್ಲಿ ಹತ್ತಾರು ಜನ ಪ್ರಾಣ ಕಳೆದುಕೊಂಡರು.

ಹೇಳಿದ್ದೊಂದು ಆಗಿದ್ದೊಂದು

₹15 ಲಕ್ಷ ಕೋಟಿ ಹಣದ ಪೈಕಿ ಸುಮಾರು ₹4ರಿಂದ ₹5 ಲಕ್ಷ ಕೋಟಿಯಷ್ಟು ಹಣವು ಹಿಂದಿರುಗಿ ಬರುವುದಿಲ್ಲ ಎಂದು ಅಟಾರ್ನಿ ಜನರಲ್ ಮುಕುಲ್ ರೋಹಟಗಿ ಅವರು ಸುಪ್ರೀಂ ಕೋರ್ಟ್‌ಗೆ ಹೇಳಿದ್ದರು. ವಾಪಸ್ ಬಾರದ ಈ ಹಣವು ಬಹುತೇಕ 'ಕಪ್ಪುಹಣ' ಆಗಿರುತ್ತದೆ ಎಂಬುದು ಸರ್ಕಾರದ ಅಂದಾಜು ಆಗಿತ್ತು. ನೋಟು ರದ್ದತಿಯ ಬಳಿಕ, ಇಷ್ಟು ಮೊತ್ತದ ಕಪ್ಪುಹಣದ ಚಲಾವಣೆ ಸ್ಥಗಿತಗೊಂಡಂತಾಗುತ್ತದೆ ಎಂದು ಅವರು ಹೇಳಿದ್ದರು. ಆದರೆ ನೋಟು ರದ್ದತಿ ನಿರ್ಧಾರ ಪ್ರಕಟಿಸಿದ ಕೇವಲ 35 ದಿನಗಳ ಒಳಗಾಗಿ ಶೇ 80ರಷ್ಟು ಹಣವು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿತು. ಇದು ಸರ್ಕಾರದ ನೋಟು ರದ್ದತಿ ನಿರ್ಧಾರವನ್ನು ಪ್ರಶ್ನೆ ಮಾಡುವಂತೆ ಮಾಡಿತು.

ಉದ್ದೇಶ: ನಾಲ್ಕು, ನಲವತ್ತಾದಾಗ

ದಿಢೀರ್ ನೋಟು ರದ್ದತಿಗೆ ಸರ್ಕಾರ ಆರಂಭದಲ್ಲಿ ನಾಲ್ಕು ಕಾರಣಗಳನ್ನು ಮುಂದಿಟ್ಟಿತ್ತು. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವುದು, ಕಪ್ಪು ಹಣವನ್ನು ನಿಯಂತ್ರಿಸುವುದು, ಖೋಟಾ ನೋಟು ಚಲಾವಣೆ ತಡೆಯುವುದು ಹಾಗೂ ಭಯೋತ್ಪಾದಕರಿಗೆ ಹಣಕಾಸು ನೆರವು ಸಿಗದಂತೆ ನೋಡಿಕೊಳ್ಳುವುದು ಆ ಕಾರಣಗಳು. ಆದರೆ, ಶೇ 80ರಷ್ಟು ಹಣ ಚಲಾವಣೆಗೆ ಬರುತ್ತಿದ್ದಂತೆಯೇ ಸರ್ಕಾರದ ವರಸೆ ಬದಲಾಯಿತು. ಕಪ್ಪುಹಣ ನಿಯಂತ್ರಿಸುವುದಷ್ಟೇ ನೋಟು ರದ್ದತಿ ನಿರ್ಧಾರಕ್ಕೆ ಮುಖ್ಯ ಕಾರಣವಲ್ಲ ಎಂದು ಸರ್ಕಾರ ಹೇಳಿತ್ತು. ಆರ್ಥಿಕತೆಯಲ್ಲಿ ಅಚ್ಚುಕಟ್ಟುತನ ತರುವುದು, ನಗದುರಹಿತ ಆರ್ಥಿಕತೆ ರೂಪಿಸುವುದು, ನಗದು ಹಣದ ಮೇಲಿನ ಅವಲಂಬನೆ ಕಡಿಮೆ ಮಾಡುವುದು, ಡಿಜಿಟಲ್ ವಹಿವಾಟು ಪ್ರೋತ್ಸಾಹಿಸುವುದು, ತೆರಿಗೆ ಸಂಗ್ರಹ ಹೆಚ್ಚಿಸುವುದೂ ಒಳಗೊಂಡಂತೆ ಸರ್ಕಾರ ಹತ್ತಾರು ಕಾರಣಗಳನ್ನು ಒಟ್ಟುಗೂಡಿಸಿತು. ಆದರೆ, ಮೋದಿ ಅವರ ಮೂಲ ಭಾಷಣದಲ್ಲಿ ಇವು ಉಲ್ಲೇಖವಾಗಿರಲಿಲ್ಲ.

42 ದಿನಗಳಲ್ಲಿ 54 ಸುತ್ತೋಲೆ

2016ರ ಡಿಸೆಂಬರ್ 30ರವರೆಗೂ ಹಳೆಯ ನೋಟುಗಳನ್ನು ಜನರು ಬ್ಯಾಂಕ್‌ಗಳಲ್ಲಿ ಠೇವಣಿ ಇಡಬಹುದು ಎಂದು ಪ್ರಧಾನಿ ನ.8ರಂದು ಪ್ರಕಟಿಸಿದ್ದರು. ಠೇವಣಿಗೆ ಮಿತಿ ಇರಲಿಲ್ಲ. ಈ ಬಳಿಕ, ಪ್ರತಿದಿನವೂ ಹೊಸ ನಿಯಮಗಳು ಬರಲು ಆರಂಭಿಸಿದವು. ಅಲ್ಲಿಂದ 42 ದಿನಗಳ ಅವಧಿಯಲ್ಲಿ 54 ಹೊಸ ಸುತ್ತೋಲೆಗಳನ್ನು ಆರ್‌ಬಿಐ ಹಾಗೂ ಸರ್ಕಾರ ಪ್ರಕಟಿಸಿದವು. ಜನರು ನಿಯಮಾವಳಿಗಳ ಗೊಂದಲದಲ್ಲಿ ಸಿಲುಕಿದರು. ಯಾವುದು ಹೊಸದು, ಯಾವುದು ಹಳೆಯದು ಎಂದು ಗೊತ್ತಾಗದಷ್ಟು ಗೊಂದಲ ಏರ್ಪಟ್ಟಿತು.

ಬ್ಯಾಂಕ್‌ಗಳಲ್ಲಿ ₹4,000 ಮೌಲ್ಯದ ನೋಟು ಬದಲಿಸಿಕೊಳ್ಳಬಹುದು, ಎಟಿಎಂಗಳಲ್ಲಿ ₹2,000 ನಗದು ಹಿಂಪಡೆಯಬಹುದು, ಬ್ಯಾಂಕ್ ಶಾಖೆಗಳಲ್ಲಿ ದಿನಕ್ಕೆ ₹10,000 ಮತ್ತು ವಾರಕ್ಕೆ ₹20,000 ಹಣ ಹಿಂಪಡೆಯಬಹುದು ಎಂಬ ಮಿತಿಯನ್ನು ಪ್ರಧಾನಿ ಮೊದಲು ಪ್ರಕಟಿಸಿದ್ದರು. ನ.13ಕ್ಕೆ ಜಾರಿಗೆ ಬಂದ ಹೊಸ ನಿಯಮದ ಪ್ರಕಾರ, ನೋಟು ಬದಲಾವಣೆಯ ಮೊತ್ತವನ್ನು ₹4,500ಕ್ಕೆ, ಎಟಿಎಂನಲ್ಲಿ ಹಣ ಹಿಂತೆಗೆಯುವ ಮೊತ್ತವನ್ನು ₹2,500ಕ್ಕೆ ಹೆಚ್ಚಿಸಲಾಯಿತು.

ಜನರು ಹಣವನ್ನು ವಾಪಸ್ ಪಡೆಯಲು ಹಲವು ದಾರಿ ಕಂಡುಕೊಂಡರು. ಹೀಗಾಗಿ ನೋಟು ಬದಲಾವಣೆಗೆ ಬಂದ ಗ್ರಾಹಕರ ಬೆರಳಿಗೆ ಶಾಯಿ ಹಾಕುವ ಹೊಸ ನಿಯಮ ನ.15ರಂದು ಜಾರಿಗೆ ಬಂದಿತು. ಬ್ಯಾಂಕ್‌ಗಳಲ್ಲಿ ನೋಟು ಬದಲಾಯಿಸಿಕೊಳ್ಳುವ ಮಿತಿಯನ್ನು ಮತ್ತೆ ₹2,000ಕ್ಕೆ ತಗ್ಗಿಸುವ ನಿಯಮ ನ.17ರಂದು ಬಂದಿತು. ಮದುವೆ ಖರ್ಚುಗಳಿಗೆ ₹2.5 ಲಕ್ಷದ ಮಿತಿ ವಿಧಿಸುವ ಮತ್ತೊಂದು ಸುತ್ತೋಲೆ ಬಂದಿತು.

₹2 ಲಕ್ಷಕ್ಕಿಂತ ಹೆಚ್ಚು ಹಣವನ್ನು ಜಮೆ ಮಾಡಿದವರು ಹಣ ವರ್ಗಾವಣೆ ಮಾಡಬೇಕಾದರೆ, ಪ್ಯಾನ್/ಆಧಾರ್ ಕಡ್ಡಾಯ ಮಾಡಲಾಯಿತು. ₹5,000ಕ್ಕಿಂತ ಹೆಚ್ಚು ಮೌಲ್ಯದ ಹಳೆಯ ನೋಟುಗಳನ್ನು ಡಿ.30ರೊಳಗೆ ಒಮ್ಮೆ ಮಾತ್ರ ಬದಲಿಸಿಕೊಳ್ಳುವ ಇನ್ನೊಂದು ಆದೇಶ ಡಿ.19ರಂದು ಬಂದಿತು. ವಿರೋಧ ವ್ಯಕ್ತವಾಗುತ್ತಿದ್ದಂತೆಯೇ, ಈ ಆದೇಶ ರದ್ದುಗೊಂಡಿತು. ಜನರ ಆಕ್ರೋಶವನ್ನು ತಣಿಸುವುದು ಹಾಗೂ ಜನರು ಬ್ಯಾಂಕ್‌ಗಳಿಗೆ ನುಗ್ಗುವುದನ್ನು ನಿಯಂತ್ರಿಸಲು ಸರ್ಕಾರ ಹಾಗೂ ಆರ್‌ಬಿಐ ಸುತ್ತೋಲೆ ಮೇಲೆ ಸುತ್ತೋಲೆಗಳನ್ನು ಹೊರಡಿಸಿ ದಾಖಲೆ ಸೃಷ್ಟಿಸಿದವು.

ಆಧಾರ: ಪಿಟಿಐ, ಭಾರತೀಯ ರಿಸರ್ವ್ ಬ್ಯಾಂಕ್ ಜಾಲತಾಣ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ನಿರುದ್ಯೋಗ 16 ತಿಂಗಳ ಗರಿಷ್ಠ ಪ್ರಮಾಣದಲ್ಲಿರುವುದು ಕೇಂದ್ರ ಸರ್ಕಾರ ಈ ಸಮಸ್ಯೆಯನ್ನು ಕಡಿಮೆ ಮಾಡಲು ಗಂಭೀರವಾಗಿಲ್ಲ ಎನ್ನುವುದನ್ನು ತೋರಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ನೆಲೆ ವಿಸ್ತರಣೆ ಕಾತರದಲ್ಲಿ ಕೆಸಿಆರ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಭಾರತ ರಾಷ್ಟ್ರ ಸಮಿತಿಯ (ಬಿಆರ್‌ಎಸ್) ಮುಖ್ಯಸ್ಥ ಕೆ.ಚಂದ್ರಶೇಖರ ರಾವ್ (ಕೆಸಿಆರ್) ಅವರಿಗೆ ಆಂಧ್ರ ಪ್ರದೇಶದ ಜನರ ಬಗ್ಗೆ ಈ ಹಿಂದೆ ಭಾರಿ ಆಕ್ರೋಶ ಇತ್ತು. ಆಂಧ್ರ ಪ್ರದೇಶದವರನ್ನು ತೆಲಂಗಾಣದಿಂದ ಹೊರಗೆ ಅಟ್ಟುವುದಕ್ಕಾಗಿ 'ಭಾಗೋ ಆಂಧ್ರವಾಲ' (ಆಂಧ್ರದವರೇ ಓಡಿ) ಎಂದು ಕರೆಯನ್ನು ಕೂಡ ಅವರು ಕೊಟ್ಟಿದ್ದರು. ಆಂಧ್ರ ಪ್ರದೇಶದಲ್ಲಿ ತಯಾರಿಸುವ ಬಿರಿಯಾನಿಯನ್ನು ಸೆಗಣಿ ಎಂದು ಹೀಯಾಳಿಸಿದ್ದರು. ಈಗ ಅದೆಲ್ಲ ಬದಲಾಗಿದೆ. ತಮ್ಮ ಪಕ್ಷವನ್ನು ಬೆಂಬಲಿಸಿ ಎಂದು ಅವರು ಆಂಧ್ರ ಪ್ರದೇಶದ ಮುಖಂಡರು ಮತ್ತು ಮತದಾರರನ್ನು ಕೇಳುತ್ತಿದ್ದಾರೆ.

22 ವರ್ಷದ ಹಿಂದೆ ಸ್ಥಾಪಿಸಿದ್ದ ತೆಲಂಗಾಣ ರಾಷ್ಟ್ರ ಸಮಿತಿಯನ್ನು ಕೆಸಿಆರ್ ಅವರು ಇತ್ತೀಚೆಗೆ ಬಿಆರ್‌ಎಸ್ ಎಂದು ಬದಲಾಯಿಸಿಕೊಂಡಿದ್ದಾರೆ. ರಾಷ್ಟ್ರ ರಾಜಕಾರಣದಲ್ಲಿ ದೊಡ್ಡ ಪಾತ್ರ ವಹಿಸಬೇಕು ಎಂಬ ಮಹತ್ವಾಕಾಂಕ್ಷೆ ಇದಕ್ಕೆ ಕಾರಣ. ಆದರೆ, ಬಿಆರ್‌ಎಸ್‌ಗೆ ತೆಲಂಗಾಣದ ಹೊರಗೆ ಅಸ್ತಿತ್ವ ಇಲ್ಲ. 2024ರ ಲೋಕಸಭಾ ಚುನಾವಣೆಯ ನಂತರ ರಾಷ್ಟ್ರ ರಾಜಕಾರಣದಲ್ಲಿ ಮಹತ್ವದ ಪಾತ್ರ ವಹಿಸಬೇಕು ಎಂಬುದಕ್ಕೆ ಅವರಿಗೆ ಇರುವ ದೊಡ್ಡ ಸವಾಲು ಇದು. ಚುನಾವಣೆಗೆ ಇನ್ನು ಇರುವುದು 15 ತಿಂಗಳು ಮಾತ್ರ.

ತೆಲಂಗಾಣದ ಹೊರಗೂ ತಮ್ಮ ಪಕ್ಷವನ್ನು ವಿಸ್ತರಿಸಬೇಕು ಎಂಬ ಹೆಬ್ಬಯಕೆ ಅವರಲ್ಲಿದೆ. ಆಂಧ್ರ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ಒಡಿಶಾದಲ್ಲಿ ಪಕ್ಷಕ್ಕೆ ನೆಲೆ ಕಂಡುಕೊಳ್ಳಬೇಕು ಎಂಬ ಯೋಜನೆಯನ್ನು ಅವರು ಹೊಂದಿದ್ದಾರೆ.

ಕರ್ನಾಟಕದಲ್ಲಿ ಜೆಡಿಎಸ್ ಜೊತೆಗೆ ಕೆಸಿಆರ್ ಕೈಜೋಡಿಸಿದ್ದಾರೆ. ವಿಧಾನಸಭಾ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಜೊತೆಯಾಗಿ ಸ್ಪರ್ಧಿಸುವ ಯೋಚನೆಯೂ ಅವರಲ್ಲಿ ಇದೆ. ಈ ಪ್ರದೇಶವು ತೆಲಂಗಾಣಕ್ಕೆ ಸಮೀಪದಲ್ಲಿಯೇ ಇದೆ. ಒಂದು ಕಾಲದಲ್ಲಿ ಇದು ನಿಜಾಮರ ಹೈದರಾಬಾದ್ ಸಂಸ್ಥಾನದ ಭಾಗವಾಗಿತ್ತು.

ಕೆಸಿಆರ್

ಆಂಧ್ರ ಪ್ರದೇಶದ ರಾಜಕಾರಣಿಗಳಾದ ತೋಟ ಚಂದ್ರಶೇಖರ್, ರಾವೆಲ ಕಿಶೋರ್ ಬಾಬು ಮತ್ತು ಚಿಂತಲ ಪಾರ್ಥಸಾರಥಿ ಅವರನ್ನು ಬಿಆರ್‌ಎಸ್‌ಗೆ ಕೆಸಿಆರ್ ಸೇರಿಸಿಕೊಂಡಿದ್ದಾರೆ. ಚಂದ್ರಶೇಖರ್ ನಿವೃತ್ತ ಐಎಎಸ್ ಅಧಿಕಾರಿ. ಈ ಮೂವರೂ ವಿವಿಧ ಪಕ್ಷಗಳಲ್ಲಿ ಇದ್ದು ತಮ್ಮ ಅದೃಷ್ಟ ಪರೀಕ್ಷಿಸಿಕೊಂಡವರು.

'ಆಂಧ್ರ ಸುಲಭ ತುತ್ತಲ್ಲ'

ತೆಲಂಗಾಣ ಪ್ರತ್ಯೇಕ ರಾಜ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕೆಸಿಆರ್ ಕುರಿತು ಆಂಧ್ರ ಪ್ರದೇಶದ ಜನರಿಗೆ ಆಕ್ರೋಶ ಇದೆ. ಜೊತೆಗೆ, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಹೈದರಾಬಾದ್ ಅನ್ನು ಆಂಧ್ರ ಪ್ರದೇಶವು ಅವರಿಂದಾಗಿಯೇ ಕಳೆದುಕೊಂಡಿದೆ ಎಂಬ ಸಿಟ್ಟೂ ಇದೆ.

ರಾಷ್ಟ್ರ ಮಟ್ಟದಲ್ಲಿ ಮಹತ್ವ ಪಡೆದುಕೊಳ್ಳುವುದು ಬಿಆರ್‌ಎಸ್‌ಗೆ ಸಾಧ್ಯವಾಗದು ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ. ಆಂಧ್ರ ಪ್ರದೇಶದ ಮತದಾರರು ಬಿಆರ್‌ಎಸ್ ಅನ್ನು ಚುನಾವಣೆಯಲ್ಲಿ ತಿರಸ್ಕರಿಸುವುದು ಖಚಿತ ಎಂಬುದು ಅವರ ಅಭಿಮತ.

ಕೆಲವು ಮುಖಂಡರು ಬಿಆರ್‌ಎಸ್‌ಗೆ ಸೇರಬಹುದು. ಆದರೆ, ಮತದಾರರು ಪಕ್ಷವನ್ನು ಒಪ್ಪಿಕೊಳ್ಳುವುದು ಮುಖ್ಯ. ಬಿಆರ್‌ಎಸ್ ಸ್ಪರ್ಧೆಯಿಂದ ಬೇರೆ ಯಾವುದೇ ಪಕ್ಷದ ಸಾಧ್ಯತೆಯನ್ನು ಕಮರಿಸುವುದು ಕೂಡ ಸಾಧ್ಯವಿಲ್ಲ ಎಂದು ರಾಜಕೀಯ ವಿಶ್ಲೇಷಕ ಪ್ರೊ. ಡಿ.ಎ.ಆರ್. ಸುಬ್ರಮಣ್ಯಂ ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಹೊಸ ವರ್ಷದ ಖುಷಿಯಲ್ಲಿರುವ ದೇಶದ ಜನರಿಗೆ ಬ್ಯಾಂಕ್‌ಗಳು ಪೆಟ್ಟು ನೀಡಲು ಸಜ್ಜಾಗಿವೆ ಎಂದು ಹೇಳಲಾಗುವ ಸುದ್ದಿವಾಹಿನಿಯ ವಿಡಿಯೊ ತುಣುಕು ಇತ್ತೀಚಿನ ದಿನಗಳಲ್ಲಿ ಹರಿದಾಡುತ್ತಿದೆ. ಚೆಕ್‌ಗಳಿಗೆ ಹಾಗೂ ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗೆ ಹೆಚ್ಚುವರಿ ಶುಲ್ಕ ನೀಡಬೇಕು ಎಂದು ಸುದ್ದಿ ನಿರೂಪಕರು ವಿಡಿಯೊದಲ್ಲಿ ಹೇಳುವುದು ಕೇಳಿಸುತ್ತದೆ. ಬ್ಯಾಂಕ್‌ಗಳು ಇಂತಹ ಹಲವು ನಿಯಮಗಳನ್ನು ರೂಪಿಸಿವೆ. ಇದೇ 20ರಿಂದ ಜಾರಿಗೆ ಬರಲಿವೆ ಎಂಬುದಾಗಿ ವಿಡಿಯೊದಲ್ಲಿ ಹೇಳಲಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಆದರೆ, ಈ ಸುದ್ದಿ ನಿಜವಲ್ಲ. ಇದು ಹಳೆಯ ವಿಡಿಯೊ.

ಬ್ಯಾಂಕ್‌ಗಳು ಹೆಚ್ಚುವರಿ ಶುಲ್ಕ ಹೇರುವ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿರುವ ವಿಡಿಯೊ ಹಳೆಯದು ಎಂದು 'ದಿ ಕ್ವಿಂಟ್' ಜಾಲತಾಣ ವರದಿ ಮಾಡಿದೆ. ಈ ವಿಡಿಯೊ ತುಣುಕಿನ ಪೂರ್ಣ ಭಾಗವನ್ನು 2018ರಲ್ಲಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಗಿದೆ. ವಿಡಿಯೊದಲ್ಲಿ ವರದಿಯಾಗಿರುವಂತೆ, ಜನವರಿ 20ರಿಂದ ಉಚಿತ ಸೇವೆಗಳನ್ನು ಸ್ಥಗಿತಗೊಳಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಅಂದಿನ ಹಣಕಾಸು ಕಾರ್ಯದರ್ಶಿ ರಾಜೀವ್ ಕುಮಾರ್ ಅವರು ಜನವರಿ 10ರಂದು ಟ್ವೀಟ್ ಮಾಡಿದ್ದರು. ಈ ವಿಡಿಯೊ ತುಣುಕಿಗೂ, 2023ರ ಹೊಸ ವರ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಜಾಲತಾಣ ಸ್ಪಷ್ಟಪಡಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಎಲ್ಲವೂ ಪರಸತ್ವ

ದಿನದಿನವು ಕುಸಿದು ಕಟ್ಟಿಸಿಕೊಳ್ಳುವ ಗುಡಿ ವಿಶ್ವ |
ಜನರೆಲ್ಲರಾಗುಡಿಯ ಕೆಲಸದಾಳುಗಳು ||
ಮನೆಯೇನು? ನಾಡೇನು? ಕುಲವೇನು? ಮತವೇನು? |
ಎಣಿಸೆಲ್ಲವದೆಯೆಂದು – ಮಂಕುತಿಮ್ಮ || 791 ||

ಪದ-ಅರ್ಥ: ಜನರೆಲ್ಲರಾಗುಡಿಯ = ಜನರೆಲ್ಲ + ಆ- + ಗುಡಿಯ, ಕೆಲಸದಾಳುಗಳು = ಕೆಲಸದ + ಆಳು-ಗಳು, ಎಣಿಸೆಲ್ಲವದೆಯೆಂದು = ಎಣಿಸು + ಎಲ್ಲವೂ- + ಅದೆ + ಎಂದು.

ವಾಚ್ಯಾರ್ಥ: ಈ ವಿಶ್ವವೊಂದು ದಿನದಿನವೂ ಕುಸಿದು ಹೊಸದಾಗಿ ಕಟ್ಟಿಸಿಕೊಳ್ಳುವ ಗುಡಿ. ಎಲ್ಲ ಜನರೂ ಆ ಗುಡಿಯ ಕೆಲಸದ ಆಳುಗಳು. ಇಲ್ಲಿ ಮನೆ, ನಾಡು, ಕುಲ, ಮತ ಯಾವುದೂ ಬೇರೆಯಲ್ಲ. ಎಲ್ಲವೂ ಒಂದೇ ಕಾರ್ಯದ ಹಲವು ಮುಖಗಳು.

ವಿವರಣೆ: ಈ ವಿಶ್ವ, ನಿತ್ಯಪರಿವರ್ತನೆಯ ಕೋಶ. ಇಲ್ಲಿ ತೆರೆ ಏಳುತ್ತದೆ, ತೆರೆ ಇಳಿಯುತ್ತದೆ. ವಿಜ್ಞಾನಿಗಳ ಪ್ರಕಾರ ಈ ವಿಶ್ವದ ಹುಟ್ಟು ಮತ್ತು ಬೆಳವಣಿಗೆ ಒಂದು ಪರಮವಿಸ್ಮಯ. ಮೊಟ್ಟೆಯಂತಿದ್ದ ವಿಶ್ವ ಫಟಾರೆಂದು ಸಿಡಿಯಿತಂತೆ. ಅದು ಯಾವ ಅಪಾರ ಶಕ್ತಿಯಿಂದ ಸಿಡಿಯಿತೆಂದರೆ ಸುಡುಸುಡುವ ಆವಿಯಾಗಿ ಹರಡತೊಡಗಿತು. ಅದು ಎಷ್ಟು ಶಾಖವೊ. ಗರಗರನೆ ತಿರುಗುತ್ತ ಆವಿ ನಿಧಾನವಾಗಿ ಕೊಂಚ ಕೊಂಚವಾಗಿ ಉಷ್ಣತೆಯನ್ನು ಕಳೆದುಕೊಳ್ಳುತ್ತ ಗಟ್ಟಿಯಾಗ-ತೊಡಗಿತು. ಆಮೇಲೆ ಮಳೆ ಬಂತಂತೆ. ಅದೆಷ್ಟು ವರ್ಷ? ಸಾವಿರಾರು ವರ್ಷಗಳವರೆಗೆ ಸುರಿದ ಮಳೆ ಗಟ್ಟಿಯಾದ ನಮ್ಮ ವಿಶ್ವವನ್ನು ತಣ್ಣಗಾಗಿಸಿತು. ಮೇಲ್ಮೈ ತಣ್ಣಗಾದರೂ ಒಳಗೆ ಇನ್ನೂ ಕುದಿಕುದಿಯುವ ಲಾವಾ ಇದೆ. ಭೂಮಿಯ ಮೇಲ್ಪದರು ತಂಪಾದಂತೆ, ಯಾವುದೋ ಅಮೃತಕ್ಷಣದಲ್ಲಿ ಜೀವಾಂಕುರವಾಯಿತು. ಗಿಡ ಮರಗಳು ಬಂದು ನೆಲ ಸಸ್ಯಶ್ಯಾಮಲೆಯಾಯಿತು. ಇತ್ತೀಚೆಗೆ ಸುಮಾರು ಐವತ್ತು ಸಾವಿರವರ್ಷಗಳಿಂದೀಚೆಗೆ ಪ್ರಾಣಿಗಳು ಹುಟ್ಟಿದವು. ಅವು ಕ್ರಮೇಣ ಬದಲಾಗುತ್ತ ಮನುಷ್ಯ ರೂಪ ತಳೆಯಿತು. ಎಲ್ಲವೂ ಸಂತೋಷವಾಗಿದ್ದವು. ಅದನ್ನು ಋಷಿಗಳು "ಅಸ್ಯೆಂ ಪೃಥಿವ್ಯೈ ಸರ್ವಾಣಿ ಭೂತಾನಿ ಮಧು" ಎಂದು ಕರೆದರು. ಈ ಜಗತ್ತು ಮಾತ್ರ ಜೇನಲ್ಲ, ಇಡೀ ಪೃಥ್ವಿಯೇ ಜೇನಿಗೆ ಸಮ. ಈ ಜೇನಿಗೆ ಸಮನಾದ ವಿಶ್ವವನ್ನು ಮನುಷ್ಯ ಸರಿಯಾಗಿ ತಿಳಿಯಲಿಲ್ಲ. ಜೇನಿಗೆ ಸ್ವಾರ್ಥತೆಯ ವಿಷ ಸೇರಿಸಿದ, ಉಳಿದ ಜೀವಿಗಳನ್ನು ತನಗಾಗಿ ಹಿಂಸಿಸಿದ, ಕೊಂದ. ಗಿಡಮರಗಳನ್ನು ಕತ್ತರಿಸಿ ಕಾಡನ್ನು ಬಯಲುಮಾಡಿದ. ವಾತಾವರಣ ಬದಲಾಗಿ ಹೋಗಿ,ಕಾಲಮಾನಗಳು ಬದಲಾಗಿ, ಮಳೆಗಾಲದಲ್ಲಿ ಬಿಸಿಲು, ಬಿಸಿಲುಗಾಲದಲ್ಲಿ ಚಳಿ ಉಂಟಾಗಿ, ರೋಗ ರುಜಿನಗಳ ಹಾವಳಿ ಅತಿಯಾಗಿ ಮನುಷ್ಯ ಒದ್ದಾಡಿದ. ಹೀಗೆ ಮನುಷ್ಯನಿಂದ ಪ್ರಕೃತಿ, ಪ್ರಕೃತಿಯಿಂದ ಮನುಷ್ಯ ಬದಲಾಗುತ್ತಲೇ ಬಂದವು. ಅದಕ್ಕೇ ಕಗ್ಗ ಇದನ್ನು ದಿನದಿನವೂ ಕುಸಿದು ಕಟ್ಟಿಸಿಕೊಳ್ಳುವ ವಿಶ್ವ ಎಂದು ಕರೆಯುತ್ತದೆ. ಇದನ್ನು ಕಟ್ಟುವುದರಲ್ಲಿ ಕೆಡಿಸುವುದರಲ್ಲಿ ಜನರೇ ಕೆಲಸದ ಆಳುಗಳು. ವಿಶ್ವ ಬ್ರಹ್ಮದ ಮನೆ, ಆ ಪರಸತ್ವ ಕಾರ್ಯದಲ್ಲಿ ಮನೆ, ನಾಡು, ಕುಲ, ಮತ ಇವು ಎಲ್ಲವೂ ಒಂದೇ ಮತ್ತು ಯಾವವೂ ಮುಖ್ಯವಲ್ಲ. ಇದು ನಮ್ಮ ಸ್ವಾರ್ಥದ ಕಾರ್ಯವಲ್ಲ, ಪರಮಸತ್ವದ ಕಾರ್ಯದಲ್ಲಿ ನೆರವಾಗುವವರು ನಾವೆಲ್ಲರೂ ಎಂದು ತಿಳಿದಾಗ ಭಿನ್ನತೆ ಬರುವುದಿಲ್ಲ. ಈ ವಿಶ್ವಗುಡಿಯ ಮೂಲ ಮೂರ್ತಿ ಈಶ್ವರ. ಇಡೀ ಪ್ರಪಂಚವೇ ಅವನದು ಎಂದು ತಿಳಿದಾಗ ಸ್ವಾರ್ಥ ಕೊಂಚ ಕಡಿಮೆಯಾದೀತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜನವರಿ 3, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಾದಶಿ ಗಂ. 22-02 ನಕ್ಷತ್ರ: ಕೃತ್ತಿಕಾ ಗಂ. 16-26 ಯೋಗ: ಸಾಧ್ಯ ಗಂ. 06-52, ಕರಣ: ಬವ ಗಂ. 09-10, ಧನುರ್ ಮಾಸದ 18 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 –04-30
ಸೂರ್ಯೋದಯ : 06-58 ಸೂರ್ಯಾಸ್ತ : 06-12
ಮುಸ್ಲಿಂ ದಿನಾಂಕ : 10 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 7, 12

ಮೇಷ: ಪೂಜಾದಿ ಕಾರ್ಯಗಳನ್ನು ನಡೆಸಿ ಧರ್ಮಕಾರ್ಯಗಳಿಗೆ ಹಣ ವಿನಿಯೋಗಿಸುವಿರಿ. ಕಚೇರಿಯಲ್ಲಿ ಸಹವರ್ತಿಗಳೊಂದಿಗೆ ಸ್ನೇಹ ಭಾವದಿಂದ ವರ್ತಿಸಿ ಗಳಿಸಿದ ಹಣ ಒಳ್ಳೆಯ ಕಾರ್ಯಗಳಿಗೆ ಸಹಾಯವಾಗುವುದು.

ವೃಷಭ: ಇಂದಿನ ಎಲ್ಲಾ ಸನ್ನಿವೇಶಗಳು ವಿರೋಧವಾಗಿ ಇರುವುದರಿಂದ ಮನಸ್ಸಿಗೆ ನಕಾರಾತ್ಮಕ ಯೋಚನೆಗಳು ಬರಲಿದೆ. ಪಾಲುದಾರರೊಂದಿಗೆ ಕೇವಲ ಮಾತುಕತೆ ನಡೆಸಿ, ಯಾವುದೇ ರೀತಿಯ ಕಾಗದ ಪತ್ರಗಳಿಗೆ ಸಹಿ ಹಾಕದಿರಿ.

ಮಿಥುನ: ಜನರನ್ನು ಆಕರ್ಷಿಸುವ ಕಲೆ ನಿಮಗೆ ಕರಗತವಾಗಿದೆ. ಭರವಸೆಯಂತೆ ನಡೆದುಕೊಳ್ಳುವಿರಿ. ವಿಷಯಗಳನ್ನೂ ಸಮಗ್ರವಾಗಿ ಅವಲೋಕಿಸಲು ಒಳ್ಳೆಯ ದಿನ. ಮನೋಭಿಲಾಷೆ ಪೂರೈಸಲು ವಾಮಮಾರ್ಗ ಸರಿಯಲ್ಲ.

ಕರ್ಕಾಟಕ: ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಸಿಗಲಿದೆ. ಗಣನೀಯ ಆದಾಯವಿದ್ದರೂ ಜತೆಯಲ್ಲಿಯೇ ಮನರಂಜನ ಬಯಕೆಯಿಂದಾಗಿ ಖರ್ಚುಗಳು ಸಂಭವಿಸಲಿದೆ.

ಸಿಂಹ: ಖಾಸಗಿ ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯ ಗಳಿಕೆ ಆಗಲಿದೆ. ರಾಜಕೀಯ ರಂಗದಲ್ಲಿ ಜನಪ್ರಿಯತೆ ಪಡೆಯುವಿರಿ.

ಕನ್ಯಾ: ನಿಮ್ಮ ಸಲಹೆ ಸೂಚನೆಗಳನ್ನು ಒಪ್ಪುವಂತೆ ವ್ಯಕ್ತಿಯ ಮನಸ್ಸು ಪರಿವರ್ತನೆ ಮಾಡುವಲ್ಲಿ ವಿಫಲರಾಗುವಿರಿ. ಆದ್ದರಿಂದ ತಿಳಿಹೇಳುವ ಜವಾಬ್ದಾರಿ ಈ ದಿನ ಅನವಶ್ಯಕ. ಆರೋಗ್ಯ ಉತ್ತಮಗೊಳ್ಳಲಿದೆ.

ತುಲಾ: ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು ಸರಿಯಾಗಿ ವ್ಯವಹರಿಸುವುದರಿಂದ ಲಾಭಾಂಶ ವೃದ್ಧಿಯಾಗಲಿದೆ. ನಿಮ್ಮ ವಾಸಸ್ಥಾನ ಬದಲಾಗುವ ಲಕ್ಷಣಗಳಿವೆ. ನಿಮ್ಮ ಅಧ್ಯಯನದ ವಿಷಯಕ್ಕೆ ಇರುವ ಪ್ರಾಮುಖ್ಯತೆ ತಿಳಿಯುವುದು.

ವೃಶ್ಚಿಕ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತವಾಗಿರುವ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸುವಿರಿ.

ಧನು: ಸಾಂಸಾರಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಯಾಗದಂತೆ ಎಚ್ಚರ ವಹಿಸಿ. ವೃತ್ತಿಪರವಾಗಿ ಬಹಳ ದಿನಗಳ ನಿರೀಕ್ಷಿತ ಕಾರ್ಯಕ್ಕೆ ಈ ದಿನ ಸಲಹೆ ದೊರಕುವುದು. ವಿವೇಕರಹಿತವಾದ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ.

ಮಕರ: ಅನುಮಾನಕ್ಕೆ ಎಡೆ ಮಾಡಿಕೊಡುವ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳುವಿರಿ. ವೃತ್ತಿಯ ಕೆಲಸಗಳಿಗಾಗಿ ಹೆಚ್ಚಿನ ಓಡಾಟ ನಡೆಸಬೇಕಾಗಬಹುದು. ಹಣದ ವಿಚಾರದಲ್ಲಿ ಸ್ಥಿರತೆಯ ಬಗ್ಗೆ ಯೋಚನೆ ಮಾಡಿ.

ಕುಂಭ: ಗೃಹ ನಿರ್ಮಾಣ ಅಥವಾ ನಿವೇಶನ ಖರೀದಿಯ ಕೆಲಸ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಬಹುದು. ಹೊಸ ಆಕಾಂಕ್ಷೆಗಳನ್ನು ಹಾಗೂ ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಳ್ಳುವಿರಿ.

ಮೀನ: ಉದ್ಯೋಗಸ್ಥ ಮಹಿಳೆಯರಿಗೆ ಈ ದಿನ ಅಧಿಕ ಕೆಲಸದ ಜತೆಯಲ್ಲಿ ಹೆಚ್ಚಿನ ಆದಾಯ ಉಂಟಾಗಲಿದೆ. ಕುಟುಂಬ ವರ್ಗದವರಲ್ಲಿ ಸುಖ, ನೆಮ್ಮದಿ ಕಂಡು ಬರುವುದು. ಮಕ್ಕಳು ಮಾಡಿದ ಸಣ್ಣ ಪುಟ್ಟ ತಪ್ಪು ಕ್ಷಮಿಸಿ.

ಪದಬಂಧ 5188

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಸುದ್ದಿ ಸಂಗ್ರಹಕಾರ (4)
3.ಪದದಲ್ಲಿರುವ ಪುಸ್ತಕದ ಸರ್ಗ ಕಾಣುತ್ತಿದೆಯೇ? (4)
5.ವರನಿಗೆ ಕೇಳಿಸಿರುವ ಧ್ವನಿ (2)
6.ಜಾಸ್ತಿ ದುಡ್ಡುಳ್ಳ ವ್ಯಕ್ತಿ (4)
8.ತಿರುಗಿದಾಗ ಕಾಣಿಸಿಕೊಂಡಿತೇ ಈ ದೆವ್ವ? (2)
9.ಲೋಲುಪನ ಕುಂದು ಇಲ್ಲಿ ಕಂಡಿದೆ (2)
10.ಹಿಡಿತದಿಂದ ಖರ್ಚು ಮಾಡುವಿಕೆ (4)
13.ನಾರಿಕೇಳ ಹಿಡಿದಿರುವ ಸ್ತ್ರೀ (2)
15.ಅತಿಯಾದ ಸಿಟ್ಟು (4)
16.ಹೂವಿನಲ್ಲಿನ ಸಿಹಿ ರಸ (4)

ಮೇಲಿಂದ ಕೆಳಕ್ಕೆ
1.ಕಣ್ಣೀರು ಅಥವಾ ಕಂಬನಿ (2)
2.ವನದ ಬಳಿಯಿರುವ ಅಸುರ (3)
3.ಪಣದಲ್ಲಿನ ಅಳತೆಯಿದು (4)
4.ಪ್ರಜ್ವಲಿಸುತ್ತಿರುವ ಬೆಂಕಿ (3)
5.ಯುದ್ಧಭೂಮಿಯಿದು (4)
6.ಯೌವ್ವನ ಹೀಗೆ ಬಂದಿದೆ (3)
7.ಈಕೆ ತೆಳ್ಳಗಿನ ಸೊಂಟದವಳು (4)
11.ನಿಷ್ಪ್ರಯೋಜಕ ಮಾತು (4)
12.ಹತ್ತು ವರ್ಷಗಳ ಅವಧಿ (3)
13.ನಾವಿಕ ತೋರಿಸಿರುವ ಮೂಗು (3)
14.ವಾದಕನ ಬಳಿ ನಡೆದ ಚರ್ಚೆ (2)



5187ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಳ್ಳೆದೆ 2.ಸಾರಜನಕ
4.ಸಾಕ್ಷಾತ್ಕಾರ 6.ವದಂತಿ
7.ತಮ 9.ದಿವಾನ
11.ತೆಲ 13.ನವಣೆ
14.ಕರವಾಲ 16.ಜಗಳಗಂಟಿ
17.ಹರಕೆ

ಮೇಲಿಂದ ಕೆಳಕ್ಕೆ:
1.ಅಹಿಂಸಾವ್ರತ
2.ಸಾಮು 3.ನವದಂಪತಿ
5.ರಶೀದಿ 8.ಮದುವಣಗ
10.ನರಕ 12.ಲವಲವಿಕೆ
15.ತುಟಿ

ಸುಡೊಕು 5574

1		3	5		6		4	7
				4				
7		4	9			5		3
9	1							8
		7		9			1	
5	2							4
8		1					6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ

5573 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಷೇರುಪೇಟೆ ವಹಿವಾಟು ▲327



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,105
ಇಂದಿನ ಅಂತ್ಯ	18,197
▲	92
ದಿನದ ಗರಿಷ್ಠ	18,215

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹567

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1620 (---)
ಸೋಯಾ (ರಿಫೈಂಡ್)	₹1285 (1290)
ಸೂರ್ಯಕಾಂತಿ (ರಿಫೈಂಡ್)	₹1335 (1335)
ಪಾಮೋಲಿನ್	₹960 (955)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹13650
ಎಸಿ	₹6720
ಆರ್‌ಪಿ	₹8000
ಆರ್‌ಸಿ	₹4615

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹134
ಆರ್‌ಎಸ್‌ಎಸ್-5	₹125.50
ಗುಡ್ ಲಾಟ್	₹119.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಗಳಿಕೆಯೊಂದಿಗೆ ವರ್ಷದ ಆರಂಭ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಹೊಸ ವರ್ಷದ ಮೊದಲ ದಿನದ ವಹಿವಾಟು ಸಕಾರಾತ್ಮಕವಾಗಿ ಅಂತ್ಯಗೊಂಡಿದೆ.

ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆ, ಮೂಲಸೌಕರ್ಯ ಮತ್ತು ತಯಾರಿಕಾ ವಲಯಗಳ ಚಟುವಟಿಕೆ ಹೆಚ್ಚಾಗಿರುವುದು ಹಾಗೂ ಯುರೋಪ್‌ನ ಷೇರುಪೇಟೆಗಳ ಗಳಿಕೆಯು ಹೂಡಿಕೆದಾರರ ಮೇಲೆ ಪ್ರಭಾವ ಬೀರಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 327 ಅಂಶ ಹೆಚ್ಚಾಗಿ 61,168 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 92 ಅಂಶ ಏರಿಕೆ ಕಂಡು 18,197 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್ ಕಂಪನಿ ಷೇರು ಮೌಲ್ಯ ಶೇ 5.86ರಷ್ಟು ಏರಿಕೆ ಕಂಡಿತು.

ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ವಿದ್ಯಮಾನಗಳು ಹಾಗೂ ಕಾರ್ಪೊರೇಟ್ ಫಲಿತಾಂಶವು ಉತ್ತಮವಾಗಿರುವ ನಿರೀಕ್ಷೆಯು ದೇಶದ ಷೇರುಪೇಟೆಗಳಲ್ಲಿ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿವೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 2.94ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 85.91ಕ್ಕೆ ತಲುಪಿದೆ.

ಜೊಮಾಟೊ: ಸಹಸಂಸ್ಥಾಪಕ ರಾಜೀನಾಮೆ

ನವದೆಹಲಿ (ಪಿಟಿಐ): ಜೊಮಾಟೊ ಕಂಪನಿಯ ಸಹ ಸಂಸ್ಥಾಪಕ ಹಾಗೂ ಮುಖ್ಯ ತಾಂತ್ರಿಕ ಅಧಿಕಾರಿ ಗುಂಜನ್ ಪಾಟಿದಾರ್ ಅವರು ತಮ್ಮ ಹುದ್ದೆ ತೊರೆದಿದ್ದಾರೆ ಎಂದು ಕಂಪನಿ ತಿಳಿಸಿದೆ.

'ಜೊಮಾಟೊ ಕಟ್ಟುವಲ್ಲಿ ಅವರ ಕೊಡುಗೆ ಬೆಲೆ ಕಟ್ಟಲು ಸಾಧ್ಯವಿಲ್ಲದ್ದು' ಎಂದು ಕಂಪನಿ ಹೇಳಿದೆ. ಅವರ ರಾಜೀನಾಮೆಗೆ ಕಾರಣವನ್ನು ಕಂಪನಿ ತಿಳಿಸಿಲ್ಲ.

ಕಂಪನಿಯ ತಂತ್ರಜ್ಞಾನ ವ್ಯವಸ್ಥೆಯನ್ನು ರೂಪಿಸಿದವರಲ್ಲಿ ಪಾಟಿದಾರ್ ಅವರೂ ಒಬ್ಬರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಹೊಸ ವಹಿವಾಟು ಏರಿಕೆ, ಬೇಡಿಕೆ ಹೆಚ್ಚಳ: ಎಸ್ ಆ್ಯಂಡ್ ಪಿ ವರದಿ

ತಯಾರಿಕೆ: 13 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ಬೇಡಿಕೆ ಹೆಚ್ಚಾಗುತ್ತಿರುವುದರ ಜೊತೆಗೆ ಹೊಸ ವಹಿವಾಟುಗಳಲ್ಲಿ ಏರಿಕೆ ಆಗುತ್ತಿರುವ ಕಾರಣ, ದೇಶದ ತಯಾರಿಕಾ ವಲಯದ ಚಟುವಟಿಕೆಯು ಡಿಸೆಂಬರ್‌ನಲ್ಲಿ 13 ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಬಿಡುಗಡೆ ಮಾಡಿರುವ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ನವೆಂಬರ್‌ನಲ್ಲಿ 55.7ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ 57.8ಕ್ಕೆ ಏರಿಕೆ ಆಗಿದೆ. 2021ರ ನವೆಂಬರ್ ತಿಂಗಳ ಬಳಿಕ ತಯಾರಿಕಾ ವಲಯದಲ್ಲಿ ಈ ಪ್ರಮಾಣದ ಬೆಳವಣಿಗೆ ದಾಖಲಾಗಿರುವುದು ಡಿಸೆಂಬರ್‌ನಲ್ಲಿ.

ಮುಖ್ಯಾಂಶಗಳು

- ಸತತ 18ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಪೂರೈಕೆ ವ್ಯವಸ್ಥೆಯಲ್ಲಿ ಸುಧಾರಣೆ

ಪೂರೈಕೆ ವ್ಯವಸ್ಥೆ ಸುಧಾರಿಸಿರುವುದು ಸಹ ವಲಯದ ಬೆಳವಣಿಗೆ ಮೇಲೆ ಪ್ರಭಾವ ಬೀರಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಮುನ್ನೋಟದ ಬಗ್ಗೆ ಕಂಪನಿಗಳು ಆಶಾವಾದ ಹೊಂದಿವೆ. ಜಾಹೀರಾತು ಮತ್ತು ಬೇಡಿಕೆಯು ವಲಯದ ಬೆಳವಣಿಗೆಗೆ ಪ್ರಮುಖ ಅಂಶಗಳಾಗಿವೆ. ತಯಾರಿಕೆಯನ್ನು ಈಗಿರುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಮಾಡುವ ವಿಶ್ವಾಸವನ್ನು ಕಂಪನಿಗಳು ಹೊಂದಿವೆ. ಆದರೆ, ಜಾಗತಿಕ ಆರ್ಥಿಕ ಬೆಳವಣಿಗೆಯ ಮುನ್ನೋಟವು ಉತ್ತಮವಾಗಿ ಇಲ್ಲದೇ ಇರುವುದರಿಂದ ದೇಶದ ತಯಾರಿಕಾ ಉದ್ಯಮದ ಚೇತರಿಕೆಯ ಬಗ್ಗೆ ಕೆಲವು ಪ್ರಶ್ನೆಗಳು ಉದ್ಭವಿಸಿವೆ ಎಂದು ಅವರು ಹೇಳಿದ್ದಾರೆ.

ತಯಾರಿಕಾ ವೆಚ್ಚವು ಡಿಸೆಂಬರ್‌ನಲ್ಲಿ ಕಡಿಮೆ ಪ್ರಮಾಣದಲ್ಲಿ ಇತ್ತು. ಒಟ್ಟಾರೆಯಾಗಿ ತಯಾರಿಕಾ ವಲಯದಲ್ಲಿ ಹಣದುಬ್ಬರವು ನವೆಂಬರ್‌ಗೆ ಹೋಲಿಸಿದರೆ ಡಿಸೆಂಬರ್‌ನಲ್ಲಿ ತುಸು ಇಳಿಕೆ ಆಗಿದ್ದು, 2020ರ ಸೆಪ್ಟೆಂಬರ್ ನಂತರ ಎರಡನೇ ಬಾರಿಗೆ ಕಡಿಮೆ ಮಟ್ಟಕ್ಕೆ ತಲುಪಿದೆ.

ನಿಧನ

ಬಿ. ವರಲಕ್ಷ್ಮಿ
ಜನನ: 11.08.1944
ಬಿ.ಸಿ.ನಾರಾಯಣರೆಡ್ಡಿರವರ ಧರ್ಮಪತ್ನಿ
ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ ಪಿಡಬ್ಲ್ಯುಡಿ
ನಂ. 1966, 9ನೇ ಬ್ಲಾಕ್, ಜಯನಗರ, ಬೆಂಗಳೂರು
ಇವರು ದಿ:02.01.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅಂತ್ಯಕ್ರಿಯೆಯನ್ನು ದಿನಾಂಕ: 03.01.2023 ರಂದು ಮಧ್ಯಾಹ್ನ 1.30ಕ್ಕೆ ನಮ್ಮ ಖಾಸಗಿ ರುದ್ರಭೂಮಿ, ಸರ್ಕಾರಿ ಶಾಲೆ ಹತ್ತಿರ, ಬೆಳ್ಳಂದೂರಿನಲ್ಲಿ ನಡೆಸಲಾಗುವುದು.
ದುಃಖಪತ್ತರು: ಕುಟುಂಬವರ್ಗದವರು

ಶ್ರದ್ಧಾಂಜಲಿ

ಶ್ರೀಮತಿ ಪುಟ್ಟಮ್ಮ
(ದಿ. ಸಿ.ಕೆ. ದೇವಲಿಂಗಯ್ಯನವರ ಧರ್ಮ ಪತ್ನಿ)
ರಾಜಾಜಿನಗರ, ಬೆಂಗಳೂರು
ಇವರು ದಿನಾಂಕ: 24.12.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಕೋರುವ
ಕುಟುಂಬಸ್ಥರು ಮತ್ತು ಬಂಧು ಬಳಗ

LOOKING FOR JOB OPPORTUNITY
Refer Classifieds on Wednesday

ರಾಷ್ಟ್ರೀಯ ಅಪರಾಧ ನಿಯಂತ್ರಣ ಬ್ಯೂರೊ ವರದಿ

ನಕಲಿ ನೋಟು: ಇಲ್ಲ ಅಂಕುಶ

ನವದೆಹಲಿ (ಪಿಟಿಐ): ನೋಟು ರದ್ದತಿಯ ತೀರ್ಮಾನ ಜಾರಿಗೆ ಬಂದು ಆರು ವರ್ಷಗಳು ಕಳೆದಿದ್ದರೂ, ನಕಲಿ ನೋಟುಗಳ ಹಾವಳಿ ನಿಂತಿಲ್ಲ. ನಕಲಿ ನೋಟುಗಳ ಚಲಾವಣೆ ನಿಯಂತ್ರಿಸುವುದು ಕೂಡ ನೋಟು ರದ್ದತಿ ತೀರ್ಮಾನ ಒಂದು ಉದ್ದೇಶವಾಗಿತ್ತು.

ರಾಷ್ಟ್ರೀಯ ಅಪರಾಧ ನಿಯಂತ್ರಣ ಬ್ಯೂರೊ (ಎನ್‌ಸಿಆರ್‌ಬಿ) ವರದಿಯ ಪ್ರಕಾರ, ದೇಶದ ಕಾನೂನು ಜಾರಿ ಸಂಸ್ಥೆಗಳು 2016ರ ನಂತರದಲ್ಲಿ ಒಟ್ಟು ₹ 245.33 ಕೋಟಿ ಮುಖಬೆಲೆಯ ನಕಲಿ ನೋಟುಗಳನ್ನು ವಶಪಡಿಸಿಕೊಂಡಿವೆ. ನೋಟು ರದ್ದತಿ ತೀರ್ಮಾನ ಜಾರಿಗೆ ಬಂದಿದ್ದು 2016ರಲ್ಲಿ.

2016ರ ನಂತರದಲ್ಲಿ ಅತಿಹೆಚ್ಚಿನ ಮೊತ್ತದ ನಕಲಿ ನೋಟುಗಳನ್ನು ವಶಪಡಿಸಿಕೊಂಡಿದ್ದು 2020ರಲ್ಲಿ. ಆ ವರ್ಷ ಒಟ್ಟು ₹ 92.17 ಕೋಟಿ ಮುಖಬೆಲೆಯ ನಕಲಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ. 2016ರಲ್ಲಿ ಅತ್ಯಂತ ಕಡಿಮೆ (₹ 15.92 ಕೋಟಿ ಮುಖಬೆಲೆ) ನಕಲಿ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ.

2021ರಲ್ಲಿ ₹ 20.39 ಕೋಟಿ, 2019ರಲ್ಲಿ ₹ 34.79 ಕೋಟಿ, 2018ರಲ್ಲಿ ₹ 26.35 ಕೋಟಿ, 2017ರಲ್ಲಿ ₹ 55.71 ಕೋಟಿ ಮುಖಬೆಲೆಯ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ಮಾಹಿತಿ ಎನ್‌ಸಿಆರ್‌ಬಿ ಬಳಿ ಇದೆ.

2022ರ ಮೇ ತಿಂಗಳಲ್ಲಿ ಪ್ರಕಟವಾದ ಆರ್‌ಬಿಐ ವಾರ್ಷಿಕ ವರದಿ ಅನ್ವಯ, ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪತ್ತೆ ಮಾಡಲಾದ ₹ 500 ಮುಖಬೆಲೆಯ ನಕಲಿ ನೋಟುಗಳ ಸಂಖ್ಯೆಯು 2021-22ರಲ್ಲಿ ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ. 2021-22ರಲ್ಲಿ 79,669 ನಕಲಿ ನೋಟುಗಳನ್ನು ಪತ್ತೆ ಮಾಡಲಾಯಿತು.

ಮುಖ್ಯಾಂಶಗಳು

- 2020ರಲ್ಲಿ ಅತಿಹೆಚ್ಚಿನ ಪ್ರಮಾಣದಲ್ಲಿ ನಕಲಿ ನೋಟು ವಶ
- 2016ರಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ನಕಲಿ ನೋಟು ವಶ
- ದೇಶದ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿಯೂ ನಕಲಿ ನೋಟುಗಳು ಪತ್ತೆ

2021-22ರಲ್ಲಿ ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಪತ್ತೆ ಮಾಡಲಾದ ₹ 2000 ಮುಖಬೆಲೆಯ ನಕಲಿ ನೋಟುಗಳ ಪ್ರಮಾಣವು ಶೇ 54.6ರಷ್ಟು ಹೆಚ್ಚಾಗಿತ್ತು.

'2023ರಲ್ಲಿ ಮೂರನೇ ಒಂದರಷ್ಟು ಆರ್ಥಿಕತೆಗಳಲ್ಲಿ ಹಿಂಜರಿತ'

ವಾಷಿಂಗ್ಟನ್ (ಪಿಟಿಐ): ಜಾಗತಿಕವಾಗಿ ಮೂರನೇ ಒಂದರಷ್ಟು ಆರ್ಥಿಕತೆಗಳು ಈ ವರ್ಷ ಹಿಂಜರಿತದ ಸ್ಥಿತಿಗೆ ಹೋಗಲಿವೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಮುಖ್ಯಸ್ಥೆ ಕ್ರಿಸ್ಟಲೀನಾ ಜಾರ್ಜಿವಾ ಹೇಳಿದ್ದಾರೆ.

ಅಮೆರಿಕ, ಯುರೋಪ್ ಮತ್ತು ಚೀನಾದಲ್ಲಿ ಆರ್ಥಿಕ ಬೆಳವಣಿಗೆ ಇಳಿಮುಖವಾಗಿದೆ. ಹೀಗಾಗಿ 2023ನೇ ವರ್ಷವು ಕಳೆದ ವರ್ಷಕ್ಕಿಂತಲೂ ಕಷ್ಟಕರವಾಗಿ ಇರಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕ್ರಿಸ್ಟಲೀನಾ

ಹಿಂಜರಿತದ ಸ್ಥಿತಿ ಇಲ್ಲದಿರುವ ದೇಶಗಳ ಲಕ್ಷಾಂತರ ಜನರಿಗೆ ಆರ್ಥಿಕ ಹಿಂಜರಿತದಂತಹ ಅನುಭವ ಆಗಲಿದೆ ಎಂದು ಅವರು ಹೇಳಿದ್ದಾರೆ.

ಮುಂದಿನ ಕೆಲವು ತಿಂಗಳುಗಳು ಚೀನಾದ ಪಾಲಿಗೆ ಅತ್ಯಂತ ಕಠಿಣ ಆಗಿರಲಿವೆ. ಚೀನಾದ ಆರ್ಥಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪರಿಣಾಮ ಆಗಲಿದೆ. ಜಾಗತಿಕ ಆರ್ಥಿಕ ಬೆಳವಣಿಗೆಯು ನಕಾರಾತ್ಮಕ ಮಟ್ಟದಲ್ಲಿ ಇರಲಿದೆ ಎಂದಿದ್ದಾರೆ.

ವ್ಯವಸ್ಥೆಗೆ ಮುಖ್ಯವಾದ ಬ್ಯಾಂಕ್: ಆರ್‌ಬಿಐ ಮಾಹಿತಿ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಖಾಸಗಿ ವಲಯದ ಐಸಿಐಸಿಐ ಬ್ಯಾಂಕ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ಗಳನ್ನು 'ದೇಶಿ ವ್ಯವಸ್ಥೆಗೆ ಮುಖ್ಯವಾದ ಬ್ಯಾಂಕ್‌ಗಳು' (ಡಿ-ಎಸ್‌ಐಬಿ) ಎಂದು ಗುರುತಿಸುವುದು ಮುಂದುವರಿಯುತ್ತದೆ ಎಂದು ಆರ್‌ಬಿಐ ಸೋಮವಾರ ಹೇಳಿದೆ.

ಈ ಮೂರು ಬ್ಯಾಂಕ್‌ಗಳನ್ನು 'ದೇಶದ ಅರ್ಥ ವ್ಯವಸ್ಥೆಯ ಪಾಲಿಗೆ ಬಹುಮುಖ್ಯವಾದುವು' ಎಂದು ಭಾವಿಸಲಾಗಿದೆ. ಇವುಗಳಿಗೆ ಸಮಸ್ಯೆ ಎದುರಾದರೆ ಸರ್ಕಾರವು ನೆರವಿಗೆ ಬರುತ್ತದೆ ಎಂಬ ನಿರೀಕ್ಷೆಯೂ ಇದೆ. ಈ ಬ್ಯಾಂಕ್‌ಗಳ ವಿಚಾರದಲ್ಲಿ ಇರುವ ಈ ಬಗೆಯ ಭಾವನೆಯ ಕಾರಣದಿಂದಾಗಿ, ಹಣಕಾಸು ಮಾರುಕಟ್ಟೆಯಲ್ಲಿ ಇವುಗಳಿಗೆ ಇತರ ಬ್ಯಾಂಕ್‌ಗಳಿಗಿಂತ ಹೆಚ್ಚಿನ ಅನುಕೂಲಗಳು ಇವೆ.

ಎಸ್‌ಬಿಐ ಮತ್ತು ಐಸಿಐಸಿಐ ಬ್ಯಾಂಕ್ 'ಡಿ-ಎಸ್‌ಐಬಿ'ಗಳು ಎಂದು ಆರ್‌ಬಿಐ 2015 ಮತ್ತು 2016ರಲ್ಲಿ ಹೇಳಿತ್ತು. 2017ರಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ಕೂಡ ಈ ಹೆಗ್ಗಳಿಕೆ ದೊರೆಯಿತು.

ಡೊನೆಟ್‌ಸ್ಕ್ ಪ್ರಾಂತ್ಯದ ವಿಮೋಚನೆಗೆ ಉಕ್ರೇನ್ ಪ್ರತಿದಾಳಿ

ರಷ್ಯಾದ 200 ಸೈನಿಕರ ಸಾವು

ಕೀವ್/ಮಾಸ್ಕೊ (ರಾಯಿಟರ್ಸ್/ಎಪಿ): ಡೊನೆಟ್‌ಸ್ಕ್ ಪ್ರಾಂತ್ಯದ ಮಕೀವ್ಕಾ ಪಟ್ಟಣದಲ್ಲಿ ತಾತ್ಕಾಲಿಕ ಸೇನಾ ವಸತಿ ಸೌಕರ್ಯಗಳ ಮೇಲೆ ಉಕ್ರೇನ್ ನಡೆಸಿರುವ ಹಿಮಾರ್ಸ್ ಕ್ಷಿಪಣಿ ದಾಳಿಯಲ್ಲಿ 200ಕ್ಕೂ ಹೆಚ್ಚು ಸೈನಿರು ಸಾವನ್ನಪ್ಪಿದ್ದಾರೆ ಎಂದು ರಷ್ಯಾದ ಸೇನಾ ಮೂಲಗಳು ಸೋಮವಾರ ತಿಳಿಸಿವೆ.

ಆದರೆ, ರಷ್ಯಾ ರಕ್ಷಣಾ ಸಚಿವಾಲಯ 63 ಸೈನಿಕರು ಸಾವನ್ನಪ್ಪಿರುವುದಾಗಿ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ.

ದಾಳಿಯ ಹೊಣೆ ಹೊತ್ತುಕೊಂಡಿರದ ಉಕ್ರೇನ್ ಸೇನೆ, ರಷ್ಯಾ ಸೈನಿಕರಲ್ಲಿ ಸುಮಾರು 400 ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಸೈನಿಕರು ಗಾಯಗೊಂಡಿರಬಹುದು ಎಂದು ಹೇಳಿದೆ.

ಉಕ್ರೇನ್ ಆರು ಹಿಮಾರ್ಸ್ ಕ್ಷಿಪಣಿಗಳನ್ನು ಉಡಾಯಿಸಿದ್ದು, ಇದರಲ್ಲಿ ಕ್ಷಿಪಣಿಗಳನ್ನು ರಷ್ಯಾ ಪಡೆಗಳು ಹೊಡೆದುರುಳಿಸಿವೆ. ಉಳಿದ ಕ್ಷಿಪಣಿಗಳು ಗುರಿ ಭೇದಿಸಿ ರಷ್ಯಾ ಸೇನೆಗೆ ಭಾರಿ ಹಾನಿ ಉಂಟು ಮಾಡಿವೆ ಎಂದು 'ಅಲ್ ಜಝೀರಾ' ಸುದ್ದಿಸಂಸ್ಥೆ ವರದಿ ಮಾಡಿದೆ.

ರಷ್ಯಾದ ಕ್ಷಿಪಣಿಗಳು ಮತ್ತು ಡ್ರೋನ್ ದಾಳಿ ಎದುರಿಸಲು ಉಕ್ರೇನ್, ಅಮೆರಿಕ ಮತ್ತಿತರ ಪಾಶ್ಚಿಮಾತ್ಯ ಮಿತ್ರ ದೇಶಗಳು ಪೂರೈಸಿರುವ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಕ್ಷಿಪಣಿಗಳನ್ನು ಬಳಸುತ್ತಿದೆ.

ರಷ್ಯಾದ ಹಿಡಿತದಲ್ಲಿರುವ ಡೊನೆಟ್‌ಸ್ಕ್ ಪ್ರಾಂತ್ಯದ ವಿಮೋಚನೆಗೆ ಉಕ್ರೇನ್ ಪಡೆಗಳು ಕೆಲವು ದಿನಗಳಿಂದ ಪ್ರತಿ ದಾಳಿ ತೀವ್ರಗೊಳಿಸಿವೆ. ಡೊನೆಟ್ಸ್ಕ್ ಪ್ರಾಂತ್ಯದ ಹಲವು ಪ್ರದೇಶಗಳ ಮೇಲೆ ರಷ್ಯಾ ನಿಯಂತ್ರಣ ಸಾಧಿಸಿದ್ದು, ಸೇನಾ ಪಡೆಗಳಿಗೆ ಪೂರೈಸಲು ಆಯಕಟ್ಟಿನ ಸ್ಥಳಗಳಲ್ಲಿ ಶಸ್ತ್ರಾಸ್ತ್ರ ಮತ್ತು ಇಂಧನ ದಾಸ್ತಾನು ಮಾಡಿದೆ.

ಉಕ್ರೇನ್ ಮೇಲೆ 40 ಡ್ರೋನ್ ದಾಳಿ: ಹೊಸ ವರ್ಷಾರಂಭದಲ್ಲೂ ಉಕ್ರೇನ್ ಮೇಲೆ ದಾಳಿ ತೀವ್ರಗೊಳಿಸಿರುವ ರಷ್ಯಾ ಪಡೆಗಳು ಭಾನುವಾರ ತಡರಾತ್ರಿ ಪ್ರಮುಖ ನಗರಗಳ ಮೇಲೆ ಇರಾನಿ ನಿರ್ಮಿತ ಸ್ವಯಂ ಸ್ಫೋಟದ 40 ಶಾಹಿದ್ ಡ್ರೋನ್‌ಗಳನ್ನು ಉಡಾಯಿಸಿದೆ.

ರಷ್ಯಾ ಪಡೆಗಳು ಸೋಮವಾರ ನಡೆಸಿದ ಡ್ರೋನ್, ಕ್ಷಿಪಣಿ ಮತ್ತು ಶೆಲ್ ದಾಳಿಯಲ್ಲಿ ಉಕ್ರೇನ್‌ನ ಹಲವು ಪ್ರದೇಶಗಳಲ್ಲಿ ಭಾರಿ ಹಾನಿಯಾಗಿದೆ. ಪ್ರಮುಖ ಇಂಧನ, ವಿದ್ಯುತ್, ಕುಡಿಯುವ ನೀರಿನ ಮೂಲಸೌಕರ್ಯ ನಾಶಕ್ಕೆ ಮತ್ತು ಉಕ್ರೇನ್‌ನ ಪ್ರತಿರೋಧ ಶಕ್ತಿ ಕುಂದಿಸಲು ರಷ್ಯಾ ಹಲವು ಬಾರಿ ಸ್ಫೋಟಿಸುವ ಡ್ರೋನ್‌ಗಳ ದಾಳಿ ನಡೆಸಿದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಕೀವ್ ನಗರ ಗುರಿಯಾಗಿಸಿ ತೂರಿಬಂದ 40 ಕ್ಷಿಪಣಿಗಳನ್ನು ವಾಯುಪಡೆ ನಾಶಪಡಿಸಿದೆ. 3 ಡ್ರೋನ್‌ಗಳು ಕೀವ್ ನಗರದ ಹೊರ ವಲಯ ಮತ್ತು ನೆರೆಯ ಪ್ರಾಂತ್ಯಗಳ ಮೇಲೆ ಬಿದ್ದಿವೆ. ನಗರ ಜಿಲ್ಲೆಯಲ್ಲಿ ಇಂಧನ ಮೂಲಸೌಕರ್ಯ ಹಾನಿಗೀಡಾಗಿವೆ ಎಂದು ಮೇಯರ್ ವಿಟಾಲಿ ಕ್ಲಿಟ್‌ಸ್ಕೊ ಹೇಳಿದ್ದಾರೆ.

39 ಶಾಹಿದ್ ಡ್ರೋನ್‌ಗಳು, ಎರಡು ಓರ್ಲಾನ್ ಡ್ರೋನ್‌ಗಳು ಹಾಗೂ ಎಕ್ಸ್ -59 ಕ್ಷಿಪಣಿಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯುಪಡೆಯ ಕಮಾಂಡ್ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	22500-38000
ಹಳತು	48000-54500
ಚಿತ್ರದುರ್ಗ	
ಆಪಿ	45139-45569
ಬೆಟ್ಟೆ	33219-33659
ಕೆಂಪುಗೋಟು	29100-29500
ರಾಶಿ	44629-45099
ಕಾರ್ಕಳ	
ಹೊಸತು	30000-37500
ಹಳತು	40000-54500
ಕುಮಟ	
ಚಿಪ್ಪು	25809-32109
ಕೋಕ	18019-28999
ಹಳೆಚಾಲಿ	36899-40599
ಹೊಸಚಾಲಿ	32509-34999
ಸಾಗರ	
ಬಿಳಿಗೋಟು	27529-29889
ಚಾಲಿ	33699-38989
ಕೋಕ	14989-32299
ಕೆಂಪುಗೋಟು	29699-36899
ರಾಶಿ	33699-46570
ಮಂಗೂರು	
ಹಳತು	52500-54500
ಹೊಸತು	31000-39000
ಕೋಕ	22000-27000
ಶಿವಮೊಗ್ಗ	
ಬೆಟ್ಟೆ	44500-53299
ಗೊರಬಲು	18209-35159
ರಾಶಿ	40009-46218
ಸರಕು	54119-81010
ಸಿದ್ದಾಪುರ	
ಬಿಳಿಗೋಟು	30699-33699
ಚಾಲಿ	37619-41599
ಕೋಕ	26199-31899
ಕೆಂಪುಗೋಟು	27919-31699
ರಾಶಿ	43899-45629
ತಟ್ಟಿಬೆಟ್ಟೆ	38899-41609
ಯಲ್ಲಾಪುರ	
ಬಿಳಿಗೋಟು	24699-33810
ಹಳೆಚಾಲಿ	35419-41729
ಹೊಸಚಾಲಿ	31009-33499
ಕೋಕ	14601-28266
ಕೆಂಪುಗೋಟು	28009-34315
ರಾಶಿ	43847-53135
ತಟ್ಟಿಬೆಟ್ಟೆ	36590-42199
ಆಪಿ	53379-53379

ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ: ಮತ್ತೆ ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಸೋಮವಾರ ಮತ್ತೆ ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ಇವರೊಂದಿಗೆ ಬಂಧಿತರ ಸಂಖ್ಯೆ 41ಕ್ಕೆ ಏರಿಕೆಯಾಗಿದೆ.

ಅಥಣಿ ತಾಲ್ಲೂಕಿನ ದರೂರು ಗ್ರಾಮದ ಕಿರಣ ಸಹದೇವ ಕೊರಬು (28), ಬೈಲಹೊಂಗಲ ತಾಲ್ಲೂಕಿನ ಜಕನಾಯಕನ ಕೊಪ್ಪದ ನಾಗಯ್ಯ ಈರಯ್ಯ ಹುಬ್ಬಳ್ಳಿ (28), ಗೋಕಾಕ ತಾಲ್ಲೂಕಿನ ಹಡಗಿನಾಳದ ನಾಗಪ್ಪ ಉದ್ದಪ್ಪ ಹೊಸಮನಿ (29), ಬೆಣಚಿನಮರಡಿಯ ಶಶಿಕಾಂತ ಶಿವಪ್ಪ ಮಾಗಿ (25), ಬಗರನಾಳದ ದೇವರಾಜ ಭೀಮಪ್ಪ ಅವಲಿ (26) ಬಂಧಿತರು.

ಇವರೆಲ್ಲರೂ ಗೋಕಾಕ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಹಾಜರಾಗಿದ್ದರು. ಮೈಕ್ರೊಚಿಪ್, ಮೊಬೈಲ್ ಹಾಗೂ ಇತರ ಎಲೆಕ್ಟ್ರಾನಿಕ್ ಡಿವೈಸ್‌ಗಳನ್ನು ಬಳಸಿ ಪರೀಕ್ಷೆ ಬರೆದಿದ್ದರು. ಆರೋಪಿಗಳಿಂದ ಅಕ್ರಮಕ್ಕೆ ಬಳಸಿದ ಎಲ್ಲ ಸಾಮಗ್ರಿಗಳನ್ನೂ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ. ಪ್ರಕರಣದ ತನಿಖಾಧಿಕಾರಿ, ಡಿವೈಎಸ್ಪಿ ವೀರೇಶ ತಿ. ದೊಡಮನಿ ನೇತೃತ್ವದ ತಂಡ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಮೆಕ್ಸಿಕೊ: ಜೈಲಿನ ಮೇಲೆ ಸಶಸ್ತ್ರ ದಾಳಿ, 14 ಮಂದಿ ಸಾವು

ಮೆಕ್ಸಿಕೊ ಸಿಟಿ (ರಾಯಿಟರ್ಸ್): ಮೆಕ್ಸಿಕೊದ ಗಡಿನಗರ ಜುವಾರೆಜ್‌ನಲ್ಲಿರುವ ಜೈಲಿನಲ್ಲಿ ನಡೆದ ಸಶಸ್ತ್ರ ದಾಳಿಯಲ್ಲಿ ಕನಿಷ್ಠ 14 ಮಂದಿ ಹಾಗೂ ನಗರದ ಮತ್ತೊಂದೆಡೆ ನಡೆದ ದಾಳಿಯಲ್ಲಿ ಇಬ್ಬರು ಚಾಲಕರು ಸಾವಿಗೀಡಾಗಿದ್ದಾರೆ ಎಂದು ಮೆಕ್ಸಿಕೊದ ಅಧಿಕಾರಿಗಳು ತಿಳಿಸಿದ್ದಾರೆ.

ಜೈಲಿನಲ್ಲಿ ನಡೆದ ದಾಳಿಯಲ್ಲಿ ಸಾವಿಗೀಡಾಗಿದವರಲ್ಲಿ 10 ಮಂದಿ ಭದ್ರತಾ ಸಿಬ್ಬಂದಿ ಹಾಗೂ ನಾಲ್ವರು ಕೈದಿಗಳು ಇದ್ದಾರೆ. ದಾಳಿಯಲ್ಲಿ 13 ಮಂದಿ ಗಾಯಗೊಂಡಿದ್ದು, 24 ಮಂದಿ ಪಾರಾಗಿದ್ದಾರೆ ಎಂದು ಚಿಹೋವಾ ರಾಜ್ಯದ ಪ್ರಾಸಿಕ್ಯೂಟರ್ ಮಾಹಿತಿ ನೀಡಿದ್ದಾರೆ.

ದಾಳಿಕೋರರು ಸ್ಥಳೀಯ ಕಾಲಮಾನ ಬೆಳಿಗ್ಗೆ 7 ಗಂಟೆಗೆ ಶಸ್ತ್ರಸಜ್ಜಿತ ವಾಹನಗಳಲ್ಲಿ ಜೈಲಿಗೆ ಬಂದು ಗುಂಡಿನ ದಾಳಿ ನಡೆಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

'ಬೂತ್ ವಿಜಯ' ಅಭಿಯಾನಕ್ಕೆ ಚಾಲನೆ

ಒಂದನೇ ಪುಟದಿಂದ

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ (ಗದಗ), ಶೋಭಾ ಕರಂದ್ಲಾಜೆ (ಉಡುಪಿ), ಭಗವಂತ ಖೂಬಾ (ಬೀದರ್), ಎ.ನಾರಾಯಣ ಸ್ವಾಮಿ (ಚಿತ್ರದುರ್ಗ), ಶಾಸಕ ಜಗದೀಶ ಶೆಟ್ಟರ್ (ಹಾವೇರಿ), ಸಂಸದ ಡಿ.ವಿ.ಸದಾನಂದಗೌಡ (ಬೆಂಗಳೂರು ಉತ್ತರ), ಶಾಸಕ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ), ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ (ಚಿಕ್ಕೋಡಿ), ಸಚಿವರಾದ ಆರ್. ಅಶೋಕ (ಬೆಂಗಳೂರು ದಕ್ಷಿಣ), ಕೆ.ಗೋಪಾಲಯ್ಯ (ಹಾಸನ) ಅವರು ವಿವಿಧೆಡೆ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ಅಭಿಯಾನಕ್ಕಾಗಿ ಬೂತ್ ಸಮಿತಿ ಪರಿಶೀಲನೆ, ಪೇಜ್ ಪ್ರಮುಖ್ ನಿಯುಕ್ತಿ, ಬೂತ್ ವಾಟ್ಸ್ ಆ್ಯಪ್ ಗ್ರೂಪ್‌ಗಳ ರಚನೆ, ಮನ್‌ಕೀ ಬಾತ್ ವೀಕ್ಷಣೆಗೆ ಸುಮಾರು 60 ಸಾವಿರ ಗುಂಪುಗಳ ರಚನೆ ಮಾಡಲಾಗುವುದು ಎಂದು ಬಿಜೆಪಿ ಹೇಳಿದೆ.

ಶಿವಾಜಿನಗರದಿಂದಲೇ ಗೆಲುವಿನ ಆರಂಭ: ಬೊಮ್ಮಾಯಿ

'ಶಿವಾಜಿನಗರದಲ್ಲಿ ಬಿಜೆಪಿ ಗೆದ್ದರೆ, ಕರ್ನಾಟಕದಲ್ಲಿ 130ಕ್ಕಿಂತ ಹೆಚ್ಚು ಸ್ಥಾನಗಳು ಬಿಜೆಪಿಗೆ ಬಂದೇ ಬರುತ್ತದೆ. ಇದೊಂದು ಒಂದು ರಾಜಕೀಯ ಸಂಕೇತ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಬಿಜೆಪಿಗೆ ಶಕ್ತಿ ಇಲ್ಲದ ಕಾಲದಲ್ಲಿಯೇ ಈ ಕ್ಷೇತ್ರದಲ್ಲಿ ಗೆದ್ದಿತ್ತು. ಕ್ಷೇತ್ರದ ಗೆಲುವಿಗಾಗಿಯೇ ಇಲ್ಲಿ ಬಂದಿದ್ದೇನೆ. ಶಿವಾಜಿನಗರಕ್ಕೆ ಹೆಚ್ಚಿನ ಸಮಯ ಕೊಡಲಿದ್ದು, ಕರೆದಾಗ ಬಂದು ಇಲ್ಲಿನ ಕೆಲಸಗಳನ್ನು ಮಾಡುವೆ' ಎಂದರು.

ಪ್ರತಿಯೊಂದು ಬೂತ್ ಸಶಕ್ತಗೊಳಿಸಲು ಪ್ರಮುಖರ ಸಭೆ ಕರೆದು, 100 ಪ್ರಮುಖ ಸಕ್ರಿಯ ಕಾರ್ಯಕರ್ತರಿರುವ ಸಮಿತಿ ರಚಿಸಬೇಕು. ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು, ಮಹಿಳೆಯರು ಮತ್ತು ಯುವ ಮೋರ್ಚಾ ಸ್ಥಾಪಿಸಿ ಅಹರ್ನಿಶಿ ಕೆಲಸ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆ ಹಾಗೂ ಕಾಂಗ್ರೆಸ್ಸಿನ ಜನವಿರೋಧಿ ನೀತಿಯನ್ನು ತಿಳಿಸುವ ಕೆಲಸ ಮಾಡಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದರು.

ಮುಂಬೈ ಧಾರಣೆ

ಶೇಂಗಾ

2–1-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	16320 (1620)
ಒಂದು ವಾರದ ಡೆಲಿವರಿ	1625 (---)
ಸೋಯಾ ಕಚ್ಚಾ	--- (---)
ಪಾಮ್ ವಾರದ ಡೆಲಿವರಿ	958 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
54,950 (54,850)
ಬೆಳ್ಳಿ ಕೆ.ಜಿ 68,350 (68,300)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ಓದಿ

ಉದ್ಯಮಿ ಆತ್ಮಹತ್ಯೆ: ಲಿಂಬಾವಳಿ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

'ಪತಿ ಪ್ರದೀಪ್, ನಾಲ್ಕೈದು ವರ್ಷಗಳಿಂದ ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿದ್ದರು. ಸಾಲ ಪಡೆದುಕೊಂಡವರು ವಾಪಸ್ ನೀಡದ ಕಾರಣ ಅದೇ ಚಿಂತೆಯಿಂದ ಆತ್ಯಹತ್ಯೆ ಮಾಡಿಕೊಂಡಿದ್ದಾರೆ. ಮರಣಪತ್ರ ಸಹ ಬರೆದಿಟ್ಟಿದ್ದಾರೆ. ನಾನೂ ಬ್ಯಾಂಕ್‌ನಲ್ಲಿ ಸಾಲ ಪಡೆದು ಪತಿಗೆ ನೀಡಿದ್ದೆ. ನನ್ನ ಪತಿಯ ಆತ್ಮಹತ್ಯೆಗೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಬೇಕು ಎಂಬುದಾಗಿ ಪತ್ನಿ ದೂರಿನಲ್ಲಿ ಹೇಳಿದ್ದಾರೆ' ಎಂದು ಮೂಲಗಳು ವಿವರಿಸಿವೆ.

ಬೆಂಗಳೂರಿನ ಅಂಬಲಿಪುರದ ನಿವಾಸಿ ಪ್ರದೀಪ್, ಹೊಸ ವರ್ಷಾಚರಣೆಗೆಂದು ಕುಟುಂಬದವರ ಜೊತೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ನೆಟ್ಟಿಗೆರೆ ಬಳಿಯ ರೆಸಾರ್ಟ್‌ವೊಂದಕ್ಕೆ ಬಂದಿದ್ದರು. ನೆಟ್ಟಿಗೆರೆ ಗೇಟ್ ಬಳಿ ತಮ್ಮ ಕಾರಿನಲ್ಲೇ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಕಾರಿನಲ್ಲಿ 8 ಪುಟಗಳ ಮರಣಪತ್ರ ಸಹ ಲಭ್ಯವಾಗಿತ್ತು.

'ಎಫ್‌ಐಆರ್ ಅನ್ವಯ ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಅವರ ಹೇಳಿಕೆ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಕಗ್ಗಲೀಪುರ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳ ರಕ್ಷಿಸುವ ಹುನ್ನಾರ'

ಪ್ರದೀಪ್ ವಿರುದ್ಧ ಪತ್ನಿ ನಮಿತಾ ಅವರು ಕಿರುಕುಳದ ಆರೋಪದಡಿ ದೂರು ನೀಡಿದ್ದರು. ಅದರನ್ವಯ 2022ರ ಮೇ 7ರಂದು ಪ್ರದೀಪ್ ವಿರುದ್ಧ ದಾಖಲಾಗಿದ್ದ ಪ್ರಕರಣದ ಎಫ್‌ಐಆರ್ ಇದೀಗ ಎಲ್ಲೆಡೆ ಹರಿದಾಡುತ್ತಿದೆ.

'ಪ್ರದೀಪ್ ಆತ್ಮಹತ್ಯೆ ಮಾಡಿಕೊಂಡಿರುವ ಸಂದರ್ಭದಲ್ಲಿ ಉದ್ದೇಶಪೂರ್ವಕವಾಗಿ ಹಳೇ ಪ್ರಕರಣದ ಎಫ್‌ಐಆರ್ ಉಲ್ಲೇಖಿಸಲಾಗುತ್ತಿದೆ. ಆರೋಪಿಗಳನ್ನು ರಕ್ಷಿಸುವ ಹುನ್ನಾರ ಇದರ ಹಿಂದಿರುವ ಅನುಮಾನವಿದೆ' ಎಂದು ಕುಟುಂಬ ಸದಸ್ಯರು ಆರೋಪಿಸಿದ್ದಾರೆ.

'2004ರಲ್ಲಿ ನಾವಿಬ್ಬರೂ ಮದುವೆಯಾದೆವು. ಪತಿ ನನಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಪಿಸ್ತೂಲ್‌ನಿಂದ ಗುಂಡು ಹೊಡೆದು ಸಾಯಿಸುವುದಾಗಿಯೂ ಬೆದರಿಸುತ್ತಿದ್ದಾರೆ' ಎಂದು ಪತ್ನಿ ನಮಿತಾ ದೂರಿನಲ್ಲಿ ತಿಳಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

WANTED
B.Sc/ M.Sc. in Geology
B.Sc /M.Sc. in Agriculture / BSW /MSW /BA /MA in Social Science
BA /MA /SSLC /PUC/ Diploma /Data Entry
Interested Can Send Your CV and Marks card Convocation Certificate and photo to the below e-mail ID : mahatmagandhitrust@gmail.com
Place of work : Devanahalli, Nelamangala, Hosakote, Bangalore for 3 years Central GOVT. Project.
Interview held on : 4th to 10th Jan. 2023 @ 3:00 pm to 5:00 pm
Mahathma Gandhi Trust (R)
0821-2420374
93438 28203
99454 25447
www.mahatmagandhitrust.com

Part-Time Jobs

ಕನ್ನಡ ಮತ್ತು ಇಂಗ್ಲಿಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

EDUCATION CORNER

GRACE IAS
Vijayanagar, Bengaluru - 40
Admission Open for
IAS | KAS | PSI
SSC | RRB | Banking
Call : 7899678279

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000-28,000/- 8884611125, 8884611126.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Pilgrimage Tours

ನಿಗದಿತ ಪ್ರವಾಸಗಳು. 10.01.2023, ಕಾಶಿ, ಗಯಾ, ಅಯೋಧ್ಯ 24999/-. 06.01.2023, ತ್ರಿರಂಗ. 25.1.2023, ಕೆಳದಿ, ಇಕ್ಕೇರಿ, ಬನವಾಸಿ. ಅನುಗ್ರಹಯಾತ್ರ. 9880079351

Book Your Classifieds Ads Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಮೃತ ಯುವತಿಯ ತಾಯಿ ಅಳಲು: ತಂದೆ ಇಲ್ಲದ ಕುಟುಂಬಕ್ಕೆ ಆಧಾರವಾಗಿದ್ದ ಸಂತ್ರಸ್ತೆ

‘ಬೇಗ ಬರುತ್ತೇನೆಂದವಳು ಬರಲೇ ಇಲ್ಲ’

ನವದೆಹಲಿ(ಪಿಟಿಐ): ‘ಮಗಳು ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಪ್ರತಿಬಾರಿಯೂ ಮನೆಗೆ ತಡವಾಗಿ ಬರುತ್ತಿದ್ದಳು. ಭಾನುವಾರ ರಾತ್ರಿ 9 ಗಂಟೆ ಸುಮಾರಿಗೆ ಕರೆ ಮಾಡಿ ಆಕೆಯೊಂದಿಗೆ ಮಾತನಾಡಿದ್ದೆ. ಬೇಗನೆ ಬರುವುದಾಗಿ ಮಾತು ಕೊಟ್ಟಿದ್ದಳು. ಹೀಗಾಗಿ ಎಂದಿನಂತೆಯೇ ಆಕೆಗಾಗಿ ಕಾಯುತ್ತಿದ್ದೆ. ಆದರೆ ಅವಳು ಬರಲೇ ಇಲ್ಲ’ ಎಂದು ಮೃತ ಯುವತಿಯ ತಾಯಿ ಭಾವುಕರಾಗಿ ನುಡಿದಿದ್ದಾರೆ.

ಸ್ಕೂಟಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದ 20 ವರ್ಷದ ಯುವತಿ ಭಾನುವಾರ ಮೃತಪಟ್ಟಿದ್ದರು. ಕಾರಿನಡಿ ಸಿಲುಕಿದ್ದ ಆಕೆಯ ಮೃತದೇಹವನ್ನು ಸುಮಾರು 12 ಕಿ.ಮೀ.ವರೆಗೂ ಎಳೆದೊಯ್ಯಲಾಗಿತ್ತು.

‘ಬೆಳಗಾದರೂ ಮಗಳು ಮನೆಗೆ ಬಾರದಿದ್ದರಿಂದ ಗಾಬರಿಗೊಂಡು 10.30ರ ಸುಮಾರಿಗೆ ಮತ್ತೊಮ್ಮೆ ಕರೆ ಮಾಡಿದೆ. ಆದರೆ ಸಂಪರ್ಕ ಸಾಧ್ಯವಾಗಲಿಲ್ಲ. ಬಳಿಕ ಆಕೆಯ ದೂರವಾಣಿ ಸಂಖ್ಯೆ ‘ನಾಟ್ ರೀಚಬಲ್’ ಆಗಿತ್ತು. ಅದೇ ಸಮಯಕ್ಕೆ ಪೊಲೀಸ್ ಠಾಣೆಯಿಂದ ದೂರವಾಣಿ ಕರೆ ಬಂದಿತ್ತು. ಮಗಳು ಚಲಾಯಿಸುತ್ತಿದ್ದ ಸ್ಕೂಟಿ ಅಪಘಾತಕ್ಕೆ ತುತ್ತಾಗಿದೆ. ಹೀಗಾಗಿ ಠಾಣೆಗೆ ಬರುವಂತೆ ಅವರು ಸೂಚಿಸಿದರು. ಆರೋಗ್ಯ ಸರಿ ಇಲ್ಲ. ಹೀಗಾಗಿ ಠಾಣೆಗೆ ಬರಲು ಆಗುವುದಿಲ್ಲ ಎಂದು ತಿಳಿಸಿದ್ದೆ. ನನ್ನನ್ನು ಕರೆದೊಯ್ಯಲು ಅವರೇ ಮನೆಗೆ ವಾಹನ ಕಳುಹಿಸಿದ್ದರು. ಠಾಣೆ ತಲುಪಿದ ಬಳಿಕ ಮಗಳ ಬಗ್ಗೆ ಎಲ್ಲರ ಬಳಿ ವಿಚಾರಿಸಿದೆ. ಆದರೆ ಯಾರೂ ಸರಿಯಾಗಿ ಉತ್ತರಿಸಲಿಲ್ಲ’ ಎಂದಿದ್ದಾರೆ.

ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸೋಮವಾರ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರ ನಿವಾಸದ ಎದುರು ಪ್ರತಿಭಟನೆ ನಡೆಸಿದರು—ಪಿಟಿಐ ಚಿತ್ರ

‘ನನ್ನ ಮಗಳಿಗೆ ಏನಾಗಿದೆ. ಆಕೆಯನ್ನು ನೋಡಲು ಬಿಡಿ ಎಂದು ಅಂಗಲಾಚಿದೆ. ಆದರೆ ಯಾರೂ ನನ್ನ ಮಾತಿಗೆ ಕಿವಿಗೊಡಲಿಲ್ಲ’ ಎಂದು ಗದ್ಗದಿತರಾಗಿ ತಿಳಿಸಿದ್ದಾರೆ.

‘ಪೊಲೀಸರು ಸರಿಯಾಗಿ ತನಿಖೆ ನಡೆಸುತ್ತಿಲ್ಲ. ಇದನ್ನು ಅಪಘಾತ ಪ್ರಕರಣವೆಂದು ಬಿಂಬಿಸುತ್ತಿದ್ದಾರೆ’ ಎಂದೂ ಆರೋಪಿಸಿದ್ದಾರೆ.

‘ಆರೋಪಿಗಳನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು’ ಎಂದು ಮೃತ ಯುವತಿಯ ಕುಟುಂಬದವರು ಆಗ್ರಹಿಸಿದ್ದಾರೆ.

ಯುವತಿಯ ತಂದೆ ಹೋದ ವರ್ಷ ನಿಧನರಾಗಿದ್ದರು. ಹೀಗಾಗಿ ಕುಟುಂಬದ ಜವಾಬ್ದಾರಿ ಆಕೆಯ ಹೆಗಲೇರಿತ್ತು. ತಲಾ ಇಬ್ಬರು ತಮ್ಮಂದಿರು ಹಾಗೂ ತಂಗಿಯರನ್ನು ಸಾಕುವ ಜೊತೆಗೆ ಅಮ್ಮನಿಗೆ ಡಯಾಲಿಸಿಸ್ ಮಾಡಿಸಲು ಹಣ ಹೊಂದಿಸುವ ಹೊಣೆಯೂ ಆಕೆಯ ಮೇಲಿತ್ತು. ಹೀಗಾಗಿ ಆಕೆ ತಡರಾತ್ರಿಯವರೆಗೂ ಕೆಲಸ ಮಾಡುತ್ತಿದ್ದಳು ಎಂದು ಕುಟುಂಬದವರು ತಿಳಿಸಿದ್ದಾರೆ.

ಆರೋಪಿಗಳು ಪೊಲೀಸರ ವಶಕ್ಕೆ: ದೆಹಲಿಯ ನ್ಯಾಯಾಲಯವು ಐವರು ಆರೋಪಿಗಳನ್ನು ಮೂರು ದಿನಗಳ ಕಾಲ ಪೊಲೀಸರ ವಶಕ್ಕೆ ಒಪ್ಪಿಸಿದೆ.

ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಬೇಕಿರುವುದರಿಂದ ಐದು ದಿನಗಳ ಕಾಲ ತಮ್ಮ ವಶಕ್ಕೆ ನೀಡುವಂತೆ ದೆಹಲಿ ಪೊಲೀಸರು ಸೋಮವಾರ ಮನವಿ ಮಾಡಿದ್ದರು. ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅಜಯ್ ಸಿಂಗ್ ಅವರು ಪೊಲೀಸರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದರು.

ಮರಣೋತ್ತರ ಪರೀಕ್ಷೆ: ದೆಹಲಿಯ ಮೌಲಾನ ಆಜಾದ್ ವೈದ್ಯಕೀಯ ಕಾಲೇಜಿನಲ್ಲಿ ಯುವತಿಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

‘ಆರೋಪಿ ಬಿಜೆಪಿ ಮುಖಂಡ’

‘ಪ್ರಕರಣದ ಐವರು ಆರೋಪಿಗಳ ಪೈಕಿ ಒಬ್ಬನಾಗಿರುವ ಮನೋಜ್ ಮಿತ್ತಲ್, ಬಿಜೆಪಿ ಮುಖಂಡ’ ಎಂದು ಆಮ್ ಆದ್ಮಿ ಪಕ್ಷ ಆರೋಪಿಸಿದೆ.

ಸುಲ್ತಾನ್‌ಪುರಿ ಪೊಲೀಸ್ ಠಾಣೆಯ ಹೊರಭಾಗದಲ್ಲಿ ಅಳವಡಿಸಲಾಗಿರುವ ಹೋರ್ಡಿಂಗ್‌ನಲ್ಲಿ ಮನೋಜ್ ಮಿತ್ತಲ್ ಫೋಟೊ ಇರುವ ವಿಡಿಯೊವೊಂದನ್ನು ಪಕ್ಷವು ಸೋಮವಾರ ಬಿಡುಗಡೆ ಮಾಡಿದೆ.

‘ಪೊಲೀಸರಿಂದ ಲೋಪವಾಗಿದೆಯೇ ಎಂಬುದನ್ನು ಪರಿಶೀಲಿಸಿ’

‘ಖಂಜಾವಲಾ ಘಟನೆಗೆ ಸಂಬಂಧಿಸಿದಂತೆ ಪೊಲೀಸರಿಂದ ಏನಾದರೂ ಲೋಪವಾಗಿದೆಯೇ ಎಂಬುದನ್ನು ಪರಿಶೀಲಿಸಿ’ ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ಸೋಮವಾರ ದೆಹಲಿ ಪೊಲೀಸ್ ಕಮಿಷನರ್‌ಗೆ ಸೂಚಿಸಿದ್ದಾರೆ.

‘ಆರೋಪಿಗಳು ಆರ್ಥಿಕ ಮತ್ತು ರಾಜಕೀಯವಾಗಿ ಎಷ್ಟೇ ಪ್ರಭಾವಿಗಳಾಗಿರಲಿ. ಯಾವುದೇ ಸಮುದಾಯಕ್ಕೆ ಸೇರಿದವರಾಗಿರಲಿ. ಅದನ್ನೆಲ್ಲಾ ಲೆಕ್ಕಿಸದೇ ಕಾನೂನಿನ ಅಡಿಯಲ್ಲಿ ಅವರ ವಿರುದ್ಧ ಕ್ರಮ ಕೈಗೊಳ್ಳಿ ಎಂದೂ ಕಮಿಷನರ್‌ಗೆ ಸೂಚಿಸಿದ್ದಾರೆ. ಸಂತ್ರಸ್ತೆಯ ಕುಟುಂಬದಲ್ಲಿ ಯಾರಿಗಾದರೂ ಸರ್ಕಾರಿ ಉದ್ಯೋಗ ಕೊಡಬಹುದೇ ಎಂಬುದನ್ನು ಪರಿಶೀಲಿಸುವಂತೆಯೂ ನಿರ್ದೇಶಿಸಿದ್ದಾರೆ’ ಎಂದು ಲೆಫ್ಟಿನೆಂಟ್ ಗವರ್ನರ್ ಅವರ ಕಚೇರಿಯ ಮೂಲಗಳು ತಿಳಿಸಿವೆ.

ವರದಿ ಕೇಳಿದ ಗೃಹ ಸಚಿವಾಲಯ

‘ಕೇಂದ್ರ ಗೃಹ ಸಚಿವಾಲಯವು ಖಂಜಾವಲಾ ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರಿಂದ ವಿವರವಾದ ವರದಿ ಕೇಳಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸೂಚನೆ ಮೇರೆಗೆ ಸಚಿವಾಲಯವು ದೆಹಲಿ ಪೊಲೀಸರಿಗೆ ವರದಿ ನೀಡುವಂತೆ ಸೂಚಿಸಿದೆ’ ಎಂದು ತಿಳಿಸಿದ್ದಾರೆ.

‘ದೆಹಲಿ ಪೊಲೀಸ್ ಇಲಾಖೆಯು ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ಸಮಿತಿಯನ್ನೂ ರಚಿಸಿದೆ. ವಿಶೇಷ ಆಯುಕ್ತೆ ಶಾಲಿನಿ ಸಿಂಗ್ ಅವರು ಇದರ ಮುಖ್ಯಸ್ಥೆಯಾಗಿದ್ದಾರೆ. ಆದಷ್ಟು ಬೇಗ ಪ್ರಕರಣದ ಕುರಿತ ವರದಿ ಒಪ್ಪಿಸುವಂತೆ ಅವರಿಗೆ ಸೂಚಿಸಲಾಗಿದೆ’ ಎಂದೂ ಮಾಹಿತಿ ನೀಡಿದ್ದಾರೆ.

ಜ. 30ಕ್ಕೆ ಶ್ರೀನಗರದಲ್ಲಿ ಭಾರತ್ ಜೋಡೊ ಯಾತ್ರೆ ಮುಕ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಜನವರಿ 30ರಂದು ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಮುಕ್ತಾಯಗೊಳ್ಳಲಿದೆ.

ಯಾತ್ರೆಯ 150ನೇ ದಿನ ಹಾಗೂ ಮಹಾತ್ಮ ಗಾಂಧಿ ಅವರು ಹುತಾತ್ಮರಾದ ದಿನದಂದು ಶ್ರೀನಗರದಲ್ಲಿ ರಾಹುಲ್ ಅವರು ತ್ರಿವರ್ಣ ಧ್ವಜ ಹಾರಿಸಲಿದ್ದಾರೆ.

ಯಾತ್ರೆಯ ಸಮಾರೋಪದಲ್ಲಿ ಕಾಶ್ಮೀರದ ನ್ಯಾಷನಲ್ ಕಾನ್ಫರೆನ್ಸ್‌ನ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಮತ್ತು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಸೇರಿದಂತೆ ವಿರೋಧ ಪಕ್ಷಗಳ ಅನೇಕ ಹಿರಿಯ ಮುಖಂಡರು ಭಾಗವಹಿಸಲಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ
ನಂದಿನಿ–ಅಮೂಲ್ ಅಮಿತ್ ಶಾ ಹೇಳಿದ್ದೇನು?
ಸಂವಾದ
ಭಾಗವಹಿಸುವವರು:
ಸಿದಗೌಡ ಮೋದಗಿ, ರಾಜ್ಯಾಧ್ಯಕ್ಷ, ಭಾರತೀಯ ಕೃಷಿಕ ಸಮಾಜ, ಬೆಳಗಾವಿ
ಎಲ್.ಗಂಗಾಧರಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಜೆಡಿಎಸ್
ಮಾಗಡಿ ನರಸಿಂಹಮೂರ್ತಿ, ಅಧ್ಯಕ್ಷ, ಬಮೂಲ್, ರಾಮನಗರ
ಡಾ. ಶಂಕರ ಸಿದ್ಧಾಂತಿ, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಮಾಜಿ ನಿರ್ದೇಶಕ, ಬೆಂಗಳೂರು
ಮಧ್ಯಾಹ್ನ 12ರಿಂದ 1ರವರೆಗೆ

ಜಮ್ಮು: ನಾಲ್ವರು ನಾಗರಿಕರ ಕೊಂದ ಉಗ್ರರ ಪತ್ತೆಗೆ ಶೋಧ

ಐಇಡಿ ಸ್ಫೋಟ: ಇಬ್ಬರು ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಗಡಿ ರಜೌರಿ ಜಿಲ್ಲೆಯಲ್ಲಿ ನಡೆದ ಉಗ್ರರ ದಾಳಿಯಲ್ಲಿ ನಾಲ್ವರು ನಾಗರಿಕರು ಮೃತಪಟ್ಟ ಬೆನ್ನಲ್ಲೇ ಡಾಂಗ್ರಿ ಗ್ರಾಮದಲ್ಲಿ ನಡೆದ ಗುಂಡಿನ ದಾಳಿಯ ಮನೆ ಬಳಿ ಸೋಮವಾರ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಗೊಂಡು ಸಹೋದರ, ಸಹೋದರಿ ಮೃತಪಟ್ಟಿದ್ದು, ಇತರೆ ಆರು ಜನರು ಗಾಯಗೊಂಡಿದ್ದಾರೆ.

ಸ್ಫೋಟದಲ್ಲಿ ಸಾನ್ವಿ ಶರ್ಮಾ (7) ಮತ್ತು ವಿಹಾನ್ ಕುಮಾರ್ ಶರ್ಮಾ (4) ಮೃತಪಟ್ಟಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಭಾನುವಾರ ಸಂಜೆ ಉಗ್ರರ ದಾಳಿಗೆ ಬಲಿಯಾದ ಪ್ರೀತಮ್ ಲಾಲ್ ಅವರ ಮನೆ ಬಳಿ ಸ್ಫೋಟ ಸಂಭವಿಸಿದ್ದು, ಲಾಲ್ ಅವರ ಸಂಬಂಧಿಕರು ಸೇರಿದಂತೆ ಹಲವಾರು ಜನರು ಮನೆಯಲ್ಲಿದ್ದರು.

ಸೇನೆ ಮತ್ತು ಪೊಲೀಸರು ಭಾರಿ ಶೋಧ ಕಾರ್ಯಾಚರಣೆ ನಡೆಸುತ್ತಿವೆ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತಂಡ ಡಾಂಗ್ರಿ ಗ್ರಾಮ ಭೇಟಿ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ ಸಂಜೆ ಡಾಂಗ್ರಿ ಗ್ರಾಮದಲ್ಲಿ ಇಬ್ಬರು ಉಗ್ರರು ಮೂರು ಮನೆಗಳಿಗೆ ನುಗ್ಗಿ ಮನಬಂದಂತೆ ಗುಂಡು ಹಾರಿಸಿ, ನಾಲ್ವರನ್ನು ಹತ್ಯೆ ಮಾಡಿದ್ದರು. ಆರು ಜನರು ಗಾಯಗೊಂಡಿದ್ದರು. ಮೃತರನ್ನು ದೀಪಕ್ ಕುಮಾರ್, ಸತೀಶ್ ಕುಮಾರ್, ಪ್ರೀತಮ್ ಲಾಲ್ ಮತ್ತು ಶಿವಪಾಲ್ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಜೌರಿ ದಾಳಿ ಖಂಡಿಸಿ ಶಿವಸೇನೆ, ಡೋಗ್ರಾ ಫ್ರಂಟ್ ಸದಸ್ಯರು ಜಮ್ಮುವಿನಲ್ಲಿ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಘಟನೆ ಖಂಡಿಸಿ ರಜೌರಿ ಪಟ್ಟಣ ಸೇರಿದಂತೆ ಜಿಲ್ಲೆಯಾದ್ಯಂತ ಪ್ರತಿಭಟನೆಗಳು ನಡೆದವು. ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಜಮ್ಮುವಿನಲ್ಲಿ ವಿಎಚ್‌ಪಿ, ಬಜರಂಗದಳ, ಶಿವಸೇನೆ ಮತ್ತು ಡೋಗ್ರಾ ಫ್ರಂಟ್ ಪಾಕಿಸ್ತಾನದ ವಿರುದ್ಧ ಪ್ರತಿಭಟನೆ ನಡೆಸಿದವು.

ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ಐಇಡಿ ಸ್ಫೋಟಿಸಲಾಗಿದೆ. ಗ್ರಾಮ ರಕ್ಷಣಾ ಸಮಿತಿಗಳನ್ನು (ವಿಡಿಸಿಗಳು) ಪುನರುಜ್ಜೀವನಗೊಳಿಸಲಾಗುವುದು ಎಂದು ಪೊಲೀಸ್ ಮಹಾನಿರ್ದೇಶಕ ದಿಲ್ಬಾಗ್ ಸಿಂಗ್ ಹೇಳಿದರು.

ಉಗ್ರರ ದಾಳಿಯನ್ನು ತೀವ್ರವಾಗಿ ಖಂಡಿಸಿರುವ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಈ ಹೇಯ ಕೃತ್ಯದ ಹಿಂದಿರುವವರನ್ನು ಶಿಕ್ಷಿಸದೆ ಬಿಡುವುದಿಲ್ಲ ಎಂದು ಜನರಿಗೆ ಭರವಸೆ ನೀಡಿದರು.

‘ದಾಳಿಯಲ್ಲಿ ಹುತಾತ್ಮರಾದ ಪ್ರತಿಯೊಬ್ಬ ನಾಗರಿಕರ ಕುಟುಂಬಗಳಿಗೆ ₹10 ಲಕ್ಷ ಪರಿಹಾರ ಮತ್ತು ಸರ್ಕಾರಿ ಉದ್ಯೋಗ ನೀಡಲಾಗುವುದು. ಗಂಭೀರವಾಗಿ ಗಾಯಗೊಂಡವರಿಗೆ ₹1 ಲಕ್ಷ ನೀಡಲಾಗುವುದು. ಗಾಯಾಳುಗಳಿಗೆ ಗುಣಮಟ್ಟದ ಚಿಕಿತ್ಸೆ ಕೊಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಭಾನುವಾರದ ದಾಳಿಯಲ್ಲಿ ಮೃತಪಟ್ಟವರ ಶವಗಳನ್ನು ಪ್ರತಿಭಟನಾಕಾರರು ಮೆರವಣಿಗೆಯಲ್ಲಿ ಡೋಂಗ್ರಿ ಚೌಕ್‌ಗೆ ತಂದರು. ಲೆಫ್ಟಿನೆಂಟ್ ಗವರ್ನರ್ ಆಗಮಿಸಿ, ಸಮಸ್ಯೆ ಆಲಿಸದಿದ್ದರೆ ಅಂತ್ಯಸಂಸ್ಕಾರ ಮಾಡುವುದಿಲ್ಲ ಎಂದು ಹೇಳಿದರು.

ಹಿರಿಯ ಪೊಲೀಸ್ ಅಧಿಕಾರಿಗಳು ಪ್ರತಿಭಟನಕಾರರ ಮನವೊಲಿಸಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ.

ಕಾಶ್ಮೀರದಲ್ಲಿ ಅಲ್ಪಸಂಖ್ಯಾತ ಸಮುದಾಯದವರನ್ನು ಗುರಿಯಾಗಿಸಿ ಹತ್ಯೆಗೈದಿರುವ ಬಗ್ಗೆ ಟೀಕೆಗಳು ವ್ಯಕ್ತವಾದ ನಂತರ, ಪಾಕಿಸ್ತಾನ ತನ್ನ ಗಮನವನ್ನು ಗಡಿ ಜಿಲ್ಲೆಗಳಾದ ರಜೌರಿ ಮತ್ತು ಪೂಂಚ್‌ನತ್ತ ತಿರುಗಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ದಾಳಿಗಳು ಜಿಲ್ಲೆಯಲ್ಲಿ ಭೀತಿ ಸೃಷ್ಟಿಸಿದ್ದು, ಹತ್ಯೆ ಖಂಡಿಸಿ ಹಲವಾರು ಸಂಘಟನೆಗಳು ಮುಷ್ಕರಕ್ಕೆ ಕರೆ ನೀಡಿವೆ. ಬಿಜೆಪಿ ಬೆಂಬಲ ನೀಡಿದೆ.

ಇನ್ನು ಮುಂದೆ ಯಾವುದೇ ಅಹಿತಕರ ಘಟನೆ ನಡೆಯದಂತೆ ನೋಡಿಕೊಳ್ಳಲು ಪೀರ್ ಪಂಜಾಲ್ ಪ್ರದೇಶದಾದ್ಯಂತ ಭದ್ರತೆ ಹೆಚ್ಚಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ಹದ್ದುಗಳು ಡಿಕ್ಕಿ: ವಿಮಾನ ಸಂಚಾರ ಸ್ಥಗಿತ

ಕೊಯಮತ್ತೂರು (ಪಿಟಿಐ): ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶಾರ್ಜಾಕ್ಕೆ ಹೊರಟಿದ್ದ ಏರ್ ಅರೇಬಿಯಾ ವಿಮಾನಕ್ಕೆ ಎರಡು ಹದ್ದುಗಳು ಡಿಕ್ಕಿ ಹೊಡೆದ ಪರಿಣಾಮ ಟೇಕ್ ಆಫ್ ಆಗುವುದನ್ನು ಸ್ಥಗಿತಗೊಳಿಸಲಾಯಿತು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

164 ಪ್ರಯಾಣಿಕರನ್ನು ಹೊತ್ತಿದ್ದ ವಿಮಾನವು ಬೆಳಿಗ್ಗೆ 7 ಗಂಟೆಗೆ ಟೇಕ್ ಆಫ್ ಆಗುತ್ತಿದ್ದ ಸಂದರ್ಭದಲ್ಲಿ, ವಿಮಾನದ ಎಡ ಭಾಗದ ಎಂಜಿನ್‌ಗೆ 2 ಹದ್ದುಗಳು ಬಡಿದವು ಎಂದು ಮೂಲಗಳು ತಿಳಿಸಿವೆ. ಎಲ್ಲ ಪ್ರಯಾಣಿಕರನ್ನು ಇಳಿಸಿದ ಬಳಿಕ ತಂತ್ರಜ್ಞರು, ಪಕ್ಷಿಗಳ ಡಿಕ್ಕಿಯಿಂದ ವಿಮಾನಕ್ಕಾದ ಹಾನಿಯನ್ನು ಪರಿಶೀಲಿಸಿದರು. ರೆಕ್ಕೆಗೆ ಹೊಡೆದಿದ್ದ ಒಂದು ಹದ್ದು ಮೃತಪಟ್ಟಿತ್ತು.

ತಂತ್ರಜ್ಞರು ಸಮಸ್ಯೆಯನ್ನು ಬಗೆಹರಿಸಿದ ಬಳಿಕ ವಿಮಾನ ಟೇಕ್ ಆಫ್ ಆಗಲಿದೆ ಎಂದು ಮೂಲಗಳು ಹೇಳಿವೆ.

ರಷ್ಯಾದ ಆಕ್ರಮಣ ನೀತಿ ಚೀನಾ ಅನುಸರಣೆ: ರಾಹುಲ್ ಎಚ್ಚರಿಕೆ

ನವದೆಹಲಿ (ಪಿಟಿಐ): ‘ಉಕ್ರೇನ್ ಜತೆಗೆ ರಷ್ಯಾ ಹೊಂದಿರುವ ನೀತಿಯನ್ನೇ ಭಾರತದ ವಿಚಾರದಲ್ಲಿ ಚೀನಾ ಕೂಡ ಹೊಂದಿದೆ. ದೇಶದ ಗಡಿಗಳನ್ನು ಬದಲಿಸುವ ಬೆದರಿಕೆಯೊಡ್ಡುತ್ತಿದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಚೀನಾ– ಭಾರತ ಗಡಿ ಸಂಘರ್ಷದೊಂದಿಗೆ ದೇಶದ ದುರ್ಬಲ ಆರ್ಥಿಕತೆ, ದೂರದೃಷ್ಟಿಯ ಇಲ್ಲದ ಗೊಂದಲಮಯ ಸ್ಥಿತಿ, ದ್ವೇಷ ಮತ್ತು ಅಸಹಿಷ್ಣುತೆ, ಗಡಿಯಲ್ಲಿ ಚೀನಿಯರ ಅತಿಕ್ರಮಣ ಸಮಸ್ಯೆಗಳು ಬೆಸೆದುಕೊಂಡಿವೆ ಎಂದು ರಾಹುಲ್ ಗಾಂಧಿ ಆರೋಪಿಸಿದರು.

‘ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಉಕ್ರೇನ್ ಸಂಬಂಧ ಸಾಧಿಸುವುದನ್ನು ಬಯಸದ ರಷ್ಯಾ, ಪಶ್ಚಿಮದ ರಾಷ್ಟ್ರಗಳೊಂದಿಗೆ ಗಾಢ ಸಂಬಂಧ ಬೆಳೆಸಲು ಯತ್ನಿಸಿದ ಉಕ್ರೇನ್ ಭೌಗೋಳಿಕ ಗಡಿ ಬದಲಿಸುವ ಕೆಲಸ ಮಾಡುತ್ತಿದೆ. ಇದು ಭಾರತಕ್ಕೂ ಅನ್ವಯಿಸುವಂತದ್ದಾಗಿದೆ. ಚೀನಿಯರು ನಮಗೆ ‘ನೀವು ಜಾಗರೂಕರಾಗಿರಿ, ನಾವು ನಿಮ್ಮ ಭೌಗೋಳಿಕತೆ ಬದಲಾಯಿಸುತ್ತೇವೆ. ಲಡಾಖ್, ಅರುಣಾಚಲ ಪ್ರದೇಶಕ್ಕೆ ನುಗ್ಗುತ್ತೇವೆ’ ಎಂದು ಹೇಳುತ್ತಿರುವಂತಿದೆ ಅವರ ನಡೆ. ಗಡಿಯಲ್ಲಿ ಅದಕ್ಕಾಗಿ ವೇದಿಕೆ ನಿರ್ಮಿಸುತ್ತಿದ್ದಾರೆ’ ಎಂದು ರಾಹುಲ್ ಹೇಳಿದ್ದಾರೆ.

‘21ನೇ ಶತಮಾನದಲ್ಲಿ ಭದ್ರತೆಯೇ ಪ್ರಮುಖ ಆದ್ಯತೆ. ಇದರಲ್ಲಿ ಜಾಗತಿಕ ದೃಷ್ಟಿಕೋನವಿರಬೇಕು. ಆದರೆ, ನಮ್ಮ ಸರ್ಕಾರ ಇದರಲ್ಲಿ ಸಂಪೂರ್ಣ ತಪ್ಪು ಲೆಕ್ಕಾಚಾರ ಮಾಡಿದೆ. ಸಂಘರ್ಷದ ವ್ಯಾಖ್ಯಾನವೇ ಬದಲಾಗಿದೆ. ಮೊದಲು ಗಡಿಯಲ್ಲಿ ಮಾತ್ರ ಹೋರಾಡಬೇಕಿತ್ತು, ಆದರೆ, ಈಗ ಎಲ್ಲೆಡೆ ಹೋರಾಡಬೇಕಾಗಿದೆ’ ಎಂದು ರಾಹುಲ್ ಗಾಂಧಿ ಅವರು ನಟ, ರಾಜಕಾರಣಿ ಕಮಲ್ ಹಸನ್ ಅವರೊಂದಿಗಿನ ಸಂವಾದದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

‘ಭಾರತೀಯನಾಗಿ ಯುದ್ಧ ಮಾಡುವ ವ್ಯಕ್ತಿ ಎನಿಸಿಕೊಳ್ಳಲು ನಾನು ಬಯಸುವುದಿಲ್ಲ. ಆದರೆ ಗಡಿಯಲ್ಲಿ ನಿಜವಾದ ಸಮಸ್ಯೆಗಳಿವೆ. ಭಾರತೀಯರು ಭಾರತೀಯರೊಂದಿಗೆ ಹೋರಾಡುವಾಗ, ಆರ್ಥಿಕತೆಯು ಕೆಲಸ ಮಾಡದಿದ್ದಾಗ, ನಿರುದ್ಯೋಗ ಆವರಿಸಿದ್ದಾಗ, ನಮ್ಮ ಬಾಹ್ಯ ಎದುರಾಳಿಯು ಈ ಪರಿಸ್ಥಿತಿಯ ಲಾಭ ಪಡೆಯಬಹುದು. ಹಾಗಂತ, ನಾವು ಯುದ್ಧ ಮಾಡುವುದಲ್ಲ, ನಮ್ಮ ಮೇಲೆ ಯಾರೂ ಆಕ್ರಮಣ ಮಾಡಲು ಸಾಧ್ಯವಾಗದ ಸ್ಥಾನಕ್ಕೆ ನಾವು ತಲುಪಬೇಕು’ ಎಂದು ಅವರು ಹೇಳಿದರು.

ಸಂವಾದದ ವಿಡಿಯೊ ಅನ್ನು ರಾಹುಲ್ ಗಾಂಧಿ ಯೂಟ್ಯೂಬ್‌ನಲ್ಲಿ ಹಂಚಿಕೊಂಡಿದ್ದಾರೆ.

ದಿಗ್ಗಜ ಫುಟ್‌ಬಾಲ್ ಆಟಗಾರ ಪೆಲೆ ಅಂತ್ಯಕ್ರಿಯೆ ಇಂದು

ಅಂತಿಮ ದರ್ಶನ: ಭಾವುಕ ಕ್ಷಣ

ಸ್ಯಾಂಟೋಸ್ (ಎಎಫ್‌ಪಿ/ ಎಪಿ): ಅದ್ಭುತ ಕಾಲ್ಚಳಕದ ಮೂಲಕ ಫುಟ್‌ಬಾಲ್ ಕ್ರೀಡೆಯ ಸೌಂದರ್ಯ ಹೆಚ್ಚಿಸಿದ್ದ ದಿಗ್ಗಜ ಆಟಗಾರ ಪೆಲೆ ಅವರ ಮೃತದೇಹದ ಅಂತಿಮ ದರ್ಶನಕ್ಕೆ ಸಾವಿರಾರು ಮಂದಿ ಇಲ್ಲಿನ ವಿಲಾ ಬೆಲ್ಮಿರೊ ಕ್ರೀಡಾಂಗಣಕ್ಕೆ ಹರಿದುಬಂದರು.

ಪೆಲೆ ಎಂದೇ ಜನಪ್ರಿಯರಾಗಿರುವ ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ ಡಿ. 29ರಂದು ನಿಧನರಾಗಿದ್ದರು. ಅಂತ್ಯಕ್ರಿಯೆ ಮಂಗಳವಾರ ನಡೆಯಲಿದ್ದು, ಅಂತಿಮ ದರ್ಶನಕ್ಕೆ ಸೋಮವಾರ ವ್ಯವಸ್ಥೆ ಕಲ್ಪಿಸಲಾಗಿತ್ತು.

ತಮ್ಮ ನೆಚ್ಚಿನ ತಾರೆಯನ್ನು ಕೊನೆಯ ಬಾರಿ ನೋಡಲು ಜನರು ಬೆಳಿಗ್ಗೆಯಿಂದಲೇ ಕ್ರೀಡಾಂಗಣದ ಬಳಿಕ ಸಾಲುಗಟ್ಟಿ ನಿಂತಿದ್ದರು. ಮೃತದೇಹದ ಬಳಿ ಬರುತ್ತಿದ್ದಂತೆಯೇ ಹಲವರು ಭಾವುಕರಾದರು. ಫಿಫಾ ಅಧ್ಯಕ್ಷ ಗಿಯಾನಿ ಇನ್‌ಫ್ಯಾಂಟಿನೊ, ದಕ್ಷಿಣ ಅಮೆರಿಕ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಅಲೆಕ್ಸಾಂಡ್ರೊ ಡಾಮಿನಿಗ್ವೆಜ್ ಮತ್ತು ಬ್ರೆಜಿಲ್ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಗಿಲ್ಮರ್ ಮೆಂಡೆಸ್ ಅವರು ಬೆಳಿಗ್ಗೆಯೇ ಅಂತಿಮ ದರ್ಶನ ಪಡೆದರು.

ಪೆಲೆ ಅವರ ಪತ್ನಿ ಮಾರ್ಸಿಯಾ ಆವೊಕಿ (ಬಲ) ಅಂತಿಮ ದರ್ಶನ ಪಡೆದರು —ಎಎಫ್‌ಪಿ ಚಿತ್ರ

ಪೆಲೆ ತಮ್ಮ ಜೀವನದ ಬಹುಪಾಲು ಅವಧಿಯನ್ನು ಸಾವೊ ಪೌಲೊದಿಂದ 75 ಕಿ.ಮೀ. ದೂರದಲ್ಲಿರುವ ಸ್ಯಾಂಟೋಸ್ ನಗರದಲ್ಲಿ ಕಳೆದಿದ್ದರು.

ಕ್ರೀಡಾಂಗಣದಲ್ಲಿ ಮೂರು ಬೃಹತ್ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಒಂದರಲ್ಲಿ ಪೆಲೆ 10ನೇ ನಂಬರ್ ಜೆರ್ಸಿ ತೊಟ್ಟಿರುವ ಚಿತ್ರ ಇದೆ. ಇನ್ನುಳಿದ ಎರಡು ಬ್ಯಾನರ್‌ಗಳಲ್ಲಿ ‘ಲಾಂಗ್ ಲಿವ್ ದಿ ಕಿಂಗ್’, ‘ಪೆಲೆ 82 ವರ್ಷ’ ಎಂದು ಬರೆಯಲಾಗಿದೆ.

ಮಂಗಳವಾರ ಬೆಳಿಗ್ಗೆ 10ರ ವರೆಗೆ ಅಂತಿಮ ದರ್ಶನ ನಡೆಯಲಿದೆ. ಆ ಬಳಿಕ ಮೃತದೇಹವನ್ನು ಕ್ರೀಡಾಂಗಣದ ಸಮೀಪದಲ್ಲೇ ಇರುವ ಸ್ಯಾಂಟೋಸ್ ಸ್ಮಾರಕ ಸ್ಮಶಾನಕ್ಕೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುವುದು.

ಮೆರವಣಿಗೆಯು ಪೆಲೆ ಅವರ ತಾಯಿ, ಶತಾಯುಷಿ ಸೆಲೆಸ್ಟಿ ಅರಾಂಟೆಸ್ ವಾಸಿಸುತ್ತಿರುವ ಮನೆಯ ಮುಂದೆಯೇ ಸಾಗಲಿದೆ. ಸ್ಮರಣಶಕ್ತಿ ಕುಂದಿರುವ ಸೆಲೆಸ್ಟಿ ಅವರಿಗೆ ಪೆಲೆ ಸಾವಿನ ಕುರಿತು ಯಾವುದೇ ಮಾಹಿತಿ ಕೊಟ್ಟಿಲ್ಲ.

‘ಕ್ರೀಡಾಂಗಣಕ್ಕೆ ಪೆಲೆ ಹೆಸರಿಡಿ’

ಪೆಲೆ ಅವರಿಗೆ ಗೌರವ ಸಲ್ಲಿಸಲು ಎಲ್ಲ ದೇಶಗಳು ತಮ್ಮಲ್ಲಿನ ಒಂದು ಕ್ರೀಡಾಂಗಣಕ್ಕೆ ದಿಗ್ಗಜ ಆಟಗಾರನ ಹೆಸರು ಇಡಬೇಕು ಎಂದು ಫಿಫಾ ಅಧ್ಯಕ್ಷ ಗಿಯಾನಿ ಇನ್‌ಫ್ಯಾಂಟಿನೊ ಮನವಿ ಮಾಡಿದ್ದಾರೆ.

ಅಂತಿಮ ದರ್ಶನಕ್ಕಾಗಿ ಸ್ಯಾಂಟೋಸ್‌ಗೆ ಬಂದಿದ್ದ ಅವರು, ‘ಒಂದು ಕ್ರೀಡಾಂಗಣಕ್ಕೆ ಪೆಲೆ ಹೆಸರಿಡುವಂತೆ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಮನವಿ ಮಾಡಲಾಗುವುದು. ಪೆಲೆ ಅಮರರಾಗಿದ್ದಾರೆ. ಅವರು ಫುಟ್‌ಬಾಲ್ ಕ್ರೀಡೆಯ ಜಾಗತಿಕ ಐಕಾನ್’ ಎಂದು ಹೇಳಿದರು.

ನಟಿ ತುನಿಷಾ ಕುಟುಂಬದ ವಿರುದ್ಧ ಶೀಜನ್ ಕುಟುಂಬ ಪ್ರತ್ಯಾರೋಪ

ಪ್ರಜಾವಾಣಿ ವಾರ್ತೆ

ಮುಂಬೈ: ‘ಇಸ್ಲಾಂ ಧರ್ಮಕ್ಕೆ ಮತಾಂತರವಾಗುವಂತೆ ನನ್ನ ಮಗಳಿಗೆ ಬಲವಂತ ಮಾಡಲಾಗುತ್ತಿತ್ತು ಹಾಗೂ ಹಿಜಾಬ್ ಧರಿಸುವಂತೆ ಒತ್ತಡ ಹೇರಲಾಗಿತ್ತು’ ಎಂದು ಕಿರುತೆರೆ ನಟಿ ತುನಿಷಾ ಶರ್ಮಾ ಅವರ ತಾಯಿ ವನಿತಾ ಶರ್ಮಾ ಅವರು ಮಾಡಿದ ಆರೋಪಕ್ಕೆ ಸಹನಟ ಶೀಜನ್ ಮೊಹಮ್ಮದ್ ಖಾನ್ ಅವರ ಕುಟುಂಬವು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತ್ಯಾರೋಪ ಮಾಡಿದೆ.

‘ಶೀಜನ್ ವಿರುದ್ಧದ ಎಲ್ಲ ಆರೋಪಗಳನ್ನು ತುನಿಷಾ ಅವರ ಚಿಕ್ಕಪ್ಪ ಪವನ್ ಶರ್ಮಾ ಅವರೊಬ್ಬರೇ ಮಾಡಿದ್ದಾರೆ. ಚಿಕ್ಕಪ್ಪನ ಹಸ್ತಕ್ಷೇಪದ ಬಗ್ಗೆ ತುನಿಷಾ ರೋಸಿಹೋಗಿದ್ದರು’ ಎಂದೂ ಶೀಜನ್ ಕುಟುಂಬ ದೂರಿದೆ.

‘ಸಾಮಾಜಿಕ ಮಾಧ್ಯಮ ಗಳಲ್ಲಿ ಹರಿದಾಡಿರುವ ಹಿಜಾಬ್ ಧರಿಸಿರುವ ತುನಿಷಾ ಅವರ ಚಿತ್ರವು, ಶೂಟಿಂಗ್‌ವೊಂದಕ್ಕೆ ಸಂಬಂಧಪಟ್ಟಿದ್ದು. ಹಿಜಾಬ್, ದರ್ಗಾ, ಲವ್ ಜಿಹಾದ್ ಎನ್ನುವ ಆರೋಪಗಳೆಲ್ಲವೂ ಆಧಾರ ರಹಿತವಾದವು. ಯಾವುದೇ ಧರ್ಮವನ್ನು ಅನುಸರಿಸುವುದು ನಮ್ಮ ವೈಯಕ್ತಿಕ ಆಯ್ಕೆ. ನೀವು ಮಾನಸಿಕ ಆರೋಗ್ಯದ ಬಗ್ಗೆ ಮಾತನಾಡಬೇಕು. ನಿಮ್ಮ ಮಗಳು ಏಕೆ ಈ ನಿರ್ಧಾರಕ್ಕೆ ಬಂದಳು ಎಂಬುದನ್ನು ಈ ಹಿನ್ನೆಲೆಯಲ್ಲಿ ನೋಡಬೇಕಿದೆ.’ ಎಂದೂ ಹೇಳಿದೆ.

ತುನಿಷಾಗೆ ಉರ್ದು ಭಾಷೆಯನ್ನು ಕಲಿಸಲಾಗುತ್ತಿತ್ತು ಎನ್ನುವ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ‘ನಾವು ಭಾರತದಲ್ಲಿ ವಾಸಿಸುತ್ತಿದ್ದೇವೆ. ಆದ್ದರಿಂದ ಒಂದು ನಿರ್ದಿಷ್ಟ ಭಾಷೆ ಅಥವಾ ಧರ್ಮವನ್ನು ಒಪ್ಪಿಕೊಳ್ಳುವುದು ಏನನ್ನೂ ಸಾಬೀತುಪಡಿಸುವುದಿಲ್ಲ. ಇನ್ನು ಆಕೆಯನ್ನು ದರ್ಗಾಕ್ಕೆ ಕರೆದೊಯ್ಯಲಾಗಿತ್ತು ಎನ್ನುವ ಬಗ್ಗೆ ಸಾಕ್ಷ್ಯಾಧಾರಗಳಿದ್ದರೆ ಸಾಬೀತುಪಡಿಸಲಿ. ತುನಿಷಾಳ ಕೆನ್ನೆಗೆ ಶೀಜನ್ ಹೊಡೆದಿದ್ದರು ಎನ್ನುವುದು ಅಪ್ಪಟ ಸುಳ್ಳು’ ಎಂದೂ ನಟನ ಕುಟುಂಬವು ಹೇಳಿದೆ.

ಶೀಜನ್‌ಗೆ ಜಾಮೀನು, ಜ. 7ಕ್ಕೆ ವಿಚಾರಣೆ

ಪಾಲ್ಘರ್ (ಪಿಟಿಐ): ತುನಿಷಾ ಅವರ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದ ಮೇಲೆ ಬಂಧಿತರಾಗಿರುವ ನಟ ಶೀಜನ್ ಖಾನ್ ಅವರು ಸೋಮವಾರ ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ನ್ಯಾಯಾಲಯಕ್ಕೆ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

‘ವಸಾಯಿ ಪಟ್ಟಣದ ಸೆಷನ್ಸ್ ನ್ಯಾಯಾಲಯದಲ್ಲಿ ಜ. 7ರಂದು ಜಾಮೀನು ಅರ್ಜಿಯು ವಿಚಾರಣೆಗೆ ಬರಲಿದೆ’ ಎಂದು ಖಾನ್ ಪರ ವಕೀಲ ಶರದ್ ರೈ ಹೇಳಿದ್ದಾರೆ. ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿರುವ ಶೀಜನ್ ಖಾನ್ ಅವರನ್ನು ಥಾಣೆಯ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿದೆ.

ಪಂಜಾಬ್, ಹರಿಯಾಣ ಸಿ.ಎಂ ನಿವಾಸ ಬಳಿ ಬಾಂಬ್ ಪತ್ತೆ

ಚಂಡೀಗಢ(ಪಿಟಿಐ): ಪಂಜಾಬ್ ಮತ್ತು ಹರಿಯಾಣ ಮುಖ್ಯಮಂತ್ರಿಗಳ ನಿವಾಸದ ಬಳಿಯಿರುವ ಹೆಲಿಪ್ಯಾಡ್‌ನ ಸ್ವಲ್ಪ ದೂರದಲ್ಲಿ ಬಾಂಬ್ ಪತ್ತೆಯಾಗಿದ್ದು, ಅದನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರ ನಿವಾಸದಿಂದ ಸುಮಾರು ಒಂದು ಕಿಲೋ ಮೀಟರ್ ದೂರದಲ್ಲಿರುವ ನಯಾಗಾಂವ್-ಕನ್ಸಾಲ್ ರಸ್ತೆಯ ಹೊಲಗಳಲ್ಲಿ ಬಾಂಬ್ ಪತ್ತೆಯಾಗಿದೆ ಎಂದು ವರದಿಯಾಗಿದೆ.

‘ಸ್ಥಳಕ್ಕೆ ಭೇಟಿ ನೀಡಿದಾಗ ಬಾಂಬ್ ಶೆಲ್ ಪತ್ತೆಯಾಗಿದೆ. ಅದನ್ನು ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ದಳದ ಸಹಾಯದಿಂದ ನಿಷ್ಕ್ರಿಯಗೊಳಿಸಿದ್ದು ಹೆಚ್ಚಿನ ತನಿಖೆ ನಡೆಯುತ್ತಿದೆ’ ಎಂದು ಚಂಡೀಗಢ ವಿಪತ್ತು ನಿರ್ವಹಣೆ ನೋಡಲ್ ಅಧಿಕಾರಿ ಹೇಳಿದ್ದಾರೆ.

ರಾಯಪುರ: ಫೆ.24ರಿಂದ ಎಐಸಿಸಿ ಮಹಾಧಿವೇಶನ

ನವದೆಹಲಿ: ಛತ್ತೀಸಗಢದ ರಾಯಪುರದಲ್ಲಿ ಫೆಬ್ರುವರಿ 24ರಿಂದ 26ರವರೆಗೆ ನಡೆಯಲಿರುವ ಮೂರು ದಿನಗಳ ಎಐಸಿಸಿ ಮಹಾಧಿವೇಶನದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ (ಸಿಡಬ್ಲ್ಯುಸಿ) ಚುನಾವಣೆ ನಡೆಯಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನಾ) ಕೆ.ಸಿ. ವೇಣುಗೋಪಾಲ್ ಸೋಮವಾರ ಹೇಳಿದ್ದಾರೆ.

‘ಸಿಡಬ್ಲ್ಯುಸಿಗೆ ಚುನಾವಣೆ ನಡೆಸುವ ಬಗ್ಗೆ ಈ ಹಿಂದೆ ಪಕ್ಷವು ಸ್ಪಷ್ಟವಾಗಿ ಘೋಷಿಸಿರಲಿಲ್ಲ. ಅಧಿವೇಶನದ ಜೊತೆಗೇ ಚುನಾವಣೆ ನಡೆಯಲಿದೆ’ ಎಂದು ಅವರು ತಿಳಿಸಿದ್ದಾರೆ.

‘ರಾಜಕೀಯ, ಆರ್ಥಿಕತೆ, ಅಂತರರಾಷ್ಟ್ರೀಯ ವ್ಯವಹಾರಗಳು, ರೈತರು ಮತ್ತು ಕೃಷಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಹಾಗೂ ಯುವಜನತೆ, ಶಿಕ್ಷಣ, ಉದ್ಯೋಗ ವಿಷಯಗಳ ಬಗ್ಗೆ ಅಧಿವೇಶನದಲ್ಲಿ ಚರ್ಚೆ ನಡೆಯಲಿದೆ’ ಎಂದಿದ್ದಾರೆ.

ಸಾಂವಿಧಾನಿಕ ತಿದ್ದುಪಡಿಗಳ ಸಮಿತಿಯೊಂದನ್ನು ಅಧಿವೇಶನದಲ್ಲಿ ರಚಿಸಲಾಗುವುದು ಎಂದೂ ವಿವರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮತಾಂತರ ತಡೆ– ಬಾಕಿ ಪ್ರಕರಣ: ಮಾಹಿತಿ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಅಂತರ್‌ಧರ್ಮೀಯ ವಿವಾಹದ ಧಾರ್ಮಿಕ ಮತಾಂತರ ತಡೆಗೆ ರಾಜ್ಯಗಳು ಜಾರಿಗೆ ತಂದಿರುವ ವಿವಾದಾತ್ಮಕ ಕಾನೂನುಗಳನ್ನು ಪ್ರಶ್ನಿಸಿ ವಿವಿಧ ಹೈಕೋರ್ಟ್‌ಗಳ ಮುಂದೆ ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿಯ ಮಾಹಿತಿ ಕೇಳಿರುವ ಸುಪ್ರೀಂ ಕೋರ್ಟ್, ಬಾಕಿ ಪ್ರಕರಣಗಳ ಸ್ವರೂಪ ಒಂದೇ ರೀತಿ ಇದ್ದರೆ ಅವೆಲ್ಲವನ್ನೂ ತನಗೆ ವರ್ಗಾಯಿಸಬಹುದು ಎಂದು ಸೋಮವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು, ಮತಾಂತರ ತಡೆ ಕಾನೂನುಗಳನ್ನು ಪ್ರಶ್ನಿಸಿರುವ ಪ್ರಕರಣಗಳ ಸ್ಥಿತಿಯ ಬಗ್ಗೆ ಎರಡು ವಾರದಲ್ಲಿ ಟಿಪ್ಪಣಿ ಸಲ್ಲಿಸಲು ಸಿಟಿಜನ್ ಫಾರ್ ಜಸ್ಟೀಸ್ ಅಂಡ್ ಪೀಸ್ ಎನ್‌ಜಿಒ ಮತ್ತು ಉತ್ತರಪ್ರದೇಶ, ಮಧ್ಯಪ್ರದೇಶ, ಉತ್ತರಾಖಂಡ ಹಾಗೂ ಹಿಮಾಚಲಪ್ರದೇಶ ಸರ್ಕಾರಗಳಿಗೆ ಸೂಚಿಸಿದೆ.

ರಾಜ್ಯದ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ 2003ರ ಸೆಕ್ಷನ್ 5ರ ಅಡಿ ಅಂತರ್‌ಧರ್ಮೀಯ ವಿವಾಹ ಮತಾಂತರಕ್ಕೆ ಜಿಲ್ಲಾ ಮ್ಯಾಜಿಸ್ಟ್ರೇಟ್ ಪೂರ್ವಾನುಮತಿ ಕಡ್ಡಾಯಗೊಳಿಸಿದ್ದ ಗುಜರಾತ್ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ಇದರ ವಿರುದ್ಧದ ಗುಜರಾತ್ ಸರ್ಕಾರದ ಮೇಲ್ಮನವಿಯ ಸ್ಥಿತಿಗತಿಯ ಮಾಹಿತಿ ನೀಡುವಂತೆಯೂ ಪೀಠ, ಸುಪ್ರೀಂ ಕೋರ್ಟ್ ರಿಜಿಸ್ಟ್ರಿಗೆ ಸೂಚಿಸಿತು.

ಮಾಲೆಗಾಂವ್ ಸ್ಫೋಟ: ಪುರೋಹಿತ್ ಅರ್ಜಿ ವಜಾ

ಮುಂಬೈ (ಪಿಟಿಐ): ಮಾಲೆಗಾಂವ್ ಸ್ಫೋಟ (2008) ಪ್ರಕರಣದ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಶ್ರೀಕಾಂತ್ ಪುರೋಹಿತ್ ಅವರು ಪ್ರಕರಣದಿಂದ ಬಿಡುಗಡೆಗೊಳಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಮುಂಬೈ ಹೈಕೋರ್ಟ್ ಸೋಮವಾರ ತಿರಸ್ಕರಿಸಿತು.

ಪುರೋಹಿತ್ ಮತ್ತು ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್ ಸೇರಿ ಆರು ಜನರು ಈ ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ. 2008ರ ಸೆಪ್ಟೆಂಬರ್‌ನಲ್ಲಿ ನಡೆದ ಸ್ಫೋಟ ಸಂಭವಿಸಿತ್ತು. ಈ ಪ್ರಕರಣದ ಎಲ್ಲ ಆರೋಪಿಗಳು ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ: ಇಂದು ತೀರ್ಪು

ನವದೆಹಲಿ: ಸಾರ್ವಜನಿಕ ಬದುಕಿನಲ್ಲಿರುವ ಜನಪ್ರತಿನಿಧಿಗಳ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಮೇಲೆ ಹೆಚ್ಚಿನ ನಿರ್ಬಂಧ ವಿಧಿಸಬಹುದೇ ಎಂಬುದರ ಬಗ್ಗೆ ಸುಪ್ರೀಂ ಕೋರ್ಟ್ ಮಂಗಳವಾರ ತೀರ್ಪು ಪ್ರಕಟಿಸಲಿದೆ.

ನ್ಯಾಯಮೂರ್ತಿಗಳಾದ ಎಸ್. ಅಬ್ದುಲ್ ನಜೀರ್, ಬಿ.ಆರ್. ಗವಾಯಿ, ಎ.ಎಸ್. ಬೋಪಣ್ಣ, ವಿ. ರಾಮಸುಬ್ರಮಣಿಯನ್, ಬಿ.ವಿ. ನಾಗರತ್ನ ಅವರಿರುವ ಪೀಠವು, ಈ ನಿಟ್ಟಿನಲ್ಲಿ ಕೆಲವು ಸಾಮಾನ್ಯ ಮಾರ್ಗಸೂಚಿಗಳನ್ನು ರೂಪಿಸಬಹುದೇ ಎಂದು ತಿಳಿಸಲಿದೆ.

ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿ

ದಿಟ್ಟ ಆಟವಾಡಿ ಸೋತ ಧಾಮನೆ

ಪುಣೆ (ಪಿಟಿಐ): ಉದಯೋನ್ಮುಖ ಆಟಗಾರ, ಭಾರತದ ಮಾನಸ್ ಧಾಮನೆ ಅವರು ಇಲ್ಲಿ ನಡೆಯುತ್ತಿರುವ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋತರು. ಆದರೆ 15 ವರ್ಷದ ಆಟಗಾರ ತೋರಿದ ದಿಟ್ಟ ಆಟ ಗಮನಸೆಳೆಯಿತು.

ಸೋಮವಾರ ಆರಂಭವಾದ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸ್ಥಳೀಯ ಪ್ರತಿಭೆ ಮಾನಸ್ 2-6 4-6ರಿಂದ ಅಮೆರಿಕದ ಮೈಕೆಲ್ ಮೊಹ್ ಎದುರು ಸೋಲನುಭವಿಸಿದರು.

ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ ಮಾನಸ್, ವಿಶ್ವ ಕ್ರಮಾಂಕದಲ್ಲಿ 115ನೇ ಸ್ಥಾನದಲ್ಲಿರುವ, ತನಗಿಂತ ದೈಹಿಕವಾಗಿ ಬಲಿಷ್ಠವಾಗಿರುವ ಆಟಗಾರನ ಎದುರು ಪ್ರಬುದ್ಧತೆಯ ಆಟ ತೋರಿದರು.

ಮಾನಸ್ ಧಾಮನೆ

ರ್‍ಯಾಲಿಗಳಲ್ಲಿ ಸ್ವಲ್ಪ ಮಂಕಾದರೂ ಮಾನಸ್ ಅವರ ಕೆಲವು ಬ್ಯಾಕ್‌ಹ್ಯಾಂಡ್ ಮತ್ತು ಫೋರ್‌ಹ್ಯಾಂಡ್ ಹೊಡೆತಗಳು ಆಕರ್ಷಕವಾಗಿದ್ದವು.

‘ಇಂತಹ ಪೈಪೋಟಿಯನ್ನು ನಾನು ನಿರೀಕ್ಷಿಸಿರಲಿಲ್ಲ. ಮಾನಸ್ ಆಟ ಅಚ್ಚರಿ ತಂದಿತು. ಆತನಿಗೆ ಉತ್ತಮ ಭವಿಷ್ಯವಿದೆ’ ಎಂದು ಪಂದ್ಯದ ನಂತರ 24 ವರ್ಷದ ಮೊಹ್ ಪ್ರತಿಕ್ರಿಯಿಸಿದರು.

ನಗಾಲ್‌ಗೆ ಸೋಲು: ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಜಿದ್ದಾಜಿದ್ದಿನ ಮತ್ತೊಂದು ಪಂದ್ಯದಲ್ಲಿ ಭಾರತದ ಸುಮಿತ್ ನಗಾಲ್ 4–6, 6–4, 4–6ರಿಂದ ಸರ್ಬಿಯಾದ ಫಿಲಿಪ್ ಕ್ರಾಜಿನೊವಿಚ್ ಎದುರು ಸೋತರು. ಎರಡು ತಾಸು 24 ನಿಮಿಷಗಳ ಕಾಲ ಈ ಹಣಾಹಣಿ ನಡೆಯಿತು.

ಡೆವೊನ್ ಶತಕ

ಕರಾಚಿ (ಎಎಫ್‌ಪಿ): ಡೆವೊನ್ ಕಾನ್ವೆ ಸೊಗಸಾದ ಶತಕ ಗಳಿಸಿದರು. ಅವರ ಆಟದ ಬಲದಿಂದ ನ್ಯೂಜಿಲೆಂಡ್ ತಂಡವು ಪಾಕಿಸ್ತಾನ ವಿರುದ್ಧ ನಡೆಯುತ್ತಿರುವ ಎರಡನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆರು ವಿಕೆಟ್ ಕಳೆದುಕೊಂಡು 309 ರನ್ ಗಳಿಸಿದೆ.

ಕರಾಚಿ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ನಾಯಕ ಟಿಮ್ ಸೌಥಿ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಅವರ ನಿರ್ಧಾರವನ್ನು ಸಮರ್ಥಿಸಿಕೊಂಡ ಆರಂಭಿಕ ಆಟಗಾರರಾದ ಟಾಮ್ ಲಥಾಮ್ (71) ಮತ್ತು ಕಾನ್ವೆ (122) ಮೊದಲ ವಿಕೆಟ್ ಜೊತೆಯಾಟದಲ್ಲಿ 134 ರನ್ ಸೇರಿಸಿದರು.

ಪಾಕಿಸ್ತಾನದ ಪರ ಆಫ್‌ಸ್ಪಿನ್ನರ್ ಆಘಾ ಸಲ್ಮಾನ್ (55ಕ್ಕೆ 3) ಮತ್ತು ನಸೀಂ ಶಾ (44ಕ್ಕೆ 2) ಬೌಲಿಂಗ್‌ನಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್ 90 ಓವರ್‌ಗಳಲ್ಲಿ ಆರು ವಿಕೆಟ್‌ಗೆ 309 (ಟಾಮ್ ಲಥಾಮ್ 71, ಡೆವೊನ್ ಕಾನ್ವೆ 122, ಕೇನ್ ವಿಲಿಯಮ್ಸನ್ 36, ಹೆನ್ರಿ ನಿಕೊಲ್ಸ್ 26, ಟಾಮ್ ಬ್ಲಂಡೆಲ್ ಬ್ಯಾಟಿಂಗ್ 30; ನಸೀಂ ಶಾ 44ಕ್ಕೆ 2, ಅಬ್ರಾರ್ ಅಹಮದ್ 101ಕ್ಕೆ 1, ಆಘಾ ಸಲ್ಮಾನ್ 55ಕ್ಕೆ 3). ಪಾಕಿಸ್ತಾನ ಎದುರಿನ ಪಂದ್ಯ.

ಹಾಕಿ: ಬಿಸಿವೈಎ, ಸಂದೀಪ್ ಎಚ್‌ಸಿಗೆ ಜಯ

ಬೆಂಗಳೂರು: ಬಿಸಿವೈಎ ‘ಎ’ ಮತ್ತು ಸಂದೀಪ್ ಹಾಕಿ ಕ್ಲಬ್ ತಂಡಗಳು ರಾಜ್ಯ ‘ಬಿ’ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿದವು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಗೋವಿಂದ್ ನಾಗ್ (10 ಮತ್ತು 28ನೇ ನಿಮಿಷ) ಗಳಿಸಿದ ಎರಡು ಗೋಲುಗಳ ನೆರವಿನಿಂದ ಬಿಸಿವೈಎ ‘ಎ’ ತಂಡವು 7–3ರಿಂದ ರಾಯಲ್ ಹಾಕಿ ಕ್ಲಬ್ ಎದುರು ಗೆದ್ದಿತು. ಪವನ್ ಎಸ್. (15ನೇ ನಿ.), ತೇಜಸ್ ಚೌಹಾನ್ (36ನೇ ನಿ.), ಶಿವ (38ನೇ ನಿ.), ವಿನೋದ್ ಕುಮಾರ್ (49ನೇ ನಿ.) ಮತ್ತು ಲಕ್ಷ್ಮೀಕಾಂತ್ ಕೊವಲೆ (59ನೇ ನಿ.) ವಿಜೇತ ತಂಡದ ಪರ ಗೋಲು ಹೊಡೆದರು. ರಾಯಲ್ ಕ್ಲಬ್‌ಗಾಗಿ ಸುಪ್ರೀತ್ (1ನೇ, 49ನೇ ನಿ.) ಮತ್ತು ಯೋಗೇಂದ್ರ (39ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಸಂದೀಪ್ ಎಚ್‌ಸಿ 4–1ರಿಂದ ಬಳ್ಳಾರಿ ಹಾಕಿ ಕ್ಲಬ್ ಎದುರು ಗೆದ್ದಿತು.

ಟಿ20 ಕ್ರಿಕೆಟ್: ವಾಂಖೆಡೆಯಲ್ಲಿ ಶ್ರೀಲಂಕಾ ವಿರುದ್ಧದ ಮೊದಲ ಪಂದ್ಯ ಇಂದು

ಹಾರ್ದಿಕ್ ನಾಯಕತ್ವ: ಮೊದಲ ಸವಾಲು

ಹಾರ್ದಿಕ್ ಪಾಂಡ್ಯ ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ಅಭ್ಯಾಸದಲ್ಲಿ ಪಾಲ್ಗೊಂಡರು —ಎಎಫ್‌ಪಿ ಚಿತ್ರಗಳು

ಮುಂಬೈ (ಪಿಟಿಐ): ಚುಟುಕು ಕ್ರಿಕೆಟ್‌ನ ಪೂರ್ಣಾವಧಿ ನಾಯಕನಾಗಲು ಸಜ್ಜಾಗುತ್ತಿರುವ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರಿಗೆ ಮಂಗಳವಾರ ಮೊದಲ ಸವಾಲು ಎದುರಾಗಲಿದೆ.

ಶ್ರೀಲಂಕಾ ವಿರುದ್ಧದ ಮೂರು ಪಂದ್ಯಗಳ ಟಿ20 ಕ್ರಿಕೆಟ್ ಸರಣಿಯ ಮೊದಲ ಹಣಾಹಣಿ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಹಾರ್ದಿಕ್ ಬಳಗ ಗೆಲುವಿನ ಆರಂಭದ ನಿರೀಕ್ಷೆಯಲ್ಲಿದೆ.

ಬಿಸಿಸಿಐ ರಾಷ್ಟ್ರೀಯ ಆಯ್ಕೆ ಸಮಿತಿಯು 2024ರ ಟಿ20 ವಿಶ್ವಕಪ್ ಟೂರ್ನಿಯನ್ನು ಗಮನದಲ್ಲಿಟ್ಟುಕೊಂಡು ಲಂಕಾ ವಿರುದ್ಧದ ಸರಣಿಗೆ ತಂಡವನ್ನು ಆಯ್ಕೆ ಮಾಡಿತ್ತು. ಟಿ20 ತಂಡದ ನಾಯಕತ್ವವನ್ನು ರೋಹಿತ್ ಶರ್ಮಾ ಅವರ ಕೈಯಿಂದ ಹಾರ್ದಿಕ್‌ಗೆ ನೀಡುವುದು ಆಯ್ಕೆ ಸಮಿತಿಯ ಪ್ರಮುಖ ನಿರ್ಧಾರಗಳಲ್ಲಿ ಒಂದು.

ಹಾರ್ದಿಕ್ ಈಚೆಗೆ ನ್ಯೂಜಿಲೆಂಡ್‌ನಲ್ಲಿ ನಡೆದಿದ್ದ ಟಿ20 ಸರಣಿಯಲ್ಲೂ ಭಾರತ ತಂಡವನ್ನು ಮುನ್ನಡೆಸಿದ್ದರು.

ದಸುನ್ ಶನಕ

ಮಳೆಯಿಂದಾಗಿ ಅಲ್ಲಿ ಪೂರ್ಣ ಪ್ರಮಾಣದ ಸರಣಿ ನಡೆದಿರಲಿಲ್ಲ. ಆದ್ದರಿಂದ ಲಂಕಾ ವಿರುದ್ಧದ ಸರಣಿ ಅವರಿಗೆ ಅಗ್ನಿಪರೀಕ್ಷೆ ಎನಿಸಿದೆ. ವಿರಾಟ್ ಕೊಹ್ಲಿ, ರೋಹಿತ್ ಮತ್ತು ಕೆ.ಎಲ್. ರಾಹುಲ್ ಅವರ ಅನುಪಸ್ಥಿತಿಯಲ್ಲಿ ಭಾರತ ತಂಡ ಆಡಲಿದೆ. ಈ ಮೂವರು ಪ್ರಮುಖ ಬ್ಯಾಟರ್‌ಗಳು ಇಲ್ಲದೆಯೇ ಗೆಲುವು ಸಾಧ್ಯ ಎಂಬುದನ್ನು ತೋರಿಸಿಕೊಡುವ ಸವಾಲು ಯುವ ಆಟಗಾರರ ಮುಂದಿದೆ.

ಅಕ್ರಮಣಕಾರಿ ಮನೋಭಾವದೊಂದಿಗೆ ಆಡುವ ಛಲದ ಕೊರತೆ ಇತ್ತೀಚಿನ ದಿನಗಳಲ್ಲಿ ಭಾರತ ಟಿ20 ತಂಡದಲ್ಲಿ ಎದ್ದುಕಂಡಿತ್ತು. ವಿಶ್ವಕಪ್ ಟೂರ್ನಿಯಲ್ಲಿ ನಿರಾಸೆಗೆ ಇದು ಕೂಡಾ ಒಂದು ಕಾರಣವಾಗಿತ್ತು.

ಹಾರ್ದಿಕ್ ಅವರು ತಂಡಕ್ಕೆ ಅಗತ್ಯವಿರುವ ಕೆಚ್ಚನ್ನು ತುಂಬುವರೇ ಎಂಬುದನ್ನು ನೋಡಬೇಕಿದೆ.

ಕಿಶನ್– ಋತುರಾಜ್ ಆರಂಭ ಸಾಧ್ಯತೆ: ಯುವ ಆಟಗಾರರಾದ ಇಶಾನ್ ಕಿಶನ್ ಮತ್ತು ಋತುರಾಜ್ ಗಾಯಕವಾಡ್ ಅವರು ಭಾರತದ ಇನಿಂಗ್ಸ್ ಆರಂಭಿಸುವ ಸಾಧ್ಯತೆಯಿದೆ. ಈಚೆಗಿನ ವರ್ಷಗಳಲ್ಲಿ ಐಪಿಎಲ್‌ನಲ್ಲಿ ಗಮನಾರ್ಹ ಪ್ರದರ್ಶನ ತೋರಿರುವ ಇವರಿಗೆ ಅಂತರರಾಷ್ಟ್ರೀಯ ಪಂದ್ಯದಲ್ಲಿ ಮಿಂಚುವ ಅವಕಾಶ ಒದಗಿ ಬಂದಿದೆ. ಶುಭಮನ್ ಗಿಲ್ ಅವರನ್ನು ಆರಂಭಿಕನಾಗಿ ಕಳುಹಿಸುವುದು ಹಾರ್ದಿಕ್ ಮುಂದಿರುವ ಇನ್ನೊಂದು ಆಯ್ಕೆ.

ಟಿ20 ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ ಸೂರ್ಯಕುಮಾರ್ ಯಾದವ್ ಮೂರನೇ ಕ್ರಮಾಂಕದಲ್ಲಿ ಆಡಲಿದ್ದರೆ, ಸಂಜು ಸ್ಯಾಮ್ಸನ್ ಮತ್ತು ರಾಹುಲ್ ತ್ರಿಪಾಠಿ ಅವರಲ್ಲಿ ಒಬ್ಬರು ಅಂತಿಮ ಇಲೆವನ್‌ನಲ್ಲಿ ಕಾಣಿಸಿಕೊಳ್ಳಬಹುದು.

ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್ ಮತ್ತು ಉಮ್ರನ್ ಮಲಿಕ್ ಅವರು ವೇಗದ ಬೌಲಿಂಗ್ ವಿಭಾಗಕ್ಕೆ ಬಲ ತುಂಬಲಿದ್ದಾರೆ. ಹಾರ್ದಿಕ್ ಪಾಂಡ್ಯ ಜತೆ ವಾಷಿಂಗ್ಟನ್ ಸುಂದರ್ ಮತ್ತು ಹರ್ಷಲ್ ಪಟೇಲ್ ಅವರು ಆಲ್‌ರೌಂಡರ್‌ನ ಜವಾಬ್ದಾರಿ ನಿಭಾಯಿಸುವರು. ದಸುನ್ ಶನಕ ನೇತೃತ್ವದ ಶ್ರೀಲಂಕಾ ತಂಡ ಯುವ ಮತ್ತು ಅನುಭವಿ ಆಟಗಾರರನ್ನು ಒಳಗೊಂಡಿದ್ದು, ಆತಿಥೇಯರಿಗೆ ಪ್ರಬಲ ಪೈಪೋಟಿ ಒಡ್ಡಲು ಸಜ್ಜಾಗಿದೆ.

ತಂಡಗಳು

ಭಾರತ: ಹಾರ್ದಿಕ್ ಪಾಂಡ್ಯ (ನಾಯಕ), ಇಶಾನ್ ಕಿಶನ್ (ವಿಕೆಟ್ ಕೀಪರ್), ಋತುರಾಜ್ ಗಾಯಕವಾಡ್, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ (ಉಪನಾಯಕ), ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಸಂಜು ಸ್ಯಾಮ್ಸನ್, ವಾಷಿಂಗ್ಟನ್ ಸುಂದರ್, ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ಉಮ್ರನ್ ಮಲಿಕ್, ಶಿವಂ ಮಾವಿ, ಮುಕೇಶ್ ಕುಮಾರ್

ಶ್ರೀಲಂಕಾ: ದಸುನ್ ಶನಕ (ನಾಯಕ), ಪಥುಮ್ ನಿಸಾಂಕ, ಅವಿಷ್ಕಾ ಫೆರ್ನಾಂಡೊ, ಸದೀರ ಸಮರವಿಕ್ರಮ, ಕುಸಾಲ್ ಮೆಂಡಿಸ್, ಭಾನುಕ ರಾಜಪಕ್ಸ, ಚರಿತ ಅಸಲಂಕಾ, ಧನಂಜಯ ಡಿಸಿಲ್ವಾ, ವಣಿಂದು ಹಸರಂಗ, ಅಶೆನ್ ಬಂಡಾರ, ಮಹೀಶ್ ತೀಕ್ಷಣ, ಚಮಿಕ ಕರುಣರತ್ನೆ, ದಿಲ್ಶನ್ ಮಧುಶಂಕಾ, ಕಸುನ್ ರಜಿತಾ, ದುನಿತ್ ವೆಲ್ಲಲಗೆ, ಪ್ರಮೋದ್ ಮದುಶನ್, ಲಾಹಿರು ಕುಮಾರ, ನುವಾನ್ ತುಷಾರ



ಪಂದ್ಯ ಆರಂಭ: ಸಂಜೆ 7 | **ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್**

ಜಯ ಸಾಧಿಸುವತ್ತ ಕರ್ನಾಟಕ ಚಿತ್ತ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಗರವಾಲ್ ಬಳಗಕ್ಕೆ ಛತ್ತೀಸಗಢ ತಂಡದ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಹೊಸ ವರ್ಷದ ಸಂಭ್ರಮಕ್ಕೆ ಗೆಲುವಿನ ಬಣ್ಣ ತುಂಬುವ ಛಲದಲ್ಲಿದೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕವು ಛತ್ತೀಸಗಢ ಬಳಗವನ್ನು ಎದುರಿಸಲಿದೆ.

ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಕೇರಳ, ಛತ್ತೀಸಗಢ ಮತ್ತು ಕರ್ನಾಟಕ ತಲಾ 13 ಅಂಕಗಳನ್ನು ಗಳಿಸಿವೆ. ಆದರೆ ಕರ್ನಾಟಕವು ಆಡಿರುವ ಮೂರು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದು, ಎರಡರಲ್ಲಿ ಡ್ರಾ ಆಗಿರುವುದರಿಂದ ಮೂರನೇ ಸ್ಥಾನದಲ್ಲಿದೆ. ಕೇರಳ ಮತ್ತು ಛತ್ತೀಸಗಢ ತಂಡಗಳೂ ಅಷ್ಟೇ ಪಂದ್ಯಗಳನ್ನಾಡಿವೆಯಾದರೂ ತಲಾ ಎರಡರಲ್ಲಿ ಜಯಿಸಿವೆ. ಕಳೆದ ಸುತ್ತಿನ ಪಂದ್ಯದಲ್ಲಿ ಕೇರಳದ ಎದುರು ಛತ್ತೀಸಗಢ ಸೋತಿತ್ತು. ಅದರಿಂದಾಗಿ ಕೇರಳ ಮೊದಲು ಹಾಗೂ ಛತ್ತೀಸಗಢ ಎರಡನೇ ಸ್ಥಾನದಲ್ಲಿವೆ. ಇದರಿಂದಾಗಿ ಕರ್ನಾಟಕ ತಂಡವು ಉಳಿದಿರುವ ನಾಲ್ಕು ಪಂದ್ಯಗಳಲ್ಲಿ ಹೆಚ್ಚು ಅಂಕಗಳನ್ನು ಕಲೆಹಾಕುವ ಒತ್ತಡದಲ್ಲಿದೆ.

ಮಯಂಕ್ ಬಳಗವು ಮೊದಲ ಎರಡು ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಿತ್ತು. ಮೂರನೇ ಪಂದ್ಯವನ್ನು ಗೋವಾದ ವಿರುದ್ಧ ಪೊರ್ವೊರಿಯಂನಲ್ಲಿ ಆಡಿತ್ತು. ಅದರಲ್ಲಿ ಡ್ರಾ ಸಾಧಿಸಿತ್ತು. ಸತತ ಮೂರು ಪಂದ್ಯಗಳಲ್ಲಿಯೂ ಶತಕ ಬಾರಿಸಿರುವ ಆರಂಭಿಕ ಬ್ಯಾಟರ್ ಆರ್. ಸಮರ್ಥ್, ಗೋವಾದಲ್ಲಿ ಭರ್ಜರಿ ದ್ವಿಶತಕ ಗಳಿಸಿ, ತಮ್ಮ ನೂರನೇ ಪಂದ್ಯವನ್ನು ಅವಿಸ್ಮರಣೀಯಗೊಳಿಸಿಕೊಂಡ ಮನೀಷ್ ಪಾಂಡೆ ಮತ್ತು ಭರವಸೆಯ ಆಟವಾಡಿದ ಯುವಪ್ರತಿಭೆ ವಿಶಾಲ್ ಒಣತ್ ಬ್ಯಾಟಿಂಗ್ ವಿಭಾಗದ ಶಕ್ತಿ ಹೆಚ್ಚಿಸಿದ್ದಾರೆ. ನಾಯಕ ಮಯಂಕ್ ಅಗರವಾಲ್ ತಮ್ಮ ಅರ್ಧಶತಕಗಳನ್ನು ಮೂರಂಕಿಗೆ ಪರಿವರ್ತಿಸುವ ಪ್ರಯತ್ನದಲ್ಲಿ ಸಫಲರಾಗಬೇಕಷ್ಟೇ.

ಮನೀಷ್ ಪಾಂಡೆ ಮತ್ತು ಆರ್. ಸಮರ್ಥ್

ಆದರೆ, ಬಿ.ಆರ್. ಶರತ್ ತಮ್ಮ ಬ್ಯಾಟಿಂಗ್‌ನಲ್ಲಿ ಸ್ಥಿರತೆ ಕಂಡುಕೊಳ್ಳಲೂ ಇದು ಸಕಾಲ. ಪದಾರ್ಪಣೆಯ ಟೂರ್ನಿ ಆಡುತ್ತಿರುವ ನಿಕಿನ್ ಜೋಸ್ ಮತ್ತೊಂದು ಅವಕಾಶ ಪಡೆಯಬಹುದು. ಆದರೆ, 'ಪ್ರತಿಭಾವಂತ ಬ್ಯಾಟರ್' ಕೆ.ವಿ. ಸಿದ್ಧಾರ್ಥ್ ಅವರಿಗೆ ಕಣಕ್ಕಿಳಿಯುವ ಅವಕಾಶ ಸಿಗುವುದು ಖಚಿತವಿಲ್ಲ.

ರೋನಿತ್‌ಗೆ ಗಾಯ: ತಂಡದ ಅನುಭವಿ ಮಧ್ಯಮವೇಗಿ ರೋನಿತ್ ಮೋರೆ ಗಾಯಗೊಂಡಿದ್ದಾರೆ. ಅದರಿಂದಾಗಿ ಅವರು ಈ ಪಂದ್ಯಕ್ಕೆ ಅಲಭ್ಯರಾಗಿದ್ದಾರೆ. ಅವರ ಬದಲಿಗೆ ಎಂ. ವೆಂಕಟೇಶ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ. ಆದರೆ, ಅನುಭವಿ ಬೌಲರ್ ವಿ. ಕೌಶಿಕ್ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಉತ್ತಮವಾಗಿ ಬೌಲಿಂಗ್ ಮಾಡುತ್ತಿರುವ ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಅವರು ತಮ್ಮ ಲಯ ಮುಂದುವರಿಸುವ ಭರವಸೆ ಇದೆ.

ಮುಖ್ಯಾಂಶಗಳು

- ಮೂರು ಶತಕ ಬಾರಿಸಿರುವ ಆರ್. ಸಮರ್ಥ್
- ರೋನಿತ್ ಮೋರೆಗೆ ಗಾಯ, ವೆಂಕಟೇಶ್‌ಗೆ ಸ್ಥಾನ
- ಉತ್ತಮ ಲಯದಲ್ಲಿರುವ ಹರಪ್ರೀತ್ ಸಿಂಗ್

ರಾಯಪುರದಲ್ಲಿ ನಡೆಯಬೇಕಿದ್ದ ಪಂದ್ಯ

ರಣಜಿ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಕರ್ನಾಟಕವು ಛತ್ತೀಸಗಢದ ಆತಿಥ್ಯದಲ್ಲಿ ರಾಯಪುರದಲ್ಲಿ ಆಡಬೇಕಿತ್ತು.

ಆದರೆ, ರಾಯಪುರ ಕ್ರೀಡಾಂಗಣದಲ್ಲಿ ಇದೇ ತಿಂಗಳಾಂತ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಏಕದಿನ ಪಂದ್ಯ ಆಯೋಜನೆಗೊಳ್ಳಲಿದೆ. ಆದ್ದರಿಂದ ರಣಜಿ ಪಂದ್ಯಕ್ಕೆ ಆತಿಥ್ಯ ವಹಿಸಲು ಸಾಧ್ಯವಿಲ್ಲ ಎಂದು ಛತ್ತೀಸಗಢ ಕ್ರಿಕೆಟ್ ಸಂಘಟನೆ ಸ್ಪಷ್ಟಪಡಿಸಿತ್ತು. ಆದ್ದರಿಂದ ಪಂದ್ಯ ಬೆಂಗಳೂರಿಗೆ ಸ್ಥಳಾಂತರವಾಯಿತು.

ಛತ್ತೀಸಗಢ ತಂಡದ ನಾಯಕ ಹರಪ್ರೀತ್ ಸಿಂಗ್ ಭಾಟಿಯಾ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಕೇರಳ ವಿರುದ್ಧದ ಪಂದ್ಯದಲ್ಲಿ ಅವರು ಅಮೋಘ ಶತಕ ದಾಖಲಿಸಿದ್ದರು. ಬೌಲಿಂಗ್ ವಿಭಾಗದಲ್ಲಿ ಎಡಗೈ ಬೌಲರ್ ಅಜಯ್ ಜಾಧವ್ ಮಂಡಲ್ ಮತ್ತು ಸುಮಿತ್ ರುಯ್ಕರ್ ಅವರ ಮುಂದೆ ಆತಿಥೇಯ ಬ್ಯಾಟರ್‌ಗಳಿಗೆ ಕಡಿವಾಣ ಹಾಕುವ ಸವಾಲು ಇದೆ.

ಪಂದ್ಯ ಆರಂಭ: ಬೆಳಿಗ್ಗೆ 9.30ರಿಂದ

ನವ್ರಾಟಿಲೊವಾಗೆ ಕ್ಯಾನ್ಸರ್

ನ್ಯೂಯಾರ್ಕ್ (ರಾಯಿಟರ್ಸ್): ವಿಶ್ವದ ಮಾಜಿ ಅಗ್ರ ರ್‍ಯಾಂಕ್‌ನ ಟೆನಿಸ್ ಆಟಗಾರ್ತಿ ಮಾರ್ಟಿನಾ ನವ್ರಾಟಿಲೊವಾ ಅವರಿಗೆ ಗಂಟಲು ಮತ್ತು ಸ್ತನದ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ.

'ಈ ಆಘಾತದಿಂದ ಹೊರಗೆ ಬರಲು ಅಲ್ಪ ಸಮಯ ಬೇಕು. ಇದರ ವಿರುದ್ಧ ಹೋರಾಡುವೆ' ಎಂದು 66 ವರ್ಷದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಸಿಯುನಿಂದ ರಿಷಭ್ ಸ್ಥಳಾಂತರ

ನವದೆಹಲಿ (ಪಿಟಿಐ): ಕಾರು ಅಪಘಾತದಲ್ಲಿ ಗಾಯಗೊಂಡು ಇಲ್ಲಿನ ಮ್ಯಾಕ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಭಾರತ ಕ್ರಿಕೆಟ್ ತಂಡದ ಆಟಗಾರ ರಿಷಭ್ ಪಂತ್ ಅವರನ್ನು ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ.

'ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿದೆ. ಆದರೆ ಅವರ ಕಾಲು ನೋವು ಇನ್ನೂ ಹಾಗೇ ಇದೆ. ಎಂಆರ್‌ಐ ಸ್ಕ್ಯಾನಿಂಗ್ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಮ್ಯಾಕ್ಸ್ ಆಸ್ಪತ್ರೆಯ ಮೂಲಗಳು ತಿಳಿಸಿವೆ.

2022 ಡಿಸೆಂಬರ್ 30ರಂದು ಬೆಳಿಗ್ಗೆ ದೆಹಲಿ-ಡೆಹ್ರಾಡೂನ್ ಹೆದ್ದಾರಿಯಲ್ಲಿ ನಡೆದ ಕಾರು ಅಪಘಾತದಲ್ಲಿ ರಿಷಭ್ ಗಾಯಗೊಂಡಿದ್ದರು. ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿ ಬೆಂಕಿ ಹೊತ್ತಿಕೊಂಡಿತ್ತು. ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದರು.

ತಲೆ, ಬೆನ್ನು, ಮಂಡಿ, ಕಾಲಿಗೆ ಗಾಯಗಳಾಗಿದ್ದವು. ಅಪಘಾತದಲ್ಲಿ ಕಾರು ಸುಟ್ಟು ಹೋಗಿದ್ದರೂ, ಪಂತ್ ಪವಾಡಸದೃಶ ರೀತಿಯಲ್ಲಿ ಪಾರಾಗಿದ್ದರು.



ರಿಷಭ್ ಪಂತ್– ಪಿಟಿಐ ಚಿತ್ರ

ರಸ್ತೆ ಗುಂಡಿ ತಪ್ಪಿಸಲು ಹೋಗಿ ಕ್ರಿಕೆಟಿಗ ರಿಷಭ್ ಪಂತ್ ಅವರ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಹೇಳಿದ್ದರು.

'ಚಾಲಕರನ್ನು ನೇಮಿಸಿಕೊಳ್ಳಬೇಕು'

ದೇಶವನ್ನು ಪ್ರತಿನಿಧಿಸುವ ಯಾವುದೇ ಕ್ರಿಕೆಟಿಗರು ಹೆಚ್ಚು ಎಚ್ಚರಿಕೆ ವಹಿಸಬೇಕು ಮತ್ತು ಕಾರು ಚಾಲಕರನ್ನು ನೇಮಿಸಿಕೊಳ್ಳಬೇಕು ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಕಪಿಲ್ ದೇವ್ ಅಭಿಪ್ರಾಯಪಟ್ಟಿದ್ದಾರೆ.

ರಿಷಭ್ ಪಂತ್ ಅವರಿಗೆ ಆದ ಅಪಘಾತದ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆ.

'ಚಾಲಕರನ್ನು ನೇಮಿಸಿಕೊಳ್ಳುವುದರಿಂದ ಇಂತಹ ದುರ್ಘಟನೆಗಳನ್ನು ತಪ್ಪಿಸಬಹುದು. ಹಲವರಿಗೆ ಕಾರು ಚಾಲನೆಯ ಹುಚ್ಚು. ಆದರೆ ಅವರಿಗೆ ಜವಾಬ್ದಾರಿಗಳೂ ಇರುವುದರಿಂದ ಕಾಳಜಿ ವಹಿಸಲೇಬೇಕು' ಎಂದು ಕಪಿಲ್ ಹೇಳಿದ್ದಾರೆ

ವೆಹಿಕಲ್ಸ್ ಎಫ್‌ಸಿಗೆ ಭರ್ಜರಿ ಜಯ

ಬೆಂಗಳೂರು: ಸೂರ್ಯಪ್ರಕಾಶ್ ಹಾಗೂ ಕಾರ್ತಿಕ್ ಕೆ. ಗಳಿಸಿದ ತಲಾ ಎರಡು ಗೋಲುಗಳ ನೆರವಿನಿಂದ ವೆಹಿಕಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಸೋಮವಾರ ವೆಹಿಕಲ್ಸ್ ಎಫ್‌ಸಿ 8–0ಯಿಂದ ಆರ್.ಎಸ್. ಸ್ಪೋರ್ಟ್ಸ್ ತಂಡವನ್ನು ಸೋಲಿಸಿತು. ಸೂರ್ಯಪ್ರಕಾಶ್ (7, 34ನೇ ನಿ.) ಮತ್ತು ಕಾರ್ತಿಕ್ (27, 64ನೇ ನಿ.) ಗೋಲು ದಾಖಲಿಸಿದರು. ಲಹೇಶ್ ಎಸ್. (38ನೇ ನಿ.), ಕಾಲ್ವಿನ್ ಜೋಯಲ್ (40ನೇ ನಿ.), ಆಕಾಶ್ ಎನ್. (42ನೇ ನಿ.) ಮತ್ತು ನವೀನ್ ಕುಮಾರ್ ಆರ್. (48ನೇ ನಿ.) ವಿಜೇತ ತಂಡದ ಪರ ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಪೋಸ್ಟಲ್ ಡಿಪಾರ್ಟ್‌ಮೆಂಟ್ ಎಫ್‌ಸಿ 3–1ರಿಂದ ರೂಟ್ಸ್ ಎಫ್‌ಸಿ ಎದುರು ಗೆದ್ದಿತು.

ತನ್ನ ಹೆಸರಿನ ಅಂಗಣದಲ್ಲಿ ಆಡಲಿರುವ ಅಭಿಮನ್ಯು!

ನವದೆಹಲಿ (ಪಿಟಿಐ): ಡೆಹ್ರಾಡೂನ್‌ನ 'ಅಭಿಮನ್ಯು ಕ್ರಿಕೆಟ್ ಅಕಾಡೆಮಿ ಕ್ರೀಡಾಂಗಣ'ದಲ್ಲಿ ಬಂಗಾಳ ಮತ್ತು ಉತ್ತರಾಖಂಡ ತಂಡಗಳ ನಡುವೆ ಮಂಗಳವಾರ ಆರಂಭವಾಗಲಿರುವ ರಣಜಿ ಕ್ರಿಕೆಟ್ ಪಂದ್ಯ ವಿಶೇಷ ಕ್ಷಣಕ್ಕೆ ಸಾಕ್ಷಿಯಾಗಲಿದೆ.

ಬಂಗಾಳ ತಂಡದ ಬ್ಯಾಟರ್ ಅಭಿಮನ್ಯು ಈಶ್ವರನ್, ತಮ್ಮದೇ ಹೆಸರಿನ ಕ್ರೀಡಾಂಗಣದಲ್ಲಿ ಆಡಲಿದ್ದಾರೆ. ಈ ಕ್ರೀಡಾಂಗಣವನ್ನು ನಿರ್ಮಿಸಿರುವುದು ಅಭಿಮನ್ಯು ಅವರ ಅಪ್ಪ ರಂಗನಾಥನ್ ಪರಮೇಶ್ವರನ್ ಈಶ್ವರನ್.

ರಂಗನಾಥನ್ ಅವರು ಕ್ರೀಡಾಂಗಣ ನಿರ್ಮಾಣಕ್ಕಾಗಿ 2005 ರಲ್ಲಿ ಡೆಹ್ರಾಡೂನ್‌ನಲ್ಲಿ ಜಮೀನು ಖರೀದಿಸಿದ್ದರು. ಸ್ವಂತ ಖರ್ಚಿನಲ್ಲಿ ಕ್ರೀಡಾಂಗಣ ನಿರ್ಮಿಸಿದ್ದರು. ಬಳಿಕ ಮಗನ ಹೆಸರನ್ನೇ ಇಟ್ಟಿದ್ದರು. ಅಪ್ಪ ಕಟ್ಟಿಸಿರುವ ಕ್ರೀಡಾಂಗಣದಲ್ಲಿ ಆಡುವ ಅಪೂರ್ವ ಅವಕಾಶ ಇದೀಗ ಮಗನಿಗೆ ದೊರೆತಿದೆ.

ಅಭಿಮನ್ಯು ಈಶ್ವರನ್

'ನಾನು ಆಡಿ ಬೆಳೆದ ಅಂಗಳದಲ್ಲಿ ರಣಜಿ ಪಂದ್ಯ ಆಡುತ್ತಿರುವುದು ಹೆಮ್ಮೆಯ ವಿಚಾರ. ತಂದೆಯವರು ಕ್ರಿಕೆಟ್ ಮೇಲೆ ಹೊಂದಿದ್ದ ಪ್ರೀತಿಯಿಂದ ಈ ಕ್ರೀಡಾಂಗಣ ನಿರ್ಮಾಣವಾಗಿದೆ' ಎಂದು 27 ವರ್ಷದ ಅಭಿಮನ್ಯು ಪ್ರತಿಕ್ರಿಯಿಸಿದ್ದಾರೆ.

'ಕ್ರೀಡಾಂಗಣ ನಿರ್ಮಾಣ 2006 ರಲ್ಲಿ ಆರಂಭವಾಗಿತ್ತು. ಈಗಲೂ ಆಧುನೀಕರಣಕ್ಕಾಗಿ ಹಣ ಖರ್ಚು ಮಾಡುತ್ತಿದ್ದೇನೆ. ಕ್ರಿಕೆಟ್ ಮೇಲಿನ ಪ್ರೀತಿಯಿಂದ ಕ್ರೀಡಾಂಗಣ ನಿರ್ಮಿಸಿದ್ದೇನೆಯೇ ಹೊರತು, ಮಗನಿಗಾಗಿ ಅಲ್ಲ' ಎಂಬುದು ರಂಗನಾಥನ್ ಹೇಳಿಕೆ.